ಭಾನುವಾರ, ಮೇ 15, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 134 | ಪುಟ 20
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಬುದ್ಧ ತತ್ವದ ಬೆಳಕು ಪಸರಿಸಿದ ದಲಿತ ಮಹಿಳೆಯರ ಬದುಕಿನ ಕಥನ



ಡಿವೈಎಸ್ಪಿ ಮನೆಯಲ್ಲಿ 'ಒಎಂಆರ್' ಟ್ರಂಕ್ ಬೀಗ, ಕೀಗಳು ಪತ್ತೆ 4A

ದೆಹಲಿಯ ಕಟ್ಟಡದಲ್ಲಿ ಬೆಂಕಿ ಅವಘಡ

ಯುವತಿ ಮೇಲೆ ಆಸಿಡ್ ಎರಚಿದ್ದ ಪ್ರಕರಣ: ಆರೋಪಿ ಕಾಲಿಗೆ ಗುಂಡೇಟು 4A

33 ಮಂದಿ ಇನ್ನೂ ನಾಪತ್ತೆ 5

'ಭೋಟಾ ಮುಂಬೈ'ನಲ್ಲಿ ಮುಚ್ಚುತ್ತಿವೆ ಎಣ್ಣೆ ಗಿರಣಿ, ಸ್ವಾವಲಂಬನೆಗೆ ಸರ್ಕಾರವೇ ಅಡ್ಡಿ

ಕುಗ್ಗುತ್ತಿದೆ ಎಣ್ಣೆಕಾಳು ಬೆಳೆ ಪ್ರದೇಶ

• ಸಚ್ಚಿದಾನಂದ ಕುರಗುಂದ

ಅಡಿಕೆ ಬೆಳೆ 2015ರಲ್ಲಿ **2.75** ಲಕ್ಷ ಹೆಕ್ಟೇರ್‌ನಿಂದ 2020ಕ್ಕೆ **4.99** ಲಕ್ಷ ಹೆಕ್ಟೇರ್‌ಗೆ ಏರಿಕೆ

ಬಯಲುಸೀಮೆ ಪ್ರದೇಶದಲ್ಲಿ ಹೆಚ್ಚಿದ ಮೆಕ್ಕೆಜೋಳ ಪ್ರದೇಶ

ಕಡಿಮೆಯಾದ ಸೂರ್ಯಕಾಂತಿ ಬೆಳೆಯ ಪ್ರದೇಶ

ಬೆಂಗಳೂರು: ಒಂದು ಕಾಲದಲ್ಲಿ ಆಯಿಲ್ ಮಿಲ್‌ಗಳಿಂದ ಚಾರಿತ್ರಿಕ ದಂತಕತೆಯಾಗಿದ್ದ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಖ್ಯಾತಿ ಮಂಜಿನಂತೆ ಕರಗಿ ಹೋಗಿದೆ. ಶಾಶ್ವತ ಬರದ ನಾಡು ಎಂಬ ಮಾತು ಅಡುಗೆ ಎಣ್ಣೆ ಉತ್ಪಾದನೆಗೂ ಅಂಟಿಕೊಂಡಂತೆ ಆಗಿದೆ.

ಆಯಿಲ್ ಮಿಲ್‌ಗಳಿಂದಾಗಿಯೇ 'ಭೋಟಾ ಮುಂಬೈ' ಎಂದೇ ಖ್ಯಾತಿ ಪಡೆದಿದ್ದ ಈ ನಗರದ ಚಿತ್ರಣವೇ ಬದಲಾಗುತ್ತಿದೆ. ಯಥೇಚ್ಛವಾಗಿ ಶೇಂಗಾ ಬೆಳೆಯುತ್ತಿದ್ದ ಈ ಪ್ರದೇಶದಲ್ಲಿ ಒಂದು ಕಾಲದಲ್ಲಿ 80ಕ್ಕೂ ಹೆಚ್ಚು ಎಣ್ಣೆ ಮಿಲ್‌ಗಳು ಇದ್ದವು. ಈಗ ಬೆರಳಣಿಕೆಯಷ್ಟು ಮಾತ್ರ ಉಳಿದಿವೆ. ಶೇಂಗಾ ಬೆಳೆ ಉತ್ಪಾದನೆಯ ಕುಸಿತ, ದಲ್ಲಾಳಿಗಳ ಹಾವಳಿ, ಕಲಬೆರಕೆ, ಹವಾಮಾನ ವೈಪರೀತ್ಯ, ಸರ್ಕಾರದ ನೀತಿ ಹಾಗೂ ಕೃಷಿ ವಲಯದ ಸಮಸ್ಯೆಗಳು ಈ ಮಿಲ್‌ಗಳ ಆರ್ಥಿಕತೆಯ ಮೇಲೆ ಪರಿಣಾಮ ಬೀರಿದವು.

ಇದೇ ರೀತಿಯ ಎಲ್ಲ ಸಂಕಷ್ಟಗಳಿಗೆ ಪರಿಹಾರ ರೂಪಿಸದ ಸರ್ಕಾರ ಅಡುಗೆ ಎಣ್ಣೆ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವ ಅವಕಾಶ ಕಳೆದುಕೊಂಡಿತು.

ದಶಕಗಳ ಹಿಂದೆ ಬಯಲುಸೀಮೆ ಪ್ರದೇಶದಲ್ಲಿ ಶೇಂಗಾ, ಕುಸುಬೆಯಂತಹ ಎಣ್ಣೆಕಾಳು ಬೆಳೆಗಳನ್ನು ವಿಪುಲವಾಗಿ ಬೆಳೆಯಲಾಗುತ್ತಿತ್ತು. ಕೃಷಿಕರ ಸಂಕಷ್ಟಗಳಿಗೆ ಸ್ಪಂದಿಸದ ಸರ್ಕಾರ, ಆಮದು ಮಾಡಿಕೊಳ್ಳುವುದೇ ಸುಲಭ ಎನ್ನುವ ಧೋರಣೆ ಅನುಸರಿಸಿತು. ಇದರಿಂದ ಕೃಷಿಕರು ಎಣ್ಣೆಕಾಳುಗಳ ಬದಲು ಮೆಕ್ಕೆಜೋಳದಂತಹ ಪರ್ಯಾಯ ಬೆಳೆಗೆ ಮೊರೆ ಹೋದರು.

ಅಡುಗೆ ಎಣ್ಣೆ ಬೇಡಿಕೆಯನ್ನು ನೀಗಿಸಲು ಆಮದು ಮಾಡಿಕೊಳ್ಳುವ ಅನಿವಾರ್ಯ ಪರಿಸ್ಥಿತಿ ಸೃಷ್ಟಿಸಿದ್ದೇ ಸರ್ಕಾರ ಎನ್ನುವುದು ತಜ್ಞರ ವಿಶ್ಲೇಷಣೆ. 2020–21ರಲ್ಲಿ ಭಾರತ ₹ 80 ಸಾವಿರ ಕೋಟಿ ಮೊತ್ತದ 133.52 ಲಕ್ಷ ಟನ್ ಅಡುಗೆ ಎಣ್ಣೆ ಆಮದು ಮಾಡಿಕೊಂಡಿತ್ತು. ಇದರಲ್ಲಿ ಶೇ 56ರಷ್ಟು ತಾಳೆಎಣ್ಣೆ, ಶೇ 27ರಷ್ಟು ಸೋಯಾ ಎಣ್ಣೆ ಮತ್ತು ಶೇ 16ರಷ್ಟು ಸೂರ್ಯಕಾಂತಿ ಎಣ್ಣೆ ಆಮದು ಮಾಡಿಕೊಳ್ಳಲಾಗಿತ್ತು. 2020–21ರಲ್ಲಿ ದೇಶದಲ್ಲಿ 122.89 ಲಕ್ಷ ಟನ್ ಅಡುಗೆ ಎಣ್ಣೆ ಉತ್ಪಾದಿಸಲಾಗಿತ್ತು.

4ನೇ ಪುಟ ನೋಡಿ | ಇನ್ನಷ್ಟು ಸುದ್ದಿಗಳು 4

ಒಳನೋಟ

ಎಣ್ಣೆಕಾಳು ಗೋಳು

ಪ್ರತಿಕ್ರಿಯಿಸಿ: 9606038256
feedback@prajavani.co.in

ರಾಜ್ಯದಲ್ಲಿ ಎಣ್ಣೆಕಾಳು ಬೆಳೆಯುವ ಪ್ರದೇಶದ ವಿವರ

ಬೆಳೆಗಳು	ಕ್ಷೇತ್ರ (ಹೆಕ್ಟೇರ್‌ಗಳಲ್ಲಿ)	ಉತ್ಪಾದನೆ (ಟನ್‌ಗಳಲ್ಲಿ)
ಸೋಯಾಅವರೆ	3.1 ಲಕ್ಷ	3.76 ಲಕ್ಷ
ಶೇಂಗಾ	7.19 ಲಕ್ಷ	7.19 ಲಕ್ಷ
ಸೂರ್ಯಕಾಂತಿ	1.20 ಲಕ್ಷ	1.08 ಲಕ್ಷ
ಕುಸುಬೆ	28 ಸಾವಿರ	19,271
ಎಳ್ಳು	22 ಸಾವಿರ	20,290
ಅಗಸೆ	968	239
ಸಾಸಿವೆ	435	91
ಔಡಲ	3,804	3,408
ಗುರೆಳ್ಳು	1,178	529
ಒಟ್ಟು	12.09 ಲಕ್ಷ	12.48 ಲಕ್ಷ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಗೋಧಿ ರಫ್ತಿಗೆ ಕೇಂದ್ರ ನಿಷೇಧ

ನವದೆಹಲಿ (ಪಿಟಿಐ): ದೇಶದಲ್ಲಿ ಗೋಧಿ ಬೆಲೆ ಏರಿಕೆ ನಿಯಂತ್ರಿಸಲು ತಕ್ಷಣದಿಂದ ಜಾರಿಗೆ ಬರುವಂತೆ ಗೋಧಿ ರಫ್ತಿಗೆ ನಿಷೇಧ ಹೇರಲಾಗಿದೆ ಎಂದು ವಿದೇಶ ವ್ಯಾಪಾರ ಮಹಾನಿರ್ದೇಶನಾಲಯವು (ಡಿಜಿಎಫ್‌ಟಿ) ಶುಕ್ರವಾರ ಹೊರಡಿಸಿರುವ ಅಧಿಸೂಚನೆಯಲ್ಲಿ ತಿಳಿಸಿದೆ.

ಮೇ 13 ಅಥವಾ ಅದಕ್ಕೂ ಮೊದಲು ಗೋಧಿ ಖರೀದಿಗೆ, 'ಬದಲಾಯಿಸಲು ಸಾಧ್ಯವಿಲ್ಲದ ಎಲ್‌ಒಸಿ' (ಲೆಟರ್ ಆಫ್ ಕ್ರೆಡಿಟ್) ನೀಡಿದ್ದಲ್ಲಿ ರಫ್ತಿಗೆ ಅವಕಾಶ ಇದೆ ಎಂದು ಡಿಜಿಎಫ್‌ಟಿ ಹೇಳಿದೆ.

5A ಪುಟ ನೋಡಿ
ಕೇಂದ್ರದ ಕ್ರಮಕ್ಕೆ ಜಿ–7 ವಿರೋಧ 10

ದರ ಏರಿಕೆ ಎಷ್ಟು?

19.34%
ಒಂದು ವರ್ಷದಲ್ಲಿ ಗೋಧಿಯ ಚಿಲ್ಲರೆ ಮಾರಾಟ ದರ ಏರಿಕೆಯ ಪ್ರಮಾಣ

14.27%
ಒಂದು ವರ್ಷದಲ್ಲಿ ಗೋಧಿ ಹಿಟ್ಟಿನ ಚಿಲ್ಲರೆ ಮಾರಾಟ ದರ ಏರಿಕೆಯ ಪ್ರಮಾಣ

'ಆ.9ಕ್ಕೆ ಎಲ್ಲರ ಮನೆಯಲ್ಲಿ ರಾಷ್ಟ್ರಧ್ವಜ ಹಾರಲಿ'

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ರಾಜ್ಯದ ಪ್ರತಿಯೊಬ್ಬರ ಮನೆಯಲ್ಲಿ ಆಗಸ್ಟ್ 9ಕ್ಕೆ ರಾಷ್ಟ್ರಧ್ವಜ ಹಾರಬೇಕು. ಹಾರಿಸದವರ ಬಗ್ಗೆ ಏನು ಕ್ರಮ ಎಂಬುದನ್ನು ಆಮೇಲೆ ನೋಡೋಣ' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್ ಕುಮಾರ್ ಶನಿವಾರ ಹೇಳಿದರು.

ಇಲ್ಲಿ 'ಅಮೃತ ಭಾರತಿಗೆ ಕನ್ನಡದಾರತಿ' ಚಿಂತನ ಸಭೆಯಲ್ಲಿ ಮಾತನಾಡಿದ ಅವರು, 'ಆಗಸ್ಟ್ 9ರಿಂದ 15ರವರೆಗೆ ಕಾರ್ಯಕ್ರಮದ ಸಮಾರೋಪ ನಡೆಯಲಿದೆ. ಇದರ ನಿಮಿತ್ತ 9ಕ್ಕೆ ಮನೆ ಮನೆಗಳಲ್ಲಿ ರಾಷ್ಟ್ರಧ್ವಜ ಹಾರಿಸುವ ಅಭಿಯಾನ ನಡೆಯಲಿದೆ' ಎಂದರು.

'ಪ್ರಜಾವಾಣಿ' ಈ ಬಗ್ಗೆ ನಂತರ ಸಂಪರ್ಕಿಸಿದಾಗ, 'ಧ್ವಜ ಹಾರಿಸದೇ ಇರುವವರ ವಿರುದ್ಧ ಯಾವುದೇ ಕ್ರಮ ಇಲ್ಲ' ಎಂದು ಸ್ಪಷ್ಟಪಡಿಸಿದರು.

'ಅಮೃತ ಭಾರತಿಗೆ ಕನ್ನಡದಾರತಿ' ಅಭಿಯಾನದಡಿ ಹಲವು ಕಾರ್ಯಕ್ರಮಗಳು ನಡೆಯಲಿವೆ' ಎಂದು ಸಚಿವರು ಹೇಳಿದರು.

5A ಪುಟ ನೋಡಿ

Admissions 2022

PESSAT
All India Online Entrance Exam
for Admission to PES University

REGISTER TODAY
www.pes.edu/pessat
5% of B.Tech seats reserved for students with JEE Main scores

ENGINEERING
B.Tech (CSE, Artificial Intelligence and Machine Learning, ECE, Mech, EEE, & BT) / M.Tech

COMMERCE
B.Com (Day/Evening) / B.Com (Hons.) with ACCA / M.Com

ARCHITECTURE
B.Arch

MANAGEMENT
MBA / BBA / BBA (Hons.) in Business Analytics / General / Hospitality & Event Management / Sports Management

LAW
BBA, LLB (Hons.) / BA, LLB (Hons.)

JOURNALISM & MASS COMMUNICATION
BA (Bachelor of Arts) *Ring Road Campus*

PERFORMING ARTS
BA (Bachelor of Arts) *Ring Road Campus*

PHARMACY
B.Pharm / M.Pharm / Pharm.D

DESIGN
B.Des

RESEARCH
M.Tech by Research / Ph.D

PSYCHOLOGY
B.Sc (Hons.)

COMPUTER APPLICATIONS
MCA

EXECUTIVE EDUCATION
Executive M.Tech in Cybersecurity / Executive MBA

NURSING
B.Sc (Bachelor of Science)
Electronic City Campus

PESU Scholarships
40% tuition fee waiver for the Top 20% of students. Over 30 Crore merit scholarships given till date.
pes.edu/scholarships

Flexible Curriculum
B.Tech Major/Minor & M.Tech Switch Program
pes.edu/btech

Research Driven Learning
pes.edu/research

International Internships
pes.edu/summer

Some leading companies our alumni have been placed at:
Adobe | Amazon | Apple | Facebook | Google | Goldman Sachs | Mercedes Benz | Microsoft | Morgan Stanley | Netflix...

#1 UNIVERSITY IN KARNATAKA
New Universities Under 5 Years, KSURF 2019

PES UNIVERSITY
8010 297 297 | admissions@pes.edu
100 Feet Ring Road, BSK III Stage, Bengaluru

ನಿನ್ನ ಪರಿವಾರವನ್ನು ಮೊದಲ ಬಾರಿ ಭೇಟಿ
ಮಾಡಿದಂದಿನಿಂದ ನಿನ್ನನ್ನೇ ನನ್ನ ಪರಿವಾರವಾಗಿಸಿಕೊಂಡ
ವರೆಗೆ. ಮೊದಲ ಬಾರಿ ನಿನ್ನನ್ನು ಕಣ್ಣಲ್ಲಿ
ನೆಲೆಸಿಕೊಂಡಂದಿನಿಂದ ಒಂದಾಗಿ ಭವಿಷ್ಯವನ್ನು
ನಿರ್ಮಿಸಿಕೊಂಡ ವರೆಗೆ.
ನೀನು ಮತ್ತು ನಾನುದಿಂದಾರಂಭಿಸಿ, ನಾವು ಆಗುವ ವರೆಗೆ.
ಇಂದಿನಿಂದಾರಂಭಿಸಿ, ಎಂದೆಂದಿಗೂ ವರೆಗೆ.
ನಿನ್ನ ಆ ಪ್ರೀತಿ ನಿಜಕ್ಕೂ ಅಭೂತಪೂರ್ವ.
ಅದನ್ನು ಸಂಭ್ರಮಿಸೋಣ ಅಷ್ಟೇ
ಅಭೂತಪೂರ್ವವಾಗಿರುವುದರಿಂದ. ಪ್ಲಾಟಿನಮ್.
ಇದು ಚಿರಂತನ ಹಾಗೂ ಸದಾಸರ್ವದಾ
ವಿನೂತನವಾಗಿರುವಂಥದ್ದು. ಆದ್ದರಿಂದಲೇ
ನಿಮ್ಮ ಅನನ್ಯ ಪ್ರೇಮಕ್ಕಾಗಿ ಇದಕ್ಕಿಂತ
ಅನನ್ಯವಾದುದು ಬೇರಾವುದೂ ಇಲ್ಲ.

PLATINUM
LOVE BANDS
THE WEDDING EDITION

Look for Pt950 - a mark of purity and an assurance of 95% pure platinum. For an assured buyback, ask for a platinum purity assurance card with your platinum jewellery purchase. /PlatinumDaysOfLove | To find your nearest store, visit www.platinumdaysoflove.com

Some PGI Authorised Retailers: Bangalore: Avenue Road: Davanam Jewellers 43438383 | Merlecha Diamonds 9845047251 | **Banashankari:** Tanishq 26691687 | **Bannerghatta:** Tanishq 45612222 | Malabar Gold & Diamonds 41489916 | **Basaveshwaranagar:** Mukesh Jewellers 23408685 | **Commercial Street:** C. Krishniah Chetty & Sons 25588731 | Davanam Jewellers 41418181 | Sri Krishna Diamonds 40301111 | **Dickenson Road:** AVR Swarna Mahal Jewellers 25540007 | Bhima Jewellers 25065075 | Jos Alukkas Jewellery 25552280 | Joyalukkas 25093916 | Kalyan Jewellers 25550533 | Malabar Gold & Diamonds 41283916 | ORRA 9341070999 | Sulthan Diamonds & Gold 25596916 | Tanishq 25550907 | **HBR Layout:** Bhima Jewellers 25447711 | **HSR Layout:** Neelkanth Jewellers 46963800 | **Hoodi:** Bhima Jewellers 8970796928 | **Jayanagar:** AVR Swarna Mahal Jewellers 26547007 | Bhima Jewellers 41301761 | C. Krishniah Chetty & Sons 66379822 | GRT Jewellers 22450777 | Jos Alukkas Jewellery 32942120 | Josco Jewellers 41666842 | Joyalukkas 26634448 | Kalyan Jewellers 26647733 | Khazana Jewellery 41539900 | Malabar Gold & Diamonds 41526916 | ORRA 9341903803 | Prince Jewellery 42649999 | Reliance Jewels 41681808 | Sulthan Diamonds & Gold 26534916 | Tanishq 65606561 | **Kammanahalli:** GRT Jewellers 25461515 | Kalyan Jewellers 8792851933 | Joyalukkas 25039900 | Malabar Gold & Diamonds 25421916 | Tanishq 43078900 | **Koramangala:** Bhima Jewellers 25537762 | Kalyan Jewellers 25636833 | Malabar Gold & Diamonds 25522916 | Reliance Jewels 41244551 | ORRA 9731604260 | Senco Gold & Diamonds 41141197 | Tanishq 45462222 | **MG Road:** Abaran 25328600 | Joyalukkas 25589916 | Malabar Gold & Diamonds 69129916 | **Malleswaram:** Bhima Jewellers 49767711 | C. Krishniah Chetty Jewellers 41001869 | Davanam Jewellers 41416161 | GRT Jewellers 22921515 | Joyalukkas 23466916 | Kalyan Jewellers 23360533 | Malabar Gold & Diamonds 23467916 | Tanishq 23465402 | **Marthahalli:** Bhima Jewellers 28546611 | GRT Jewellers 25401515 | Joyalukkas 25073800 | Kalyan Jewellers 46837079 | Malabar Gold & Diamonds 48514916 | Tanishq 43007773 | **Phoenix Market City:** C. Krishniah Chetty Jewellers 67266697 | Joyalukkas 49626678 | Kalyan Jewellers 49626533 | Malabar Gold & Diamonds 32325916 | ORRA 9686166916 | Senco Gold & Diamonds 67266340 | Tanishq 67266400 | **Prestige Forum Shantiniketan:** Tanishq 25018171 | **Rajaji Nagar:** Abaran 23598600 | Bhima Jewellers 23527712 | Jos Alukkas Jewellery 32956916 | Malabar Gold & Diamonds 49227916 | Sri Ganesh Diamonds and Jewellery 23488459, 23326359 | **Richmond Road:** Neelkanth Jewellers 22278846 | Nikhaar 22103266 | **Sadhasivanagar:** Sri Ganesh Diamonds and Jewellery 23362355 | **Whitefield:** Tanishq 25018171 | **Yelahanka:** Tanishq 68137426 | **Tumkur** | **B H Road:** Malabar Gold & Diamonds 2254916 | **Forum Shanti Niketan Mall:** ORRA 7720082327 | **Forum Koramangala Mall:** ORRA 7710082442 | **J.P. Nagar:** Abaran 29908600 | **KR Puram:** GRT Jewellers 29901515 | **RR Nagar:** GRT Jewellers 23341515 | **Vijayanagar:** Praveen Jewels 40924995

'ಯತ್ನಾಳ ಹೇಳಿಕೆಗೆ ಸರ್ಕಾರ ಸ್ಪಷ್ಟನೆ ಕೊಡಲಿ'

ಬೆಂಗಳೂರು: 'ದೆಹಲಿಯಿಂದ ಬಂದಿದ್ದ ಕೆಲವರು ಮುಖ್ಯಮಂತ್ರಿ ಮಾಡಲು ₹2,500 ಕೋಟಿ ಸಿದ್ಧಪಡಿಸಿಕೊಳ್ಳಿ ಎಂದಿದ್ದರು' ಎಂಬ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಬಹಿರಂಗ ಹೇಳಿಕೆಗೆ ರಾಜ್ಯ ಸರ್ಕಾರ ಕೂಡಲೇ ಸ್ಪಷ್ಟನೆ ನೀಡಬೇಕು' ಎಂದು ಜನತಾ ಪಕ್ಷದ ರಾಜ್ಯ ಘಟಕದ ಅಧ್ಯಕ್ಷೆ ವಿ.ಜಿ.ಲಲಿತಾ ನಾಯಕ್ ಆಗ್ರಹಿಸಿದ್ದಾರೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಯತ್ನಾಳ ಅವರ ಹೇಳಿಕೆ ಸಂಬಂಧ ಕ್ರಮ ಜರುಗಿಸುವಂತೆ ಸರ್ಕಾರ ಮತ್ತು ಲೋಕಾಯುಕ್ತ ಕಚೇರಿಗೆ ದೂರು ಕೊಟ್ಟರೂ ಯಾವ ಪ್ರಯೋಜನವೂ ಆಗಿಲ್ಲ. ಸರ್ಕಾರ ಇದಕ್ಕೆ ಸ್ಪಷ್ಟನೆ ನೀಡಲಿ' ಎಂದರು.

'ಹೈದರಾಬಾದ್ ನಗರದಲ್ಲಿ ಮುಸ್ಲಿಂ ಯುವತಿಯನ್ನು ವಿವಾಹವಾಗಿದ್ದ ದಲಿತ ಯುವಕನನ್ನು ಕೋಮು ದ್ವೇಷದಿಂದ ಬರ್ಬರವಾಗಿ ಹತ್ಯೆ ಮಾಡಿರುವುದು ಖಂಡನೀಯ. ಮುಸ್ಲಿಂ ಧರ್ಮದಲ್ಲೂ ಇಂತಹ ನೀಚ ಧರ್ಮಾಂಧರಿದ್ದಾರೆ ಎಂಬುದನ್ನು ಈ ಕೃತ್ಯ ಸಾಬೀತುಪಡಿಸಿದೆ' ಎಂದರು.

ಬಿಬಿಎಂಪಿ ಕಸದ ಲಾರಿ ಚಾಲಕನ ಬಂಧನ • ಎರಡು ತಿಂಗಳಲ್ಲಿ ನಾಲ್ಕನೇ ದುರ್ಘಟನೆ

ಲಾರಿ ಹರಿದು 'ಡೆಲಿವರಿ ಬಾಯ್' ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಗವಾರ- ಥಣಿಸಂದ್ರ ಮುಖ್ಯರಸ್ತೆಯಲ್ಲಿ ಬಿಬಿಎಂಪಿ ಕಸ ಸಾಗಣೆ ಲಾರಿ ಹರಿದು ಡೆಲಿವರಿ ಬಾಯ್ ದೇವಣ್ಣ (25) ಎಂಬುವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಈ ವರ್ಷದ ಮಾರ್ಚ್ ತಿಂಗಳ ನಂತರ ಬಿಬಿಎಂಪಿ ಕಸದ ಲಾರಿಯಿಂದ ಸಂಭವಿಸಿದ ನಾಲ್ಕನೇ ದುರ್ಘಟನೆ ಇದು. ಈ ಅವಧಿಯಲ್ಲಿ ನಾಲ್ವರು ಬಿಬಿಎಂಪಿ ಕಸ ಸಾಗಣೆ ಲಾರಿಯಡಿ ಸಿಲುಕಿ ಜೀವ ಕಳೆದುಕೊಂಡಿದ್ದಾರೆ.

ಜಪ್ತಿ ಮಾಡಲಾದ ಬಿಬಿಎಂಪಿ ಕಸ ಸಾಗಣೆ ಲಾರಿ

'ಯಾದಗಿರಿ ಜಿಲ್ಲೆಯ ಸುರಪುರದ ದೇವಣ್ಣ, ಕೊತ್ತನೂರಿನಲ್ಲಿ ನೆಲೆಸಿದ್ದರು. 'ಸ್ವಿಗ್ಗಿ' ಆಹಾರ ಪೂರೈಕೆ ಕಂಪನಿಯಲ್ಲಿ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದರು. ಗ್ರಾಹಕರೊಬ್ಬರಿಗೆ ಆಹಾರ ಪೂರೈಸಲು ಬೈಕ್‌ನಲ್ಲಿ ಹೊರಟಿದ್ದ ವೇಳೆಯಲ್ಲಿ ಈ ಅವಘಡ ಸಂಭವಿಸಿದೆ' ಎಂದು ಚಿಕ್ಕಜಾಲ ಸಂಚಾರ ಠಾಣೆ ಪೊಲೀಸರು ತಿಳಿಸಿದರು.

ದೇವಣ್ಣ

'ದೇವಣ್ಣ ಅವರು ಬೈಕ್ (ಕೆಎ 03 ಕೆಕೆ 5475) ಚಲಾಯಿಸಿಕೊಂಡು ನಾಗವಾರದಿಂದ ಥಣಿಸಂದ್ರ ಮುಖ್ಯರಸ್ತೆ ಮೂಲಕ ಹೆಗ್ಡೆನಗರದತ್ತ ಹೊರಟಿದ್ದರು. ಅದೇ ಮಾರ್ಗದಲ್ಲಿ ಅತೀ ವೇಗವಾಗಿ ತೆರಳುತ್ತಿದ್ದ ಬಿಬಿಎಂಪಿ ಕಸ ಸಾಗಣೆ ಲಾರಿ, ಬೈಕ್ ಡಿಕ್ಕಿ ಹೊಡೆದಿತ್ತು. ಬೈಕ್‌ನಿಂದ ಬಿದ್ದ ದೇವಣ್ಣ ತಲೆ ಮೇಲೆಯೇ ಲಾರಿ ಚಕ್ರ ಹರಿದಿತ್ತು. ತೀವ್ರ ರಕ್ತಸ್ರಾವದಿಂದ ದೇವಣ್ಣ ಸ್ಥಳದಲ್ಲೇ ಮೃತಪಟ್ಟರು. ಈ ಬಗ್ಗೆ ಪ್ರತ್ಯಕ್ಷದರ್ಶಿಗಳಿಂದ ಹೇಳಿಕೆ ಪಡೆಯಲಾಗಿದೆ' ಎಂದೂ ಪೊಲೀಸರು ಹೇಳಿದರು.

ಚಾಲಕ ಬಂಧನ: 'ಲಾರಿ ಚಾಲಕ ದಿನೇಶ್ ನಾಯಕ್ ಅಜಾಗರೂಕತೆ ಚಾಲನೆ ಹಾಗೂ ನಿರ್ಲಕ್ಷ್ಯದಿಂದಲೇ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಲಾರಿಯನ್ನು ಜಪ್ತಿ ಮಾಡಿ, ಚಾಲಕ ದಿನೇಶ್‌ನನ್ನು ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ದಂಡ ವಿಧಿಸಿದರೂ ತಪ್ಪದ ಅಪಘಾತ: ಬಿಬಿಎಂಪಿ ಕಸ ಸಾಗಣೆ ಲಾರಿಯಿಂದಾಗಿ ನಗರದಲ್ಲಿ ಮೇಲಿಂದ ಮೇಲೆ ಅಪಘಾತಗಳು ಸಂಭವಿಸುತ್ತಿದ್ದು, ಇದನ್ನು ತಡೆಯಲು ಸಂಚಾರ ಪೊಲೀಸರು ಇತ್ತೀಚೆಗಷ್ಟೇ ವಿಶೇಷ ಕಾರ್ಯಾಚರಣೆ ನಡೆಸಿದ್ದರು.

ಅತೀ ವೇಗದ ಚಾಲನೆ, ಮೊಬೈಲ್‌ನಲ್ಲಿ ಮಾತನಾಡುತ್ತ ಚಾಲನೆ ಸೇರಿದಂತೆ ವಿವಿಧ ಸಂಚಾರ ನಿಯಮ ಉಲ್ಲಂಘಿಸಿದ ಕಸ ಸಾಗಣೆ ಲಾರಿಗಳ ಚಾಲಕರಿಗೆ ಪೊಲೀಸರು ದಂಡ ವಿಧಿಸಿದ್ದರು. ಕೆಲ ಲಾರಿಗಳನ್ನು ಜಪ್ತಿ ಮಾಡಿದ್ದರು.

'ಬಿಬಿಎಂಪಿ ಕಸ ಸಾಗಣೆ ಲಾರಿ ಚಾಲಕರಿಗೆ ಹಾಗೂ ಮಾಲೀಕರಿಗೆ ಪೊಲೀಸರು ಸಾಕಷ್ಟು ಎಚ್ಚರಿಕೆ ನೀಡುತ್ತಿದ್ದಾರೆ. ಅಷ್ಟಾದರೂ ಅವರು ಬುದ್ಧಿ ಕಲಿಯುತ್ತಿಲ್ಲ. ಇಂಥ ಚಾಲಕರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಕಸದ ಲಾರಿಯಿಂದ ಸಂಭವಿಸಿದ ಅಪಘಾತಗಳು

ಏಪ್ರಿಲ್ 4: ನಾಯಂಡಹಳ್ಳಿ ಬಳಿ ನಡೆದ ಅಪಘಾತದಲ್ಲಿ ದ್ವಿಚಕ್ರ ವಾಹನ ಚಲಾಯಿಸುತ್ತಿದ್ದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಉದ್ಯೋಗಿ ಪದ್ಮಿನಿ (40) ಮೃತಪಟ್ಟಿದ್ದರು.

ಮಾರ್ಚ್ 31: ಬಾಗಲೂರು ನಡೆದ ಅಪಘಾತದಲ್ಲಿ ದ್ವಿಚಕ್ರ ವಾಹನ ಸವಾರ ರಾಮಯ್ಯ (76) ಮೃತಪಟ್ಟಿದ್ದರು. ಲಾರಿ ಚಾಲಕ ಅಂಜನಪ್ಪ ಅವರನ್ನು ಚಿಕ್ಕಜಾಲ ಸಂಚಾರ ಪೊಲೀಸರು ಬಂಧಿಸಿದ್ದರು.

ಮಾರ್ಚ್ 21: ಹೆಬ್ಬಾಳ ಬಸ್ ನಿಲ್ದಾಣ ಎದುರಿನ ಮುಖ್ಯರಸ್ತೆಯಲ್ಲಿ ಸಂಭವಿಸಿದ ಅಪಘಾತದಲ್ಲಿ 9ನೇ ತರಗತಿ ವಿದ್ಯಾರ್ಥಿನಿ ಅಕ್ಷಯಾ (14) ಮೃತಪಟ್ಟಿದ್ದಳು. ಅಪಘಾತದಲ್ಲಿ ಸೌಮ್ಯಾ, ಸಂಧ್ಯಾ ಹಾಗೂ ವಿಶಾಲ್ ಎಂಬುವರು ಗಾಯಗೊಂಡಿದ್ದರು.

338 ಚಾಲಕರಿಗೆ ತರಬೇತಿ

ಬಿಬಿಎಂಪಿಯಲ್ಲಿ 588 ಕಸ ಸಾಗಿಸುವ ಲಾರಿಗಳಿದ್ದು, ಅವುಗಳಲ್ಲಿ 388 ಚಾಲಕರಿಗೆ ಜಾಗರೂಕತೆಯ ಚಾಲನೆ ಬಗ್ಗೆ ವಿಶೇಷ ತರಬೇತಿ ನೀಡಲಾಗಿದೆ ಎಂದು ಬಿಬಿಎಂಪಿ ಜಂಟಿ ಆಯುಕ್ತ (ಕಸ ನಿರ್ವಹಣೆ) ಪರಶುರಾಮ್ ಶಿನ್ನಾಳ್ಕರ್ ಹೇಳಿದರು.

'ಅಪಘಾತಗಳನ್ನು ತಪ್ಪಿಸಲು ಈ ವಿಶೇಷ ತರಬೇತಿ ನೀಡಲಾಗುತ್ತಿದೆ. ಆದರೂ, ಪದೇ ಪದೇ ಅಪಘಾತಗಳು ಸಂಭವಿಸುತ್ತಿರುವುದು ದುರದೃಷ್ಟಕರ. ಇನ್ನಷ್ಟು ಹೆಚ್ಚಿನ ತರಬೇತಿ ಸಾಧ್ಯವೇ ಎಂಬುದರ ಬಗ್ಗೆ ಪರಿಶೀಲಿಸಲಾಗುವುದು' ಎಂದರು.

ಮಯೂರ ಓದಿರಿ

ನಗರದಲ್ಲಿ ಇಂದು

ಮಕ್ಕಳಿಗೆ ಉಚಿತ ಕಮ್ಮಟ: ಆಯೋಜನೆ ಮತ್ತು ಸ್ಥಳ-ಧೀಂಗಿಣ ಕಲಾಕೇಂದ್ರ, ಆರ್.ಟಿ.ನಗರ, ಬೆಳಿಗ್ಗೆ 9ರಿಂದ

ಆರೋಗ್ಯ ಮತ್ತು ವೈದ್ಯಕೀಯ ಕೋಶ ಉದ್ಘಾಟನೆ ಮತ್ತು ವಿಪ್ರ ವೈದ್ಯ ಸೇವಾರತ್ನ ಪ್ರಶಸ್ತಿ ಪ್ರದಾನ: ಅಧ್ಯಕ್ಷತೆ-ಅಶೋಕ್ ಹಾರನಹಳ್ಳಿ, ಅತಿಥಿಗಳು-ಶಿವರಾಂ ಹೆಬ್ಬಾರ್, ರವಿಸುಬ್ರಹ್ಮಣ್ಯ, ಉದಯ್ ಬಿ.ಗರುಡಾಚಾರ್, ಮಹೇಶ್ ಜೋಶಿ, ಸುಚೇಂದ್ರ ಪ್ರಸಾದ್, ನಾರಾಯಣರಾವ್ ಆರ್. ಮಾನೆ, ಆಯೋಜನೆ-ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಸ್ಥಳ-ಬಿಎನ್‌ಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬನಶಂಕರಿ 2ನೇ ಹಂತ, ಬೆಳಿಗ್ಗೆ 9.45

ಪರಿಹಾರ ಸ್ತೋತ್ರಗಳ ಪುಸ್ತಕ ಬಿಡುಗಡೆ: ಭಾಸ್ಕರ್ ಜೋಶಿ, ಆಯೋಜನೆ-ಶ್ರೀವಿಘ್ನೇಶ್ವರ ಸಾರ್ವಜನಿಕ ವಿಶ್ವಸ್ಥ ಮಂಡಲಿ, ಸ್ಥಳ-ವಿಘ್ನೇಶ್ವರ ದೇವಸ್ಥಾನದ ಸಭಾಂಗಣ, ಬಿಟಿಎಂ ಬಡಾವಣೆ 2ನೇ ಹಂತ, ಬೆಳಿಗ್ಗೆ 10

ಬೇಸಿಗೆ ಶಿಬಿರದ ಸಮಾರೋಪ: ಅಧ್ಯಕ್ಷತೆ-ಕೆ.ಮೋಹನ್ ದೇವ್ ಆಳ್ವ, ಅತಿಥಿ-ಟಿ.ಕೆ.ತಿಮ್ಮರಾಜ ಶೆಟ್ಟಿ,ಆಯೋಜನೆ ಮತ್ತು ಸ್ಥಳ-ಅಖಿಲ ಕರ್ನಾಟಕ ಮಕ್ಕಳ ಕೂಟ, ಕೋಟೆ, ಬೆಳಿಗ್ಗೆ 10

ಪುರಾವಸ್ತು-2 ಪುಸ್ತಕ ಬಿಡುಗಡೆ: ಕೆ.ಹರೀಶ್, ಉದ್ಘಾಟನೆ-ಅರವಿಂದ ಲಿಂಬಾವಳಿ, ಅಧ್ಯಕ್ಷತೆ-ಎಂ.ಪ್ರಕಾಶ ಮೂರ್ತಿ, ಆಯೋಜನೆ-ಮಹದೇವಪುರ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ-ನಂಜಮ್ಮ ಗೋವಿಂದರೆಡ್ಡಿ ಕಲ್ಯಾಣ ಮಂಟಪ, ಕುಂದಲಹಳ್ಳಿ ಗೇಟ್, ಐಟಿಪಿಎಲ್ ಮುಖ್ಯರಸ್ತೆ, ಬೆಳಿಗ್ಗೆ 10

'ಗೋಪಾಲ-ಭೂಪಾಲ' ನಾಟಕ ಪ್ರದರ್ಶನ: ಭೃಂಗ ಮಕ್ಕಳ ತಂಡ, ಅತಿಥಿಗಳು-ವೆಂಕಟರಾಮು, ಸಿತಾರಾ, ಪ್ರಕಾಶ್, ಆಯೋಜನೆ-ಆಯಾಮ, ಸ್ಥಳ-ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 11

ಶಂಕರ ಜಯಂತಿ: ಪ್ರವಚನ-ಪಾವಗಡ ಪ್ರಕಾಶ ರಾವ್, ಆಯೋಜನೆ ಮತ್ತು ಸ್ಥಳ-ಶಿವಳ್ಳಿ ಸ್ಮಾರ್ತ ಬ್ರಾಹ್ಮಣ ಮಹಾ ಪರಿಷತ್, ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆ, ಚಿಕ್ಕಬಸ್ತಿ, ಬೆಳಿಗ್ಗೆ 11

ಬೆಂಗ್ಳೂರು ತುಳುಪರ್ಬ-2022: ಬೆಳಿಗ್ಗೆ 11ಕ್ಕೆ ಉದ್ಘಾಟನೆ-ಹೇಮಾವತಿ ಹೆಗ್ಗಡೆ, ಅತಿಥಿಗಳು-ಡಿ.ಸುರೇಂದ್ರ ಕುಮಾರ್, ಅನಿತಾ ಸುರೇಂದ್ರ ಕುಮಾರ್, ದೇವೇಂದ್ರ ಹೆಗ್ಡೆ ಕೊಕ್ರಾಡಿ, ವೇದಕುಮಾರ್, ಕಾಂತಿ ಶೆಟ್ಟಿ, ಪ್ರಶಾಂತ ರೈ ಕೈಕಾರ, ಮೇರುತ್ ಡಿಸೋಜಾ, ಹಮೀದ್ ಪಾಳ್ಯ, ಆರ್ಷಿಯಾ ತನು ವಿಟ್ಲ, ಸಂಜೆ 4ಕ್ಕೆ ಬಲಿಯೇಂದ್ರ ಪುರಸ್ಕಾರ ಪ್ರದಾನ, ಅತಿಥಿಗಳು-ಸಚಿವ ವಿ.ಸುನಿಲ್ ಕುಮಾರ್, ನ್ಯಾ.ಸಂತೋಷ್ ಹೆಗ್ಡೆ, ದಯಾನಂದ ಜಿ.ಕತ್ತಲ್‌ಸಾರ್, ಆರ್.ಉಪೇಂದ್ರ ಶೆಟ್ಟಿ, ರಾಮಚಂದ್ರ ಉಪಾಧ್ಯ, ಆಯೋಜನೆ-ತುಳುವೆರೆಂಕುಲು ಬೆಂಗಳೂರು, ಸ್ಥಳ-ರವೀಂದ್ರ ಕಲಾಕ್ಷೇತ್ರ

ಬಲಮುರಿ ಗಣಪತಿ ದೇವಾಲಯ ಮತ್ತು ಕುಂಭಾಭಿಷೇಕ ಮಹೋತ್ಸವದ ಉದ್ಘಾಟನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ-ಸಚಿವ ವಿ.ಸೋಮಣ್ಣ, ಅತಿಥಿಗಳು-ಆರ್.ಅಶೋಕ, ತೇಜಸ್ವಿ ಸೂರ್ಯ, ಸ್ಥಳ-ಕನಕನಗರ, ಮುನಿಕೃಷ್ಣ ಬಡಾವಣೆ, ಸಂಗೊಳ್ಳಿ ರಾಯಣ್ಣ ರಸ್ತೆ, ಮಧ್ಯಾಹ್ನ 12.30

ಜನನಿ ಬಾಂಧವ್ಯ ಫೌಂಡೇಷನ್ ಉದ್ಘಾಟನೆ: ವಿಜಯಲಕ್ಷ್ಮಿ ಶಿಬರೂರು, ಅತಿಥಿಗಳು-ಬೈರಮಂಗಲ ರಾಮೇಗೌಡ, ವಡ್ಡಗೆರೆ ನಾಗರಾಜಯ್ಯ, ಬೇಲೂರು ರಘುನಂದನ್, ರಘು ಜಾಣಗೆರೆ, ಸ್ಥಳ-ಗಾಂಧಿ ಸಾಹಿತ್ಯ ಸಂಘ, ಮಲ್ಲೇಶ್ವರ, ಸಂಜೆ 4

ಕಡಲು ಉತ್ಸವ: ಭರತನಾಟ್ಯ-ಧರಿಣಿ ಟಿ.ಕಶ್ಯಪ್, ಕೂಚಿಪುಡಿ-ರಾಜಶ್ರೀ ಹೊಳ್ಳ, ಮೋಹಿನಿಯಾಟ್ಟಂ-ಸ್ವಪ್ನಾ ರಾಜೇಂದ್ರ ಕುಮಾರ್, ಆಯೋಜನೆ-ಲಾಸ್ಯ ಲಹರಿ ಸಾಂಸ್ಕೃತಿಕ ಕಲಾ ಸಂಸ್ಥೆ, ಸ್ಥಳ-ನಯನ ಸಭಾಂಗಣ, ಸಂಜೆ 5.30

ಕರಗ ಉತ್ಸವ: ಆಯೋಜನೆ-ಶ್ರೀಧರ್ಮರಾಯಸ್ವಾಮಿ ಶ್ರೀಪೆರುಮಾಳ್ ದೇವಸ್ಥಾನ ಟ್ರಸ್ಟ್, ಸ್ಥಳ-ಧರ್ಮರಾಯಸ್ವಾಮಿ ಮತ್ತು ಪಾಂಚಾಲಿದೇವಿ ದೇವಸ್ಥಾನ, ಆರ್ಮುಗಂ ಮೊದಲಿಯಾರ್ ರಸ್ತೆ, ಕಲಾಸಿಪಾಳ್ಯ, ಸಂಜೆ 5.45

ರೇಣುಕಾಚಾರ್ಯರ ಯುಗಮಾನೋತ್ಸವ ಹಾಗೂ ಬಸವ, ಶಿವಕುಮಾರ ಸ್ವಾಮೀಜಿ ಜಯಂತಿ: ಸಾನ್ನಿಧ್ಯ-ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ-ಬಿ.ಎಸ್.ಯಡಿಯೂರಪ್ಪ, ಅತಿಥಿಗಳು-ಬಿ.ಎಸ್.ಪರಮಶಿವಯ್ಯ, ವೈ.ಎ.ನಾರಾಯಣಸ್ವಾಮಿ, ಕಟ್ಟಾ ಸುಬ್ರಮಣ್ಯನಾಯ್ಡು, ಆಯೋಜನೆ-ಬಸವ ಜಯಂತೋತ್ಸವ ಸಮಿತಿ, ಸ್ಥಳ-ರಮಣ ಮಹರ್ಷಿ ಹೆರಿಟೇಜ್ ಸೆಂಟರ್ ಸಭಾಂಗಣ, ಸಂಜಯನಗರ, ಸಂಜೆ 6

ಅನ್ನಪೂರ್ಣಾಂಬ ಸಮೇತ ಶ್ರೀನಗರೇಶ್ವರಸ್ವಾಮಿ ಬ್ರಹ್ಮರಥೋತ್ಸವ: ನಗರೇಶ್ವರಸ್ವಾಮಿ ಕಲ್ಯಾಣೋತ್ಸವ, ಗಿರಿಜಾ ಕಲ್ಯಾಣ, ಆಯೋಜನೆ ಮತ್ತು ಸ್ಥಳ-ಬೆಂಗಳೂರು ಅಯೋಧ್ಯಾನಗರದ ಶಿವಾಚಾರ ವೈಶ್ಯ (ನಗರ್ತ) ಸಮಿತಿ, ನಗರ್ತರಪೇಟೆ, ಬೆಳಿಗ್ಗೆ 7ರಿಂದ

'ಬೆಂಗಳೂರು ಕಿರುನಾಟಕೋತ್ಸವ'ದ ಅಂತಿಮ ಸ್ಪರ್ಧೆ: ಅತಿಥಿಗಳು-ರವಿಶಂಕರ್ ಆರಾಧ್ಯ, ಬನಶಂಕರಿ ವಿ.ಅಂಗಡಿ, ಎಂ.ಎಸ್.ವಿದ್ಯಾ, ಶ್ರೀಪಾದ ಭಟ್, 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಪತ್ರಕರ್ತ ಜೋಗಿ, ಅಭಿಷೇಕ್ ಅಯ್ಯಂಗಾರ್, ನಟ ಸುಮನ್ ನಗರ್ಕರ್, ಕೆ.ಎಸ್.ಮಂಜು, ವಸಂತ್ ಕನ್ನಡಿಗ, ಆಯೋಜನೆ-ಪ್ರವರ ಥಿಯೇಟರ್ ಮತ್ತು ಅಶ್ವಘೋಷ ಥಿಯೇಟರ್ ಟ್ರಸ್ಟ್, ಸಹಯೋಗ-ಪ್ರಜಾವಾಣಿ, ಸ್ಥಳ-ಪ್ರಭಾತ್ ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 6.30

ಸುದ್ದಿ 2 ನಿಮಿಷ

ವಿಶ್ವವಿದ್ಯಾಲಯ ಕಾಯ್ದೆ: ವಿಶ್ರಾಂತ ಕುಲಪತಿಗಳ ವೇದಿಕೆ ಸ್ವಾಗತ

ಬೆಂಗಳೂರು: ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ -2000ಕ್ಕೆ ತಿದ್ದುಪಡಿ ತರುವ ರಾಜ್ಯ ಸರ್ಕಾರದ ತೀರ್ಮಾನವನ್ನು ಕರ್ನಾಟಕ ವಿಶ್ವವಿದ್ಯಾಲಯಗಳ ವಿಶ್ರಾಂತ ಕುಲಪತಿಗಳ ವೇದಿಕೆ (ಎಫ್‌ವಿಸಿಕೆ) ಸ್ವಾಗತಿಸಿದೆ.

ರಾಷ್ಟ್ರೀಯ ಶಿಕ್ಷಣ ನೀತಿಯ ಶಿಫಾರಸ್ಸುಗಳಿಗೆ ಅನುಗುಣವಾಗಿ ರಾಜ್ಯದ ವಿ.ವಿ.ಗಳ ರಚನೆ ಹಾಗೂ ಕಾರ್ಯನಿರ್ವಹಣೆಗಳಲ್ಲಿ ಬದಲಾವಣೆಗಳನ್ನು ತರಲು ಸರ್ಕಾರ ಈ ನಿರ್ಧಾರ ಕೈಗೊಂಡಿದೆ ಎಂದು ಎಫ್‌ವಿಸಿಕೆ ಅಧ್ಯಕ್ಷ ಡಾ.ಕೆ.ಎಸ್. ರಂಗಪ್ಪ ತಿಳಿಸಿದ್ದಾರೆ.

ಖಾಲಿ ಉಳಿದ ಹುದ್ದೆಗಳನ್ನು ಆದ್ಯತೆ ಮೇರೆಗೆ ಭರ್ತಿ ಮಾಡಿಕೊಳ್ಳಬೇಕು ಎಂದು ಸರ್ಕಾರಕ್ಕೆ ಸಲಹೆ ನೀಡಿದ್ದಾರೆ.

ಹೆಚ್ಚಿನ ಅನುದಾನ ಒದಗಿಸುವ ಮೂಲಕ ಹಳೆಯ ಹಾಗೂ ಹೊಸ ವಿ.ವಿ.ಗಳ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಬೇಕು ಹಾಗೂ ಆಂತರಿಕ ಸಂಪನ್ಮೂಲಗಳನ್ನು ವೃದ್ಧಿಸಲು ಪ್ರೋತ್ಸಾಹ ನೀಡಬೇಕು ಎಂದರು. ಸಿಂಡಿಕೇಟ್ ಹೆಸರನ್ನು 'ಬೋರ್ಡ್ ಆಫ್ ಗವರ್ನನ್ಸ್' ಎಂದು ಬದಲಾಯಿಸಲು ಉದ್ದೇಶಿಸಲಾಗಿದೆ. ಈ ನಿಟ್ಟನಲ್ಲಿ ಐಐಎಂ ಮಾದರಿಯನ್ನು ಅನುಸರಿಸುವುದು ಉತ್ತಮ. ನೂರಾರು ಸಂಯೋಜಿತ ಕಾಲೇಜುಗಳಿರುವ ದೊಡ್ಡ ವಿಶ್ವ ವಿದ್ಯಾಲಯಗಳಲ್ಲಿ ಪ್ರವೇಶಾತಿ, ಅಂಗಸಂಸ್ಥೆಗಳು, ಪರೀಕ್ಷೆಗಳು, ಕಾನೂನುಕಟ್ಟಳೆಗಳು ಹಾಗೂ ವಿದ್ಯಾರ್ಥಿ ಕಲ್ಯಾಣ ಚಟುವಟಿಕೆಗಳ ಉಸ್ತುವಾರಿಗೆ ಸಹಕುಲಾಧಿಪತಿ ಹುದ್ದೆ ಸೃಷ್ಟಿಸುವುದು ಉತ್ತಮ ಎಂದು ಅವರು ಸಲಹೆ ನೀಡಿದ್ದಾರೆ.

'ವಿ.ವಿ.ಯ ವಿವಿಧ ಚಟುವಟಿಕೆ ಬಗ್ಗೆ ಗಮನ ನೀಡಲು ಸಾರ್ವಜನಿಕ ಸಂಪರ್ಕ ಅಧಿಕಾರಿ ಹುದ್ದೆ ಸೃಷ್ಟಿಸಬೇಕು' ಎಂದು ಹೇಳಿದ್ದಾರೆ.

ವೀರಶೈವ ಸಮಾಜ ಸೇವಾ ಸಂಘ: ಇಂದು ಶತಮಾನೋತ್ಸವ

ಬೆಂಗಳೂರು: ಶ್ರೀಸೋಮೇಶ್ವರಸ್ವಾಮಿ ವೀರಶೈವ ಸಮಾಜ ಸೇವಾ ಸಂಘವು ಶತಮಾನೋತ್ಸವ ಸಮಾರಂಭ, ರೇಣುಕಾಚಾರ್ಯ ಮತ್ತು ಬಸವೇಶ್ವರ ಜಯಂತಿ ಕಾರ್ಯಕ್ರಮಗಳನ್ನು ಇದೇ 15ರಂದು ಬೆಳಿಗ್ಗೆ 10 ಗಂಟೆಗೆ ಅರಳೇಪೇಟೆ ಮುಖ್ಯರಸ್ತೆಯ ಶ್ರೀಅರುಣಾಚಲೇಶ್ವರ ಸ್ವಾಮಿ ಪ್ರಾರ್ಥನಾ ಮಂದಿರದಲ್ಲಿ ಹಮ್ಮಿಕೊಂಡಿದೆ.

ವಿಭೂತಿಪುರ ವೀರಸಿಂಹಾಸನ ಮಠದ ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ ಉಪದೇಶ ನೀಡುವರು.

ಕಾರ್ಯಕ್ರಮವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಶಾಸಕ ಬಿ.ಎಸ್.ಯಡಿಯೂರಪ್ಪ ಉದ್ಘಾಟಿಸಲಿದ್ದಾರೆ. ಅತಿಥಿಗಳಾಗಿ ರೇಣುಕ ಶಿವಾಚಾರ್ಯ ಸ್ವಾಮೀಜಿ, ಸಚಿವ ವಿ.ಸೋಮಣ್ಣ, ದಿನೇಶ್ ಗುಂಡೂರಾವ್ ಹಾಗೂ ಸಂಘದ ಅಧ್ಯಕ್ಷ ಆರ್.ಸೋಮಶೇಖರ್ ಭಾಗವಹಿಸಲಿದ್ದಾರೆ.

ಇದೇ ಕಾರ್ಯಕ್ರಮದಲ್ಲಿ ಶತಮಾನೋತ್ಸವ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಾಗುತ್ತದೆ. ಬೆಳಿಗ್ಗೆ 6 ಗಂಟೆಗೆ ರುದ್ರಾಭಿಷೇಕ ಪೂಜೆ ನೆರವೇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ವಿದ್ಯುತ್ ಸ್ಪರ್ಶ: ಕಾರ್ಮಿಕ ಸಾವು

ರಾಮನಗರ: ಮನೆ ಮುಂದೆ ಪಿಟ್ ಗುಂಡಿ ತೆಗೆಯುವಾಗ ಡ್ರಿಲ್ಲಿಂಗ್ ಯಂತ್ರದಿಂದ ವಿದ್ಯುತ್ ಸ್ಪರ್ಶಿಸಿ ಕಾರ್ಮಿಕ ಮೃತಪಟ್ಟ ಘಟನೆ ಶನಿವಾರ ಸಂಜೆ ಕುಂಬಳಗೋಡು ಠಾಣೆ ವ್ಯಾಪ್ತಿಯ ಬೆನಕನಹಳ್ಳಿ ಸೆಕೆಂಡ್ ಕ್ರಾಸ್ ಬಳಿ ನಡೆದಿದೆ.

ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಸಂಕ್ಲಾಪುರ ಗ್ರಾಮದ ಅಂಜಿನಪ್ಪ (31) ಮೃತ ಕಾರ್ಮಿಕ. ವಿದ್ಯುತ್ ಸ್ಪರ್ಶದಿಂದ ಅಸ್ವಸ್ಥಗೊಂಡಿದ್ದ ಅಂಜಿನಪ್ಪ ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಮೃತಪಟ್ಟರು ಎಂದು ಕುಟುಂಬದವರು ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ಲೇಖಕಿ ದಯಾ ಗಂಗನಘಟ್ಟ ಅಭಿಪ್ರಾಯ

'ಬೆರಕೆ ಸೊಪ್ಪಿನ ಗುಣಗಳ ಒಳಗೊಂಡ ಕೃತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಶವರೆಡ್ಡಿ ಹಂದ್ರಾಳ ಅವರ 'ಬೆರಕೆ ಸೊಪ್ಪು' ಕೃತಿಯು ಈ ಸೊಪ್ಪಿನ ಹಾಗೆ ವಿಭಿನ್ನ ಗುಣಗಳನ್ನು ಒಳಗೊಂಡಿದ್ದು, ರಸವತ್ತತೆಯಿಂದ ಕೂಡಿದೆ' ಎಂದು ಲೇಖಕಿ ದಯಾ ಗಂಗನಘಟ್ಟ ಅಭಿಪ್ರಾಯಪಟ್ಟರು.

ಸಪ್ನ ಬುಕ್ ಹೌಸ್ ಹಾಗೂ ಸಿ.ಜಿ. ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ರಾಜ್ಯಸಭಾ ಸದಸ್ಯ ಕೆ.ಸಿ.ರಾಮಮೂರ್ತಿ ಅವರು ಕೇಶವರೆಡ್ಡಿ ಅವರ 'ಬೆರಕೆ ಸೊಪ್ಪು' ಪ್ರಬಂಧ ಸಂಕಲನ ಹಾಗೂ 'ಮೃಗತೃಷ್ಣ' ಕಾದಂಬರಿ ಬಿಡುಗಡೆ ಮಾಡಿದರು.

ರಾಜ್ಯಸಭಾ ಸದಸ್ಯ ಕೆ.ಸಿ.ರಾಮಮೂರ್ತಿ (ಎಡದಿಂದ ಮೂರನೇಯವರು) ಕೃತಿಗಳನ್ನು ಬಿಡುಗಡೆ ಮಾಡಿದರು. ಜಿ.ಮೋಹನ್ ಕುಮಾರ್, ಕಾಳೇಗೌಡ ನಾಗವಾರ, ಅಗ್ರಹಾರ ಕೃಷ್ಣಮೂರ್ತಿ, ಕೇಶವರೆಡ್ಡಿ ಹಂದ್ರಾಳ, ಕವಯಿತ್ರಿ ಸಿಂಧು ಚಂದ್ರ ಹೆಗಡೆ ಮತ್ತು ಸಪ್ನ ಬುಕ್ ಹೌಸ್‌ನ ಕನ್ನಡ ಪುಸ್ತಕಗಳ ವಿಭಾಗದ ಮುಖ್ಯಸ್ಥ ದೊಡ್ಡೇಗೌಡ ಇದ್ದರು —ಪ್ರಜಾವಾಣಿ ಚಿತ್ರ

ಕೃತಿಗಳ ಕುರಿತು ಅವರು ಮಾತನಾಡಿದ ದಯ ಗಂಗನಘಟ್ಟ, 'ಸಂಕ್ರಾಂತಿ ಹಬ್ಬದ ಸಡಗರ ಹಾಗೂ ಜನರ ಬವಣೆಗಳ ಕುರಿತು ಮಾತನಾಡುತ್ತಲೇ ಲೇಖಕರು ಪುನೀತ್ ರಾಜ್‌ಕುಮಾರ್ ಮರಣದ ಬಗ್ಗೆಯೂ ಹೇಳುತ್ತಾರೆ. ಇದ್ದಕ್ಕಿದ್ದಂತೆಯೇ ಸಾಮಾಜಿಕ ಸಂರಚನೆಯತ್ತ ಹೊರಳುತ್ತಾರೆ. ಹಳ್ಳಿಗಾಡಿನ ಗಟ್ಟಿಗಿತ್ತಿ ಮಹಿಳೆಯರ ಕುರಿತು ಮಾತನಾಡುತ್ತಲೇ ತಮ್ಮ ಪತ್ನಿಯ ವೈಚಾರಿಕ ಹಾಗೂ ವೈಜ್ಞಾನಿಕ ನೆಲೆಗಟ್ಟಿನ ಚಿಂತನೆಯನ್ನೂ ಮೆಲುಕು ಹಾಕಿದ್ದಾರೆ' ಎಂದು ತಿಳಿಸಿದರು.

'ಮೃಗತೃಷ್ಣ ಕಾದಂಬರಿಯಲ್ಲಿ ಕೇರಳದ ರಾಜಕೀಯ ತಲ್ಲಣಗಳು, ದೇಶದ ರಾಜಕೀಯ ವ್ಯವಸ್ಥೆ ಮೇಲೆ ಆ ರಾಜ್ಯ ಬೀರುತ್ತಿದ್ದ ಪ್ರಭಾವ, ಅಲ್ಲಿನ ಅಧಿಕಾರಶಾಹಿ ವ್ಯವಸ್ಥೆಯ ಚಿತ್ರಣವಿದೆ' ಎಂದರು.

ಕೇಶವರೆಡ್ಡಿ ಹಂದ್ರಾಳ, 'ನಮ್ಮದು ಪ್ರೇಮ ವಿವಾಹ. 1986ರ ಒಂದು ದಿನ ಸಂಜೆ ತರಕಾರಿ ತರಲು ಮಾರುಕಟ್ಟೆಗೆ ಹೋಗಿದ್ದಾಗ ಇದ್ದಕ್ಕಿದ್ದಂತೆ ಕೋಮುಗಲಭೆ ಶುರುವಾಗಿತ್ತು. ಗುಂಪೊಂದು ಮಾರಕಾಸ್ತ್ರದೊಂದಿಗೆ ಜನರತ್ತ ನುಗ್ಗಿ ಬಂದಿತ್ತು. ಆಗ ಪತ್ನಿಯನ್ನು ಭುಜದ ಮೇಲೆ ಎತ್ತಿಕೊಂಡು ಮನೆಯವರೆಗೂ ಓಡಿದ್ದೆ. ಅಂದಿನಿಂದ ಆಕೆ ನನ್ನನ್ನು ಪ್ರೀತಿಯಿಂದ ಅಪ್ಪಾಜಿ ಎಂದೇ ಕರೆಯುತ್ತಿದ್ದಳು' ಎಂದು ಸ್ಮರಿಸಿದರು.

ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ, ಜನಪದ ತಜ್ಞ ಕಾಳೇಗೌಡ ನಾಗವಾರ ಮಾತನಾಡಿದರು. ಕಾರ್ಯಕ್ರಮದಲ್ಲಿ 'ಚಂದ್ರಮ' ಆಲ್ಬಮ್ ಬಿಡುಗಡೆ ಮಾಡಲಾಯಿತು. ಪೌರಕಾರ್ಮಿಕ ಮಹಿಳೆಯರನ್ನೂ ಸನ್ಮಾನಿಸಲಾಯಿತು.

ಪುಸ್ತಕ ಪರಿಚಯ

- ಕೃತಿಯ ಹೆಸರು: ಬೆರಕೆ ಸೊಪ್ಪು
- ಲೇಖಕ: ಕೇಶವರೆಡ್ಡಿ ಹಂದ್ರಾಳ
- ಪುಟಗಳು: 212
- ದರ: ₹180
- ಕೃತಿಯ ಹೆಸರು: ಮೃಗತೃಷ್ಣ
- ಲೇಖಕ: ಕೇಶವರೆಡ್ಡಿ ಹಂದ್ರಾಳ
- ಪುಟಗಳು:169
- ದರ: ₹150
- ಪ್ರಕಾಶನ: ಸಪ್ನ ಬುಕ್ ಹೌಸ್

ಕಳಂಕಿತ ಅಧಿಕಾರಿಗೆ ಪಶ್ಚಿಮ ವಲಯದ ಹೊಣೆ!

ಬೆಂಗಳೂರು: ಪಾಲಿಕೆಯ ಜಾಗೃತ ಮತ್ತು ತಾಂತ್ರಿಕ ಕೋಶದ (ಟಿವಿಸಿಸಿ) ಮುಖ್ಯ ಎಂಜಿನಿಯರ್ ದೊಡ್ಡಯ್ಯ ಎ.ಬಿ. ಅವರನ್ನು ಪಶ್ಚಿಮ ವಲಯದ ಮುಖ್ಯ ಎಂಜಿನಿಯರ್ ಹುದ್ದೆಗೆ ನಗರಾಭಿವೃದ್ಧಿ ಇಲಾಖೆ ಶುಕ್ರವಾರ ವರ್ಗಾಯಿಸಿದೆ.

ರಾಜರಾಜೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಗಮದ ಮೂಲಕ ನಡೆಸಿದ (ಕೆಆರ್‌ಐಡಿಎಲ್) ಕಾಮಗಾರಿಯಲ್ಲಿ ₹ 118.26 ಕೋಟಿ ಅಕ್ರಮ ನಡೆದಿದೆ ಎಂದು ಲೋಕಾಯುಕ್ತರು 3 ತಿಂಗಳ ಹಿಂದೆ ವರದಿ ಸಲ್ಲಿಸಿದ್ದರು. ಹಣಕಾಸು ಹಗರಣ, ಅವ್ಯವಹಾರಗಳನ್ನು ಪತ್ತೆ ಹಚ್ಚಲು ಬಿಬಿಎಂಪಿಯಲ್ಲಿ ಟಿವಿಸಿಸಿ ಸ್ಥಾಪಿಸಲಾಗಿದೆ. 'ಕಾಮಗಾರಿಗಳನ್ನು ಜಾರಿ ಮಾಡದಿದ್ದರೂ, ಅವು ಅನುಷ್ಠಾನ ಆಗಿವೆ' ಎಂದು ಟಿವಿಸಿಸಿ ಅಧಿಕಾರಿಗಳು ವರದಿ ನೀಡಿ ಬಿಲ್ ಪಾವತಿಗೆ ಸಹಕರಿಸಿರುವುದು ಲೋಕಾಯುಕ್ತ ತನಿಖೆಯಲ್ಲಿ ಗೊತ್ತಾಗಿತ್ತು. ದೊಡ್ಡಯ್ಯ ವಿರುದ್ಧ ಕ್ರಮ ಕೈಗೊಳ್ಳುವಂತೆ ಲೋಕಾಯುಕ್ತರು ಶಿಫಾರಸು ಮಾಡಿದ್ದರು.

ಬಿಬಿಎಂಪಿಯ ಮಲ್ಲೇಶ್ವರ, ಗಾಂಧಿನಗರ ಹಾಗೂ ರಾಜರಾಜೇಶ್ವರಿನಗರ ವಿಭಾಗಗಳಲ್ಲಿ ನಡೆದಿರುವ ಅಕ್ರಮಗಳಿಗೆ ಸಂಬಂಧಿಸಿದಂತೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ ನೇತೃತ್ವದ ಸಮಿತಿಯು 254 ಎಂಜಿನಿಯರ್‌ಗಳ ವಿರುದ್ಧ ಕ್ರಮಕ್ಕೆ ಶಿಫಾರಸು ಮಾಡಿತ್ತು. ಆ ವರದಿಯಲ್ಲೂ ದೊಡ್ಡಯ್ಯ ಅವರ ಹೆಸರು ಇತ್ತು. ಆದರೆ, ದೊಡ್ಡಯ್ಯ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳದೆ ಪಶ್ಚಿಮ ವಲಯಕ್ಕೆ ವರ್ಗಾವಣೆ ಮಾಡಿರುವುದು ಅಧಿಕಾರಿಗಳ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಪಶ್ಚಿಮ ವಲಯದ ಮುಖ್ಯ ಎಂಜಿನಿಯರ್ ಪಿ.ವಿಶ್ವನಾಥ್ ಅವರನ್ನು ದಾಸರಹಳ್ಳಿ ವಲಯದ ಮುಖ್ಯ ಎಂಜಿನಿಯರ್ ಹುದ್ದೆಗೆ ವರ್ಗಾಯಿಸಲಾಗಿದೆ.

ಕರ್ನಾಟಕ ಸರ್ಕಾರ
ಧಾರ್ಮಿಕ ದತ್ತಿ ಇಲಾಖೆ, ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ,
ಶ್ರೀ ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಾಲಯ, ಎಸ್.ಎಸ್.ಘಾಟಿ,
ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ದೂ.:080-29550091, 080-29500191
ಇ-ಮೇಲ್: shrighatisubrahmanyatempleeo@gmail.com
ಸಂಖ್ಯೆ: ಎಸ್‌ಜಿಎಸ್ /ಡಿವಿಎಸ್/ಸಿಆರ್46/2022-23 ದಿನಾಂಕ:13-05-2022
ಪತ್ರಿಕಾ ಪ್ರಕಟಣೆ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಶ್ರೀ ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಾಲಯದ ಅನ್ನದಾಸೋಹದಲ್ಲಿ ಹೆಚ್ಚುವರಿಯಾಗಿ ಸಂಗ್ರಹವಾಗಿರುವ ಅಕ್ಕಿ ಮತ್ತು ಬೆಲ್ಲವನ್ನು ದಿನಾಂಕ: 27-05-2022 ರಂದು ಶುಕ್ರವಾರ ಬೆಳಗ್ಗೆ 11.00 ಘಂಟೆಗೆ ದೇವಾಲಯದ ಕಲ್ಯಾಣ ಮಂಟಪದಲ್ಲಿ ಬಹಿರಂಗ ಹರಾಜು ಮೂಲಕ ವಿಲೆ ಮಾಡಲಾಗುವುದು. ಆಸಕ್ತಿಯುಳ್ಳವರು ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ದೇವಾಲಯದ ಕಛೇರಿಯಲ್ಲಿ ಸಂಪರ್ಕಿಸುವುದು.
ಕಾರ್ಯನಿರ್ವಾಹಕ ಅಧಿಕಾರಿ
ಶ್ರೀ ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ, ಎಸ್.ಎಸ್.ಘಾಟಿ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ಉಪವಿಭಾಗ,
ಕೋಲಾರ-563101
e-mail: aeepwdklr@yahoo.com, website: www.kpwd.gov.in
e-portal : http://eproc.karnataka.gov.in ದೂರವಾಣಿ: 08152-222378
ಮಾನವಾಧಾರಿತ ಟೆಂಡರ್ ಅಧಿಸೂಚನೆ ಸಂಖ್ಯೆ: 01/2022-23 ದಿ: 06.05.2022
ಕೋಲಾರ ಜಿಲ್ಲೆ ಲೋಕೋಪಯೋಗಿ ಇಲಾಖೆ ಕೋಲಾರ ಉಪ ವಿಭಾಗ ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ 2216-01-700-3-01-200 ವಸತಿ ಗೃಹಗಳ ದುರಸ್ಥಿ/ನಿರ್ವಹಣೆ ಅಡಿಯಲ್ಲಿ ನಿರ್ಧಿಷ್ಟಪಡಿಸಿದ ನಮೂನೆಗಳಲ್ಲಿ ಅರ್ಹರಾದ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಬಿಡ್ಡಿಂಗ್ ಡಾಕ್ಯೂಮೆಂಟ್ ಕೆಡಬ್ಲ್ಯೂ-1ರ ಅನ್ವಯ ಮಾನವಾಧಾರಿತ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳ ಟೆಂಡರ್ ದಿನಾಂಕಗಳು ಕೆಳಕಂಡಂತಿರುತ್ತದೆ. ಗುತ್ತಿಗೆದಾರರು ಸದರಿ ಕಾಮಗಾರಿ/ಕಾಮಗಾರಿಗಳಿಗೆ ಬೇಕಾಗುವ ಕನಿಷ್ಟ ಪೂರ್ವಾರ್ಹತೆಯ ಬಗ್ಗೆ ಟೆಂಡರ್ ದಾಸ್ತಾವೇಜಿನ ಭಾಗ-3ರ ಗುತ್ತಿಗೆದಾರರಿಗೆ ಸೂಚನೆಗಳನ್ನು ನೋಡಲು ಕೋರಲಾಗಿದೆ. ಟೆಂಡರ್‌ಗಿಟ್ಟ ಮೊತ್ತ: **ಕನಿಷ್ಠ: ರೂ.2.00 ಲಕ್ಷಗಳು. ಗರಿಷ್ಠ: ರೂ.4.90 ಲಕ್ಷಗಳು.** ಇಎಂಡಿ:ಇಎಂಡಿ ಮೊತ್ತವನ್ನು ಎಫ್.ಡಿ.ಆರ್. ಮೂಲಕ ಸಲ್ಲಿಸಬೇಕಾಗಿರುತ್ತದೆ. ಕಾಲಾವಧಿ: **3 ತಿಂಗಳು.** ಟೆಂಡರ್ ಫಾರಂಗಳ ಬೆಲೆ ಪ್ರತಿ ಸೆಟ್ಟಿಗೆ: **ರೂ.500/-** (ಇತರೆ ತೆರಿಗೆಗಳು ಸೇರಿ) (ಈ ಹಣವನ್ನು ಹಿಂದಿರುಗಿಸುವುದಿಲ್ಲ ಹಾಗೂ ವರ್ಗಾಯಿಸುವುದಿಲ್ಲ) ಟೆಂಡರ್ ಫಾರಂಗಾಗಿ ಮನವಿ ಸ್ವೀಕರಿಸುವ ದಿನಾಂಕ: **16.05.2022 ರಿಂದ 18.05.2022ರವರೆಗೆ.** ಟೆಂಡರ್ ಫಾರಂಗಳನ್ನು ವಿತರಿಸುವ ದಿನಾಂಕ: **20.05.2022 ರಂದು ಮಧ್ಯಾಹ್ನ 16.00 ಗಂಟೆವರೆಗೆ.** ಟೆಂಡರ್‌ಗಳನ್ನು ಇತರೆ ಎಲ್ಲಾ ದಾಖಲೆಗಳೊಂದಿಗೆ ಸಲ್ಲಿಸಲು ಕಡೆಯ ದಿನಾಂಕ: **23.05.2022ರಂದು 16.00 ಗಂಟೆವರೆಗೆ.** ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಲು ಸಹಾ ಕೋರಲಾಗಿದೆ.
ಸಹಿ/- ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್,
ಲೋ.ಇ. ಉಪವಿಭಾಗ, ಕೋಲಾರ
ವಾ.ಸಾ.ಸಂ.ಇ./ಕೋಲಾರ/ಆರ್.ಓ.ಸಂಖ್ಯೆ 79/ಎಂಸಿಎ/2022-23
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಲೋಕೋಪಯೋಗಿ, ಇಲಾಖೆ ವಿಭಾಗ, ಚಿತ್ರದುರ್ಗ.
ಸಂಖ್ಯೆ: ಕಾಇಂ:ಲೋವಿಚಿ:ಎಇ-2:ಟೆಂಡರ್-03:2022-23 ದಿನಾಂಕ: 13.05.2022
ಇ-ಟೆಂಡರ್ ಪ್ರಕಟಣೆ
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಏಕ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ www.eproc.Karnataka.gov.in/eportal/index.seamನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.
ಕಾಮಗಾರಿ ಹೆಸರು: ಇ-ಪ್ರೊಕ್ಯೂರ್‌ಮೆಂಟ್ ಮೂಲಕ-ಏಕ ಲಕೋಟೆ ಪದ್ಧತಿ: ಲೆಕ್ಕ ಶೀರ್ಷಿಕೆ: 3054-04-337-1-10-200 ಜಿಲ್ಲಾ ಮತ್ತು ಇತರೆ ರಸ್ತೆಗಳ ನಿರ್ವಹಣೆ (ಅತಿವೃಷ್ಠಿ ಹಾಗೂ ನೆರೆ ಹಾವಳಿ: (1) ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕು ರಾಷ್ಟ್ರೀಯ ಹೆದ್ದಾರಿ-369ರಿಂದ ಚಿಕ್ಕಜಾಜೂರು ಮಾರ್ಗ ಕಂಬದೇವರಹಟ್ಟಿ ಗರಗದಿಂದ ಹಳೇಹಟ್ಟಿ ಲಂಬಾಣಿಹಟ್ಟಿ ಕೂಡು ಹಾಗೂ ಗರಗದಿಂದ ಗಿಲೀಕೇನಹಳ್ಳಿ ರಸ್ತೆ ಅಭಿವೃದ್ಧಿ (ವ.ಇಂ. 151607). ಅಂದಾಜು ಮೊತ್ತ: ರೂ. 50.00 ಲಕ್ಷಗಳು.
ಕಾಮಗಾರಿಗಳ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ: ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ: 26.05.2022 ಸಮಯ 17:30. ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ: 27.05.2022 ಸಮಯ 16:00. ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 30.05.2022 ಸಮಯ 11:00.
ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 080 25501216 ಮತ್ತು 080 25501227 ರಿಂದ ಮಾಹಿತಿ ಪಡೆಯಬಹುದು.
RO No. 141: DIPR/CTA/MCA/2022-23 ಸಹಿ/- ಕಾರ್ಯಪಾಲಕ ಅಭಿಯಂತರರು

ಕರ್ನಾಟಕ ಸರಕಾರ
ಪಟ್ಟಣ ಪಂಚಾಯತ ಕಾರ್ಯಾಲಯ, ನರೇಗಲ್ಲ
ನಂ.:ಪಪಂನ/ಅಲ್ಪಾವಧಿ/ಇ-ಟೆಂಡರ/ವಹಿ/2022-23 ದಿನಾಂಕ : 12-05-2022
ಇ - ಟೆಂಡರ್ ಪ್ರಕಟಣೆ
ನರೇಗಲ್ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯತ ನರೇಗಲ್ ಇವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ 2000 ರನ್ವಯ ಕೆ.ಡಬ್ಲ್ಯೂ-2 ರ ನಿಯಮಾವಳಿಗಳಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರಕ್ಯೂರಮೆಂಟ್ ಪೋರ್ಟಲ್ ಮೂಲಕ https://eproc.karnataka.gov.in/ ನಲ್ಲಿ ಪಿ.ಡಬ್ಲ್ಯೂ.ಡಿ ಯಲ್ಲಿ ನೊಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಟೆಂಡರನ್ನು ಅಹ್ವಾನಿಸಲಾಗಿದೆ. ಟೆಂಡರ ಫಾರಂ ಹಾಗೂ ಇ.ಎಂ.ಡಿ ಮೊತ್ತವನ್ನು ಇ-ಪ್ರಕ್ಯೂರಮೆಂಟ್ ಪೋರ್ಟನಲ್ಲಿ ಸೂಚಿಸಲಾಗಿದೆ.

ಅ. ನಂ.	ವಿವರ	ಮೊತ್ತ (ಲಕ್ಷಗಳಲ್ಲಿ)
	15ನೇ ಹಣಕಾಸು 2021-22	
1	DMA/2022-23/EL/WORK_INDENT131790	7.50
2	DMA/2022-23/IND14016	13.30
	ಎಸ್.ಸಿ.ಎಸ್.ಪಿ ಯೋಜನೆ 2021-22	
3	DMA/2022-23/BD/WORK_INDENT131693	3.00

(1) ಟೆಂಡರಗಳನ್ನು ಆನಲೈನ್‌ನಲ್ಲಿ ಇ-ಪ್ರಕ್ಯೂರಮೆಂಟ್ ಪೋರ್ಟಲ ಮೂಲಕ ಸಲ್ಲಿಸಲು ಕೊನೆಯ ದಿನಾಂಕ : **25-05-2022** ಸಂಜೆ 5.30 ಘಂಟೆಯವರೆಗೆ (2) ಟೆಂಡರಗಳನ್ನು ಇ-ಪ್ರಕ್ಯೂರಮೆಂಟ್ ಪೋರ್ಟಲ್ ಮಾರ್ಗಸೂಚಿಗಳಂತೆ ದಿನಾಂಕ : **27-05-2022** ಬೆಳಿಗ್ಗೆ ತೆರೆಯಲಾಗುವುದು. (3) ಪ್ಯಾಕೇಜ್ ವಿವರಗಳು, ಟೆಂಡರ ಷರತ್ತುಗಳು ಹಾಗೂ ನಿಬಂಧನೆಗಳಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರೀಕ ವಿಭಾಗದಲ್ಲಿ ಪಡೆಯಬಹುದಾಗಿದೆ. (4) ಕಾಮಗಾರಿ ಪೂರ್ಣಗೊಳಿಸಲು ನಿಗಧಿಗೊಳಿಸಿರುವ ಕಾಲಾವಧಿ (ಮಳೆಗಾಲ ಸೇರಿ): 4 ತಿಂಗಳು. (5) As Per Govt. Order No. PWD65RDF2017 Date : 11-10-2018 ರನ್ವಯ ಶೇಕಡಾ 12% ರಷ್ಟು ಜಿ.ಎಸ್.ಟಿ ಗುತ್ತಿಗೆದಾರರಿಗೆ ಪ್ರತ್ಯೇಕವಾಗಿ ಪಾವತಿಸಲಾಗುವುದು. (6) ಪಟ್ಟಣ ಪಂಚಾಯತ ನರೇಗಲ್ಲ ಟೆಂಡರನ್ನು ಮಂಜೂರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿದೆ.
ಸಹಿ/- ಅಧ್ಯಕ್ಷರು, ಪಟ್ಟಣ ಪಂಚಾಯತ ನರೇಗಲ್ಲ | ಸಹಿ/- ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ ನರೇಗಲ್ಲ
ವಾಸಾಸಂಇ/ಗದಗ/ಎಂ.ಸಿ.ಎ/85/2022-23

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಕೊಪ್ಪಳ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೊಪ್ಪಳ.
ಸಂಖ್ಯೆ:ಗ್ರಾ.ಕು.ನೀ & ನೈ/ವಿಕೊ/ಟೆಂಡರ್/2022-23/167 ದಿನಾಂಕ:10-05-2022
ಟೆಂಡರ್ ಪ್ರಕಟಣೆ
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ, ಪಾರದರ್ಶಕತೆ ಅಧಿನಿಯಮ 1999 ರ ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ Standard Bid Document KW ರ ನಿಯಮಗಳನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಇ-ಪ್ರೋಕ್ಯೂರಮೆಂಟ್ ಪೋರ್ಟ್‌ಲ್, ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ 2021-22 ನೇ ಸಾಲಿನ ಜಲ ಜೀವನ ಮಿಷನ್ ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿದೆ. ಅರ್ಹ ಗುತ್ತಿಗೆದಾರರು ಇ-ಪ್ರೋಕ್ಯೂರಮೆಂಟ್ ಪೋರ್ಟ್‌ಲ್ http://eproc.karnataka.gov.in ಮುಖಾಂತರ ಭಾಗವಹಿಸಬಹುದು.
ಸಾಮಾನ್ಯ ಸೂಚನೆಗಳು: 1) ಗುತ್ತಿಗೆದಾರರು ಟೆಂಡರ್ ಬಿಡ್ ಡಾಕ್ಯೂಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗದಿತ ಇ.ಎಮ್.ಡಿ ಹಣವನ್ನು ಆನ್‌ಲೈನ್ ಮೂಲಕ ನಿಗದಿಪಡಿಸಿದಂತೆ ಸಂದಾಯ ಮಾಡಬೇಕು. 4) ಡಬಲ್ ಕವರ್ ಟೆಂಡರ್ ಆಹ್ವಾನಿಸಿದೆ.
ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿ ಕೆಲಸದ ವೇಳೆಯಲ್ಲಿ ಅಥವಾ email:eerwsskpl@gmail.com ದ್ವಾರ ಮಾಹಿತಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟಿನಲ್ಲಿ ದಿನಾಂಕ :11/05/2022 ರಿಂದ Download ಮಾಡಿಕೊಳ್ಳಬಹುದಾಗಿದೆ.
ಟೆಂಡರ್ ಪ್ರೋಸೆಸಿಂಗ್ ಶುಲ್ಕ : ಇ-ಪ್ರೋಕ್ಯೂರ್‌ಮೆಂಟ್‌ನಲ್ಲಿರುವಂತೆ
1) ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿದ ದಿನಾಂಕ ಹಾಗೂ ಸಮಯ : **11/05/2022 ಸಮಯ 10:00 ಗಂಟೆಯಿಂದ 24/05/2022. ಸಮಯ 10:00 ಗಂಟೆವರೆಗೆ** 2) ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ ಹಾಗೂ ಸಮಯ : **11/05/2022 ಸಮಯ 16:00 ಗಂಟೆಯಿಂದ 24/05/2022. ಸಮಯ 16:00 ಗಂಟೆವರೆಗೆ** 3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ : **25/05/2022 ರಂದು 17:00 ಗಂಟೆಗೆ. ಕಛೇರಿ ಸಮಯದಲ್ಲಿ ಅಥವಾ ರಜಾ ಇದ್ದ ಪಕ್ಷದಲ್ಲಿ ಮರುದಿನ.** 4) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ : **30/05/2022 ರಂದು ಅಥವಾ ತಾಂತ್ರಿಕ ಬಿಡ್ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದ ನಂತರ.**
ಟಿಪ್ಪಣಿ: ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ ಹಾಗೂ ಇತರೆ ಪ್ರಮಾಣ ಪತ್ರಗಳ ಮೂಲ ದಾಖಲೆಗಳನ್ನು ಬಿಡ್ ತೆರೆದ ನಂತರ 8 ದಿವಸದೊಳಗಾಗಿ ವಿಭಾಗ ಕಛೇರಿಗೆ ಪರಿಶೀಲನೆಗಾಗಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಗುತ್ತಿಗೆದಾರರ ಉಮೇದುವಾರಿಕೆಯನ್ನು ಪರಿಗಣಿಸಲಾಗುವುದಿಲ್ಲ.
ಸಹಿ/- ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ & ನೈರ್ಮಲ್ಯ ವಿಭಾಗ, ಕೊಪ್ಪಳ
ವಾ.ಸಾ.ಇ./ಕೊಪ್ಪಳ/72/2022-23/ದೇಶಪಾಂಡೆ ಪಬ್ಲಿಸಿಟಿ

farnazfever

ವಿಜೃಂಭಣೆಯಿಂದ ಜರುಗಿದ ಬ್ರಹ್ಮರಥೋತ್ಸವ ● ವಿವಿಧ ವಾದ್ಯಗಳ ಮೆರುಗು

ಸಂಭ್ರಮದ ವೆಂಕಟರಮಣಸ್ವಾಮಿ ರಥೋತ್ಸವ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಪ್ರಸಿದ್ಧ ಕೆ.ಆರ್.ಪುರದ ಕೋಟೆ ವೆಂಕಟರಮಣಸ್ವಾಮಿಯ ಬ್ರಹ್ಮರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ ಅವರು ದೇವಾಲಯದಲ್ಲಿ ವಿಶೇಷ ಪೂಜೆ ನೆರವೇರಿಸಿ ಕೋಟೆ ವೆಂಕಟರಮಣ ಸ್ವಾಮಿ ಬ್ರಹ್ಮರಥೋತ್ಸವಕ್ಕೆ ಚಾಲನೆ ನೀಡಿದರು.

ಕೆ.ಆರ್.ಪುರದ ಪ್ರಮುಖ ಬೀದಿಗಳಲ್ಲಿ ರಥೋತ್ಸವದ ಮೆರವಣಿಗೆ ನಡೆಯಿತು. ಉತ್ಸವ ದಲ್ಲಿ ದೇವರಿಗೆ ವಿಶೇಷ ಪೂಜೆ, ಅಭಿಷೇಕ, ಮಹಾ ಮಂಗಳಾರತಿ ನಡೆಯಿತು. ರಥಕ್ಕೆ ವಿವಿಧ ಬಗೆಯ ಹೂವಿನ ಅಲಂಕಾರ ಮಾಡಲಾಗಿತ್ತು. ಕೃಷ್ಣ ರಾಜಪುರದ ಸುತ್ತ ಮಾಡಲಾಗಿದ್ದ ದೀಪಾಲಂಕಾರ ವ್ಯವಸ್ಥೆ ಆಕರ್ಷಣೀಯವಾಗಿತ್ತು.

ಜಾತ್ರಾ ಮಹೋತ್ಸವದಲ್ಲಿ ವೀರಗಾಸೆ, ತಮಟೆ, ಡೊಳ್ಳು ಕುಣಿತ, ಪೂಜಾ ಕುಣಿತ, ಮಂಗಳವಾದ್ಯ ತಂಡದ ನೃತ್ಯವು ಪ್ರದರ್ಶನ ರಥೋತ್ಸವಕ್ಕೆ ಮೆರಗು ನೀಡಿದವು.

ಕೋಟೆ ವೆಂಕಟರಮಣಸ್ವಾಮಿ ಬ್ರಹ್ಮ ರಥೋತ್ಸವ ನಡೆಯಿತು

ಹದಿನಾರು ವರ್ಷದ ಬಳಿಕ ನಡೆದ ರಥೋತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡು ಅದ್ದೂರಿ ಬ್ರಹ್ಮರಥೋತ್ಸವ ಕಣ್ತುಂಬಿಕೊಂಡರು.

ದೇವರಿಗೆ ಉಪ್ಪು, ಮೆಣಸು, ಅರ್ಪಿಸಿದ ಭಕ್ತರು ರಥಕ್ಕೆ ಬಾಳೆಹಣ್ಣು ಎಸೆಯುವ ಮೂಲಕ ತಮ್ಮ ಹರಕೆ ಈಡೇರಿಸಿಕೊಂಡರು.

ರಥೋತ್ಸವದಲ್ಲಿ ಕೃಷ್ಣರಾಜಪುರದ ಗ್ರಾಮಸ್ಥರು ಭಕ್ತರಿಗೆ ಪಾನಕ ಮಜ್ಜಿಗೆ ವಿತರಿಸಿದರು. ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಸಾವಿರಾರು ಭಕ್ತಾದಿಗಳಿಗೆ ಅನ್ನ ದಾಸೋಹ ಏರ್ಪಡಿಸಿದ್ದರು.

ಟ್ರಸ್ಟ್ ಅಧ್ಯಕ್ಷ ಎಲ್.ಮುನಿಸ್ವಾಮಿ, ಪಾಲಿಕೆ ಮಾಜಿ ಸದಸ್ಯರಾದ ಜಯಪ್ರಕಾಶ್, ಅಂತೋಣಿ ಸ್ವಾಮಿ, ಶ್ರೀಕಾಂತ್, ಖಜಾಂಚಿ ರಮೇಶ್ ಎಸ್. ಜಿ.ನಾಗರಾಜ್ ಇದ್ದರು.

ಬ್ಯಾಂಕಿಂಗ್ ಪರೀಕ್ಷೆಗೆ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕಿಂಗ್, ರೈಲ್ವೆ, ವಿಮೆ, ಹಣಕಾಸು ಸಂಸ್ಥೆಗಳು, ಖಾಸಗಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವ ಕನ್ನಡಿಗರ ಸಂಖ್ಯೆ ಕಡಿಮೆ ಇದ್ದು, ಕನ್ನಡಿಗರ ಸಂಖ್ಯೆ ಹೆಚ್ಚಿಸುವ ನಿಟ್ಟಿನಲ್ಲಿ ತರಬೇತಿ ನೀಡಲು ಬ್ರೆಟ್ ಸಲ್ಯೂಷನ್ಸ್ ಸಂಸ್ಥೆ ಮುಂದಾಗಿದೆ.

ಜೆಎಸ್‌ಎಸ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಫಾರ್ ಕಾಂಪಿಟೇಟಿವ್ ಎಕ್ಸಾಮಿನೇಷನ್ (ಜೆಎಸ್‌ಎಸ್‌ಟಿಐಸಿಇ) ಜತೆ ಬ್ರೆಟ್ ಸಲ್ಯೂಷನ್ ಒಪ್ಪಂದ ಮಾಡಿಕೊಂಡಿದೆ.

ಕರ್ಣಾಟಕ ಬ್ಯಾಂಕ್ ನಲ್ಲಿ ನೌಕರರ ಹುದ್ದೆಗಳಿಗೆ ಜೂನ್‌ನಲ್ಲಿ ಪರೀಕ್ಷೆ ನಡೆಯಲಿವೆ. ಆದ್ದರಿಂದ ಆಸಕ್ತ ಅಭ್ಯರ್ಥಿಗಳಿಗೆ ಆನ್‌ಲೈನ್ ಮತ್ತು ಆಫ್‌ಲೈನ್ ತರಗತಿ ನಡೆಸಿ ತರಬೇತಿ ನೀಡಲಿದೆ.

'ಬೆಂಗಳೂರಿನ ಜಯನಗರದ 8ನೇ ಬ್ಲಾಕ್‌ನಲ್ಲಿರುವ ಜೆಎಸ್‌ಎಸ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಫಾರ್ ಕಾಂಪಿಟೇಟಿವ್ ಎಕ್ಸಾಮಿನೇಷನ್‌ನಲ್ಲಿ ಆನ್‌ಲೈನ್ ಮತ್ತು ಆಫ್‌ಲೈನ್ ತರಗತಿಗಳು ಮೇ 21ರಿಂದ ಆರಂಭವಾಗಲಿವೆ. ಉದ್ಯೋಗಾ ಕಾಂಕ್ಷಿಗಳು ಈ ತರಬೇತಿ ಪಡೆದುಕೊಳ್ಳಬೇಕು' ಎಂದು ಜೆಎಸ್‌ಎಸ್‌ಟಿಐಸಿಇ ಸಂಸ್ಥೆಯ ನಿರ್ದೇಶಕ ಎಂ.ಬಿ.ದ್ಯಾಬೆರಿ ಮತ್ತು ಬ್ರೆಟ್ಸ್‌ನ ಅಧ್ಯಕ್ಷ ಅಶೋಕ್ ಹೆಗ್ಡೆ ಮನವಿ ಮಾಡಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ 7259028983 ಸಂಖ್ಯೆಗೆ ಸಂಪರ್ಕಿಸಲು ಸಂಸ್ಥೆಯ ಆಡಳಿತ ಮಂಡಳಿ ತಿಳಿಸಿದೆ.

12 ರ್‍ಯಾಂಕ್ ವಿಜೇತರಿಗೆ ಪದಕ ಪ್ರದಾನ

ಎಸ್‌ಜೆಐಎಂನ 25ನೇ ಘಟಿಕೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೇಂಟ್ ಜೋಸೆಫ್ಸ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ (ಎಸ್‌ಜೆಐಎಂ) 174 ವಿದ್ಯಾರ್ಥಿಗಳು ಪದವಿ ಪಡೆದಿದ್ದಾರೆ. ವಿವಿಧ ವಿಭಾಗಗಳಲ್ಲಿ ಮೊದಲ ಮೂರು ರ್‍ಯಾಂಕ್ ಪಡೆದ 12 ವಿದ್ಯಾರ್ಥಿಗಳಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಪದಕ ಹಾಗೂ ಪ್ರಮಾಣಪತ್ರ ಪ್ರದಾನ ಮಾಡಿದರು.

ಎಸ್‌ಜೆಐಎಂನಲ್ಲಿ ಶನಿವಾರ ಹಮ್ಮಿಕೊಂಡ 25ನೇ ಘಟಿಕೋತ್ಸವದಲ್ಲಿ ಮಾತನಾಡಿದ ರಾಜ್ಯಪಾಲರು, 'ನೈತಿಕ ಮತ್ತು ಗುಣಮಟ್ಟದ ಶಿಕ್ಷಣ ಪಡೆದುಕೊಂಡಿರುವ ವಿದ್ಯಾರ್ಥಿಗಳು ತಮ್ಮ ವೃತ್ತಿ ಬದುಕನ್ನು ಯಶಸ್ವಿಯಾಗಿ ರೂಪಿಸಿಕೊಳ್ಳಲು ಸಾಧ್ಯ' ಎಂದರು.

'ಬದುಕಿನಲ್ಲಿ ಎದುರಾಗುವ ಸವಾಲುಗಳನ್ನು ಗೆಲ್ಲಲು ಶಿಕ್ಷಣವನ್ನು ಸಮರ್ಪಕವಾಗಿ ಬಳಸಿಕೊಂಡು, ಉದ್ಯೋಗಿಯಾಗುವ ಬದಲು ಉದ್ಯೋಗದಾತರಾಗಬೇಕು. ಮಾನವೀಯ ಗುಣಗಳನ್ನು ಅಳವಡಿಸಿಕೊಳ್ಳಬೇಕು' ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಘಟಿಕೋತ್ಸವದಲ್ಲಿ ಐಶ್ವರ್ಯಾ (ಮಾನವ ಸಂಪನ್ಮೂಲ ನಿರ್ವಹಣೆ), ಒಫಿರ್ ನೀಲಾ ಆರ್ (ಕಾರ್ಯಾಚರಣೆ ನಿರ್ವಹಣೆ), ಜೋವಿಸ್ ಡೊಮಿನಿಕ್ (ಆಡಳಿತ ನಿರ್ವಹಣೆ), ಡಿ. ತೇಜಸ್ವಿನಿ (ಕಾರ್ಯಾಚರಣೆ ನಿರ್ವಹಣೆ). ರಚಿತಾ ಇಟಗಿ (ಆಡಳಿತ ನಿರ್ವಹಣೆ), ರುಬೆಲ್ ಅಂಟು ಸ್ಯಾರಿಯ (ಪಿಡಿಜಿಎಂ) ಮತ್ತು ಇರವೆಲ್ಲಿ ಶರ್ವಿನ್ ಸೆಬಾಸ್ಟಿಯನ್ (ಹಣಕಾಸು) ಪ್ರಮಾಣಪತ್ರಗಳನ್ನು ಪ್ರದರ್ಶಿಸಿದರು
– ಪ್ರಜಾವಾಣಿ ಚಿತ್ರ

ಸಂಸ್ಥೆಯ ನಿರ್ದೇಶಕ ಡಾ. ಮನೋಜ್ ಡಿಸೋಜ, 'ರಾಜ್ಯದ ಅತ್ಯಂತ ಹಳೆಯ ಸಂಸ್ಥೆಯಾಗಿರುವ ಎಸ್‌ಜೆಐಎಂ ದೇಶದ ಪ್ರಮುಖ 'ಬಿ-ಸ್ಕೂಲ್'ಗಳಲ್ಲಿ ಸ್ಥಾನ ಪಡೆದಿದ್ದು, ಜಾಗತಿಕ ಮಟ್ಟದಲ್ಲೂ ಗುಣಮಟ್ಟದ ಶಿಕ್ಷಣಕ್ಕೆ ಖ್ಯಾತವಾಗಿರುವ ಸಂಸ್ಥೆಯು ಜವಾಬ್ದಾರಿಯುತ ನಾಗರಿಕರನ್ನು ರೂಪಿಸುತ್ತಿದೆ' ಎಂದರು.

ರೆಕ್ಟರ್ ಫಾ. ಬ್ರಿಯಾನ್ ಪಿರೇರಾ, ಡೀನ್ ಡಾ. ಎ.ಆರ್. ರಾಜಗೋಪಾಲನ್ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಇದೇ 22ಕ್ಕೆ ಸಿಎಂ ದಾವೋಸ್‌ಗೆ

ಬೆಂಗಳೂರು: ವಿಶ್ವ ಆರ್ಥಿಕ ಶೃಂಗಸಭೆಯಲ್ಲಿ ಪಾಲ್ಗೊಳ್ಳುವುದಕ್ಕಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇದೇ 22ರಿಂದ ದಾವೋಸ್ ಪ್ರವಾಸ ಕೈಗೊಳ್ಳಲಿದ್ದಾರೆ.

ಸ್ವಿಟ್ಜರ್‌ಲೆಂಡ್‌ನ ದಾವೋಸ್‌ನಲ್ಲಿ ಇದೇ 22ರಿಂದ 26ರವರೆಗೆ ವಿಶ್ವ ಆರ್ಥಿಕ ಶೃಂಗಸಭೆ ನಡೆಯಲಿದೆ. ಈ ಸಮ್ಮೇಳನಕ್ಕೆ ಬೊಮ್ಮಾಯಿ ಅವರಿಗೂ ಆಹ್ವಾನ ಬಂದಿದೆ. ಮುಖ್ಯಮಂತ್ರಿ ನೇತೃತ್ವದ ನಿಯೋಗ ಇದೇ 22ರಂದು ದಾವೋಸ್‌ಗೆ ತೆರಳಲಿದ್ದು, ಇದೇ 26ರಂದು ರಾಜ್ಯಕ್ಕೆ ವಾಪಸಾಗಲಿದೆ ಎಂದು ಮುಖ್ಯಮಂತ್ರಿಯವರ ಸಚಿವಾಲಯದ ಮೂಲಗಳು ತಿಳಿಸಿವೆ.

ರಾಜ್ಯಕ್ಕೆ ವಿದೇಶಿ ಹೂಡಿಕೆ ಆಕರ್ಷಿಸುವುದಕ್ಕೆ ದಾವೋಸ್ ಭೇಟಿಯನ್ನು ಬಳಸಿಕೊಳ್ಳಲು ಮುಖ್ಯಮಂತ್ರಿ ಸಿದ್ಧತೆ ನಡೆಸಿದ್ದಾರೆ. ನಿಯೋಗದಲ್ಲಿ ಕೆಲವು ಸಚಿವರನ್ನೂ ಕರೆದೊಯ್ಯುವ ಸಾಧ್ಯತೆ ಇದೆ.

ಸುಮನಹಳ್ಳಿ ಚಿತಾಗಾರ ತಾತ್ಕಾಲಿಕ ಸ್ಥಗಿತ

ಬೆಂಗಳೂರು: ವಿನ್ಯಾಸ ಬದಲಿಸುವ ಕಾಮಗಾರಿ ಕೈಗೆತ್ತಿಕೊಂಡಿರುವುದರಿಂದ ಸುಮನಹಳ್ಳಿ ವಿದ್ಯುತ್ ಚಿತಾಗಾರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಲಾಗಿದೆ ಎಂದು ಬಿಬಿಎಂಪಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ವಿದ್ಯುತ್) ರಮೇಶ್ ತಿಳಿಸಿದ್ದಾರೆ.

ಇದೇ 15ರಿಂದ 28ರವರೆಗೆ ಕಾಮಗಾರಿ ನಿರ್ವಹಣೆಯಾಗಲಿದ್ದು, ಈ ಚಿತಾಗಾರಕ್ಕೆ ಮೃತದೇಹಗಳನ್ನು ತರದೆ ಸಮೀಪದ ಪೀಣ್ಯ, ಮೇಡಿ ಅಗ್ರಹಾರ ಅಥವಾ ಕೆಂಗೇರಿ ಚಿತಾಗಾರಕ್ಕೆ ಕೊಂಡೊಯ್ಯುವಂತೆ ಅವರು ಮನವಿ ಮಾಡಿದ್ದಾರೆ.

ಬಿಬಿಎಂಪಿ ಚುನಾವಣೆಗೆ ಕಾಂಗ್ರೆಸ್ ಆಗ್ರಹ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಶೀಘ್ರದಲ್ಲೇ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಲು ಒತ್ತಾಯ
- ಬಿಬಿಎಂಪಿ ಚುನಾವಣೆ ತಡೆಯಾಜ್ಞೆ ತೆರವಿಗೆ ಕ್ರಮ ಕೈಗೊಳ್ಳಲು ಮನವಿ

ಬೆಂಗಳೂರು: ಸುಪ್ರೀಂ ಕೋರ್ಟ್ ಆದೇಶದಂತೆ ಬಿಬಿಎಂಪಿ ಚುನಾವಣಾ ಪ್ರಕ್ರಿಯೆಯನ್ನು ತಕ್ಷಣ ಆರಂಭಿಸುವಂತೆ ಒತ್ತಾಯಿಸಿ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ನೇತೃತ್ವದ ಕಾಂಗ್ರೆಸ್ ಮುಖಂಡರ ನಿಯೋಗವು ರಾಜ್ಯ ಚುನಾವಣಾ ಆಯುಕ್ತ ಬಿ. ಬಸವರಾಜು ಅವರಿಗೆ ಶುಕ್ರವಾರ ಮನವಿ ಸಲ್ಲಿಸಿದರು.

'2020ರ ಸೆಪ್ಟೆಂಬರ್ 10ರಂದೇ ಬಿಬಿಎಂಪಿ ಚುನಾಯಿತ ಸದಸ್ಯರ ಅವಧಿ ಪೂರ್ಣಗೊಂಡಿತ್ತು. ಆದರೆ, ಈವರೆಗೂ ಚುನಾವಣೆ ನಡೆಸಿಲ್ಲ. ಇದರಿಂದ ಸ್ಥಳೀಯ ಸಂಸ್ಥೆಯಲ್ಲಿ ನಿರ್ವಾತ ಸೃಷ್ಟಿಯಾಗಿದೆ. ಅಂತಹ ಎಲ್ಲ ಸ್ಥಳೀಯ ಸಂಸ್ಥೆಗಳಿಗೂ ತಕ್ಷಣ ಚುನಾವಣೆ ನಡೆಸುವಂತೆ ಸುಪ್ರೀಂ ಕೋರ್ಟ್ ಮೇ 4ರಂದು ನೀಡಿರುವ ಆದೇಶವನ್ನು ಪಾಲಿಸಬೇಕು. ಆ ಮೂಲಕ ಸಂವಿಧಾನವನ್ನು ರಕ್ಷಿಸಬೇಕು' ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಸುಪ್ರೀಂ ಕೋರ್ಟ್ ತೀರ್ಪು ಬಿಬಿಎಂಪಿ ಚುನಾವಣೆಗೂ ಅನ್ವಯ ಆಗದಿದ್ದ ಸಂದರ್ಭದಲ್ಲಿ ಬಿಬಿಎಂಪಿ ಚುನಾವಣೆಗೆ ಇರುವ ತಡೆಯಾಜ್ಞೆ ತೆರವಿಗೆ ಕ್ರಮ ಕೈಗೊಳ್ಳಬೇಕು ಎಂದು ಕಾಂಗ್ರೆಸ್ ಮನವಿ ಮಾಡಿದೆ.

ಹಿಂದುಳಿದ ವರ್ಗಗಳ ಮೀಸಲಾತಿಗೆ ಧಕ್ಕೆಯಾಗದಂತೆ ಚುನಾವಣೆ ನಡೆಸಬೇಕು. 2020ರ ಡಿಸೆಂಬರ್ 4ರಂದು ಹೈಕೋರ್ಟ್ ನೀಡಿರುವ ಆದೇಶದ ಆಧಾರದಲ್ಲಿ ಮೀಸಲಾತಿ ನಿಗದಿ ಪಡಿಸಬೇಕು ಎಂದು ಒತ್ತಾಯಿಸಿದೆ.

ವಿಧಾನ ಪರಿಷತ್ ಸದಸ್ಯ ಪಿ.ಆರ್. ರಮೇಶ್, ಕಾಂಗ್ರೆಸ್ ಮುಖಂಡರಾದ ವಿ.ಎಸ್. ಉಗ್ರಪ್ಪ, ಎಂ. ಶಿವರಾಜು, ಆರ್.ಎಸ್. ಸತ್ಯನಾರಾಯಣ ನಿಯೋಗದಲ್ಲಿದ್ದರು.

ಮ್ಯೂಸಿಯಂ ರಸ್ತೆಯಲ್ಲಿ ಮಳೆ ಸುರಿಯುತ್ತಿದ್ದ ವೇಳೆ ಯುವತಿಯರಿಬ್ಬರು ತಲೆ ಮೇಲೆ ಜರ್ಕಿನ್ ಹೊತ್ತುಕೊಂಡು ಹೆಜ್ಜೆ ಹಾಕಿದರು
– ಪ್ರಜಾವಾಣಿ ಚಿತ್ರ

ಬಿಟ್ಟು ಬಿಟ್ಟು ಸುರಿದ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಹಲವು ದಿನಗಳಿಂದ ಮೋಡ ಕವಿದ ವಾತಾವರಣ ಹೆಚ್ಚಿದ್ದು, ಆಗಾಗ ಬಿಡುವು ಕೊಡುತ್ತಾ ಮಳೆ ಸುರಿಯುತ್ತಿದೆ. ನಗರದ ಹಲವೆಡೆ ಶನಿವಾರವೂ ಮಳೆಯಾಯಿತು.

ನಗರದ ಹಲವೆಡೆ ಶನಿವಾರ ಬೆಳಿಗ್ಗೆಯಿಂದ ಸಂಜೆಯವರೆಗೂ ಬಿಸಿಲು ಇತ್ತು. ಆಗಾಗ ಮೋಡ ಕವಿದ ವಾತಾವರಣ ಕಂಡುಬಂತು. ಸಂಜೆ ವೇಳೆ ತುಂತುರು ಮಳೆ ಆರಂಭವಾಗಿ, ರಾತ್ರಿ ಜೋರಾಗಿ ಸುರಿಯಿತು. ಜೋರು ಗಾಳಿ ಹಾಗೂ ಗುಡುಗು– ಸಿಡಿಲಿನ ಅಬ್ಬರವೂ ಇತ್ತು.

ರಾಜರಾಜೇಶ್ವರಿನಗರ, ಜ್ಞಾನ ಭಾರತಿ, ಕೆಂಗೇರಿ, ನಾಯಂಡನ ಹಳ್ಳಿ, ಬನಶಂಕರಿ, ಕುಮಾರಸ್ವಾಮಿ ಲೇಔಟ್, ಪುಟ್ಟೇನಹಳ್ಳಿ, ಜೆ.ಪಿ. ನಗರ, ಜಯನಗರ, ಬಸವನಗುಡಿ, ಗಿರಿನಗರ, ಹನುಮಂತನಗರ, ಚಾಮರಾಜಪೇಟೆ, ಚಿಕ್ಕಪೇಟೆ, ಕಾಟನ್‌ಪೇಟೆ, ಮೆಜೆಸ್ಟಿಕ್, ಗಾಂಧಿನಗರ ಹಾಗೂ ಸುತ್ತಮುತ್ತ ತುಂತುರು ಮಳೆ ಆಯಿತು.

ಶಿವಾಜಿನಗರ, ಅಶೋಕನಗರ, ಎಂ.ಜಿ. ರಸ್ತೆ, ಕೋರಮಂಗಲ, ಮಡಿವಾಳ, ಲಾಲ್‌ಬಾಗ್, ವಿಲ್ಸನ್ ಗಾರ್ಡನ್, ಶಾಂತಿನಗರ, ಎಚ್‌ಎಸ್‌ಆರ್ ಲೇಔಟ್ ಹಾಗೂ ಇತರೆರೆ ಮಳೆ ಸುರಿಯಿತು.

'ನಗರದಲ್ಲಿ ಬಹುತೇಕ ಕಡೆ ಸಂಜೆಯಿಂದ ರಾತ್ರಿಯವರೆಗೂ ಉತ್ತಮ ಮಳೆ ಆಗಿದೆ. ಕೆಲ ರಸ್ತೆಗಳಲ್ಲಿ ಮರದ ಕೊಂಬೆಗಳು ಬಿದ್ದಿದ್ದ ದೂರುಗಳು ಬಂದಿದ್ದವು. ಸ್ಥಳೀಯರೇ ಅವುಗಳನ್ನು ತೆರವು ಮಾಡಿದ್ದಾರೆ. ಅದನ್ನು ಹೊರತುಪಡಿಸಿ ಯಾವುದೇ ದೂರುಗಳು ಬಂದಿಲ್ಲ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ಶೇ 30.7ರಷ್ಟು ಎಣ್ಣೆ ಅಶುದ್ಧ

• ಜಯಸಿಂಹ ಆರ್.

ಬೆಂಗಳೂರು: 'ದೇಶದಲ್ಲಿ ಮಾರಾಟವಾಗುತ್ತಿರುವ ಅಡುಗೆ ಎಣ್ಣೆಯಲ್ಲಿ ಶೇಕಡ 30.7ರಷ್ಟು ಎಣ್ಣೆ ಪರಿಶುದ್ಧವಾಗಿಲ್ಲ' ಎನ್ನುತ್ತದೆ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ (ಎಫ್ಎಸ್ಎಸ್ಎಐ) ಅಡುಗೆ ಎಣ್ಣೆ ಸಮೀಕ್ಷಾ ವರದಿ.

ಮಾರುಕಟ್ಟೆಯಲ್ಲಿ ಲಭ್ಯವಿರುವ ಬ್ರ್ಯಾಂಡೆಡ್, ಅನ್‌ಬ್ರ್ಯಾಂಡೆಡ್ ಮತ್ತು ಗಾಣದ ಅಡುಗೆ ಎಣ್ಣೆಯ ಒಟ್ಟು 4,461 ಮಾದರಿಗಳನ್ನು ಶುದ್ಧತೆ ಪರೀಕ್ಷೆಗೆ ಎಫ್ಎಸ್ಎಸ್ಎಐ ಒಳಪಡಿಸಿತ್ತು. ಇದರಲ್ಲಿ 3,090 ಮಾದರಿಗಳು (ಶೇ 69.3) ಎಲ್ಲ ರೀತಿಯ ಶುದ್ಧತೆ ಪರೀಕ್ಷೆಗಳನ್ನು ಯಶಸ್ವಿಯಾಗಿ ಪೂರೈಸಿವೆ. ಆದರೆ, 1,371 (ಶೇ 30.7) ಮಾದರಿಗಳು ಶುದ್ಧತೆಯ ಪರೀಕ್ಷೆಗಳಲ್ಲಿ ವಿಫಲವಾಗಿವೆ ಎನ್ನುತ್ತದೆ 2020ರ ವರದಿ. ಇದು ಈ ವರ್ಷದ ಜನವರಿಯಲ್ಲಿ ಬಿಡುಗಡೆ ಆಗಿದೆ.

ದಕ್ಷಿಣದ ರಾಜ್ಯಗಳಲ್ಲಿ ದೊರೆಯುವ ಅಡುಗೆ ಎಣ್ಣೆಯಲ್ಲಿ ಕಲಬೆರಕೆ ಪ್ರಮಾಣ ಅತಿಹೆಚ್ಚು. ಇಲ್ಲಿ ಪರೀಕ್ಷೆಗೆ ಒಳಪಡಿಸಿದ ಮಾದರಿಗಳಲ್ಲಿ ಶೇ 43.8ರಷ್ಟು ಮಾದರಿಗಳು ಶುದ್ಧತೆ ಪರೀಕ್ಷೆಯಲ್ಲಿ ವಿಫಲವಾಗಿವೆ. ಪಶ್ಚಿಮದ ರಾಜ್ಯಗಳಲ್ಲಿ ಈ ಪ್ರಮಾಣ ಶೇ 19.19ರಷ್ಟು ಇದ್ದರೆ, ಪೂರ್ವ ಮತ್ತು ಈಶಾನ್ಯದ ರಾಜ್ಯಗಳಲ್ಲಿ ಶೇ 22.7ರಷ್ಟು ಇದೆ. ಉತ್ತರದ ರಾಜ್ಯಗಳಲ್ಲಿ ಸಂಗ್ರಹಿಸಿದ್ದ ಶೇ 35.6ರಷ್ಟು ಮಾದರಿಗಳು ಈ ಪರೀಕ್ಷೆಯಲ್ಲಿ ವಿಫಲವಾಗಿವೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ವಿಷಕಾರಿ ಅಂಶಗಳು, ಕಳಪೆ ಗುಣಮಟ್ಟ ಮತ್ತು ಹಾದಿ ತಪ್ಪಿಸುವಂತಹ ಬ್ರ್ಯಾಂಡಿಂಗ್ ಎಂಬ ಮೂರು ಅಂಶಗಳನ್ನು ಆಧಾರವಾಗಿ ಇರಿಸಿಕೊಂಡು ಈ ಪರೀಕ್ಷೆ ನಡೆಸಲಾಗಿದೆ. ವಿಷಕಾರಿ ಅಂಶಗಳು ಇವೆಯೇ ಎಂಬುದನ್ನು ಪತ್ತೆ ಮಾಡಲು ಪರೀಕ್ಷೆಗೆ ಒಳಪಡಿಸಿದ ಮಾದರಿಗಳಲ್ಲಿ, ಶೇ 2.42ರಷ್ಟು ಮಾದರಿಗಳಲ್ಲಿ ವಿಷಕಾರಿ ಅಂಶಗಳು ಪತ್ತೆಯಾಗಿವೆ. ಈ ಮಾದರಿಗಳಲ್ಲಿ ಭಾರ ಲೋಹಗಳು, ಸಸ್ಯಜನ್ಯ ವಿಷಗಳು ಮತ್ತು ಕೀಟನಾಶಕದ ಅವಶೇಷಗಳು ಪತ್ತೆಯಾಗಿವೆ. ಕಡಲೆಬೀಜ ಮತ್ತು ಕೊಬ್ಬರಿಯಲ್ಲಿನ ಸಾವಯವ ಅಂಶಗಳಿಂದ ಉತ್ಪತ್ತಿಯಾಗುವ ವಿಷಕಾರಿ ಅಂಶವು, ತಮಿಳುನಾಡು ಮತ್ತು ಕರ್ನಾಟಕದಲ್ಲಿನ ಮಾದರಿಗಳಲ್ಲಿ ಅತಿಹೆಚ್ಚಿನ ಪ್ರಮಾಣದಲ್ಲಿ ಪತ್ತೆಯಾಗಿದೆ. ದೇಶದ ಬೇರೆಡೆಯ ಮಾದರಿಗಳಲ್ಲಿ ಭಾರ ಲೋಹಗಳಾದ ಸೀಸ, ಆರ್ಸೆನಿಕ್, ಪಾದರಸದ ಅಂಶಗಳು ಪತ್ತೆಯಾಗಿವೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಕಚ್ಚಾತೈಲವನ್ನು ಸಂಸ್ಕರಿಸಿ ಪೆಟ್ರೋಲ್ ಮತ್ತು ಡೀಸೆಲ್ ಬೇರ್ಪಡಿಸುವಾಗ ಉಳಿಯುವ ಮಿನರಲ್ ತೈಲವನ್ನು ವೈಟ್ ಆಯಿಲ್ ಎಂದು ಕರೆಯಲಾಗುತ್ತದೆ. ಸಂಸ್ಕರಿಸಿದ ಮಿನರಲ್ ಆಯಿಲ್ ಅನ್ನು ಆಹಾರ ತಯಾರಿಕೆಯ ಸಲಕರಣೆಗಳು ಮತ್ತು ಯಂತ್ರೋಪಕರಣಗಳಲ್ಲಿ ಬಳಸಬಹುದು. ಆದರೆ ಈ ಎಣ್ಣೆಯನ್ನು ಸಾಸಿವೆ ಎಣ್ಣೆಯ ಜತೆಗೆ ಮಿಶ್ರಣ ಮಾಡಿ ಮಾರಾಟ ಮಾಡಲಾಗುತ್ತಿದೆ. ಹರಿಯಾಣದಲ್ಲಿ ಇದು ಹೆಚ್ಚು. ಒಟ್ಟು ಮಾದರಿಗಳಲ್ಲಿ ಶೇ 0.95ರಷ್ಟು ಮಾದರಿಯಲ್ಲಿ ಮಾತ್ರ ವೈಟ್ ಆಯಿಲ್ ಪತ್ತೆಯಾಗಿದೆ ಎನ್ನುತ್ತದೆ ವರದಿ.

ಅಡುಗೆ ಎಣ್ಣೆಯಲ್ಲಿ ಇರುವ ಪೌಷ್ಟಿಕಾಂಶದ ಪ್ರಮಾಣವನ್ನೂ ಈ ಪರೀಕ್ಷೆಗಳಲ್ಲಿ ಪರಿಶೀಲಿಸಲಾಗಿದೆ. ಅಡುಗೆ ಎಣ್ಣೆಯಲ್ಲಿ ವಿಟಮಿನ್ ಎ, ವಿಟಮಿನ್ ಡಿ2 ಮತ್ತು ವಿಟಮಿನ್ ಡಿ3 ಅಂಶಗಳು ಸೂಚಿತ ಪ್ರಮಾಣದಲ್ಲಿ ಇರಬೇಕು. ಆದರೆ ಪರೀಕ್ಷೆಗೆ ಒಳಪಡಿಸಿದ ಶೇ 8.6ರಷ್ಟು ಮಾದರಿಗಳಲ್ಲಿ ಈ ಅಂಶಗಳು ಸೂಚಿತ ಪ್ರಮಾಣಕ್ಕಿಂತ ಕಡಿಮೆ ಇತ್ತು ಎಂದು ವರದಿಯಲ್ಲಿ ವಿವರಿಸಲಾಗಿದೆ.

ಅರಸೀಕೆರೆಯಲ್ಲಿರುವ ಕೊಬ್ಬರಿ ಎಣ್ಣೆ ತಯಾರಿಸುವ ಗಾಣ.

ಕರ್ನಾಟಕದ ಕೊಬ್ಬರಿ; ಉತ್ತರದಲ್ಲಿ ಎಣ್ಣೆ ತಯಾರಿ

• ಸಂಧ್ಯಾ ಹೆಗಡೆ

ಮಂಗಳೂರು: ಕರಾವಳಿಯಲ್ಲಿ ರೈತರಿಗೆ ಅಡಿಕೆ ಬೆಳೆಯಷ್ಟು ಪ್ರೀತಿ ತೆಂಗಿನ ಮೇಲಿಲ್ಲ. ಹಿರಿಯರು ನೆಟ್ಟು ಬೆಳೆಸಿರುವ ಮರಗಳು ಆದಾಯ ಕೊಡುತ್ತಿವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 37 ಸಾವಿರ ಹೆಕ್ಟೇರ್‌ನಲ್ಲಿ ತೆಂಗು ಬೆಳೆಯಲಾಗುತ್ತಿದೆ. 'ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾರ್ಷಿಕ ₹92 ಕೋಟಿ ಮೌಲ್ಯದ ಕೊಬ್ಬರಿ ಹೊರ ರಾಜ್ಯಗಳಿಗೆ ಹೋಗುತ್ತದೆ. ಶೇ 5ರಷ್ಟು ಮಾತ್ರ ಸ್ಥಳೀಯವಾಗಿ ಎಣ್ಣೆಗೆ ಬಳಕೆಯಾಗುತ್ತದೆ. ಹಳ್ಳಿಗಳಲ್ಲಿ ಇದ್ದ ಎಣ್ಣೆ ಗಾಣಗಳು, ಗೃಹ ಬಳಕೆಗೆ ಬೇಕಾಗುವಷ್ಟು ಉತ್ಪಾದನೆಗೆ ಸೀಮಿತ. ಜಿಲ್ಲೆಯಲ್ಲಿರುವ ಕೆಲವು ಎಣ್ಣೆ ತಯಾರಿಕಾ ಕಂಪನಿಗಳು, ಕಡಿಮೆ ದರಕ್ಕೆ ಸಿಗುವ ಹೊರ ಜಿಲ್ಲೆಗಳ ಕೊಬ್ಬರಿ ಖರೀದಿಸುತ್ತವೆ' ಎನ್ನುತ್ತಾರೆ ದಕ್ಷಿಣ ಕನ್ನಡ ತೆಂಗು ರೈತ ಉತ್ಪಾದಕರ ಕಂಪನಿಯ ಅಧ್ಯಕ್ಷ ಪ್ರಸಾದ್ ಶೆಟ್ಟಿ.

ಬೆಳೆಗೆ ನಿರೀಕ್ಷಿತ ದರ ಸಿಗದ ಕಾರಣ ತೆಂಗು ಬೆಳೆಯಲು ಕೃಷಿಕರು ಹಿಂಜರಿಯುತ್ತಿದ್ದಾರೆ. ಇಲ್ಲಿ ಸಂಸ್ಕರಣಾ ವ್ಯವಸ್ಥೆ ರೂಪುಗೊಂಡರೆ ಉತ್ತಮ ಎಂಬುದು ಅವರ ಸಲಹೆ.

ಎಣ್ಣೆ ಉತ್ಪಾದನೆ ಕಡಿಮೆ: ಏಷ್ಯಾದಲ್ಲೇ ಅತಿ ದೊಡ್ಡ ಕೊಬ್ಬರಿ ಮಾರುಕಟ್ಟೆ ಇರುವ ತುಮಕೂರು ಜಿಲ್ಲೆಯ ತಿಪಟೂರು ಹಾಗೂ ಸುತ್ತಮುತ್ತ ಕೊಬ್ಬರಿ ಎಣ್ಣೆ ಉತ್ಪಾದನೆ ಅತಿ ಕಡಿಮೆ ಪ್ರಮಾಣದಲ್ಲಿ ಇದೆ.

ಅಲ್ಲಲ್ಲಿ ಗಾಣಗಳಿದ್ದರೂ ಎಣ್ಣೆ ಉತ್ಪಾದಿಸಿ ಮಾರಾಟ ಮಾಡುವುದು ಕಡಿಮೆ. ಗೃಹಬಳಕೆಗೆ ಅಲ್ಪ ಪ್ರಮಾಣದಲ್ಲಿ ಬಳಕೆ ಮಾಡುತ್ತಾರೆ. ಇಲ್ಲಿ ಅಡುಗೆಗೆ ಕೊಬ್ಬರಿ ಎಣ್ಣೆ ಬಳಕೆ ಕಡಿಮೆಯಾಗುತ್ತಿದೆ. ಶೇಂಗಾ, ಸೂರ್ಯಕಾಂತಿ, ತಾಳೆಎಣ್ಣೆ ಬಳಕೆ ಹೆಚ್ಚುತ್ತಿದೆ. ತೆಂಗು, ಕೊಬ್ಬರಿಯನ್ನು ಉತ್ತರ ಭಾರತಕ್ಕೆ ಕಳುಹಿಸಲಾಗುತ್ತದೆ.

ಹೊರ ರಾಜ್ಯಗಳಿಗೆ ರವಾನೆ: ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕು ಎಪಿಎಂಸಿ ಮಾರುಕಟ್ಟೆಯ ಕೊಬ್ಬರಿ ಮಂಡಿ ವರ್ತಕರು ತಾವು ಖರೀದಿಸುವ ಬಹುತೇಕ ಕೊಬ್ಬರಿಯನ್ನು ಆಹಾರ ಪದಾರ್ಥಗಳ ತಯಾರಿಕೆಗೆ ಬೇರೆ ರಾಜ್ಯಗಳಿಗೆ ಕಳುಹಿಸುತ್ತಾರೆ.

'ಅರಸೀಕೆರೆ ಕೊಬ್ಬರಿಗೆ ಹೆಚ್ಚು ಬೇಡಿಕೆ ಇದೆ. ಇಲ್ಲಿನ ಕೊಬ್ಬರಿ ಬೇಕರಿ ತಿನಿಸುಗಳು ಮತ್ತು ಚಟ್ನಿ ಪುಡಿ ತಯಾರಿಕೆಗೆ ರಫ್ತಾಗುತ್ತದೆ, ಕೊಬ್ಬರಿ ಎಣ್ಣೆ ತಯಾರಿಕೆಯಲ್ಲಿ ಹೆಚ್ಚಾಗಿ ಕೊಬ್ಬರಿಯ ಕೌಟು ಅನ್ನು ಬಳಸಲಾಗುತ್ತದೆ' ಎನ್ನುತ್ತಾರೆ ವರ್ತಕ ಗುರು.

'ನಮ್ಮ ಕಾರ್ಖಾನೆಯಲ್ಲಿ ನಿತ್ಯ 300 ಕೆ.ಜಿ. ಗೂ ಹೆಚ್ಚು ಕೊಬ್ಬರಿಯನ್ನು ಎಣ್ಣೆ ತಯಾರಿಕೆಗೆ ಬಳಸಲಾಗುತ್ತದೆ. ನಮಗೆ ಬೇರೆಡೆ ಮಾರುಕಟ್ಟೆ ಲಭ್ಯವಿಲ್ಲದ ಕಾರಣ ಸ್ಥಳೀಯವಾಗಿ ಮಾತ್ರ ವ್ಯಾಪಾರ ನಡೆಯುತ್ತದೆ' ಎಂದು ವರ್ತಕ ಮೂರ್ತಿ ಹೇಳಿದರು.

ಪೂರಕ ಮಾಹಿತಿ:
ಕೆ.ಜೆ. ಮರಿಯಪ್ಪ, ಕೆ.ಎಸ್.ಸುನಿಲ್

ಅಡಿಕೆ ಮೋಹ; ತಾಳೆ ಬೆಳೆ ಕ್ಷೇತ್ರದ ಕುಸಿತ

• ಚಂದ್ರಹಾಸ ಹಿರೇಮಳಲಿ

ಶಿವಮೊಗ್ಗ: ರಾಜ್ಯದಲ್ಲಿ 1990ರ ದಶಕದಲ್ಲಿ 25 ಸಾವಿರಕ್ಕೂ ಅಧಿಕ ಹೆಕ್ಟೇರ್ ಇದ್ದ ತಾಳೆ ಬೆಳೆ ಕ್ಷೇತ್ರ ಇದೀಗ 10 ಸಾವಿರ ಹೆಕ್ಟೇರ್‌ಗೆ ಕುಸಿದಿದೆ. ಅಡಿಕೆ ಧಾರಣೆಯ ನಾಗಾಲೋಟ, ತಾಳೆ ಧಾರಣೆಯ ಕುಸಿತದ ಕಾರಣ ತಾಳೆ ಜಾಗವನ್ನು ಬಹುತೇಕ ಕಡೆ ಅಡಿಕೆ ತೋಟಗಳು ಆವರಿಸಿವೆ.

ಅಡುಗೆ ಎಣ್ಣೆಗಳ ಬೆಲೆ ಏರಿಕೆಯಿಂದಾಗಿ ಮತ್ತೆ ತಾಳೆ ಬೆಳೆಯತ್ತ ರೈತರು ಒಲವು ತೋರುತ್ತಿದ್ದರೂ, ಅಡಿಕೆ ಆದಾಯದ ಮುಂದೆ ತಾಳೆಯ ಲಾಭ ರೈತರಿಗೆ ಗೌಣವಾಗಿದೆ.

ಎರಡು ದಶಕಗಳ ಹಿಂದೆ ಶಿವಮೊಗ್ಗ ಜಿಲ್ಲೆಯಲ್ಲಿ ಎರಡು ಸಾವಿರ ಹೆಕ್ಟೇರ್ ಇದ್ದ ತಾಳೆ ಬೆಳೆ ಕ್ಷೇತ್ರ ಇಂದು 403 ಹೆಕ್ಟೇರ್‌ಗಳಿಗೆ ಕುಸಿದಿದೆ. ಅಂದು 12 ಸಾವಿರ ಹೆಕ್ಟೇರ್ ಇದ್ದ ಅಡಿಕೆ ಬೆಳೆ ಕ್ಷೇತ್ರ ಇಂದು ಒಂದು ಲಕ್ಷ ಹೆಕ್ಟೇರ್ ತಲುಪಿದೆ. ರಾಜ್ಯದಲ್ಲಿ ಸರಾಸರಿ 5 ಲಕ್ಷ ಹೆಕ್ಟೇರ್ ಅಡಿಕೆ ಕ್ಷೇತ್ರವಿದೆ. ಭತ್ತ, ಅಡಿಕೆ ತರುವ ಆದಾಯ ತಾಳೆಯಿಂದ ಬರುವುದಿಲ್ಲ ಎನ್ನುವ ಕಾರಣಕ್ಕೆ ರಾಜ್ಯದ ಬಹುತೇಕ ರೈತರು ತಾಳೆ ಬದಲು ಅಡಿಕೆ ಸೇರಿದಂತೆ ಇತರೆ ತೋಟಗಾರಿಕಾ ಬೆಳೆಗಳತ್ತ ಚಿತ್ತ ಹರಿಸಿದ್ದಾರೆ.

ಏಳು ವರ್ಷಗಳ ಹಿಂದೆ ಕ್ವಿಂಟಲ್‌ಗೆ ₹ 1 ಲಕ್ಷದ ಗಡಿ ಮುಟ್ಟಿದ್ದ ಅಡಿಕೆ ಧಾರಣೆ ಪ್ರಸ್ತುತ ₹ 50 ಸಾವಿರ ದಾಟಿದೆ. ಒಂದು ಹೆಕ್ಟೇರ್‌ನಲ್ಲಿ ಸರಾಸರಿ 25 ಕ್ವಿಂಟಲ್ ಅಡಿಕೆ ಇಳುವರಿ ಬರುತ್ತದೆ. ಈಗಿರುವ ಧಾರಣೆಯಿಂದ ರೈತರು ₹ 12.50 ಲಕ್ಷ ಆದಾಯ ಗಳಿಸುತ್ತಿದ್ದಾರೆ. ಇದುವರೆಗೂ ತಾಳೆ ಹಣ್ಣಿನ ಧಾರಣೆ ಪ್ರತಿ ಟನ್‌ಗೆ ₹ 14 ಸಾವಿರ ದಾಟಿರಲಿಲ್ಲ. ಉಕ್ರೇನ್-ರಷ್ಯಾ ಯುದ್ಧ, ಇಂಡೊನೇಷ್ಯಾ ರಫ್ತು ನಿಷೇಧ, ಅಡುಗೆ ಎಣ್ಣೆ ಪೂರೈಕೆ ವ್ಯತ್ಯಯಗಳ ಪರಿಣಾಮ ಪ್ರಸ್ತುತ ಪ್ರತಿ ಟನ್ ತಾಳೆ ಧಾರಣೆ ₹ 21,299 ತಲುಪಿದೆ. ಧಾರಣೆ ಏರಿಕೆಯಾಗಿದ್ದರೂ, ಅಡಿಕೆಯಲ್ಲಿ ತಾಳೆಗಿಂತ ಎರಡು ಪಟ್ಟು ಆದಾಯ ದೊರಕುತ್ತಿರುವ ಕಾರಣ ರೈತರು ಅಡಿಕೆ ಬೆಳೆಯತ್ತ ಹೆಚ್ಚಿನ ಒಲವು ತೋರುತ್ತಿದ್ದಾರೆ.

ತಾಳೆ ಬೆಳೆಗೆ ಉತ್ತೇಜನ ನೀಡಲು ಸರ್ಕಾರ ಉಚಿತ ಸಸಿ ವಿತರಣೆ ಕಾರ್ಯಕ್ರಮ ಜಾರಿಗೆ ತಂದಿದೆ. ಪ್ರತಿ ಸಸಿಗೆ ₹ 84 ಇದ್ದ ಸಹಾಯಧನವನ್ನು ₹ 140ಕ್ಕೆ ಹೆಚ್ಚಿಸಲಾಗಿದೆ. ನಾಲ್ಕು ವರ್ಷಗಳ ನಿರ್ವಹಣೆಗೆ ಪ್ರತಿ ಹೆಕ್ಟೇರ್‌ಗೆ ₹ 12 ಸಾವಿರ ನೆರವು ನೀಡಲಾಗುತ್ತಿದೆ. ನಾಲ್ಕು ವರ್ಷಗಳಿಗೆ ಮರ ಫಲ ನೀಡಲು ಆರಂಭಿಸುತ್ತದೆ. ತೋಟಗಾರಿಗೆ ಇಲಾಖೆಯ ಅಧಿಕಾರಿಗಳು ತಾಳೆ ಬೆಳೆಯ ಮಹತ್ವ, ಭವಿಷ್ಯದಲ್ಲಿನ ಆರ್ಥಿಕ ಲಾಭ ಕುರಿತು ನಿರಂತರ ಜಾಗೃತಿ ಮೂಡಿಸುತ್ತಿದ್ದಾರೆ. ತಾಳೆ ಬೆಳೆ ಕ್ಷೇತ್ರದ ಅಭಿವೃದ್ಧಿಗಾಗಿ ಮೂರು ಕಂಪನಿಗಳ ಜತೆ ಒಪ್ಪಂದ ಮಾಡಿಕೊಳ್ಳಲಾಗಿದೆ. ವಿಜಯಪುರ, ಬಾಗಲಕೋಟೆ, ಶಿವಮೊಗ್ಗ ಸೇರಿ ಹಲವು ಜಿಲ್ಲೆಗಳ ರೈತರಿಗೆ ತಾಳೆ ಬೆಳೆ ಪ್ರಾತ್ಯಕ್ಷಿಕೆ ಕುರಿತು ತರಬೇತಿ ನೀಡಲಾಗುತ್ತಿದೆ.

'ವರ್ಷದ ಹಿಂದೆ ತಾಳೆ ಹಣ್ಣಿನ ಬೆಲೆ ಟನ್‌ಗೆ 14 ಸಾವಿರದ ಆಸುಪಾಸು ಇತ್ತು. ಈಗ ದರ ಏರುಗತಿಯಲ್ಲಿ ಸಾಗಿದೆ. ಉಕ್ರೇನ್ ಯುದ್ಧ, ಇಂಡೊನೇಷ್ಯಾ ರಫ್ತು ನಿಷೇಧಿಸಿದ ನಂತರ ತಾಳೆಗೆ ಭಾರಿ ಬೇಡಿಕೆ ಬರುತ್ತಿದೆ. ತಾಳೆ ಬೆಳೆದ ರೈತರ ಬದುಕು ಹಸನಾಗಲಿದೆ' ಎನ್ನುತ್ತಾರೆ ತಾಳೆ ಬೆಳೆ ಯೋಜನೆಯ ನೋಡಲ್ ಅಧಿಕಾರಿ ಜಿ.ಎಚ್. ಬಸವರಾಜ್.

ಸ್ವಾವಲಂಬನೆ ಹಾದಿಯಲ್ಲಿ ಪ್ರಶ್ನೆಗಳು ಹಲವು

• ವಿಜಯ್ ಜೋಷಿ

ಬೆಂಗಳೂರು: ಅಡುಗೆ ಎಣ್ಣೆ ಉತ್ಪಾದನೆಯಲ್ಲಿ ಕರ್ನಾಟಕವು ಸ್ವಾವಲಂಬಿ ಆಗುವುದು ಸಾಧ್ಯವಿದೆ. ಆದರೆ, ಅದಕ್ಕೆ ಕನಿಷ್ಠ ಹತ್ತು ವರ್ಷ ಬೇಕು. ಅಲ್ಲದೆ, ಎಣ್ಣೆಬೀಜ ಬೆಳೆಗಳನ್ನು ಬೆಳೆಯಲು ರೈತರು ಸಿದ್ಧರಿದ್ದಾರೆಯೇ, ನೀರಿನ ಲಭ್ಯತೆ ಇದೆಯೇ, ಮಾರುಕಟ್ಟೆಯಲ್ಲಿ ರೈತರಿಗೆ ಆಕರ್ಷಕ ಬೆಲೆ ಸಿಗಬಹುದೇ ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳಬೇಕು.

ಎಣ್ಣೆ ಬೀಜಗಳನ್ನು ದೊಡ್ಡ ಪ್ರಮಾಣದಲ್ಲಿ ಬೆಳೆದು, ರಾಜ್ಯಕ್ಕೆ ಅಗತ್ಯವಿರುವಷ್ಟು ಅಡುಗೆ ಎಣ್ಣೆ ಇಲ್ಲಿಯೇ ಉತ್ಪಾದನೆ ಆಗುವಂತೆ ಮಾಡಬಹುದೇ ಎಂಬ ಪ್ರಶ್ನೆಗೆ ಉದ್ಯಮದ ಮೂಲಗಳು ನೀಡುವ ವಿವರಣೆ ಇದು.

ರಾಜ್ಯದ ಒಂದು ತಿಂಗಳ ಅಡುಗೆ ಎಣ್ಣೆ ಅಗತ್ಯ 1 ಲಕ್ಷ ಟನ್. ವರ್ಷಕ್ಕೆ 12 ಲಕ್ಷ ಟನ್ ಅಡುಗೆ ಎಣ್ಣೆ ಬೇಕು. ಇದರಲ್ಲಿ ಶೇಕಡ 60ರಷ್ಟನ್ನು ಈಗ ಆಮದು ಮಾಡಿಕೊಳ್ಳಲಾಗುತ್ತಿದೆ.

'ರಾಜ್ಯದ ರೈತರು ಕಡಿಮೆ ರಿಸ್ಕ್ ಇರುವ ಬೆಳೆಗಳ ಕಡೆ ಮುಖ ಮಾಡಿದ್ದಾರೆ. ಅಡುಗೆ ಎಣ್ಣೆ ಉತ್ಪಾದನೆಯಲ್ಲಿ ಸ್ವಾವಲಂಬನೆ ಬೇಕು ಎಂದಾದರೆ, ರೈತರು ಎಣ್ಣೆಬೀಜಗಳನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಯಲು ಸಿದ್ಧರಿದ್ದಾರೆಯೇ ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳಬೇಕು' ಎಂದು ಅಡುಗೆ ಎಣ್ಣೆಗಳ ಉತ್ಪಾದನೆ, ಮಾರಾಟದಲ್ಲಿ ತೊಡಗಿರುವ ಸಂಸ್ಥೆಯೊಂದರ ಅಧಿಕಾರಿ ಹೇಳಿದರು.

ವ್ಯಾಪಕವಾಗಿ ಬಳಕೆಯಾಗುತ್ತಿರುವ ತಾಳೆ ಎಣ್ಣೆ ಉತ್ಪಾದನೆ ಜಾಸ್ತಿ ಆಗಬೇಕು ಎಂದಾದರೆ, ತಾಳೆ ಕೃಷಿ ದೊಡ್ಡ ಪ್ರಮಾಣದಲ್ಲಿ ಇರಬೇಕು. ತಾಳೆ ಕೃಷಿಗೆ ನೀರು ಹೆಚ್ಚು ಬೇಕು. ಆದರೆ, ನೀರು ಹೆಚ್ಚು ಲಭ್ಯವಿರುವ ಕಡೆ ಅಡಿಕೆ, ಭತ್ತ ಬೆಳೆಯಲಾಗುತ್ತಿದೆ. ನೀರು ಹೆಚ್ಚು ಲಭ್ಯವಿದ್ದೂ ತಾಳೆಯನ್ನೇ ಬೆಳೆಯಬೇಕು ಎಂದಾದರೆ, ಅದಕ್ಕೆ ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆ ಸಿಗಬೇಕು. ಇಂಡೊನೇಷ್ಯಾ ಅಥವಾ ಮಲೇಷ್ಯಾದಿಂದ ಕಡಿಮೆ ಬೆಲೆಗೆ ತಾಳೆ ಎಣ್ಣೆ ಆಮದಾಗುವಾಗ ಇಲ್ಲಿನ ಬೆಳೆಗೆ ಹೆಚ್ಚಿನ ಬೆಲೆ ಸಿಗುವುದಿಲ್ಲ ಎಂದು ಅವರು ಹೇಳಿದರು.

'ಈಗ ರಾಜ್ಯದಲ್ಲಿ ಸೂರ್ಯಕಾಂತಿ ಬೆಳೆ ಬೆಳೆಯುವ ಪ್ರದೇಶವು 1.25 ಲಕ್ಷ ಹೆಕ್ಟೇರ್‌ಗೆ ಇಳಿದಿದೆ. ಇದಕ್ಕೆ ಒಂದು ಕಾರಣ ಈ ಬೆಳೆಗೆ ಎದುರಾದ ರೋಗದ ಸಮಸ್ಯೆ. ನಾವೇ ಸೂರ್ಯಕಾಂತಿ ಬೆಳೆದು, ಎಣ್ಣೆ ಸಿದ್ಧಪಡಿಸಿಕೊಳ್ಳುವುದಾದರೆ ಪ್ರತಿ ಕೆ.ಜಿ.ಗೆ ₹ 160 ಪಾವತಿಸಲು ಸಿದ್ಧರಿರಬೇಕು. ಆದರೆ, ಉಕ್ರೇನ್-ರಷ್ಯಾ ಯುದ್ಧಕ್ಕೂ ಮೊದಲು ಅದೇ ಸೂರ್ಯಕಾಂತಿ ಎಣ್ಣೆಯನ್ನು ಕೆ.ಜಿ.ಗೆ ₹ 120ರ ದರದಲ್ಲಿ ಆಮದು ಮಾಡಿಕೊಳ್ಳಲು ಸಾಧ್ಯವಿತ್ತು' ಎಂದು ಅಡುಗೆ ಎಣ್ಣೆಗಳ ಉದ್ಯಮದ ಮೂಲಗಳು ಹೇಳುತ್ತವೆ.

ಕುಗ್ಗುತ್ತಿದೆ ಎಣ್ಣೆಕಾಳು ಬೆಳೆ ಪ್ರದೇಶ...

ಒಂದನೇ ಪುಟದಿಂದ....

ಅಡುಗೆ ಎಣ್ಣೆ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವ ಉದ್ದೇಶದಿಂದ ಎಣ್ಣೆಕಾಳುಗಳ ಬೆಳೆ ಹೆಚ್ಚಿಸಲು 1980ರಲ್ಲಿ ಕೇಂದ್ರ ಸರ್ಕಾರ 'ಎಣ್ಣೆಕಾಳು ಮತ್ತು ಬೇಳೆಕಾಳುಗಳ ತಂತ್ರಜ್ಞಾನ ಮಿಷನ್'ಗೆ (ಟಿಎಂಒಪಿ) ಚಾಲನೆ ನೀಡಿತ್ತು. ರಾಜ್ಯವೂ ಈ ಯೋಜನೆಗೆ 1984ರಿಂದ ಚಾಲನೆ ನೀಡಿತ್ತು. ಇಂತಹ ಯೋಜನೆಗಳ ಪರಿಣಾಮ 1980-90ರ ಅವಧಿಯಲ್ಲಿ ಎಣ್ಣೆ ಕ್ರಾಂತಿ ಸಾಧಿಸಿ ದೇಶ ಸ್ವಾವಲಂಬಿಯಾಗಿತ್ತು.

ಸೂರ್ಯಕಾಂತಿ ಮತ್ತು ಸೋಯಾಬೀನ್ ಅನ್ನು ಹೆಚ್ಚು ಬೆಳೆಯಲು ಸರ್ಕಾರ ಪ್ರೋತ್ಸಾಹಿಸಿತ್ತು. ಬೇಡಿಕೆಗೆ ತಕ್ಕಂತೆ ಶೇ 30ರಷ್ಟು ಮಾತ್ರ ಆಮದು ಮಾಡಿಕೊಳ್ಳಲಾಗುತ್ತಿತ್ತು. ಆಗ ಆಮದು ಸುಂಕ ಶೇಕಡ 60ರಷ್ಟಿತ್ತು. ಆಮದು ಮಾಡಿಕೊಳ್ಳುವುದು ಸುಲಭವಾಗಿರಲಿಲ್ಲ. ಆದರೆ, ನಂತರದ ಸರ್ಕಾರಗಳು ಆಮದು ಸುಂಕವನ್ನು ಶೇ 16ಕ್ಕೆ ಇಳಿಸಿದವು. ವರ್ತಕರ ಪರ ಇದ್ದ ಧೋರಣೆಗಳು ಸಹ ಇದಕ್ಕೆ ಕಾರಣವಾಗಿದ್ದವು. ಇದರಿಂದ, ತಾಳೆ ಎಣ್ಣೆ ಅಗ್ಗವಾಯಿತು. ಶೇಂಗಾ ಎಣ್ಣೆ ದುಬಾರಿಯಾಯಿತು.

ಇದರಿಂದಾಗಿ ರಾಜ್ಯದಲ್ಲಿ ಶೇಂಗಾ ಮತ್ತು ಸೂರ್ಯಕಾಂತಿ ಬೆಳೆಯುವ ಪ್ರದೇಶವೂ ಕ್ರಮೇಣ ಕಡಿಮೆಯಾಗುತ್ತಿದೆ. ಕಳೆದ 10 ವರ್ಷಗಳಲ್ಲಿ ಶೇಂಗಾ ಬೆಳೆಯುವ ಪ್ರದೇಶ ಶೇ 4ರಷ್ಟು ಕಡಿಮೆಯಾಗಿದೆ. ಹತ್ತು ವರ್ಷಗಳ ಹಿಂದೆ 8.18 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಶೇಂಗಾ ಬೆಳೆಯಲಾಗುತ್ತಿತ್ತು. 2020–21ರಲ್ಲಿ 7 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಶೇಂಗಾ ಬೆಳೆಯಲಾಗಿತ್ತು. ಹತ್ತು ವರ್ಷಗಳ ಹಿಂದೆ ಸೂರ್ಯಕಾಂತಿಯನ್ನು 3.81 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿತ್ತು. ಆದರೆ, ಈಗ 1.22 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಈ ಬೆಳೆಗಳ ಜಾಗವನ್ನು ಮೆಕ್ಕೆಜೋಳ ಆಕ್ರಮಿಸಿಕೊಳ್ಳುತ್ತಿದೆ. 2011–12ರಲ್ಲಿ 13.49 ಲಕ್ಷ ಹೆಕ್ಟೇರ್ ಇದ್ದ ಮೆಕ್ಕೆಜೋಳ ಪ್ರದೇಶವು 2020–21ರಲ್ಲಿ 17.13 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಹೆಚ್ಚಿದೆ ಎಂದು ಕೃಷಿ ಬೆಲೆ ಆಯೋಗದ ವರದಿಯಲ್ಲಿ ವಿವರಿಸಲಾಗಿದೆ.

'ಶಿರಾ, ಪಾವಗಡ, ಚಳ್ಳಕೆರೆ, ಚಿತ್ರದುರ್ಗ, ಹಿರಿಯೂರು, ಮೊಳಕಾಲ್ಮುರು ತಾಲ್ಲೂಕುಗಳಲ್ಲಿ ಅತಿ ಹೆಚ್ಚು ಶೇಂಗಾ ಬೆಳೆಯಲಾಗುತ್ತಿತ್ತು. ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ಶೇಂಗಾ ಬೆಳೆಯುವುದು ಕಡಿಮೆಯಾಗಿದೆ. ಜತೆಗೆ, ವೆಚ್ಚ ಹೆಚ್ಚಾಗುತ್ತಿದೆ. ಪರ್ಯಾಯ ಬೆಳೆಗಳಿಗೆ ರೈತರು ಮೊರೆ ಹೋಗುತ್ತಿದ್ದಾರೆ' ಎಂದು ಕರ್ನಾಟಕ ಸಹಕಾರ ಎಣ್ಣೆ ಬೀಜ ಮಹಾಮಂಡಳದ ನಿರ್ದೇಶಕ ಎಂ.ಸಿ. ಚಂದ್ರಯ್ಯ ವಿವರಿಸುತ್ತಾರೆ.

ಆಮದು ಪರಿಣಾಮಗಳು: ರಷ್ಯಾ-ಉಕ್ರೇನ್ ಯುದ್ಧ ಆರಂಭವಾದ ನಂತರ ಸೂರ್ಯಕಾಂತಿ ಎಣ್ಣೆ ಪೂರೈಕೆಗೆ ಪೆಟ್ಟು ಬಿದ್ದಿದೆ. ಇದರಿಂದಾಗಿ ದೇಶಿ ಮಾರುಕಟ್ಟೆಯಲ್ಲಿ ಇತರ ಅಡುಗೆ ಎಣ್ಣೆಗಳ ಬೆಲೆ ಹೆಚ್ಚಳವಾಗಿದೆ. ಈ ನಡುವೆ ತಾಳೆ ಎಣ್ಣೆ ರಫ್ತು ಮಾಡುವುದನ್ನು ಇಂಡೊನೇಷ್ಯಾ ನಿಷೇಧಿಸಿದೆ.

'ದೇಶಿ ಎಣ್ಣೆ ಉದ್ಯಮ ಕೊಂದು ಹಾಕಿದ ಸರ್ಕಾರ'

'ಆಮದು ಸುಂಕ ಕಡಿಮೆ ಮಾಡುವ ಸರ್ಕಾರ ದೇಶಿಯ ಎಣ್ಣೆ ಉದ್ಯಮವನ್ನು ಕೊಂದು ಹಾಕಿತು. ಆಮದು ಲಾಬಿ ಬಲಿಷ್ಠವಾಗಿದ್ದರಿಂದ, ಕೃತಕ ಅಭಾವ ಸೃಷ್ಟಿಸಲಾಯಿತು. ಸರ್ಕಾರಗಳ ತಪ್ಪು ಆಮದು ವಾಣಿಜ್ಯ ನೀತಿಗಳೇ ಈಗಿನ ಪರಿಸ್ಥಿತಿಗೆ ಕಾರಣ' ಎಂದು ಕರ್ನಾಟಕ ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ವಿಶ್ಲೇಷಿಸುತ್ತಾರೆ.

'ಎಣ್ಣೆಕಾಳುಗಳಿಗೆ ಈಗ ಕೊಡುವ ಬೆಂಬಲ ಬೆಲೆ ಹೆಚ್ಚಿಸಬೇಕು. ಬೆಲೆ ಕೊರತೆ ಪಾವತಿ ಯೋಜನೆ ಜಾರಿಗೊಳಿಸಬೇಕು. ಎಂ.ಎಸ್. ಸ್ವಾಮಿನಾಥನ್ ಆಯೋಗದ ಶಿಫಾರಸುಗಳ ಅನ್ವಯ ಬೆಂಬಲ ಬೆಲೆ ಘೋಷಿಸಬೇಕು. ಉತ್ಪಾದನಾ ವೆಚ್ಚದ ಮೇಲೆ ಶೇ50ರಷ್ಟು ಲಾಭವನ್ನು ನೀಡಬೇಕು' ಎಂದು ಅವರು ಒತ್ತಾಯಿಸುತ್ತಾರೆ.

ಪ್ರೋತ್ಸಾಹದಾಯಕ ಕ್ರಮಗಳು ಅಗತ್ಯ

'ಶೇ 80ರಷ್ಟು ಎಣ್ಣೆಕಾಳು ಪ್ರದೇಶ ಮಳೆಯಾಧಾರಿತ. ಈ ಬೆಳೆಗಳು ಹೆಚ್ಚು ವೆಚ್ಚದಾಯಕವಾಗುತ್ತಿವೆ. ಸದ್ಯ ಪ್ರತಿ ನಾಗರಿಕನ ವಾರ್ಷಿಕ ಎಣ್ಣೆ ಬೇಡಿಕೆ ಸುಮಾರು 18 ಕಿ.ಗ್ರಾಂ. ಇದೇ ರೀತಿ ಉತ್ಪಾದನೆ ಮುಂದುವರಿದರೆ 2030ರ ವೇಳೆಗೆ 12 ಕಿ.ಗ್ರಾಂ.ಗೆ ಇಳಿಯುವ ಸಾಧ್ಯತೆ ಇದೆ. ಹೀಗಾಗಿ, ಸರ್ಕಾರ ಬೆಂಬಲ ಬೆಲೆ ಮತ್ತು ಸಹಾಯಧನ ನೀಡುವಂತಹ ಉತ್ತೇಜನ ಕ್ರಮಗಳನ್ನು ಕೈಗೊಳ್ಳಬೇಕು. ಜತೆಗೆ, ಕರ್ನಾಟಕ ಸಹಕಾರ ಎಣ್ಣೆ ಬೀಜ ಮಹಾಮಂಡಳವನ್ನು ಮತ್ತಷ್ಟು ಬಲಪಡಿಸಬೇಕು' ಎಂದು ಧಾರವಾಡ ಕೃಷಿ ವಿಶ್ವವಿದ್ಯಾಲಯದ ಶೇಂಗಾ ಬೇಸಾಯ ತಜ್ಞ ಡಾ. ಬಸವರಾಜ ಶಿವಪುತ್ರಪ್ಪ ಏಣಗಿ ಅಭಿಪ್ರಾಯಪಡುತ್ತಾರೆ.

ಎಣ್ಣೆ ಮಿಲ್ ಪುನರಾರಂಭಕ್ಕೆ ಒಲವು

• ಜಿ.ಬಿ.ನಾಗರಾಜ್

ಚಿತ್ರದುರ್ಗ: ಮಳೆ ಕೊರತೆ, ಇಳುವರಿ ಕುಸಿತ, ನ್ಯಾಯಯುತ ಬೆಲೆ ಸಿಗದೇ ಶೇಂಗಾ ಬೆಳೆಗಾರ ಸಂಕಷ್ಟದಲ್ಲಿರುವ ಸಂದರ್ಭದಲ್ಲಿಯೇ ಚಳ್ಳಕೆರೆಯ ಎಣ್ಣೆ ಮಿಲ್‌ಗಳನ್ನು ಪುನರಾರಂಭಿಸಲು ಉದ್ಯಮಿಗಳು ಒಲವು ತೋರುತ್ತಿದ್ದಾರೆ.

ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆ ಶೇಂಗಾ. ಚಳ್ಳಕೆರೆ, ಮೊಳಕಾಲ್ಮುರು, ಹಿರಿಯೂರು, ಪಾವಗಡ, ಶಿರಾ, ಮಧುಗಿರಿ ಭಾಗದಲ್ಲಿ ಶೇಂಗಾ ಮಳೆಯಾಶ್ರಿತ ಬೆಳೆ. ಕಡಿಮೆ ಪ್ರಮಾಣದ ಮಳೆ ಬೀಳುವುದರಿಂದ ಶೇಂಗಾ ಹೊರತುಪಡಿಸಿ ಬೇರೆ ಬೆಳೆ ಕಷ್ಟ. ಅತಿವೃಷ್ಟಿ, ಅನಾವೃಷ್ಟಿಯ ನಡುವೆಯೂ ಶೇಂಗಾ ಬಿತ್ತುವುದು ರೈತರಿಗೆ ಅನಿವಾರ್ಯ.

ಶೇಂಗಾ ಯಥೇಚ್ಛವಾಗಿ ಬೆಳೆಯುತ್ತಿದ್ದ ಸಂದರ್ಭದಲ್ಲಿ ಚಳ್ಳಕೆರೆಯ ಎಣ್ಣೆ ಮಿಲ್‌ಗಳು ಸದ್ದು ಮಾಡುತ್ತಿದ್ದವು. ಶೇಂಗಾ ಎಣ್ಣೆ ತೆಗೆಯುವ ಮಿಲ್ ಹಾಗೂ ಶೇಂಗಾ ಬೀಜ ಬೇರ್ಪಡಿಸುವ (ಡಿಕಾಟಿಕೇಟರ್) ನೂರಾರು ಘಟಕಗಳು ಇಲ್ಲಿದ್ದವು. ಅಡುಗೆ ಎಣ್ಣೆ ಉತ್ಪಾದಿಸುವ ದೊಡ್ಡ ಕಂಪನಿಗಳು ಮಾರುಕಟ್ಟೆಗೆ ಲಗ್ಗೆಯಿಟ್ಟ ಬಳಿಕ ಎಣ್ಣೆ ಮಿಲ್‌ಗಳು ಶಕ್ತಿ ಕಳೆದುಕೊಂಡವು. ಅನಾರೋಗ್ಯಕರ ಮಾರುಕಟ್ಟೆ ಪೈಪೋಟಿಯಿಂದ ಬಹುತೇಕ ಮಿಲ್‌ಗಳು ಬಾಗಿಲು ಮುಚ್ಚಿದ್ದವು.

'2007ರಲ್ಲಿ 42 ಎಣ್ಣೆ ಮಿಲ್‌ಗಳು ಚಳ್ಳಕೆರೆಯಲ್ಲಿದ್ದವು. 2014ರ ವೇಳೆಗೆ ಎಣ್ಣೆ ಮಿಲ್‌ಗಳ ಸಂಖ್ಯೆ 14ಕ್ಕೆ ಕುಸಿದಿತ್ತು. ಮೂರು ವರ್ಷಗಳಿಂದ ಉತ್ತಮ ಮಳೆಯಾಗುತ್ತಿದ್ದು, ಶೇಂಗಾ ಬೆಳೆ ಮಾರುಕಟ್ಟೆಗೆ ಬರುತ್ತಿರುವುದರಿಂದ ಎಣ್ಣೆ ಮಿಲ್ ಪುನರಾರಂಭ ಆಗುತ್ತಿವೆ. ಸದ್ಯ 22 ಮಿಲ್‌ಗಳು ಹಾಗೂ 58 ಡಿಕಾಟಿಕೇಟರ್ ಘಟಕಗಳು ಕಾರ್ಯನಿರ್ವಹಿಸುತ್ತಿವೆ' ಎನ್ನುತ್ತಾರೆ ಚಳ್ಳಕೆರೆಯ ಕೈಗಾರಿಕೋದ್ಯಮಿಗಳ ಸಂಘದ ಅಧ್ಯಕ್ಷ ಎನ್. ಸತೀಶ್.

ಚಳ್ಳಕೆರೆಯಲ್ಲಿ ಅಡುಗೆ ಎಣ್ಣೆ ಉದ್ಯಮ ಉತ್ತುಂಗದಲ್ಲಿದ್ದ ಸಮಯದಲ್ಲಿ ಆಂಧ್ರಪ್ರದೇಶದ ಶೇಂಗಾ ಕೂಡ ಕರ್ನಾಟಕಕ್ಕೆ ಬರುತ್ತಿತ್ತು. ಆಂಧ್ರಪ್ರದೇಶದಲ್ಲಿಯೇ ಮಾರುಕಟ್ಟೆ ಸೌಲಭ್ಯ ಸಿಕ್ಕ ಬಳಿಕ ಚಳ್ಳಕೆರೆಯ ಎಣ್ಣೆ ಮಿಲ್‌ಗಳಿಗೆ ಶೇಂಗಾ ಕೊರತೆ ಉಂಟಾಯಿತು. ಸತತ ಬರ, ಉತ್ಪಾದನಾ ವೆಚ್ಚ ಹೆಚ್ಚಳ, ಉತ್ತಮ ಗುಣಮಟ್ಟದ ಶೇಂಗಾ ಬೀಜದ ಅಲಭ್ಯತೆಯಿಂದ ಚಿತ್ರದುರ್ಗದ ಶೇಂಗಾ ಇಳುವರಿ ಕುಸಿಯಿತು.

'ದಶಕದ ಹಿಂದೆ 100 ಗ್ರಾಂ ಶೇಂಗಾಗೆ 70 ಗ್ರಾಂ ಬೀಜ ಸಿಗುತ್ತಿತ್ತು. ಇಳುವರಿ ಕುಸಿತದ ಪರಿಣಾಮವಾಗಿ 55ರಿಂದ 60 ಗ್ರಾಂ ಬೀಜ ಮಾತ್ರ ಲಭ್ಯವಾಗುತ್ತಿದೆ. ಈ ಶೇಂಗಾ ಖರೀದಿಸಿದರೆ ಉದ್ಯಮಕ್ಕೆ ನಷ್ಟವಾಗುತ್ತದೆ' ಎಂಬುದು ಎಣ್ಣೆ ಮಿಲ್ ಮಾಲೀಕರ ಅಭಿಪ್ರಾಯ.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 15-5-1997

• **ಬೊಫೋರ್ಸ್ ಹಗರಣ: 7 ಗಣ್ಯರ ವಿರುದ್ಧ ಕ್ರಮ**

ನವದೆಹಲಿ, ಮೇ 14 (ಪಿಟಿಐ)– ಬೊಫೋರ್ಸ್ ಫಿರಂಗಿ ಹಗರಣದ ಕುರಿತು ತನಿಖೆ ನಡೆಸಲು ರಚಿಸಿದ್ದ ಸಿಬಿಐನ ವಿಶೇಷ ತನಿಖಾ ತಂಡ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಹಗರಣದ ವೇಳೆ ಸರ್ಕಾರಿ ಸೇವೆಯಲ್ಲಿದ್ದ ಏಳು ಮಂದಿಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಸರ್ಕಾರದ ಅನುಮತಿ ಕೇಳಿದೆ. ಸುಮಾರು 1,437 ಕೋಟಿ ರೂಪಾಯಿ ಮೌಲ್ಯದ ಫಿರಂಗಿ ಖರೀದಿಯಲ್ಲಿ 'ಎಬಿ ಬೊಫೋರ್ಸ್' ಕಂಪನಿಯಿಂದ 64 ಕೋಟಿ ರೂಪಾಯಿ ರುಷವತ್ತು ಪಡೆಯಲಾಗಿದೆ ಎಂದು ವರದಿಯಲ್ಲಿ ಆರೋಪಿಸಲಾಗಿದೆ.

50 ವರ್ಷಗಳ ಹಿಂದೆ

ಸೋಮವಾರ, 15-5-1972

• **ಚಿರಶಾಂತಿಗೆ ಅಗತ್ಯವಾದ ಅಂಶಗಳ ಒಪ್ಪಂದಕ್ಕೆ ಇಂದಿರಾ ಕರೆ**

ನ್ಯೂಯಾರ್ಕ್, ಮೇ 14– ಭಾರತ–ಪಾಕಿಸ್ತಾನಗಳ ನಡುವೆ ಮುಂಬರುವ ಶೃಂಗಸಭೆಯಲ್ಲಿ ಆಗಬಹುದಾದ ಯಾವುದೇ ಒಪ್ಪಂದದಲ್ಲಿ ಎರಡೂ ದೇಶಗಳ ನಡುವೆ ಚಿರಶಾಂತಿ ನೆಲೆಸುವ ಅಂಶಗಳನ್ನು ಅಡಕವಾಗಿರಬೇಕು ಎಂದು ಪ್ರಧಾನಿ ಇಂದಿರಾ ಗಾಂಧಿ ಇಂದು ಅಮೆರಿಕದ ಟೆಲಿವಿಷನ್ ವೀಕ್ಷಕರಿಗೆ ತಿಳಿಸಿದರು. ಭಾರತವು ಚಿರಶಾಂತಿಗಾಗಿ ಕ್ರಮಕ್ರಮವಾಗಿ ಯತ್ನಿಸುತ್ತಿತ್ತು. ಆದರೆ, ಇದು ಫಲಪ್ರದವಾಗಿಲ್ಲ. ಪಾಕಿಸ್ತಾನದ ಸರ್ಕಾರ ಮತ್ತು ಜನತೆ ಶಾಂತಿ ಬಯಸುವುದೇ ಆದರೆ ಅದು ಖಚಿತವಾಗಿ ದೊರೆಯುತ್ತದೆ ಎಂದು ಅವರು ಘೋಷಿಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಮೇ 15, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ವೈಶಾಖ ಶುಕ್ಲ ಚತುರ್ದಶಿ ಗಂ. 12-46 ನಕ್ಷತ್ರ: ಸ್ವಾತಿ ಗಂ. 15-35 ಯೋಗ: ವ್ಯತೀಪಾತ ಗಂ. 09-48, ಕರಣ: ವಣಿಜ ಗಂ. 12-46, ಮೇಷ ಮಾಸದ 31 ನೇ ದಿನ.
ರಾಹುಕಾಲ : ಸಾಯಂಕಾಲ 04:30 - 06:00
ಸೂರ್ಯೋದಯ : 06-08 ಸೂರ್ಯಾಸ್ತ : 06-46
ಮುಸ್ಲಿಂ ದಿನಾಂಕ : 13 ಶವ್ವಾಲ್
ಅದೃಷ್ಟ ಸಂಖ್ಯೆ : 8, 13

ಮೇಷ: ಆಯ್ಕೆ ಮಾಡುವ ವಿಚಾರದಲ್ಲಿ ಮನಸ್ಸಿನ ಚಂಚಲ ಸ್ವಭಾವದಿಂದ ಇಂದಿನ ದಿನ ವಿಫಲರಾಗುವ ಸನ್ನಿವೇಶಗಳಿರುವುದು. ಮಗನಿಗೆ ಉದ್ಯೋಗ ದೊರೆತು ಸಂತೋಷ.

ವೃಷಭ: ಸಂಸಾರದಲ್ಲಿ ಕೆಲವೊಂದು ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ. ಋಣ ಪರಿಹಾರವಾಗಿ ಕುಟುಂಬದಲ್ಲಿ ನೆಮ್ಮದಿ ಮೂಡುವುದು. ನೀವು ಯಶಸ್ಸಿನ ಅಲೆಯಲ್ಲಿ ತೇಲುತ್ತಿರುವುದರಿಂದ ಅತಿಯಾಗಿ ಬೀಗದಿರುವುದು ಲೇಸು

ಮಿಥುನ: ಮುಂದಾಲೋಚನೆಯಿಲ್ಲದೆ ಮುಂದುವರೆಯುವುದನ್ನು ಬದಲು ಮಾಡಿಕೊಳ್ಳುವ ಮಾರ್ಗವನ್ನು ಕಂಡುಕೊಳ್ಳಿ. ನೆರೆಯವರೊಂದಿಗೆ ಸೌಹಾರ್ದಯುತವಾಗಿ ವರ್ತಿಸಿ.

ಕರ್ಕಾಟಕ: ಮಕ್ಕಳ ವಿದ್ಯಾಭ್ಯಾಸ ನಿರಾತಂಕವಾಗಿ ಸಾಗುವುದು. ನಿಮ್ಮೆದುರು ಹಲವಾರು ಬಗೆ ಬಗೆಯ ಅವಕಾಶಗಳು ಎದುರಾಗುವುದರಿಂದ ಗೊಂದಲಕ್ಕೆ ಈಡಾಗುವಿರಿ.

ಸಿಂಹ: ಏಜೆನ್ಸಿಯಂತಹ ಉದ್ಯೋಗ ತೆರೆಯಲು ಸೂಕ್ತ ಸ್ಥಳದ ಹುಡುಕಾಟದಲ್ಲಿರುವ ನಿಮಗೆ ಅನುಕೂಲಕರವಾದ ಸ್ಥಳ ದೊರಕುವುದು. ಸದ್ಯದಲ್ಲೇ ಕೆಲಸ ಕಾರ್ಯವನ್ನು ಆರಂಭಿಸುವಿರಿ.

ಕನ್ಯಾ: ವೃತ್ತಿಯಲ್ಲಿ ಅನುಭವ ಹೊಂದಿದವರಿಂದ ಬೈಗುಳ ಕೇಳಬೇಕಾಗುವುದು. ಸದಾ ತಾಳ್ಮೆಯಿಂದ ವ್ಯವಹರಿಸಿ. ಅಕ್ಕ-ಪಕ್ಕದವರನ್ನು ತಾತ್ಸಾರವಾಗಿ ಭಾವಿಸಬೇಡಿ.

ತುಲಾ: ಯಾವುದೇ ಸಂಕೋಚವಿಲ್ಲದೆ ನೂತನ ಕಾರ್ಯಭಾರವನ್ನು ಹೆಗಲಿಗೇರಿಸಿಕೊಳ್ಳಿ. ಏಕೆಂದರೆ ನಿಮ್ಮ ಮೇಲಿರುವ ನಂಬುಗೆ ಮತ್ತು ವಿಶ್ವಾಸದಿಂದಾಗಿ ಈ ಅವಕಾಶಗಳು ನಿಮ್ಮದಾಗಲಿದೆ.

ವೃಶ್ಚಿಕ: ಕೆಲಸ ಕಾರ್ಯದಲ್ಲಿ ಸಮಾನ ಮನಸ್ಕರರು ಸಿಗುವುದರಿಂದ ವ್ಯವಸ್ಥಿತವಾಗಿ ಮಾತುಕತೆನಡೆದು ಕಾರ್ಯಭಾರ ಸುಗಮವಾಗುತ್ತದೆ. ದೇವತಾ ಕಾರ್ಯಗಳತ್ತ ಗಮನವನ್ನು ನೀಡಿ.

ಧನು: ನಿಮ್ಮ ಹರಿತದ ನಿರ್ಧಾರಗಳು ನಿಮ್ಮ ಏಕಾಂಗಿತನಕ್ಕೆ ಕಾರಣವಾಗುವುದು. ನೆಂಟರಿಷ್ಟರ ಸಲಹೆಸೂಚನೆಗಳನ್ನು ಆಲಿಸಿ, ಸನ್ಮಾರ್ಗದಲ್ಲಿ ನಡೆಯಿರಿ ದೈವಬಲ ನಿಮಗೆ ಒದಗಿ ಬಂದು ಅಭಿವೃದ್ಧಿಗೊಳ್ಳುವಿರಿ.

ಮಕರ: ಶನೈಶ್ಚರನ ಆರಾಧನೆಯಿಂದ ಜಟಿಲ ಸಮಸ್ಯೆಯು ಇತ್ಯರ್ಥಗೊಂಡು ಪ್ರತಿವಾದಿಗಳು ನಿರುತ್ತರರಾಗುವರು. ಮಂಗಳ ಕಾರ್ಯಗಳ ಶುಭ ಸೂಚನೆಗಳು ಕಂಡುಬರುತ್ತದೆ.

ಕುಂಭ: ವಿದೇಶ ಅಥವಾ ದೂರ ಸಂಚಾರದ ಯೋಗವಿದೆ. ಅನಗತ್ಯ ಖರ್ಚು-ವೆಚ್ಚಗಳಿಗೆ ಕಡಿವಾಣ ಹಾಕುವುದರಿಂದ ಆರ್ಥಿಕ ಸಂಕಷ್ಟ ಅರ್ಧದಷ್ಟು ಕಳೆಯುವುದು.

ಮೀನ: ವಿದ್ಯಾರ್ಥಿಗಳಿಗೆ ಓದಿನಲ್ಲಿ ಆಸಕ್ತಿ ಹೆಚ್ಚುವುದು. ಶೈಕ್ಷಣಿಕ ರಂಗದವರಿಗೆ ಪರಸ್ಪರ ವರ್ಗಾವಣೆ ಮಾಡಿಕೊಳ್ಳುವ ಅವಕಾಶ ಸಿಗುವುದು. ಹಿರಿಯರ ಭೇಟಿಯಿಂದಾಗಿ ಕುಟುಂಬದ ಬಗೆಗಿನ ವಿಚಾರಗಳು ತಿಳಿಯಲಿದೆ.

ಪದಬಂಧ 4958 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕದಲದೇ ಅಚಲವಾಗಿ ಇರುವಂಥದ್ದು (2)
3.ಕರದಲ್ಲಿ ಹಿಡಿದಿರುವ ನೂಲುವ ರಾಟೆ (3)
5.ಮರದ ಸಮೀಪ ನಡೆದ ಕಾಳಗ (3)
7.ಆನಂದಾನುಭವಕ್ಕೆ ಉಂಟಾದ ಅಡ್ಡಿ (4)
9.ಗೆಲ್ಲಿಸಲು ಬಂದವನು ತೋರಿದ ಅತೀ ಪರಿಚಯ (3)
10.ದೂರವೇನಿಲ್ಲ, ಬಹಳ ಹತ್ತಿರ (3)
11.ಯುದ್ಧ ಮಾಡಲು ಸಜ್ಜಾದ ಭೂಮಿ (4)
13.ಒರಟ ಹಿಡಿರುವುದೆಲ್ಲಾ ನಿಸ್ಸಾರವಾದುದು (3)
15.ಮರದ ಹತ್ತಿರ ಕಾಣುತ್ತಿರುವ ನಲ್ಲ (3)
16.ಜರೂರಾಗಿ ಹಾಕಿಸಿಕೊಂಡ ಸಹಿ (2)

ಮೇಲಿಂದ ಕೆಳಕ್ಕೆ
2.ಭರವಸೆ ನೀಡಿದಾಗ ಹೆಚ್ಚಿರುವ ವೇಗ! (3)
3.ಈತ ಚರ್ಮದ ಕೆಲಸಗಾರ (3)
4.ಮಂಗಳಾರತಿ ಮಾಡುವಾಗ ಉರಿಸುವ ಸುಗಂಧ ದ್ರವ್ಯ (3)
6.ಅಜ್ಜಿಗೆ ಕೊಟ್ಟಿದ್ದು ಕಡೆದ ಮೊಸರು (3)
8.ಇಲ್ಲಿ ಪ್ರತ್ಯಕ್ಷವಾಗಿರುವ ವಿನಾಯಕ (3)
9.ಸರ ತಂದವನಿಗೆ ತೋರಿಸಿದ ಆದರ (3)
10.ಗಾಳಿ ಇಲ್ಲಿ ಬೀಸುತ್ತಿದೆ (3)
12.ಗರ ಬಡಿದವನು ತೋರಿಸಿದ ಗುಹೆ (3)
13.ಪದ್ಯಗಳ ಸಾಲು (3)
14.ಗುರುಗುಟ್ಟುತ್ತಿರುವ ಗಂಡುಕುರಿ (3)



4957 ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1. ಸಾಕ್ಷಿಗಾರ 3. ಪರೋಕ್ಷ 4.ವಿಶಾರದ 6.ರಥ 7.ಅಡಾವುಡಿ 8.ಸಹಜ 9.ಅನುಮತಿ 12.ಕಂದು 13.ಕನ್ನಡಕ 15.ರಂಜಕ 16.ಡಮರುಗ
ಮೇಲಿಂದ ಕೆಳಕ್ಕೆ: 1.ಸಾಕ್ಷರತೆ 2.ರವಿ 3.ಪರಿಷೆ 4.ದಮ್ಮಡಿ 7.ಅಜ 8.ಸತಿ 9.ಅಡಕ 10.ಚದುರಂಗ 11.ಭೌತಿಕ 14.ಕಡ

ಸುಡೊಕು 5344

			9				2	
	4				2			
2		9	3				6	
9		4						2
			4		9	1		
	3					9		6
4					8		7	
		1	7			2		3
8		2		5			1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5343 ಸುಡೊಕು

2	5	4	6	9	1	7	8	3
6	1	8	4	3	7	9	5	2
7	3	9	2	5	8	4	6	1
4	9	1	3	2	5	8	7	6
3	8	7	1	4	6	5	2	9
5	2	6	8	7	9	1	3	4
1	6	5	9	8	2	3	4	7
9	7	3	5	6	4	2	1	8
8	4	2	7	1	3	6	9	5

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪಿಎಸ್‌ಐ ನೇಮಕಾತಿಯಲ್ಲಿ ಅಕ್ರಮ: ಆರೋಪಿಗಳ ಮನೆ ಮೇಲೆ ಸಿಐಡಿ ದಾಳಿ

ಡಿವೈಎಸ್ಪಿ ಮನೆಯಲ್ಲಿ 'ಒಎಂಆರ್' ಟ್ರಂಕ್ ಬೀಗ, ಕೀಗಳು ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಬಂಧಿಸಲಾಗಿರುವ ಡಿವೈಎಸ್ಪಿ ಶಾಂತಕುಮಾರ್ ಮನೆ ಮೇಲೆ ಸಿಐಡಿ ಅಧಿಕಾರಿಗಳು ಶನಿವಾರ ದಾಳಿ ಮಾಡಿದ್ದು, 'ಒಎಂಆರ್' ಪ್ರತಿಗಳನ್ನು ಸಂಗ್ರಹಿಸಿಡುತ್ತಿದ್ದ ಟ್ರಂಕ್ ಬೀಗಗಳು ಹಾಗೂ ಕೀಗಳು ಪತ್ತೆಯಾಗಿವೆ.

ನ್ಯಾಯಾಲಯದಿಂದ ವಾರೆಂಟ್ ಪಡೆದುಕೊಂಡಿದ್ದ ಸಿಐಡಿ ಆರ್ಥಿಕ ಗುಪ್ತದಳ ವಿಭಾಗದ ಡಿವೈಎಸ್ಪಿ ಬಿ.ಕೆ. ಶೇಖರ್ ನೇತೃತ್ವದ ತಂಡ, ಶಾಂತಕುಮಾರ್ ಹಾಗೂ ಇತರೆ ಆರೋಪಿಗಳ ಮನೆಗಳ ಮೇಲೆ ದಾಳಿ ಮಾಡಿತು. ಬೆಳಿಗ್ಗೆಯಿಂದ ಸಂಜೆಯವರೆಗೂ ಶೋಧ ನಡೆಸಿತು.

'ಪೊಲೀಸ್ ನೇಮಕಾತಿ ವಿಭಾಗದ ಹಲವು ದಾಖಲೆಗಳನ್ನು ಹಾಗೂ ಕೆಲ ಅಭ್ಯರ್ಥಿಗಳು ನೀಡಿದ್ದ ಹಣವನ್ನು ಆರೋಪಿಗಳು, ತಮ್ಮ ಮನೆಯಲ್ಲಿಟ್ಟುಕೊಂಡಿದ್ದರು. ಈ ಬಗ್ಗೆ ಖಚಿತ ಮಾಹಿತಿ ಇದ್ದಿದ್ದರಿಂದ, ಪ್ರತ್ಯೇಕ ತಂಡಗಳ ಮೂಲಕ ಏಕಕಾಲದಲ್ಲಿ ದಾಳಿ ಮಾಡಲಾಯಿತು' ಎಂದು ಸಿಐಡಿ ಮೂಲಗಳು ಹೇಳಿವೆ.

'ಆಡುಗೋಡಿ ಪೊಲೀಸ್ ವಸತಿ ಸಮುಚ್ಚಯದಲ್ಲಿರುವ ಶಾಂತಕುಮಾರ್ ಮನೆಯಲ್ಲಿ ಶೋಧ ನಡೆಸಲಾಯಿತು. ಪಿಎಸ್‌ಐ ನೇಮಕಾತಿ ಲಿಖಿತ ಪರೀಕ್ಷೆಯ ಒಎಂಆರ್ ಪ್ರತಿಗಳನ್ನು ಸಂಗ್ರಹಿಸಿಟ್ಟಿದ್ದ ಟ್ರಂಕ್‌ಗಳ ಬೀಗಗಳು ಹಾಗೂ ಕೀಗಳು ಪತ್ತೆಯಾದವು. ನೇಮಕಾತಿ ವಿಭಾಗಕ್ಕೆ ಸಂಬಂಧಪಟ್ಟ ಸಿ.ಡಿ.ಗಳು ಮತ್ತು ಪೆನ್‌ಡ್ರೈವ್ ಕೂಡ ಸಿಕ್ಕಿವೆ' ಎಂದೂ ತಿಳಿಸಿವೆ.

'ನಿಗದಿತ ಕೇಂದ್ರಗಳಲ್ಲಿ ಪರೀಕ್ಷೆ ಬರೆದಿದ್ದ ಅಭ್ಯರ್ಥಿಗಳ ಒಎಂಆರ್ ಪ್ರತಿಗಳನ್ನು ಟ್ರಂಕ್‌ನಲ್ಲಿ ಸಂಗ್ರಹಿಸಿ ಬೆಂಗಳೂರಿನ ಪೊಲೀಸ್ ನೇಮಕಾತಿ ವಿಭಾಗಕ್ಕೆ ಕಳುಹಿಸಲಾಗಿತ್ತು. ಅಂಥ ಟ್ರಂಕ್‌ಗಳನ್ನು ಅಕ್ರಮವಾಗಿ ತೆರೆದು ಒಎಂಆರ್ ಪ್ರತಿಗಳನ್ನು ಹೊರ ತೆಗೆದು ತಿದ್ದಿರುವ ಅನುಮಾನವಿತ್ತು. ಇದೀಗ ಟ್ರಂಕ್‌ಗಳ ಬೀಗಗಳು ಹಾಗೂ ಕೀಗಳು ಸಿಕ್ಕಿದ್ದು, ಪ್ರಕರಣಕ್ಕೆ ಪುರಾವೆಯಾಗಿ ಪರಿಗಣಿಸಲಾಗುವುದು' ಎಂದೂ ಹೇಳಿವೆ.

₹ 16 ಲಕ್ಷ ನಗದು ಪತ್ತೆ: ನೇಮಕಾತಿ ವಿಭಾಗದ ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಶ್ರೀಧರ್ ಅವರ ಬಸವೇಶ್ವರ ನಗರದ ಶಾರದಾ ಕಾಲೊನಿಯಲ್ಲಿರುವ ಮನೆ ಮೇಲೂ ದಾಳಿ ನಡೆದಿದೆ.

'ಅಕ್ರಮದಲ್ಲಿ ಭಾಗಿಯಾದ ಆರೋಪದಡಿ ಶ್ರೀಧರ್‌ನನ್ನು ಬಂಧಿಸಿ ಕಸ್ಟಡಿಗೆ ಪಡೆಯಲಾಗಿದೆ. ಆತನ ಮನೆಯಲ್ಲಿ ₹ 16 ಲಕ್ಷ ನಗದು ಸಿಕ್ಕಿದ್ದು, ಅದನ್ನು ಜಪ್ತಿ ಮಾಡಲಾಗಿದೆ. ಜೊತೆಯಲ್ಲಿ, ಕೆಲ ದಾಖಲಾತಿಗಳೂ ಪತ್ತೆಯಾಗಿವೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ನಗರ ಸಶಸ್ತ್ರ ಮೀಸಲು ಪಡೆಯ (ಸಿಎಆರ್) ಸಬ್ ಇನ್‌ಸ್ಪೆಕ್ಟರ್‌ಗಳಾದ ಲೋಕೇಶಪ್ಪ, ಮಂಜುನಾಥ್ ಮನೆಯಲ್ಲೂ ಪರಿಶೀಲನೆ ನಡೆಸಲಾಯಿತು' ಎಂದೂ ತಿಳಿಸಿವೆ.

'ಮಾಹಿತಿ ನೀಡದ ಡಿವೈಎಸ್ಪಿ'

'ಪಿಎಸ್‌ಐ ಅಕ್ರಮ ಪ್ರಕರಣದಲ್ಲಿ ಶಾಂತಕುಮಾರ್ ಭಾಗಿಯಾಗಿರುವುದಕ್ಕೆ ಪುರಾವೆಗಳು ಇವೆ. ಅವುಗಳನ್ನು ಮುಂದಿಟ್ಟು ವಿಚಾರಣೆ ನಡೆಸಿದರೂ ಶಾಂತಕುಮಾರ್ ಯಾವುದೇ ಮಾಹಿತಿ ಬಾಯ್ಬಿಡುತ್ತಿಲ್ಲ' ಎಂದು ಸಿಐಡಿ ಮೂಲಗಳು ಹೇಳಿವೆ.

'ಕೆಲ ಪ್ರಶ್ನೆಗಳಿಗಷ್ಟೇ ಉತ್ತರಿಸುವ ಆರೋಪಿ, ಬಹುತೇಕ ಪ್ರಶ್ನೆಗಳಿಗೆ ಮೌನವಾಗುತ್ತಿದ್ದಾರೆ. ಪ್ರಕರಣದಲ್ಲಿ ಪ್ರಭಾವಿಗಳು ಭಾಗಿಯಾಗಿರುವ ಮಾಹಿತಿ ಇದ್ದು, ಕೆಲದಿನ ವಿಚಾರಣೆ ಬಳಿಕವೇ ಎಲ್ಲವೂ ಗೊತ್ತಾಗಲಿದೆ' ಎಂದೂ ಮೂಲಗಳು ತಿಳಿಸಿವೆ.

ಅಕ್ರಮ ನಡೆದ ಶಾಲೆ, ಸಿಸಿಟಿವಿ ದಾಖಲೆಗಳಿಗೆ ಹುಡುಕಾಟ

ಮುಖ್ಯಶಿಕ್ಷಕ ಕಾಶಿನಾಥ ಮತ್ತೆ ಸಿಐಡಿ ಕಸ್ಟಡಿಗೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯ ಮುಖ್ಯಶಿಕ್ಷಕ, ಪಿಎಸ್‌ಐ ನೇಮಕಾತಿ ಪರೀಕ್ಷೆ ಅಕ್ರಮದ ಆರೋಪಿ ಕಾಶಿನಾಥಗೆ ಮತ್ತೆ 7 ದಿನ ಸಿಐಡಿ ಕಸ್ಟಡಿಗೆ ನೀಡಲಾಗಿದೆ.

ಶುಕ್ರವಾರ ಆರೋಪಿಯನ್ನು ಸಿಐಡಿ ಅಧಿಕಾರಿಗಳು ವಿವಿಧ ಸ್ಥಳಗಳಿಗೆ ಕರೆದೊಯ್ದು ಮಹಜರು ನಡೆಸಿದರು. ಮೇ 2ರಂದು ಸಿಐಡಿ ಅಧಿಕಾರಿಗಳ ಎದುರು ಶರಣಾಗಿದ್ದ ಕಾಶಿನಾಥಗೆ ಮೇ 11ರಂದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು.

'ಜ್ಞಾನಜ್ಯೋತಿ ಶಾಲೆಯಲ್ಲಿ ತೆರೆದಿದ್ದ ಪರೀಕ್ಷಾ ಕೇಂದ್ರದಲ್ಲಿ ಅಕ್ರಮ ನಡೆಸುವಲ್ಲಿ ಆರೋಪಿ ಮುಖ್ಯ ಪಾತ್ರ ವಹಿಸಿದ್ದ. ಪರೀಕ್ಷಾ ಕೇಂದ್ರದಲ್ಲಿ ಬ್ಲೂಟೂತ್ ಸಾಗಣೆ, ಒಎಂಆರ್ ಶೀಟ್‌ನಲ್ಲಿ ಸರಿ ಉತ್ತರ ತಿದ್ದಿಸುವುದು, ಪ್ರಶ್ನೆ ಪತ್ರಿಕೆ ಬಹಿರಂಗ ಮಾಡಿದ್ದು ಮತ್ತು ಪರೀಕ್ಷಾ ಕೇಂದ್ರದಲ್ಲಿ ಸಿಸಿಟಿವಿ ದಾಖಲೆಗಳನ್ನು ನಾಪತ್ತೆ ಮಾಡುವಲ್ಲೂ ಪಾತ್ರ ವಹಿಸಿದ್ದ' ಎಂದು ಮೂಲಗಳು ತಿಳಿಸಿವೆ.

'ಎಂ.ಎಸ್. ಇರಾನಿ ಪದವಿ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಬ್ಲೂಟೂತ್ ಬಳಸಿ ಬಂಧಿತನಾದ ಪ್ರಭು ಎಂಬ ಅಭ್ಯರ್ಥಿಯ ಅವ್ಯವಹಾರ ಕುದುರಿಸುವಲ್ಲೂ ಆರೋಪಿ ಭಾಗಿಯಾದ ಬಗ್ಗೆ ಶಂಕೆಯಿದೆ' ಎಂದು ಮೂಲಗಳು ತಿಳಿಸಿವೆ.

ಒಂದೇ ಬ್ಯಾರಕ್‌ನಲ್ಲಿ ಆರೋಪಿಗಳ ದಂಡು

ಪಿಎಸ್‌ಐ ನೇಮಕಾತಿ ಹಗರಣದ ಆರೋಪಿಗಳನ್ನು, ಇಲ್ಲಿನ ಕೇಂದ್ರ ಕಾರಾಗೃಹದಲ್ಲಿ ಇತರ ವಿಚಾರಣಾಧೀನ ಕೈದಿಗಳ ಜೊತೆಗೆ ಒಂದೇ ಬ್ಯಾರಕ್‌ನಲ್ಲಿ ಇರಿಸಲಾಗಿದೆ.

'ಪುರುಷರ ವಿಭಾಗದ ಒಂದು ಬ್ಯಾರಕ್‌ನಲ್ಲಿ 31 ವಿಚಾರಣಾಧೀನ ಕೈದಿಗಳಿದ್ದು, ಇದರಲ್ಲಿ ಪಿಎಸ್‌ಐ ಹಗರಣದವರೇ ಹೆಚ್ಚಿದ್ದಾರೆ. ಮಹಿಳಾ ವಿಭಾಗದಲ್ಲಿ ಕೂಡ ದಿವ್ಯಾ ಹಾಗರಗಿ ಸೇರಿ ಶಾಲೆಯ ಶಿಕ್ಷಕಿಯರನ್ನೂ ಒಂದೇ ಕಡೆ ಇರಿಸಲಾಗಿದೆ' ಎಂದು ಜೈಲಿನ ಮೂಲಗಳು ತಿಳಿಸಿವೆ.

ಹಳೆ ಪಾಸ್ ಬಳಕೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾಥಮಿಕ ಮತ್ತು ಪ್ರೌಢಶಾಲೆಗಳ 2022–23ನೇ ಸಾಲಿನ ತರಗತಿಗಳು ಮೇ 16ರಿಂದ ಆರಂಭವಾಗಲಿದ್ದು, ವಿದ್ಯಾರ್ಥಿಗಳು ಕಳೆದ ಸಾಲಿನ ಬಸ್ ಪಾಸ್‌ಗಳನ್ನೇ ಬಳಕೆ ಮಾಡಿಕೊಳ್ಳಲು ಕೆಎಸ್‌ಆರ್‌ಟಿಸಿ ಅವಕಾಶ ಕಲ್ಪಿಸಿದೆ.

2021–22ನೇ ಸಾಲಿನಲ್ಲಿ ವಿತರಣೆ ಮಾಡಿರುವ ಪಾಸ್‌ಗಳ ಮಾನ್ಯತಾ ಅವಧಿ ಜೂನ್ 30ರವರೆಗೆ ಇದ್ದು, ಅವುಗಳನ್ನೇ ಬಳಸಿ ವಿದ್ಯಾರ್ಥಿಗಳ ಪ್ರಯಾಣಿಸಬಹುದು. ಹೊಸ ಪಾಸ್‌ಗಳ ವಿತರಣಾ ದಿನಾಂಕವನ್ನು ಶೀಘ್ರವೇ ತಿಳಿಸಲಾಗುವುದು. ದೂರುಗಳಿಗೆ ಅವಕಾಶ ನೀಡದಂತೆ ಚಾಲನಾ ಸಿಬ್ಬಂದಿ ಕಾರ್ಯ ನಿರ್ವಹಿಸಬೇಕು ಎಂದು ಕೆಎಸ್‌ಆರ್‌ಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಂಚಪರಮೇಷ್ಠಿ ಮಹೋತ್ಸವ

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಎಲಿಮುನ್ನೋಳಿಯಲ್ಲಿ ಶನಿವಾರ ಜರುಗಿದ ಪಂಚಪರಮೇಷ್ಠಿ ವಿಧಾನ ಮಹಾ ಮಹೋತ್ಸವದಲ್ಲಿ ಆನೆ ಮೆರವಣಿಗೆಯಲ್ಲಿ ಭಕ್ತರು ನೃತ್ಯ ಮಾಡಿದರು ಪ್ರಜಾವಾಣಿ ಚಿತ್ರ

ಎಸ್ಸೆಸ್ಸೆಲ್ಸಿ: ತ್ವರಿತಗತಿಯಲ್ಲಿ ಮರುಮೌಲ್ಯಮಾಪನ ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್ಸೆಸ್ಸೆಲ್ಸಿ ಪರೀಕ್ಷೆಯ ಉತ್ತರಪತ್ರಿಕೆಯ ಮರುಮೌಲ್ಯಮಾಪನ ಮತ್ತು ಅಂಕಗಳ ಮರು ಎಣಿಕೆ ಫಲಿತಾಂಶವನ್ನು ಕೇವಲ ಮೂರು ದಿನಗಳಲ್ಲಿ ನೀಡಲು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಉದ್ದೇಶಿಸಿದೆ.

ಫಲಿತಾಂಶ ಪ್ರಕಟವಾದ ದಿನ ವೆಬ್‌ಸೈಟ್‌ನಲ್ಲಿ ಈ ಬಗ್ಗೆ ವಿವರಗಳನ್ನು ಇಲಾಖೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಿದೆ. ಈ ಮೊದಲು ಮರುಮೌಲ್ಯಮಾಪನ ಮತ್ತು ಮರುಎಣಿಕೆಯ ಫಲಿತಾಂಶ ಪಡೆಯಲು ಹಲವು ದಿನ ಬೇಕಾಗುತ್ತಿತ್ತು. ಈ ವಿಳಂಬ ತಪ್ಪಿಸುವ ಪ್ರಯತ್ನಗಳನ್ನು ಮಂಡಳಿ ಕೈಗೊಂಡಿದೆ.

ಮಂಡಳಿಯ ವೆಬ್‌ಸೈಟ್‌ನಲ್ಲಿ ವಿದ್ಯಾರ್ಥಿಗಳು ಕೋರಿಕೆ ಸಲ್ಲಿಸುವ ಮೂಲಕ ಫಲಿತಾಂಶ ಪಡೆದುಕೊಳ್ಳಬಹುದು. ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ನಮೂದಿಸುವ ಮೊಬೈಲ್ ನಂಬರ್‌ಗೆ ನೋಂದಣಿ ಸಂಖ್ಯೆ ಮತ್ತು ಒಟಿಪಿ ಕಳುಹಿಸಲಾಗುತ್ತದೆ. ಜತೆಗೆ ಲಾಗಿನ್ ಐಡಿ ಸೃಷ್ಟಿಸಲಾಗುತ್ತದೆ. ನಂತರ, ವಿದ್ಯಾರ್ಥಿಗಳು ನಿಗದಿಪಡಿಸಿದ ಶುಲ್ಕವನ್ನು ಆನ್‌ಲೈನ್ ಅಥವಾ ಆಫ್‌ಲೈನ್ ಮೂಲಕ ಪಾವತಿಸಬೇಕು. ಬಳಿಕ, ಮಂಡಳಿಯು ವಿವರಗಳನ್ನು ಅಪ್‌ಲೋಡ್ ಮಾಡಿದ ಬಳಿಕ ವಿದ್ಯಾರ್ಥಿಗಳು ನೋಂದಣಿ ಸಂಖ್ಯೆ ಮತ್ತು ಒಟಿಪಿ ಬಳಸಿ ಅಗತ್ಯ ಮಾಹಿತಿ ಪಡೆದುಕೊಳ್ಳಬಹುದಾಗಿದೆ.

ಇದೇ ರೀತಿ ಉತ್ತರಪತ್ರಿಕೆಗಳನ್ನೂ ಪಡೆಯಬಹುದಾಗಿದ್ದು, ಮೂರು ದಿನಗಳಲ್ಲಿ ಉತ್ತರಪತ್ರಿಕೆಗಳು ವೆಬ್‌ಸೈಟ್‌ನಲ್ಲಿ ಲಭ್ಯವಾಗಲಿವೆ. ಈ ಮೊದಲು ಸ್ಕ್ಯಾನ್ ಮಾಡಿದ ಉತ್ತರಪತ್ರಿಕೆಗಳನ್ನು ಅಂಚೆ ಮೂಲಕ ವಿದ್ಯಾರ್ಥಿಗಳು ನೀಡಿರುವ ವಿಳಾಸಕ್ಕೆ ಕಳುಹಿಸಲಾಗುತ್ತಿತ್ತು. ಈ ವ್ಯವಸ್ಥೆ ಬದಲಿಸಿ ವಿದ್ಯಾರ್ಥಿಗಳ ಇ–ಮೇಲ್‌ಗೆ ಕಳುಹಿಸಲಾಗುತ್ತಿತ್ತು. ಆದರೆ, ವಿದ್ಯಾರ್ಥಿಗಳು ಇ–ಮೇಲ್ ವಿಳಾಸ ನೀಡುವಲ್ಲಿ ತಪ್ಪುಗಳನ್ನು ಮಾಡುತ್ತಿದ್ದರಿಂದ ಸ್ಕ್ಯಾನ್ ಪ್ರತಿ ತಲುಪುತ್ತಿರಲಿಲ್ಲ. ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿದರೆ ಡೌನ್‌ಲೋಡ್ ಮಾಡಿಕೊಳ್ಳುವುದು ಸುಲಭ. 2019ರಲ್ಲಿ ಪೂರಕ ಪರೀಕ್ಷೆ ಸಂದರ್ಭದಲ್ಲಿ ಪ್ರಾಯೋಗಿಕವಾಗಿ ಈ ಕ್ರಮಕೈಗೊಳ್ಳಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಈಗಿರುವ ವ್ಯವಸ್ಥೆಯನ್ನು ಸುಧಾರಿಸಿರುವುದರಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ. ಕಡಿಮೆ ಅವಧಿಯಲ್ಲಿ ಉತ್ತರ ಪತ್ರಿಕೆಗಳನ್ನು ಪಡೆಯಬಹುದು' ಎಂದು ಮಂಡಳಿಯ ನಿರ್ದೇಶಕ ಎಚ್.ಎನ್. ಗೋಪಾಲಕೃಷ್ಣ ವಿವರಿಸಿದ್ದಾರೆ.

ಯುವತಿ ಮೇಲೆ ಆ್ಯಸಿಡ್ ಎರಚಿದ್ದ ಪ್ರಕರಣ

ಆರೋಪಿ ಕಾಲಿಗೆ ಗುಂಡೇಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವತಿ ಮೇಲೆ ಆ್ಯಸಿಡ್ ಎರಚಿದ್ದ ಪ್ರಕರಣದ ಆರೋಪಿ ನಾಗೇಶ್ ಬಾಬು (30) ಪೊಲೀಸರ ಮೇಲೆಯೇ ಹಲ್ಲೆ ಮಾಡಿ ತಪ್ಪಿಸಿಕೊಳ್ಳಲು ಯತ್ನಿಸಿದ್ದು, ಆತನ ಬಲಗಾಲಿಗೆ ಕಾಮಾಕ್ಷಿಪಾಳ್ಯ ಇನ್‌ಸ್ಪೆಕ್ಟರ್ ಪ್ರಶಾಂತ್ ಗುಂಡು ಹೊಡೆದಿದ್ದಾರೆ.

'ಏಪ್ರಿಲ್ 28ರಂದು ಕೃತ್ಯ ಎಸಗಿ ಪರಾರಿಯಾಗಿದ್ದ ನಾಗೇಶ್, ತಮಿಳುನಾಡಿನ ತಿರುವಣ್ಣಾಮಲೈನ ಶಿವ ದೇವಸ್ಥಾನದ ಆಶ್ರಮದಲ್ಲಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದ. ಆತನನ್ನು ಜೀಪಿನಲ್ಲಿ ಶುಕ್ರವಾರ ರಾತ್ರಿ ಬೆಂಗಳೂರಿಗೆ ಕರೆತರಲಾಗುತ್ತಿತ್ತು' ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಹೇಳಿದರು.

'ಬಹಿರ್ದೆಸೆಗೆ ಹೋಗಬೇಕೆಂದು ಆರೋಪಿ ಹೇಳಿದ್ದ. ಪೊಲೀಸರು, ಕೆಂಗೇರಿ ಬಳಿಯ ಮೇಲ್ಸೇತುವೆ ಸಮೀಪದಲ್ಲಿ ತಡರಾತ್ರಿ 1.30ರ ಸುಮಾರಿಗೆ ಜೀಪು ನಿಲ್ಲಿಸಿದ್ದರು. ರಸ್ತೆ ಪಕ್ಕದ ನಿರ್ಜನ ಪ್ರದೇಶಕ್ಕೆ ಹೋಗಿದ್ದ ಆರೋಪಿ, ಅಲ್ಲಿಂದ ಓಡಲಾರಂಭಿಸಿದ್ದ. ಹೆಡ್ ಕಾನ್‌ಸ್ಟೆಬಲ್ ಮಹಾದೇವಯ್ಯ ಬೆನ್ನಟ್ಟಿ ಆರೋಪಿಯನ್ನು ಹಿಡಿದಿದ್ದರು. ಅವರ ಮೇಲೆಯೇ ಆರೋಪಿ ಹಲ್ಲೆ ಮಾಡಿ, ಮತ್ತೆ ಓಡಲಾರಂಭಿಸಿದ್ದ. ಶರಣಾಗುವಂತೆ ಎಚ್ಚರಿಕೆ ನೀಡಿದ್ದ ಪ್ರಶಾಂತ್, ಆತನ ಕಾಲಿಗೆ ಗುಂಡು ಹಾರಿಸಿ ಸೆರೆ ಹಿಡಿದಿದ್ದಾರೆ' ಎಂದೂ ತಿಳಿಸಿದರು.

ಗುಂಡೇಟಿಯಿಂದ ಗಾಯಗೊಂಡಿರುವ ಆರೋಪಿ ನಾಗೇಶ್

'ಗುಂಡೇಟಿನಿಂದ ಗಾಯಗೊಂಡಿರುವ ನಾಗೇಶ್‌ನನ್ನು ಬಿಜಿಎಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಹೆಡ್ ಕಾನ್‌ಸ್ಟೆಬಲ್ ಅವರೂ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ' ಎಂದೂ ಹೇಳಿದರು.

ಬಹುಮಾನ: 'ಯುವತಿ ಮೇಲೆ ಆ್ಯಸಿಡ್ ಎರಚಿದ್ದ ಆರೋಪಿ ನಾಗೇಶ್‌ನನ್ನು ಬಂಧಿಸಿರುವ ತನಿಖಾ ತಂಡಕ್ಕೆ ₹ 5 ಲಕ್ಷ ಬಹುಮಾನ ಘೋಷಿಸಲಾಗಿದೆ' ಎಂದೂ ಕಮಲ್ ಪಂತ್ ತಿಳಿಸಿದರು.

'ಗುಂಡು ಹೊಡೆದು ಸಾಯಿಸಬೇಕಿತ್ತು'

'ಮಗಳ ಬಾಳನ್ನೇ ಹಾಳು ಮಾಡಿರುವ ನಾಗೇಶ್‌ಗೆ ನಮ್ಮ ಕಣ್ಣೆದುರೇ ಶಿಕ್ಷೆಯಾಗಬೇಕು. ಪೊಲೀಸರಿಂದಲೇ ತಪ್ಪಿಸಿಕೊಳ್ಳಲು ಯತ್ನಿಸಿರುವ ಆತ, ದೊಡ್ಡ ಕ್ರಿಮಿನಲ್. ಒಂದು ಕಾಲಿನ ಬದಲು ಎರಡೂ ಕಾಲಿಗೂ ಪೊಲೀಸರು ಗುಂಡು ಹೊಡೆಯಬೇಕಿತ್ತು. ಅವನನ್ನು ಜೈಲಿಗೆ ಕಳುಹಿಸಿ ಊಟ ಹಾಕುವುದರಲ್ಲಿ ಪ್ರಯೋಜನ ಇಲ್ಲ. ಆತನನ್ನು ಗುಂಡು ಹೊಡೆದು ಸಾಯಿಸಬೇಕು' ಎಂದು ಯುವತಿಯ ತಂದೆ ಅಳಲು ತೋಡಿಕೊಂಡರು.

ಆರೋಪಿ ಬಂಧನಕ್ಕೆ ಪ್ರತಿಕ್ರಿಯಿಸಿದ ಅವರು, 'ಮಗಳಿಗೆ ಮೂರು ಶಸ್ತ್ರಚಿಕಿತ್ಸೆಗಳು ಆಗಿವೆ. ಆಹಾರವನ್ನು ಕೊಳವೆ ಮೂಲಕ ನೀಡುತ್ತಿದ್ದೇವೆ. ಘಟನೆಯಿಂದ ಆಕೆ ತುಂಬಾ ನೊಂದಿದ್ದಾಳೆ' ಎಂದರು.

ಗುಂಡಿನ ದಾಳಿ: ಮೂವರು ಪೊಲೀಸರ ಹತ್ಯೆ

ಭೋಪಾಲ್(ಪಿಟಿಐ): ಮಧ್ಯಪ್ರದೇಶದ ಗುನಾ ಜಿಲ್ಲೆಯಲ್ಲಿ ಶನಿವಾರ ನಸುಕಿನಲ್ಲಿ ಕಳ್ಳ ಬೇಟೆಗಾರರ ಗುಂಡಿನ ದಾಳಿಗೆ ಸಬ್ ಇನ್‌ಸ್ಪೆಕ್ಟರ್ ಸೇರಿ ಮೂವರು ಪೊಲೀಸರು ಹುತಾತ್ಮರಾಗಿದ್ದಾರೆ.

ಮೃತರನ್ನು ಎಸ್‌ಐ ರಾಜ್‌ಕುಮಾರ್ ಜಾಟವ್, ಕಾನ್‌ಸ್ಟೆಬಲ್‌ಗಳಾದ ನೀಲೇಶ್ ಭಾರ್ಗವ ಮತ್ತು ಶಾಂತಾರಾಮ್ ಮೀನಾ ಎಂದು ಗುರುತಿಸಲಾಗಿದೆ.

ರಾಜ್ಯ ರಾಜಧಾನಿಯಿಂದ ಸುಮಾರು 160 ಕಿ.ಮೀ ದೂರದ ಅರಾನ್ ಪೊಲೀಸ್ ಠಾಣೆ ವ್ಯಾಪ್ತಿಯ ಸಾಗಾ ಬರ್ಖೇಡಾ ಗ್ರಾಮದ ಶಹರೋಕ್ ರಸ್ತೆಯಲ್ಲಿ ಮುಂಜಾನೆ 3 ಗಂಟೆ ಸುಮಾರಿಗೆ, ಖಚಿತ ಮಾಹಿತಿ ಆಧರಿಸಿ ಪೊಲೀಸರು ಬೇಟೆಗಾರರ ಬಂಧನಕ್ಕೆ ಬೆನ್ನಟ್ಟಿ ಹೋಗಿದ್ದರು. ಕಳ್ಳ ಬೇಟೆಗಾರರನ್ನು ಪೊಲೀಸರು ಸುತ್ತುವರಿದಾಗ, ದುಷ್ಕರ್ಮಿಗಳು ತಪ್ಪಿಸಿಕೊಳ್ಳಲು ಪೊಲೀಸರ ಮೇಲೆ ಗುಂಡು ಹಾರಿಸಿದ್ದಾರೆ' ಎಂದು ಸಚಿವ ಮಿಶ್ರಾ ಸುದ್ದಿಗಾರರಿಗೆ ತಿಳಿಸಿದರು.

ಘಟನೆಯಲ್ಲಿ ಭಾಗಿಯಾಗಿರುವ ಶಂಕಿತ ಮತ್ತು ಪೊಲೀಸರ ಗುಂಡೇಟಿನಿಂದ ಗಾಯಗೊಂಡು ಮೃತಪಟ್ಟ ವ್ಯಕ್ತಿಯ ಶವ ಸಮೀಪದ ಬಿದೋರಿಯಾ ಗ್ರಾಮದಲ್ಲಿ ಪತ್ತೆಯಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ರಾಜ್ಯಸಭೆಯ ನಾಲ್ಕು, ವಿಧಾನ ಪರಿಷತ್‌ನ ಏಳು ಸ್ಥಾನಗಳಿಗೆ ಚುನಾವಣೆ

ಬಿಜೆಪಿ ಸಂಭಾವ್ಯರ ಪಟ್ಟಿ ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಿಂದ ವಿಧಾನ ಪರಿಷತ್‌ನ ಏಳು ಸ್ಥಾನಗಳಿಗೆ ಜೂನ್ 3ರಂದು ನಡೆಯುವ ಚುನಾವಣೆಯ ಅಭ್ಯರ್ಥಿಗಳ ಆಯ್ಕೆಗೆ 20 ಮಂದಿಯ ಹೆಸರನ್ನು ಶಿಫಾರಸು ಮಾಡಲು ತೀರ್ಮಾನ ಕೈಗೊಂಡಿರುವ ಬಿಜೆಪಿ ರಾಜ್ಯ ಘಟಕದ ಪ್ರಮುಖರ ಸಮಿತಿ, ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೆಸರನ್ನೂ ಸಂಭಾವ್ಯರ ಪಟ್ಟಿಯಲ್ಲಿ ಸೇರಿಸಿದೆ.

ಏಳು ಸ್ಥಾನಗಳ ಪೈಕಿ ನಾಲ್ಕು ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ಬಿಜೆಪಿ ನಿರ್ಧರಿಸಿದೆ. ಎಲ್ಲ ಸ್ಥಾನಗಳಿಗೂ ತಲಾ ಐವರ ಹೆಸರುಗಳನ್ನು ಶಿಫಾರಸು ಮಾಡಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಸಾಮಾನ್ಯ, ಹಿಂದುಳಿದ ವರ್ಗ ಮತ್ತು ಮಹಿಳೆಯರಿಗೆ ತಲಾ ಒಂದು ಸ್ಥಾನಗಳನ್ನು ನೀಡುವ ಕುರಿತು ಚರ್ಚಿಸಿದ್ದು, ಎಲ್ಲ ವಿಭಾಗಗಳಲ್ಲೂ ಐವರ ಹೆಸರುಗಳನ್ನು ಶಿಫಾರಸು ತೀರ್ಮಾನ ಕೈಗೊಂಡಿದೆ.

ಬಿಜೆಪಿ ರಾಜ್ಯ ಘಟಕದ ಕಚೇರಿ ಜಗನ್ನಾಥ ಭವನದಲ್ಲಿ ಶನಿವಾರ ಮಧ್ಯಾಹ್ನ ಪ್ರಮುಖರ ಸಮಿತಿ ಸಭೆ

> **ಸಂಪುಟ ವಿಸ್ತರಣೆ ಅಥವಾ ಪುನಾರಚನೆ ಕುರಿತು ಚರ್ಚೆ ನಡೆದಿಲ್ಲ. ಆ ಕುರಿತು ನಿರ್ಧಾರ ಕೈಗೊಳ್ಳುವುದು ಮುಖ್ಯಮಂತ್ರಿಯವರ ವಿವೇಚನೆಗೆ ಬಿಟ್ಟ ವಿಷಯ**
>
> **ಅರುಣ್ ಸಿಂಗ್,** ಬಿಜೆಪಿ ರಾಜ್ಯ ಉಸ್ತುವಾರಿ

ನಡೆಯಿತು. ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಶಾಸಕರಾದ ಬಿ.ಎಸ್. ಯಡಿಯೂರಪ್ಪ, ಜಗದೀಶ ಶೆಟ್ಟರ್, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, ಸಚಿವರಾದ ಆರ್. ಅಶೋಕ, ಗೋವಿಂದ ಕಾರಜೋಳ, ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಬಿ. ಶ್ರೀರಾಮುಲು, ಶಾಸಕ ಕೆ.ಎಸ್. ಈಶ್ವರಪ್ಪ, ವಿಧಾನ ಪರಿಷತ್ ಸದಸ್ಯ ಲಕ್ಷ್ಮಣ ಸವದಿ, ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷ ನಿರ್ಮಲ್ ಕುಮಾರ್ ಸುರಾನಾ ಮತ್ತು ಸಂಘಟನಾ ಕಾರ್ಯದರ್ಶಿ ಅರುಣ್ ಕುಮಾರ್ ಸಭೆಯಲ್ಲಿ ಪಾಲ್ಗೊಂಡಿದ್ದರು.

ವಿಜಯೇಂದ್ರ ಅವರೊಂದಿಗೆ ಪರಿಷತ್‌ನ ಹಾಲಿ ಸದಸ್ಯ ಲಕ್ಷ್ಮಣ ಸವದಿ, ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷರಾದ ನಿರ್ಮಲ್ ಕುಮಾರ್ ಸುರಾನಾ, ಎಂ. ರಾಜೇಂದ್ರ, ಪ್ರಧಾನ ಕಾರ್ಯದರ್ಶಿಗಳಾದ ಸಿದ್ದರಾಜು, ಮಹೇಶ್ ಟೆಂಗಿನಕಾಯಿ, ಪರಿಷತ್‌ನ ಮಾಜಿ ಸದಸ್ಯ ಎಂ.ಬಿ. ಭಾನುಪ್ರಕಾಶ್, ಶಿವಮೊಗ್ಗದ ಮುಖಂಡ ಗಿರೀಶ್ ಪಟೇಲ್, ಬಿಜೆಪಿ ಪರಿಶಿಷ್ಟ ಜಾತಿ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ, ಮಹಿಳಾ ಮೋರ್ಚಾ ಮುಖಂಡರಾದ ಗೀತಾ ವಿವೇಕಾನಂದ ಹೆಸರುಗಳು ಪಟ್ಟಿಯಲ್ಲಿವೆ ಎಂಬ ಮಾಹಿತಿ ಲಭ್ಯವಾಗಿದೆ.

‘ಯಡಿಯೂರಪ್ಪ, ಅಶೋಕ ಸೇರಿದಂತೆ ಕೆಲವರು ವಿಜಯೇಂದ್ರ ಅವರಿಗೆ ವಿಧಾನ ಪರಿಷತ್ ಟಿಕೆಟ್ ನೀಡುವ ಕುರಿತು ಪ್ರಸ್ತಾಪಿಸಿದರು. ಸಭೆಯಲ್ಲಿದ್ದ ಎಲ್ಲರೂ ಅದಕ್ಕೆ ಒಪ್ಪಿಗೆ ಸೂಚಿಸಿದರು’ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

‘ಪ್ರಮುಖರ ಸಮಿತಿಯು ಅಂತಿಮಗೊಳಿಸಿರುವ ಸಂಭಾವ್ಯರ ಪಟ್ಟಿಯನ್ನು ಪಕ್ಷದ ಕೇಂದ್ರೀಯ ಚುನಾವಣಾ ಸಮಿತಿಗೆ ಕಳುಹಿಸಲಾಗುವುದು. ಸಮಿತಿಯು ಅಂತಿಮವಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಿದೆ’ ಎಂದು ಅರುಣ್ ಸಿಂಗ್ ತಿಳಿಸಿದರು.

ಕೇಶವಶಿಲ್ಪಕ್ಕೆ ಭೇಟಿ: ಪ್ರಮುಖರ ಸಮಿತಿ ಸಭೆ ಬಳಿಕ ಚಾಮರಾಜಪೇಟೆಯಲ್ಲಿರುವ ಆರ್‌ಎಸ್‌ಎಸ್ ಕಚೇರಿ ಕೇಶವ ಶಿಲ್ಪಕ್ಕೆ ತೆರಳಿದ ಬಸವರಾಜ ಬೊಮ್ಮಾಯಿ, ಅರುಣ್ ಸಿಂಗ್, ನಳಿನ್ ಕುಮಾರ್ ಕಟೀಲ್ ಮತ್ತಿತರರು ಅಲ್ಲಿನ ಪ್ರಮುಖರ ಜತೆ ಕೆಲ ಕಾಲ ಚರ್ಚಿಸಿದರು. ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಕೂಡ ಈ ಸಭೆಯಲ್ಲಿದ್ದರು.

ರಾಜ್ಯಸಭೆ: ಎರಡನೇ ಅಭ್ಯರ್ಥಿ ಯಾರು?

ರಾಜ್ಯಸಭೆಯ ಎರಡು ಸ್ಥಾನಗಳಿಗೆ ಬಿಜೆಪಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದೆ. ಮೊದಲನೇ ಅಭ್ಯರ್ಥಿಯನ್ನಾಗಿ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನೇ ಆಯ್ಕೆ ಮಾಡುವುದು ಖಚಿತ.

ಎರಡನೇ ಅಭ್ಯರ್ಥಿಯ ಆಯ್ಕೆಗೆ ಹಾಲಿ ಸದಸ್ಯ ಕೆ.ಸಿ. ರಾಮಮೂರ್ತಿ, ವಿಧಾನ ಪರಿಷತ್ ಮಾಜಿ ಸದಸ್ಯ ಲೆಹರ್ ಸಿಂಗ್ ಸಿರೋಯ, ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷ ನಿರ್ಮಲ್ ಕುಮಾರ್ ಸುರಾನಾ ಮತ್ತು ಉದ್ಯಮಿ ಪ್ರಕಾಶ್ ಶೆಟ್ಟಿ ಹೆಸರುಗಳನ್ನು ಶಿಫಾರಸು ಮಾಡಲಾಗಿದೆ.

ಶಸ್ತ್ರಚಿಕಿತ್ಸೆ ಎಡವಟ್ಟು; ಬಾಣಂತಿಯರ ನರಳಾಟ

ಪ್ರಜಾವಾಣಿ ವಾರ್ತೆ

ವಿಜಯಪುರ: ಇಲ್ಲಿನ ಜಿಲ್ಲಾ ಆಸ್ಪತ್ರೆಯ ತಾಯಿ ಮತ್ತು ಮಕ್ಕಳ ವಿಭಾಗದಲ್ಲಿ ಸಿಸೇರಿಯನ್ (ಶಸ್ತ್ರಚಿಕಿತ್ಸೆ) ಹೆರಿಗೆ ನಂತರ 18 ಬಾಣಂತಿಯರ ಹೊಲಿಗೆ ಬಿಚ್ಚಿಕೊಂಡಿದ್ದು, ನರಳುವಂತಾಗಿದೆ. ಕೆಲವರಿಗೆ ಬಾವು– ಕೀವಾಗಿದ್ದು, ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ.

‘ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿಯ ನಿರ್ಲಕ್ಷ್ಯ ಹಾಗೂ ತರಬೇತಿ ವೈದ್ಯರಿಂದ ಶಸ್ತ್ರಚಿಕಿತ್ಸೆ ಮಾಡಿಸಿದ ಪರಿಣಾಮ ತೊಂದರೆಯಾಗಿದೆ’ ಎಂದು ಬಾಣಂತಿಯರು ಮತ್ತು ಅವರ ಪೋಷಕರು ಆರೋಪಿಸಿದರು.

ಸೋಂಕಿನಿಂದ ತೊಂದರೆ: ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎಸ್.ಎಲ್.ಲಕ್ಕಣ್ಣವರ, ಆಸ್ಪತ್ರೆಯಲ್ಲಿ ಒಂದೇ ಶಸ್ತ್ರಚಿಕಿತ್ಸಾ ಕೊಠಡಿ ಇದೆ. ನಿತ್ಯ ಬಿಡುವಿಲ್ಲದೆ ಶಸ್ತ್ರಚಿಕಿತ್ಸೆ ನಡೆಯುತ್ತಿದೆ. 10 ದಿನಗಳ ಹಿಂದೆ ನಡೆದ ಶಸ್ತ್ರಚಿಕಿತ್ಸೆ ಸಂದರ್ಭದಲ್ಲಿ ಸೋಂಕು ತಗುಲಿ ಕೆಲವರಿಗೆ ತೊಂದರೆಯಾಗಿದೆ ಎಂದು ತಿಳಿಸಿದರು.

ತೊಂದರೆಗೆ ಒಳಗಾಗಿರುವ ಬಾಣಂತಿಯರನ್ನು ತಜ್ಞ ವೈದ್ಯರು ಪರೀಕ್ಷೆಗೆ ಒಳಪಡಿಸಿದ್ದಾರೆ. ಅವರಲ್ಲಿ ಅನೇಕ ಬಾಣಂತಿಯರು ರಕ್ತ ಹೀನತೆ (ಅನಿಮಿಕ್), ಹಿಮೊಗ್ಲೋಬಿನ್ ಕೊರತೆಯಿಂದ ಬಳಲುತ್ತಿರುವುದು ದೃಢಪಟ್ಟಿದೆ ಎಂದು ಹೇಳಿದರು.

‘ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಲಾಗಿದೆ. 11 ಬಾಣಂತಿಯರಿಗೆ ಮರುಹೊಲಿಗೆ ಹಾಕಲಾಗಿದೆ. ಇಬ್ಬರು ಬಾಣಂತಿಯರು ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಐವರು ಬಾಣಂತಿಯರಿಗೆ ಸೋಮವಾರ ಮರು ಹೊಲಿಗೆ ಹಾಕಲಾಗುವುದು. ಎಲ್ಲರಿಗೂ ಅಗತ್ಯ ಚಿಕಿತ್ಸೆ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಹೀಗಾಗದಂತೆ ಕ್ರಮಕೈಗೊಳ್ಳಲಾಗುವುದು’ ಎಂದು ತಿಳಿಸಿದರು.

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಪ್ರಜಾವಾಣಿ ಕನ್ನಡ ಧ್ವನಿ

ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ನಾಳೆ

ಮತಾಂತರ ನಿಷೇಧಕ್ಕೆ ಕಾಯ್ದೆ ಬೇಕಿತ್ತಾ?

ಭಾಗವಹಿಸುವವರು:
ಬಸವ ನಾಗಿದೇವ ಸ್ವಾಮೀಜಿ, ಚಲವಾದಿ ಗುರುಪೀಠ, ಚಿತ್ರದುರ್ಗ
ಅಕ್ಬರ್ ಅಲಿ ಉಡುಪಿ, ರಾಜ್ಯ ಕಾರ್ಯದರ್ಶಿ, ಜಮಾಅತೆ ಇಸ್ಲಾಮಿ ಹಿಂದ್ ಕರ್ನಾಟಕ
ಶ್ರೀಧರ ಪ್ರಭು, ವಕೀಲ, ಬೆಂಗಳೂರು
ಎ. ಡೆರಿಕ್ ಅನಿಲ್, ವಕೀಲ, ಬೆಂಗಳೂರು

ಸಂವಾದ
ಬೆಳಿಗ್ಗೆ 11 ರಿಂದ 12

ಕಲಬುರಗಿ, ಬೀದರ್‌ನಲ್ಲಿ ಮಳೆ

ಕಲಬುರಗಿ: ಕಲಬುರಗಿ, ಯಾದಗಿರಿ ಮತ್ತು ಬೀದರ್ ಜಿಲ್ಲೆಯ ವಿವಿಧೆಡೆ ಶನಿವಾರ ಸಂಜೆ ಮಳೆಯಾಯಿತು. ಕಲಬುರಗಿ ಜಿಲ್ಲೆಯ ಕಮಲಾಪುರ ತಾಲ್ಲೂಕಿನ ತಡಕಲ್ ಗ್ರಾಮದಲ್ಲಿ ಭಾರಿ ಬಿರುಗಾಳಿಯ ಜೊತೆಗೆ ಆಲಿಕಲ್ಲು ಮಳೆ ಸುರಿಯಿತು.

‘ಪಿಎಫ್‌ಐ, ಎಸ್‌ಡಿಪಿಐ ಉಗ್ರ ಸಂಘಟನೆಗಳು’

ಆರ್‌ಎಸ್‌ಎಸ್ ಕಾರ್ಯಕರ್ತರ ಹತ್ಯೆ; ಕೇರಳದ ಹೈಕೋರ್ಟ್ ಅಭಿಪ್ರಾಯ

ಕೊಚ್ಚಿ (ಪಿಟಿಐ): ‘ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಹಾಗೂ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ತೀವ್ರಗಾಮಿ ಸಂಘಟನೆಗಳು. ಆದರೆ, ನಿಷೇಧಿತ ಸಂಘಟನೆಗಳಲ್ಲ’ ಎಂದು ಕೇರಳ ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಕಳೆದ ವರ್ಷದ ನವೆಂಬರ್‌ನಲ್ಲಿ ಪಾಲಕ್ಕಾಡ್‌ನಲ್ಲಿ ನಡೆದ ಆರ್‌ಎಸ್‌ಎಸ್ ಕಾರ್ಯಕರ್ತ ಎಸ್. ಸಂಜಿತ್ (27) ಹತ್ಯೆ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಲು ಕೋರಿರುವ ಅರ್ಜಿಯ ವಿಚಾರಣೆ ಕೈಗೆತ್ತಿಕೊಂಡ ನ್ಯಾಯಮೂರ್ತಿ ಕೆ.ಹರಿಪಾಲ್, ‘ಈ ಎರಡೂ ಸಂಘಟನೆಗಳು ಗಂಭೀರ ಹಿಂಸಾಚಾರದಲ್ಲಿ ತೊಡಗಿರುವ ತೀವ್ರಗಾಮಿ ಸಂಘಟನೆಗಳು ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ’ ಎಂದು ಅಭಿಪ್ರಾಯಪಟ್ಟರು. ಸಿಬಿಐ ತನಿಖೆಗೆ ಕೋರಿರುವ ಅರ್ಜಿಯನ್ನು ಅವರು ತಿರಸ್ಕರಿಸಿದರು.

ಎಸ್‌ಡಿಪಿಐ, ಪಿಎಫ್‌ಐ ವಿರೋಧ: ಕೇರಳ ಹೈಕೋರ್ಟ್ ಅಭಿಪ್ರಾಯದ ಬಗ್ಗೆ ಪ್ರತಿಕ್ರಿಯಿಸಿರುವ ಎಸ್‌ಡಿಪಿಐ, ‘ನ್ಯಾಯಮೂರ್ತಿಗಳ ಈ ಅಭಿಪ್ರಾಯವನ್ನು ಕಡತದಿಂದ ತೆಗೆದು ಹಾಕಲು ಮನವಿ ಮಾಡುವುದಾಗಿ’ ತಿಳಿಸಿದೆ.

‘ಯಾವುದೇ ತನಿಖಾ ಸಂಸ್ಥೆ ಈವರೆಗೆ ಎಸ್‌ಡಿಪಿಐ ವಿರುದ್ಧ ಇಂತಹ ಅಭಿಪ್ರಾಯ ವ್ಯಕ್ತಪಡಿಸಿಲ್ಲ. ಯಾವ ಆಧಾರದಲ್ಲಿ ನ್ಯಾಯಾಲಯ ಈ ರೀತಿ ಹೇಳಿದೆ ಎಂಬುದು ಗೊತ್ತಿಲ್ಲ. ಇದು ತುಂಬಾ ಗಂಭೀರವಾದುದು’ ಎಂದು ಎಸ್‌ಡಿಪಿಐ ರಾಜ್ಯ ಘಟಕದ ಅಧ್ಯಕ್ಷ ಮೂವಟ್ಟುಪುಳ ಅಶ್ರಫ್ ಮೌಲವಿ ಹೇಳಿದ್ದಾರೆ.

ಎಸ್‌ಡಿಪಿಐ ನಿಲುವು ಬೆಂಬಲಿಸಿರುವ ಪಿಎಫ್‌ಐ, ‘ನ್ಯಾಯಾಲಯದ ಅಭಿಪ್ರಾಯ ಸಮರ್ಥನೀಯವಲ್ಲ’ ಎಂದು ಹೇಳಿದೆ.

‘ಇಂತಹ ಪ್ರತಿಕೂಲದ ಅಭಿಪ್ರಾಯ ನೀಡುವ ಮೊದಲು ನ್ಯಾಯಾಲಯವು ಈ ಪ್ರಕರಣದಲ್ಲಿ ನಮ್ಮ ವಾದ ಆಲಿಸಿಯೇ ಇಲ್ಲ. ಇದು ಸಹಜ ನ್ಯಾಯದ ನಿರಾಕರಣೆ’ ಎಂದು ಪಿಎಫ್‌ಐ ರಾಜ್ಯ ಮುಖಂಡ ಸಿ.ಎ. ರವೂಫ್ ಫೇಸ್‌ಬುಕ್‌ನಲ್ಲಿ ಹೇಳಿಕೆ ನೀಡಿದ್ದಾರೆ.

ಎಸ್‌ಡಿಪಿಐ 2009ರಲ್ಲಿ ಸ್ಥಾಪನೆಯಾದ ರಾಜಕೀಯ ಪಕ್ಷ. ಪಿಎಫ್‌ಐ ಇದರ ಅಧೀನದ ಸಂಘಟನೆ.

ಸಂಘಪರಿವಾರ ಸ್ವಾಗತ: ಹೈಕೋರ್ಟ್ ಅಭಿಪ್ರಾಯ ಸ್ವಾಗತಿಸಿರುವ ಸಂಘ ಪರಿವಾರದ ಸಂಘಟನೆಗಳು, ‘ದೇಶದಲ್ಲಿ ಈ ಸಂಘಟನೆಗಳ ಅಮಾನವೀಯ, ರಾಷ್ಟ್ರ ವಿರೋಧಿ ಚಟುವಟಿಕೆಗಳನ್ನು ಸಾಬೀತುಪಡಿಸಲು ಸಾಕಷ್ಟು ಪುರಾವೆಗಳಿವೆ’ ಎಂದು ಹೇಳಿವೆ.

ಪಿಎಫ್‌ಐ ಮತ್ತು ಎಸ್‌ಡಿಪಿಐ ಎರಡನ್ನೂ ನಿಷೇಧಿಸಬೇಕು ಎಂದು ಒತ್ತಾಯಿಸಿರುವ ಹಿಂದೂ ಐಕ್ಯವೇದಿ ನಾಯಕಿ ಕೆ.ಪಿ.ಶಶಿಕಲಾ, ‘ನಿಷೇಧಿತ ಸಂಘಟನೆಗಳು ದೇಶದಲ್ಲಿ ಮತ್ತೊಂದು ರೂಪದಲ್ಲಿ ಭಯೋತ್ಪಾದಕ ಚಟುವಟಿಕೆ ನಡೆಸದಂತೆ ಸರ್ಕಾರಗಳು ಖಾತ್ರಿಪಡಿಸಬೇಕು’ ಎಂದು ಹೇಳಿದರು.

ವಕೀಲೆಗೆ ಥಳಿತ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ವಕೀಲೆ ಸಂಗೀತಾ ಶಿಕ್ಕೇರಿ ಎಂಬುವರನ್ನು ಸಾರ್ವಜನಿಕವಾಗಿ ಥಳಿಸಿದ ಆರೋಪದ ಮೇಲೆ ಮಹಾಂತೇಶ ಚೊಳಚಗುಡ್ಡ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ವಿನಾಯಕ ನಗರದಲ್ಲಿ ಶುಕ್ರವಾರ ಈ ಘಟನೆ ನಡೆದಿದ್ದು, ವಕೀಲೆಯ ಪತಿ ಸಹಾಯಕ್ಕೆ ಮನವಿ ಮಾಡಿದರೂ ಜನರು ನೆರವಿಗೆ ಬಂದಿಲ್ಲ. ಹಲ್ಲೆ ಮಾಡಿ, ಜಾಡಿಸಿ ಒದ್ದ ವಿಡಿಯೊ ವೈರಲ್ ಆಗಿದೆ.

ತೀವ್ರವಾಗಿ ಗಾಯಗೊಂಡಿರುವ ಸಂಗೀತಾ ಅವರನ್ನು ಬಾಗಲಕೋಟೆ ಜಿಲ್ಲಾ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಲಾಗಿದೆ. ಆರೋಪಿ ಮಹಾಂತೇಶ ನವನಗರದ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಫೋಟೊಗ್ರಾಫರ್ ಆಗಿದ್ದಾರೆ.

ಆಸ್ತಿ ವಿವಾದ ಕಾರಣ?: ಸಂಗೀತ ಶಿಕ್ಕೇರಿ ಹಾಗೂ ಮಹಾಂತೇಶ ಚೊಳಚಗುಡ್ಡ ಅಕ್ಕಪಕ್ಕದ ಮನೆಯ ನಿವಾಸಿಗಳು. ಸಂಗೀತಾ ಅವರ ಮನೆಯನ್ನು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ನಾಯ್ಕರ ಖರೀದಿಸಿದ್ದಾರೆ. ಕುಟುಂಬದವರ ಗಮನಕ್ಕೆ ತಾರದೇ ನಮ್ಮ ದೊಡ್ಡಪ್ಪ ಮನೆಯನ್ನು ಮಾರಾಟ ಮಾಡಿದ್ದಾರೆ. ವಿವಾದ ನ್ಯಾಯಾಲಯದಲ್ಲಿದೆ. ಆದರೂ ರಾಜು ನಾಯ್ಕರ್ ತಮ್ಮ ಪ್ರಭಾವ ಬಳಸಿ ಮನೆ ಖಾಲಿ ಮಾಡಲು ಕಿರುಕುಳ ನೀಡುತ್ತಿದ್ದಾರೆ ಎಂದು ಸಂಗೀತಾ ಶಿಕ್ಕೇರಿ ಎರಡು ದಿನಗಳ ಹಿಂದೆ ಪತ್ರಿಕಾಗೋಷ್ಠಿ ನಡೆಸಿ ಆರೋಪಿಸಿದ್ದರು. ಈಗ ನಡೆದಿರುವ ಹಲ್ಲೆಯ ಹಿಂದೆಯೂ ಅವರದ್ದೇ ಕೈವಾಡ ಇದೆ ಎಂದು ಅಳಲು ತೋಡಿಕೊಂಡಿದ್ದಾರೆ.

ಈ ಆರೋಪವನ್ನು ನಿರಾಕರಿಸಿರುವ ರಾಜು ನಾಯ್ಕರ್, ‘ಇದೆಲ್ಲ ನನ್ನ ವಿರುದ್ಧದ ರಾಜಕೀಯ ಷಡ್ಯಂತ್ರ. ಕಾನೂನು ಬದ್ಧವಾಗಿಯೇ ಮನೆ ಖರೀದಿಸಿದ್ದೇನೆ. ಅಧಿಕಾರ ದುರ್ಬಳಕೆ ಮಾಡಿಕೊಂಡಿಲ್ಲ. ಹಲ್ಲೆ ನಡೆಸಲು ಕುಮ್ಮಕ್ಕೂ ನೀಡಿಲ್ಲ’ ಎಂದು ಪ್ರತಿಕ್ರಿಯಿಸಿದ್ದಾರೆ.

‘ಮತದಾರರ ಗುರುತಿನ ಚೀಟಿಗೆ ಆಧಾರ್ ಜೋಡಣೆ ಶೀಘ್ರ’

ನವದೆಹಲಿ (ಪಿಟಿಐ): ಚುನಾವಣಾ ಗುರುತಿನ ಚೀಟಿ ಜೊತೆಗೆ ಆಧಾರ್ ಸಂಖ್ಯೆಯನ್ನು ಜೋಡಣೆ ಮಾಡುವ ಕುರಿತು ಸರ್ಕಾರ ಶೀಘ್ರದಲ್ಲಿಯೇ ನಿಯಮಗಳನ್ನು ಪ್ರಕಟಿಸಲಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ಸುಶೀಲ್ ಚಂದ್ರ ಹೇಳಿದ್ದಾರೆ.

‘ಆದರೆ, ಆಧಾರ್ ಸಂಖ್ಯೆ ಜೋಡಣೆ ಮಾಡುವುದನ್ನು ಮತದಾರರ ವಿವೇಚನೆಗೆ ಬಿಡಲಾಗುವುದು. ಅಕಸ್ಮಾತ್ ಜೋಡಣೆ ಮಾಡಲು ನಿರಾಕರಿಸಿದ್ದಲ್ಲಿ ಅದಕ್ಕೆ ಸೂಕ್ತ ಕಾರಣ ತಿಳಿಸುವುದು ಅಗತ್ಯವಾಗಿದೆ’ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

‘ಸ್ಪುಟ್ನಿಕ್ ಲೈಟ್ ಲಸಿಕೆ ದಾಸ್ತಾನು ಖರೀದಿಸಿ’

ನವದೆಹಲಿ(ಪಿಟಿಐ): ‘ಸ್ಪುಟ್ನಿಕ್ ಲೈಟ್’ ಕೋವಿಡ್ ಲಸಿಕೆಯು ಭಾರಿ ಪ್ರಮಾಣದಲ್ಲಿ ದಾಸ್ತಾನು ಇದೆ. ಲಸಿಕೆ ಮೈತ್ರಿಯನ್ವಯ ವಿದೇಶಗಳಿಗೆ ಪೂರೈಸಲು ಇದನ್ನು ಖರೀದಿಸಬೇಕು ಎಂದು ಸ್ಟೆಲಿಸ್ ಬಯೊಫಾರ್ಮಾ ಕಂಪನಿ ಕೇಂದ್ರ ಸರ್ಕಾರವನ್ನು ಕೋರಿದೆ.

ಬೆಂಗಳೂರು ಮೂಲದ ಸ್ಟೆಲಿಸ್ ಬಯೊಫಾರ್ಮಾದ ಸ್ಥಾಪಕ ಮತ್ತು ನಿರ್ದೇಶಕ ಅರುಣ್ ಕುಮಾರ್ ಅವರು ಈ ಸಂಬಂಧ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ. ‘ಉಕ್ರೇನ್–ರಷ್ಯಾ ಯುದ್ಧದ ಬೆಳವಣಿಗೆಯಿಂದಾಗಿ ಒಂದೇ ಡೋಸ್‌ನ 2.5 ಕೋಟಿ ಲಸಿಕೆ ಮಾರಾಟ ಮಾಡಲು ಆಗಿಲ್ಲ’ ಎಂದು ತಿಳಿಸಿದ್ದಾರೆ.

ಸ್ಪುಟ್ನಿಕ್ ಲೈಟ್ ಲಸಿಕೆಯ ತುರ್ತು ಬಳಕೆಗೆ ಡಿಸಿಜಿಐ ಈ ವರ್ಷದ ಫೆಬ್ರುವರಿಯಲ್ಲಿ ಅನುಮತಿ ನೀಡಿತ್ತು. ಸದ್ಯ ಈ ಲಸಿಕೆಯನ್ನು ಜನತೆಗೆ ನೀಡುತ್ತಿಲ್ಲ.

‘ನ್ಯಾಯ ನಿರಾಕರಣೆ ಅರಾಜಕತೆಗೆ ನಾಂದಿ’

ಶ್ರೀನಗರ (ಪಿಟಿಐ): ‘ನ್ಯಾಯದ ನಿರಾಕರಣೆಯು ಅಂತಿಮವಾಗಿ ಅರಾಜಕತೆಗೆ ನಾಂದಿಯಾಗುತ್ತದೆ’ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಅವರು ಶನಿವಾರ ಇಲ್ಲಿ ಎಚ್ಚರಿಸಿದರು.

ಕಾರ್ಯಕ್ರಮವೊಂದರಲ್ಲಿ ಮಾತನಾಡಿ, ‘ಆರೋಗ್ಯ ಯುತ ಪ್ರಜಾಪ್ರಭುತ್ವ ಉಳಿಸಲು ಜನರಿಗೆ ಅವರ ಹಕ್ಕುಗಳನ್ನು ಗುರುತಿಸಿ, ರಕ್ಷಿಸಲಾಗುತ್ತಿದೆ ಎಂದು ವಿಶ್ವಾಸ ಮೂಡಿಸುವುದು ಅಗತ್ಯ’ ಎಂದು ಪ್ರತಿಪಾದಿಸಿದರು.

ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಖ್‌ನ ಹೈಕೋರ್ಟ್ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದ ಸಿಜೆಐ, ಸಾಮಾನ್ಯವಾಗಿ ಮಾನಸಿಕ ಒತ್ತಡದಲ್ಲಿರುವ ಕಕ್ಷಿದಾರರಿಗೆ ಪೂರಕ ವಾತಾವರಣ ನಿರ್ಮಿಸಲು ನ್ಯಾಯಾಧೀಶರು, ವಕೀಲರಿಗೆ ಸಲಹೆ ಮಾಡಿದರು.

‘ಬಹಳ ವರ್ಷಗಳ ಬಳಿಕ ಇಲ್ಲಿಗೆ ಬಂದಿದ್ದೇನೆ; ಹೊಸ ಸೌಂದರ್ಯ, ಹೊಸ ಬಣ್ಣ ಗೋಚರಿಸುತ್ತಿದೆ’ ಎಂಬ ಕವಿ ಜವಾದ್ ಜೈದಿ ಅವರ ಕವನದ ಜನಪ್ರಿಯ ಸಾಲು ಉಲ್ಲೇಖಿಸುವ ಮೂಲಕ ಸಿಜೆಐ ತಮ್ಮ ಭಾಷಣವನ್ನು ಆರಂಭಿಸಿದರು.


ಎನ್.ವಿ.ರಮಣ

‘ಭಾರತದಲ್ಲಿ ನ್ಯಾಯದಾನ ವ್ಯವಸ್ಥೆಯು ಸಂಕೀರ್ಣ ಮತ್ತು ದುಬಾರಿಯಾಗಿದೆ. ನ್ಯಾಯಾಲಯಗಳನ್ನು ಒಳಗೊಳ್ಳುವಿಕೆ ಮತ್ತು ಜನರಿಗೆ ಹತ್ತಿರವಾಗಿಸುವ ನಿಟ್ಟಿನಲ್ಲಿ ದೇಶ ಸಾಕಷ್ಟು ಹಿಂದೆ ಇದೆ’ ಎಂದು ಅಭಿಪ್ರಾಯಪಟ್ಟರು.

ನ್ಯಾಯದಾನ ವಿಳಂಬ ಅರಾಜಕತೆಗೆ ನಾಂದಿಯಾಗಲಿದೆ. ಒಂದು ಹಂತದಲ್ಲಿ ನ್ಯಾಯಾಂಗ ವ್ಯವಸ್ಥೆಯೇ ಅಪ್ರಸ್ತುತವಾಗಿ, ಜನರು ನ್ಯಾಯಕ್ಕಾಗಿ ಪರ್ಯಾಯ ವ್ಯವಸ್ಥೆಯತ್ತ ಹೊರಳಬಹುದು. ಜನರ ಆತ್ಮಗೌರವ ಮತ್ತು ಹಕ್ಕುಗಳ ರಕ್ಷಣೆಯಾದಾಗ ಮಾತ್ರವೇ ಶಾಂತಿ ಸ್ಥಾಪನೆಯಾಗುವುದು ಸಾಧ್ಯವಾಗಲಿದೆ ಎಂದು ಪ್ರತಿಪಾದಿಸಿದರು.

ಸಾಂವಿಧಾನಿಕ ಹಕ್ಕುಗಳನ್ನು ರಕ್ಷಿಸುವ ಹಾಗೂ ಸಂವಿಧಾನದ ಆಶೋತ್ತರಗಳನ್ನು ಎತ್ತಿಹಿಡಿಯುವ ಹೊಣೆಗಾರಿಕೆಯು ನ್ಯಾಯಾಂಗದ ಮೇಲಿದೆ. ಜನರ ಹಕ್ಕುಗಳನ್ನು ರಕ್ಷಿಸುವುದೇ ಸಾಂಪ್ರದಾಯಿಕ ನ್ಯಾಯಾಂಗ ವ್ಯವಸ್ಥೆಯ ಮುಂದಿರುವ ದೊಡ್ಡ ಸವಾಲು. ಜೊತೆಗೆ ತ್ವರಿತವಾಗಿ ನ್ಯಾಯದಾನ ಮತ್ತು ಎಲ್ಲರಿಗೂ ಕೈಗೆಟುಕುವಂತೆ ನ್ಯಾಯಾಂಗ ವ್ಯವಸ್ಥೆ ರೂಪಿಸುವುದು ಅಗತ್ಯ ಎಂದು ಹೇಳಿದರು.

ತಂತ್ರಜ್ಞಾನ ಎಂಬುದು ನ್ಯಾಯಾಂಗಕ್ಕೆ ಬಲಯುತವಾದ ಸಾಧನ. ಈಗ ವರ್ಚುಯಲ್ ರೂಪದಲ್ಲಿ ನಡೆಯುವ ವಿಚಾರಣೆಗಳು ಸಮಯ, ವೆಚ್ಚ ಮತ್ತು ಅಂತರವನ್ನು ಕುಗ್ಗಿಸುತ್ತಿವೆ. ಆದರೆ, ಡಿಜಿಟಲ್ ಸೌಲಭ್ಯ ದೇಶದಲ್ಲಿ ಇನ್ನು ಸರ್ವವ್ಯಾಪಿಯಾಗಿಲ್ಲ. ಡಿಜಿಟಲ್ ಸೌಲಭ್ಯಗಳು ಎಲ್ಲರಿಗೂ ತಲುಪುವಂತೆ ನೋಡಿಕೊಳ್ಳಬೇಕಾಗಿರುವುದು ಅಗತ್ಯ ಎಂದೂ ಹೇಳಿದರು.

ಕಾಂಗ್ರೆಸ್ ಚಿಂತನ ಶಿಬಿರ: ರಾಜ್ಯಗಳಿಗೆ ಜಿಎಸ್‌ಟಿ ಪರಿಹಾರ ಮೂರು ವರ್ಷ ವಿಸ್ತರಣೆಗೆ ಒತ್ತಾಯ

ಆರ್ಥಿಕ ನೀತಿ ಮರು ರೂಪಿಸುವುದು ಅಗತ್ಯ

ಪ್ರಜಾವಾಣಿ ವಾರ್ತೆ

ಉದಯಪುರ: ಭಾರತದ ಅರ್ಥ ವ್ಯವಸ್ಥೆಯು ತೀವ್ರ ಕಳವಳಕಾರಿ ಸ್ಥಿತಿಯಲ್ಲಿದೆ. ಆರ್ಥಿಕ ನೀತಿಗಳನ್ನು ಮರುರೂಪಿಸಬೇಕಿದೆ ಎಂದು ಕಾಂಗ್ರೆಸ್ ಪಕ್ಷವು ಶನಿವಾರ ಹೇಳಿದೆ. 'ಭಾರತ ಪ್ರಕಾಶಿಸುತ್ತಿದೆ' ಎಂಬ ಅಭಿಯಾನವನ್ನು ಸೋಲಿಸಿದ ರೀತಿಯಲ್ಲಿಯೇ ನರೇಂದ್ರ ಮೋದಿ ಅವರು ಸೃಷ್ಟಿಸಿರುವ ಭ್ರಮಾಲೋಕವನ್ನು ಒಡೆದು ಹಾಕಲು ಸಾಧ್ಯ ಎಂಬ ವಿಶ್ವಾಸವನ್ನು ಕಾಂಗ್ರೆಸ್ ವ್ಯಕ್ತಪಡಿಸಿದೆ.

ಆರ್ಥಿಕ ನೀತಿಗೆ ಸಂಬಂಧಿಸಿ ಮೋದಿ ನೇತೃತ್ವದ ಸರ್ಕಾರದ ವೈಫಲ್ಯವನ್ನು ಪರಿಣಾಮಕಾರಿಯಾಗಿ ಜನರಿಗೆ ತಲುಪಿಸುವಲ್ಲಿ ಪಕ್ಷ ಹಿಂದೆ ಬಿದ್ದಿದೆ. ಆದರೆ, ಇನ್ನು ಮುಂದೆ ಪಕ್ಷದ ಸಂವಹನ ಕಾರ್ಯತಂತ್ರವನ್ನು ಇನ್ನಷ್ಟು ಹರಿತಗೊಳಿಸಲಾಗುವುದು ಎಂದು ಕಾಂಗ್ರೆಸ್ ಮುಖಂಡ ಪಿ. ಚಿದಂಬರಂ ಹೇಳಿದ್ದಾರೆ. ಕಾಂಗ್ರೆಸ್ ಚಿಂತನ ಶಿಬಿರದ ಎರಡನೇ ದಿನವಾದ ಶನಿವಾರ ಅವರು ಮಾತನಾಡಿದರು.

ಬಿಜೆಪಿ ಆಳ್ವಿಕೆ ಇರುವ ರಾಜ್ಯ ಸರ್ಕಾರಗಳೂ ಸೇರಿದಂತೆ ಕೇಂದ್ರ ಮತ್ತು ರಾಜ್ಯಗಳ ನಡುವಣ ವಿಶ್ವಾಸವೇ ಮುರಿದು ಬಿದ್ದಿದೆ ಎಂದು ಚಿದಂಬರಂ ಆರೋಪಿಸಿದ್ದಾರೆ. 2022ರ ಜೂನ್ ಬಳಿಕ, ಜಿಎಸ್‌ಟಿ ಪರಿಹಾರ ನೀಡಿಕೆಯನ್ನು ಕನಿಷ್ಠ ಮೂರು ವರ್ಷ ವಿಸ್ತರಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಜಿಎಸ್‌ಟಿ ಮಂಡಳಿಯನ್ನು ಅಪ್ರಸ್ತುತಗೊಳಿಸುವ ಮತ್ತು ಮುಂದಿನ ಮೂರು ವರ್ಷಕ್ಕೆ ಜಿಎಸ್‌ಟಿ ಪರಿಹಾರವನ್ನು ವಿಸ್ತರಿಸುವಂತೆ ಅದು ಶಿಫಾರಸು ಮಾಡುವುದನ್ನು ತಡೆಯುವ ಯಾವುದೇ ಪ್ರಯತ್ನವನ್ನು ಬಲವಾಗಿ ವಿರೋಧಿಸುವುದಾಗಿ ಕಾಂಗ್ರೆಸ್ ಹೇಳಿದೆ.

ಕೇಂದ್ರ ಮತ್ತು ರಾಜ್ಯಗಳ ಆರ್ಥಿಕ ಸಂಬಂಧವನ್ನು ಸಮಗ್ರವಾಗಿ ವಿಮರ್ಶಿಸಬೇಕಾದ ಅಗತ್ಯ ಇದೆ. 21ನೇ ಶತಮಾನದಲ್ಲಿ ಕೈಗಾರಿಕೆ, ಉದ್ಯಮ ಮತ್ತು ವ್ಯಾಪಾರವು ಯಾವ ದಿಕ್ಕಿನಲ್ಲಿ ಸಾಗಬೇಕು ಎಂಬುದಕ್ಕೆ ತಕ್ಕಂತೆ ಭಾರತದ ಅರ್ಥ ವ್ಯವಸ್ಥೆ ಮತ್ತು ಕೆಲಸಗಾರ ವರ್ಗವನ್ನು ಸಿದ್ಧಪಡಿಸಬೇಕಿದೆ. ಸ್ವಯಂಚಾಲಿತ ವ್ಯವಸ್ಥೆ, ರೋಬೊಗಳ ಬಳಕೆ, ಕೃತಕ ಬುದ್ಧಿಮತ್ತೆ ಮುಂತಾದವುಗಳ ಬಳಕೆಯನ್ನು ಹೆಚ್ಚಿಸಬೇಕಿದೆ ಎಂದು ಕಾಂಗ್ರೆಸ್ ಅಭಿಪ್ರಾಯಪಟ್ಟಿದೆ.

ಮೋದಿ ಅವರ ಆಳ್ವಿಕೆಯಲ್ಲಿ ಹಣದುಬ್ಬರವು ಸ್ವೀಕಾರಾರ್ಹವಲ್ಲದ ಮಟ್ಟಕ್ಕೆ ಏರಿಕೆಯಾಗಿದೆ. ಉದ್ಯೋಗದ ಸ್ಥಿತಿಯು ಶೋಚನೀಯವಾಗಿದೆ. ಸಾಮಾಜಿಕ ಸೇವಾ ಕ್ಷೇತ್ರಕ್ಕೆ ಮಾಡುತ್ತಿರುವ ಖರ್ಚು ಕಡಿಮೆಯಾಗಿದೆ. ಇದರ ಜತೆಗೆ, ಬಾಹ್ಯ ವಿಚಾರಗಳು ಅರ್ಥ ವ್ಯವಸ್ಥೆಯ ಮೇಲೆ ಒತ್ತಡ ಹೇರುತ್ತಿವೆ. ಆದರೆ, ಈ ಎಲ್ಲ ಬೆಳವಣಿಗೆಗಳನ್ನು ಹೇಗೆ ನಿಭಾಯಿಸಬೇಕು ಎಂಬ ಬಗ್ಗೆ ಸರ್ಕಾರಕ್ಕೆ ಯಾವುದೇ ಅರಿವು ಇಲ್ಲ ಎಂದು ಚಿದಂಬರಂ ಹೇಳಿದ್ದಾರೆ.

ಜಾಗತಿಕ ಅಂಶಗಳು ಮತ್ತು ಉದಾರೀಕರಣದ ನಂತರದ 30 ವರ್ಷಗಳ ಬೆಳವಣಿಗೆಗಳನ್ನು ಗಮನದಲ್ಲಿ ಇರಿಸಿಕೊಂಡು ಆರ್ಥಿಕ ನೀತಿಯನ್ನು ಮರುರೂಪಿಸಬೇಕಿದೆ. ಹೆಚ್ಚುತ್ತಿರುವ ಅಸಮಾನತೆ, ತಳಭಾಗದಲ್ಲಿರುವ ಶೇ 10ರಷ್ಟು ಜನರ ತೀವ್ರ ಬಡತನ, ಜಾಗತಿಕ ಹಸಿವು ಸೂಚ್ಯಂಕದಲ್ಲಿ ಭಾರತದ ಸ್ಥಾನ (116 ದೇಶಗಳ ಪಟ್ಟಿಯಲ್ಲಿ 101ನೇ ರ್‍ಯಾಂಕ್), ಮಹಿಳೆಯರು ಮತ್ತು ಮಕ್ಕಳಲ್ಲಿ ವ್ಯಾಪಕವಾಗಿರುವ ಅಪೌಷ್ಟಿಕತೆ ಮುಂತಾದ ವಿಚಾರಗಳತ್ತ ತಕ್ಷಣ ಗಮನ ಹರಿಸಬೇಕಿದೆ ಎಂದು ಅವರು ಹೇಳಿದ್ದಾರೆ.

ಗೋಧಿ ರಫ್ತು ನಿಷೇಧಕ್ಕೆ ವಿರೋಧ: ಗೋಧಿ ರಫ್ತು ನಿಷೇಧಿಸಿದ ಕೇಂದ್ರ ಸರ್ಕಾರದ ಕ್ರಮವು ರೈತ ವಿರೋಧಿ ಎಂದು ಕಾಂಗ್ರೆಸ್ ಟೀಕಿಸಿದೆ.

ಕಾಂಗ್ರೆಸ್ ಚಿಂತನ ಶಿಬಿರದಲ್ಲಿ ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಗೆಲುವಿನ ಸಂಕೇತ ತೋರಿದರು. ರಾಜಸ್ಥಾನ ಕಾಂಗ್ರೆಸ್ ಅಧ್ಯಕ್ಷ ಗೋವಿಂದ್ ಸಿಂಗ್ ಡೋಟಾಸ್ರ ಅವರೂ ಇದ್ದರು ಪಿಟಿಐ ಚಿತ್ರ

ಚಳವಳಿಗೆ ರೂಪುರೇಷೆ

ಮುಂದಿನ ಎರಡು ವರ್ಷ ನಡೆಸಲಾಗುವ ರಾಷ್ಟ್ರವ್ಯಾಪಿ ಅಭಿಯಾನದ ರೂಪುರೇಷೆ ಬಗ್ಗೆ ಕಾಂಗ್ರೆಸ್ ಚಿಂತನ ಶಿಬಿರದಲ್ಲಿ ಚರ್ಚೆ ನಡೆದಿದೆ.

ಕಾಂಗ್ರೆಸ್‌ನ ಸುಸ್ಥಿರ ಚಳವಳಿ ಸಮಿತಿಯ ಮುಖ್ಯಸ್ಥ ದಿಗ್ವಿಜಯ್ ಸಿಂಗ್ ಅವರು ಅಭಿಯಾನದ ಬಗ್ಗೆ ವಿಷಯ ಮಂಡನೆ ಮಾಡಿದರು. ರಾಜ್ಯಗಳ ಸಮಸ್ಯೆಗಳನ್ನು ಕೇಂದ್ರದಲ್ಲಿ ಇರಿಸಿಕೊಂಡು ಅಭಿಯಾನ ನಡೆಸುವ ಬಗ್ಗೆ ಚರ್ಚೆ ನಡೆದಿದೆ.

ಸುಸ್ಥಿರ ಚಳವಳಿ ಸಮಿತಿಯನ್ನು ಕಳೆದ ಸೆಪ್ಟೆಂಬರ್‌ನಲ್ಲಿ ರಚಿಸಲಾಗಿತ್ತು. ಈ ಸಮಿತಿಯ ಸಲಹೆಯಂತೆ ಬೆಲೆ ಏರಿಕೆ ವಿರುದ್ಧ ಕಳೆದ ನವೆಂಬರ್‌ನಲ್ಲಿ ಅಭಿಯಾನ ನಡೆಸಲಾಗಿತ್ತು. ನಿರುದ್ಯೋಗದ ವಿರುದ್ಧ ಜನವರಿಯಲ್ಲಿ ಅಭಿಯಾನ ನಡೆಸಲು ಯೋಜಿಸಲಾಗಿತ್ತು. ಆದರೆ, ಐದು ರಾಜ್ಯಗಳ ವಿಧಾನಸಭೆ ಚುನಾವಣೆ ಕಾರಣಕ್ಕೆ ಅದನ್ನು ಮುಂದೂಡಲಾಯಿತು.

ಒಳಮೀಸಲಿಗೆ ಒಲವು

ಬಹುಕಾಲದಿಂದ ನನೆಗುದಿಗೆ ಬಿದ್ದಿರುವ ಮಹಿಳಾ ಮೀಸಲು ಮಸೂದೆಯಲ್ಲಿ ಒಳಮೀಸಲಾತಿ ನೀಡಬೇಕು ಎಂಬ ನಿಲುವನ್ನು ಕಾಂಗ್ರೆಸ್ ತಳೆಯುವ ಸಾಧ್ಯತೆ ಇದೆ. ಸಂಸತ್ತು ಮತ್ತು ವಿಧಾನಸಭೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಮೀಸಲಾತಿ ಇರುವ ರೀತಿಯಲ್ಲಿಯೇ ಇತರ ಹಿಂದುಳಿದ ವರ್ಗಗಳಿಗೂ ಮೀಸಲಾತಿ ನೀಡಬೇಕು. ಖಾಸಗಿ ಕ್ಷೇತ್ರದಲ್ಲಿಯೂ ಮೀಸಲಾತಿ ಬೇಕು ಎಂಬ ಪ್ರಸ್ತಾವವನ್ನೂ ಚರ್ಚೆ ಮಾಡಲಾಗಿದೆ. ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡುವ ಮಸೂದೆಗೆ ಸಮಾಜವಾದಿ ಪಕ್ಷ ಮತ್ತು ಆರ್‌ಜೆಡಿಯಂತಹ ಪಕ್ಷಗಳು ತಡೆ ಒಡ್ಡಿದ್ದವು. ಮಹಿಳಾ ಮೀಸಲಾತಿಯಲ್ಲಿ ಇತರ ಹಿಂದುಳಿದ ವರ್ಗಗಳ ಮಹಿಳೆಯರಿಗೆ ಒಳ ಮೀಸಲಾತಿ ಬೇಕು ಎಂಬುದು ಈ ಪಕ್ಷಗಳ ಬೇಡಿಕೆಯಾಗಿತ್ತು. ಆಗ, ಈ ಬೇಡಿಕೆಯನ್ನು ಕಾಂಗ್ರೆಸ್ ಬೆಂಬಲಿಸಿರಲಿಲ್ಲ.

ಎಂಎಸ್‌ಪಿ ಕಾಯ್ದೆಗೆ ಆಗ್ರಹ

ರೈತರ ಬೆಳೆಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಖಾತರಿಗಾಗಿ ಕಾಯ್ದೆ ರೂಪಿಸಬೇಕು ಎಂದು ಕಾಂಗ್ರೆಸ್ ಪಕ್ಷವು ಒತ್ತಾಯಿಸಿದೆ.

ರೈತರ ಸಾಲ ಸಂಬಂಧಿ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಕೃಷಿ ಸಾಲ ಪರಿಹಾರದ ರಾಷ್ಟ್ರೀಯ ಆಯೋಗ ರಚಿಸಬೇಕು ಎಂಬ ಒತ್ತಾಯವನ್ನು ಕಾಂಗ್ರೆಸ್ ಮುಂದಿಟ್ಟಿದೆ. ಕೈಗಾರಿಕಾ ಸಾಲ ಸಮಸ್ಯೆಗಳನ್ನು ಪರಿಹರಿಸುವ ರೀತಿಯಲ್ಲಿಯೇ ಕೃಷಿ ಸಾಲದ ಸಮಸ್ಯೆಗಳನ್ನು ಕೂಡ ಸಂಧಾನದ ಮೂಲಕ ಪರಿಹರಿಸಬೇಕು ಎಂಬಲ ಸಲಹೆಯನ್ನು ನೀಡಿದೆ.

'ರೈತರನ್ನು ಸಾಲಮುಕ್ತರನ್ನಾಗಿಸಲು ಸಾಲ ಮನ್ನಾ ಮಾಡುವುದು ನಮ್ಮ ಗುರಿ' ಎಂದು ಹೂಡಾ ಹೇಳಿದ್ದಾರೆ. 2014ರ ಮಾರ್ಚ್ 31ರ ಹೊತ್ತಿಗೆ ರೈತರ ಸಾಲದ ಮೊತ್ತ ₹9.64 ಲಕ್ಷ ಕೋಟಿ ಇತ್ತು. ಈಗ ಅದು ₹16.8 ಲಕ್ಷ ಕೋಟಿಗೆ ಏರಿಕೆಯಾಗಿದೆ. ಕೇಂದ್ರದಿಂದ ರೈತರಿಗೆ ಯಾವ ಪರಿಹಾರವೂ ಸಿಕ್ಕಿಲ್ಲ ಎಂದು ಕಾಂಗ್ರೆಸ್ ಮುಖಂಡ ಭೂಪೀಂದರ್ ಸಿಂಗ್ ಹೂಡಾ ಹೇಳಿದ್ದಾರೆ.

33 ಮಂದಿ ಇನ್ನೂ ನಾಪತ್ತೆ

ದೆಹಲಿ ಬೆಂಕಿ ಅವಘಡ: ಸಾವಿನ ಸಂಖ್ಯೆ ಹೆಚ್ಚಳವಾಗುವ ಶಂಕೆ

ನವದೆಹಲಿ (ಪಿಟಿಐ): ದೆಹಲಿಯ ಮುಂಡ್ಕಾದಲ್ಲಿ ಶುಕ್ರವಾರ ನಡೆದ ಬೆಂಕಿ ಅವಘಡದ ಬಳಿಕ ಇನ್ನೂ 33 ಮಂದಿ ನಾಪತ್ತೆಯಾಗಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಅವಘಡದಲ್ಲಿ 27 ಮಂದಿ ಮೃತಪಟ್ಟಿದ್ದಾರೆ. ಕರಕಲಾದ ಮೃತದೇಹದ ಭಾಗಗಳು ಶನಿವಾರವೂ ಸಿಕ್ಕಿವೆ. ಹಾಗಾಗಿ ಸಾವಿನ ಸಂಖ್ಯೆಯು ಇನ್ನಷ್ಟು ಹೆಚ್ಚಬಹುದು. ಜನರು ತಮ್ಮ ಸಂಬಂಧಿಕರಿಗಾಗಿ ಹುಡುಕಾಡುತ್ತಿರುವ ದೃಶ್ಯ ಕಂಡು ಬಂತು.

ಗಾಯಗೊಂಡ 12 ಮಂದಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ನಾಲ್ಕು ಅಂತಸ್ತಿನ ಕಟ್ಟಡಕ್ಕೆ ಬೆಂಕಿ ಸುರಕ್ಷತೆ ಪ್ರಮಾಣಪತ್ರ ಇರಲಿಲ್ಲ. ಒಳ ಹೋಗಲು ಮತ್ತು ಹೊರ ಬರಲು ಒಂದು ಬಾಗಿಲು ಮಾತ್ರವೇ ಇತ್ತು. ಹಾಗಾಗಿಯೇ ಸಾವಿನ ಸಂಖ್ಯೆ ಹೆಚ್ಚಳವಾಯಿತು ಎಂದು ಮುಖ್ಯ ಅಗ್ನಿಶಾಮಕ ಅಧಿಕಾರಿ ಅತುಲ್ ಗರ್ಗ್ ಹೇಳಿದ್ದಾರೆ.

ಹವಾನಿಯಂತ್ರಕದಲ್ಲಿನ ಸ್ಫೋಟವು ಬೆಂಕಿಗೆ ಕಾರಣ ಆಗಿರಬಹುದು ಎಂಬ ಶಂಕೆ ಇದೆ. ಶನಿವಾರ ಸಿಕ್ಕಿದ ದೇಹದ ಭಾಗಗಳು ಒಬ್ಬ ವ್ಯಕ್ತಿಯದ್ದೇ ಅಥವಾ ಒಂದಕ್ಕಿಂತ ಹೆಚ್ಚು ಜನರದ್ದೇ ಎಂಬುದನ್ನು ದೃಢಪಡಿಸಿಕೊಳ್ಳುವುದು ಕಷ್ಟ ಎಂದು ಗರ್ಗ್ ತಿಳಿಸಿದ್ದಾರೆ.

ಸಿ.ಸಿ.ಟಿ.ವಿ. ಕ್ಯಾಮೆರಾ ಮತ್ತು ರೌಟರ್‌ಗಳನ್ನು ತಯಾರಿಸುವ ಮತ್ತು ಜೋಡಿಸುವ ಕಂಪನಿಯು ಈ ಕಟ್ಟಡದಲ್ಲಿತ್ತು. ಎಲ್ಲ ನಾಲ್ಕು ಅಂತಸ್ತುಗಳೂ ಈ ಕಂಪನಿಯ ಬಳಿಯೇ ಇತ್ತು. ಕಂಪನಿಯ ಮಾಲೀಕರಾದ ಹರೀಶ್ ಗೋಯಲ್ ಮತ್ತು ಅವರ ತಮ್ಮ ವರುಣ್ ಗೋಯಲ್ ಅವರನ್ನು ಪೊಲೀಸರು ಬಂಧಿಸಿದ್ದಾರೆ. ಕಟ್ಟಡದ ಮಾಲೀಕ ಮನೀಶ್ ಲಾಕ್ರಾ ಅವರ ವಿರುದ್ಧವೂ ಪ್ರಕರಣ ದಾಖಲಿಸಲಾಗಿದೆ. ಅವರನ್ನು ಶೀಘ್ರದಲ್ಲಿಯೇ ಬಂಧಿಸಲಾಗುವುದು ಎಂದು ಪೊಲೀಸರು ಹೇಳಿದ್ದಾರೆ.

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮತ್ತು ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರು ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಮೃತಪಟ್ಟವರ ಕುಟುಂಬಗಳಿಗೆ ತಲಾ ₹10 ಲಕ್ಷ ಮತ್ತು ಗಾಯಗೊಂಡವರಿಗೆ ತಲಾ ₹50 ಸಾವಿರ ಪರಿಹಾರ ನೀಡಲಾಗುವುದು ಎಂದು ಕೇಜ್ರಿವಾಲ್ ಘೋಷಿಸಿದ್ದಾರೆ. ಡಿಎನ್‌ಎ ಪರೀಕ್ಷೆ ಮೂಲಕ ಮೃತದೇಹಗಳನ್ನು ಗುರುತಿಸಲಾಗುವುದು ಎಂದು ಅವರು ತಿಳಿಸಿದ್ದಾರೆ. ಮೃತರಲ್ಲಿ ಎಂಟು ಮಂದಿಯನ್ನು ಗುರುತಿಸಲು ಮಾತ್ರ ಈವರೆಗೆ ಸಾಧ್ಯವಾಗಿದೆ.

ದೆಹಲಿಯ ಬೆಂಕಿ ಅವಘಡದಲ್ಲಿ ಕುಟುಂಬದ ಸದಸ್ಯರನ್ನು ಕಳೆದುಕೊಂಡವರ ರೋದನ ಪಿಟಿಐ ಚಿತ್ರ

ಕಣಿವೆಯಿಂದ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲು ಒತ್ತಾಯ

ಕಾಶ್ಮೀರಿ ಪಂಡಿತರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಶ್ರೀನಗರ: ಕಾಶ್ಮೀರಿ ಪಂಡಿತ ಸಮುದಾಯದ ಸರ್ಕಾರಿ ನೌಕರರೊಬ್ಬರನ್ನು ಉಗ್ರರು ಹತ್ಯೆ ಮಾಡಿರುವುದನ್ನು ಖಂಡಿಸಿ ಎರಡನೇ ದಿನವೂ ಕಾಶ್ಮೀರಿ ಪಂಡಿತ ಸರ್ಕಾರಿ ನೌಕರರು ಹಾಗೂ ಬಿಜೆಪಿ ಕಾರ್ಯಕರ್ತರು ಕಾಶ್ಮೀರದ ವಿವಿಧೆಡೆ ಪ್ರತಿಭಟನೆ ನಡೆಸಿದರು.

ಕಾಶ್ಮೀರ ಕಣಿವೆಯಿಂದ ತಮ್ಮನ್ನು ಜಮ್ಮುವಿಗೆ ಸ್ಥಳಾಂತರಿಸುವಂತೆ ಒತ್ತಾಯಿಸಿ ಉತ್ತರ ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯ ವೀರ್‌ವಾನ್ ವಲಸೆ ಶಿಬಿರದಲ್ಲಿರುವ ಕಾಶ್ಮೀರಿ ಪಂಡಿತ ಸಮುದಾಯದ ಸರ್ಕಾರಿ ನೌಕರರು ಶನಿವಾರ ಪ್ರತಿಭಟನಾ ರ್‍ಯಾಲಿ ನಡೆಸಿದರು. ಈ ವೇಳೆ ಪೊಲೀಸರು ಹಾಗೂ ಪ್ರತಿಭಟನನಿರತರ ನಡುವೆ ವಾಗ್ವಾದ ನಡೆಯಿತು.

'ರಾಹುಲ್ ಭಟ್ ಅವರ ಹತ್ಯೆಯ ನಂತರ ಕಾಶ್ಮೀರಿ ಪಂಡಿತ ನೌಕರರ ವಸತಿ ಶಿಬಿರಗಳಿಗೆ ಬೀಗ ಹಾಕಲಾಗಿದ್ದು, ಈ ನಿರ್ಬಂಧವನ್ನು ತೆಗೆಯಬೇಕು' ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

ಸರ್ಕಾರಿ ನೌಕರ ರಾಹುಲ್ ಭಟ್ ಹತ್ಯೆಕೋರರಿಗೆ ತಕ್ಕ ಶಿಕ್ಷೆ ನೀಡಬೇಕು ಹಾಗೂ ಕಾಶ್ಮೀರಿ ಪಂಡಿತ ಸಮುದಾಯದ ಜನರ ಭದ್ರತೆ ಹಾಗೂ ಸುರಕ್ಷತೆಗೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಶ್ರೀನಗರದ ಜವಾಹರ್ ನಗರದಲ್ಲಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಶುಕ್ರವಾರ (ಮೇ 13) ಬುಡ್ಗಾಂನ ಶೇಖ್‌ಪೋರಾದಿಂದ ಶ್ರೀನಗರದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದತ್ತ ಮೆರವಣಿಗೆ ಹೊರಟಿದ್ದ ಪ್ರತಿಭಟನಕಾರರನ್ನು ನಿಯಂತ್ರಿಸಲು ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿ, ಅಶ್ರುವಾಯು ಪ್ರಯೋಗಿಸಿದ್ದರು.

ಮೇ 12ರಂದು ಮಧ್ಯ ಕಾಶ್ಮೀರದ ಬುಡ್ಗಾಂ ಜಿಲ್ಲೆಯ ಚದೂರ ತಹಶೀಲ್ ಕಚೇರಿಗೆ ನುಗ್ಗಿ ಕಂದಾಯ ಇಲಾಖೆ ನೌಕರ ರಾಹುಲ್ ಭಟ್ ಅವರನ್ನು ಪಾಕಿಸ್ತಾನದ ಇಬ್ಬರು ಉಗ್ರರು ಗುಂಡಿಟ್ಟು ಹತ್ಯೆ ಮಾಡಿದ್ದರು. ಇದಕ್ಕೆ ವ್ಯಾಪಕ ಖಂಡನೆ ವ್ಯಕ್ತವಾಗಿದ್ದು, ವಿವಿಧೆಡೆ ಪ್ರತಿಭಟನೆಗಳು ನಡೆದಿವೆ.

ಭೇಟಿಗೆ ನಿರ್ಧಾರ: ಕಾಶ್ಮೀರಿ ಪಂಡಿತ ಸಮುದಾಯದ ಸುರಕ್ಷತೆ ಹಾಗೂ ಭದ್ರತೆಗೆ ಕ್ರಮ ಕೈಗೊಳ್ಳುವ ಸಂಬಂಧ ಗುಪ್ಕಾರ್ ಕೂಟವು (ಪಿಎಜಿಡಿ) ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರನ್ನು ಭೇಟಿ ಮಾಡಲು ನಿರ್ಧರಿಸಿದೆ.

ರಾಹುಲ್ ಭಟ್ ಹತ್ಯೆ ಖಂಡಿಸಿ ಕಾಶ್ಮೀರಿ ಪಂಡಿತ ನೌಕರರು ಶ್ರೀನಗರದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು ಪಿಟಿಐ ಚಿತ್ರ

ಜ್ಞಾನವಾಪಿ ಮಸೀದಿ–ಶೃಂಗಾರ ಗೌರಿ: ಸಮೀಕ್ಷೆ ಸುಗಮ

ವಾರಾಣಸಿ/ ನವದೆಹಲಿ (ಪಿಟಿಐ): ಬಿಗಿ ಭದ್ರತೆ ನಡುವೆ ಇಲ್ಲಿನ ಜ್ಞಾನವಾಪಿ ಮಸೀದಿ–ಶೃಂಗಾರ ಗೌರಿ ಸಂಕೀರ್ಣದ ಸಮೀಕ್ಷೆ ಮತ್ತು ವಿಡಿಯೊ ಚಿತ್ರೀಕರಣ ಶನಿವಾರ ಪುನರಾರಂಭವಾಗಿದ್ದು, ಭಾನುವಾರವೂ ಮುಂದುವರಿಯಲಿದೆ.

'ಶನಿವಾರದ ಸಮೀಕ್ಷೆ ಸುಗಮ ಮತ್ತು ಶಾಂತಿಯುತವಾಗಿ ನಡೆಯಿತು. ಯಾರಿಂದಲೂ ಆಕ್ಷೇಪ ವ್ಯಕ್ತವಾಗಲಿಲ್ಲ. ಎಲ್ಲರೂ ಸಹಕರಿಸಿದರು' ಎಂದು ಪೊಲೀಸ್ ಕಮಿಷನರ್ ಎ.ಸತೀಶ್ ಗಣೇಶ್ ತಿಳಿಸಿದರು.

ಸಮೀಕ್ಷೆ ಮತ್ತು ವಿಡಿಯೊ ಚಿತ್ರೀಕರಣದಲ್ಲಿ ಸಿಬ್ಬಂದಿ, ಎಲ್ಲ ಭಾಗಿದಾರರು, ವಕೀಲರು, ಕೋರ್ಟ್ ಕಮಿಷನರ್ ಭಾಗವಹಿಸಿದ್ದರು ಎಂದು ಜಿಲ್ಲಾ ಮ್ಯಾಜಿಸ್ಟ್ರೇಟ್ ಕೌಶಲ್ ರಾಜ್ ಶರ್ಮಾ ತಿಳಿಸಿದರು. ಜ್ಞಾನವಾಪಿ ಮಸೀದಿಯು ಇಲ್ಲಿನ ಹೆಸರಾಂತ ಕಾಶಿ ವಿಶ್ವನಾಥ ದೇಗುಲಕ್ಕೆ ಹೊಂದಿಕೊಂಡಂತೇ ಇದೆ. ಪೂಜೆಗೆ ಅವಕಾಶ ಕಲ್ಪಿಸಬೇಕು ಎಂದು ಕೋರಿ ಐವರು ಮಹಿಳೆಯರು ಸಲ್ಲಿಸಿದ್ದ ಅರ್ಜಿ ಹಿನ್ನೆಲೆಯಲ್ಲಿ ಸ್ಥಳೀಯ ನ್ಯಾಯಾಲಯ ಸಮೀಕ್ಷೆಗೆ ಆದೇಶಿಸಿತ್ತು.

ಮುಂಜಾಗ್ರತೆಯಾಗಿ 1500ಕ್ಕೂ ಹೆಚ್ಚು ಪೊಲೀಸರು, ಭದ್ರತಾ ಸಿಬ್ಬಂದಿಯನ್ನು ಸ್ಥಳದಲ್ಲಿ ನಿಯೋಜಿಸಲಾಗಿತ್ತು. ಸಮೀಕ್ಷೆಗೆ ಪೂರಕವಾಗಿ ವಿಶೇಷ ದೀಪ, ಕ್ಯಾಮೆರಾ ವ್ಯವಸ್ಥೆ ಮಾಡಲಾಗಿತ್ತು.

ಮುಂದಿನ ವಾರ 'ಸುಪ್ರೀಂ' ವಿಚಾರಣೆ: ಜ್ಞಾನವಾಪಿ-ಶೃಂಗಾರ ಗೌರಿ ಸಂಕೀರ್ಣದ ಸಮೀಕ್ಷೆಯ ವಿರುದ್ಧ ಜ್ಞಾನವಾಪಿ ಮಸೀದಿಯ ಆಡಳಿತ ಮಂಡಳಿಯು ಸಲ್ಲಿಸಿರುವ ಅರ್ಜಿಯನ್ನು ಸುಪ್ರೀಂ ಕೋರ್ಟ್ ಮುಂದಿನ ವಾರ ವಿಚಾರಣೆಗೆ ಕೈಗೆತ್ತಿಕೊಳ್ಳುವ ಸಾಧ್ಯತೆಯಿದೆ.

ಸುಪ್ರೀಂ ಕೋರ್ಟ್‌ನ ವೆಬ್‌ಸೈಟ್‌ನಲ್ಲಿ ಶನಿವಾರ ಪ್ರಕಟಿಸಿರುವ ಆದೇಶದ ಪ್ರಕಾರ, ಜ್ಞಾನವಾಪಿ ಮಸೀದಿಯ ಆಡಳಿತ ಸಮಿತಿಯ ಮನವಿಯನ್ನು ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು ವಿಚಾರಣೆ ನಡೆಸಲಿದೆ. ಪ್ರಸ್ತಾವಿತ ವಿಚಾರಣೆಯ ದಿನಾಂಕವನ್ನು ಸುಪ್ರೀಂಕೋರ್ಟ್‌ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿಲ್ಲ.

ಸುನಿಲ್ ಜಾಖಡ್ ಕಾಂಗ್ರೆಸ್‌ಗೆ ವಿದಾಯ

ಚಂಡೀಗಡ(ಪಿಟಿಐ): ಪಂಜಾಬ್‌ನ ಕಾಂಗ್ರೆಸ್ ಘಟಕದ ಮಾಜಿ ಅಧ್ಯಕ್ಷ ಸುನಿಲ್ ಜಾಖಡ್ ಅವರು ಶನಿವಾರ ಪಕ್ಷವನ್ನು ತೊರೆದಿರುವುದಾಗಿ ಘೋಷಣೆ ಮಾಡಿದ್ದಾರೆ.

ರಾಜಸ್ಥಾನದ ಉದಯಪುರದಲ್ಲಿ ಕಾಂಗ್ರೆಸ್ ಚಿಂತನಾ ಶಿಬಿರ ನಡೆಯುತ್ತಿರುವ ನಡುವೆಯೇ, ಜಾಖಡ್ ಅವರು ರಾಜೀನಾಮೆ ಪ್ರಕಟಿಸಿದ್ದಾರೆ.

ಶನಿವಾರ ಫೇಸ್‌ಬುಕ್ ಲೈವ್‌ನಲ್ಲಿ ಅವರು, 'ಪಕ್ಷಕ್ಕೆ ಇದು ನನ್ನ ಬೀಳ್ಕೊಡುಗೆಯ ಉಡುಗೊರೆ. ಗುಡ್ ಲಕ್ ಮತ್ತು ಗುಡ್ ಬೈ ಕಾಂಗ್ರೆಸ್' ಎಂದು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಅವಹಳೇನಕಾರಿ ಪೋಸ್ಟ್: ನಟಿ ಕೇತಕಿ ಬಂಧನ

ಠಾಣೆ (ಪಿಟಿಐ): ಎನ್‌ಸಿಪಿ ಅಧ್ಯಕ್ಷ ಶರದ್ ಪವಾರ್ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನಕಾರಿ ಪೋಸ್ಟ್ ಹಂಚಿಕೊಂಡಿರುವ ಆರೋಪದ ಮೇಲೆ ಮರಾಠಿ ನಟಿ ಕೇತಕಿ ಚಿತಳೆ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಠಾಣೆ ಪೊಲೀಸರು ಶನಿವಾರ ಅವರನ್ನು ಬಂಧಿಸಿದ್ದಾರೆ.

ಮರಾಠಿ ಭಾಷೆಯಲ್ಲಿರುವ ಈ ಪೋಸ್ಟ್ ಅನ್ನು ಚಿತಳೆ ಅವರು ಶುಕ್ರವಾರ ಹಂಚಿಕೊಂಡಿದ್ದು, ಇದನ್ನು ಬೇರೊಬ್ಬರು ಬರೆದಿದ್ದಾರೆ. ಅದರಲ್ಲಿ ಪವಾರ್ ಮತ್ತು 80 ವರ್ಷ ವಯಸ್ಸು ಎಂದು ನಮೂದಿಸಲಾಗಿದೆ. ಇದರಲ್ಲಿ 'ನರಕ ಕಾಯುತ್ತಿದೆ' ಮತ್ತು 'ನೀವು ಬ್ರಾಹ್ಮಣರನ್ನು ದ್ವೇಷಿಸುತ್ತೀರಿ' ಎಂದು ಬರೆಯಲಾಗಿದೆ. ಶಿವಸೇನೆ ಮತ್ತು ಕಾಂಗ್ರೆಸ್ ಜೊತೆಗೆ ಮಹಾರಾಷ್ಟ್ರದಲ್ಲಿ ಅಧಿಕಾರವನ್ನು ಹಂಚಿಕೊಂಡಿರುವ ಪವಾರ್ ಅವರನ್ನು ಪೋಸ್ಟ್‌ನಲ್ಲಿ ಉಲ್ಲೇಖಿಸಲಾಗಿದೆ.

ಸ್ವಪ್ನಿಲ್ ನೆಟ್ಕೆ ಎಂಬುವರು ನೀಡಿದ ದೂರಿನ ಆಧಾರದ ಮೇಲೆ ಚಿತಳೆ ವಿರುದ್ಧ ಶನಿವಾರ ಠಾಣೆಯ ಕಲ್ವಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪುಣೆಯಲ್ಲೂ ಚಿತಳೆ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಎನ್‌ಸಿಪಿ ಪೊಲೀಸರಿಗೆ ಮನವಿ ಸಲ್ಲಿಸಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಎಂಟು ವರ್ಷದ ಸಂಭ್ರಮ: 31ರಂದು ಸಮಾವೇಶ

ಶಿಮ್ಲಾ (ಪಿಟಿಐ): ಕೇಂದ್ರ ಸರ್ಕಾರದ ಎಂಟು ವರ್ಷದ ಸಂಭ್ರಮ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮೇ 31ರಂದು ಶಿಮ್ಲಾದಲ್ಲಿ ನಡೆಯುವ ರ್‍ಯಾಲಿಯಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡುವ ಸಾಧ್ಯತೆ ಇದೆ ಎಂದು ಹಿಮಾಚಲ ಪ್ರದೇಶ ಬಿಜೆಪಿ ಘಟಕದ ಅಧ್ಯಕ್ಷ ಸುರೇಶ್ ಕಶ್ಯಪ್ ಹೇಳಿದ್ದಾರೆ.

ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಎಂಟನೇ ವರ್ಷಾಚರಣೆ ಇದಾಗಿದ್ದು, ಐತಿಹಾಸಿಕ ರ್‍ಯಾಲಿಯಾಗಲಿದೆ. ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರುವ ನಿರೀಕ್ಷೆ ಇದೆ ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಎನ್‌ಡಿಎ ಸರ್ಕಾರದ ಎಂಟು ವರ್ಷಗಳ ಸಂಭ್ರಮಾಚರಣೆ ಹಿನ್ನೆಲೆಯಲ್ಲಿ ಹಿಮಾಚಲ ಪ್ರದೇಶದಲ್ಲಿ ರಾಷ್ಟ್ರ ಮಟ್ಟದ ಕಾರ್ಯಕ್ರಮವನ್ನು ಆಯೋಜಿಸುವಂತೆ ಮುಖ್ಯಮಂತ್ರಿ ಜೈ ರಾಮ್ ಠಾಕೂರ್ ಅವರು ಬುಧವಾರ ಪ್ರಧಾನಿ ಮೋದಿ ಅವರನ್ನು ಕೋರಿದ್ದರು.

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜನೀಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿಭಾಗ: ಯಾದಗಿರಿ

ಸಂ.ಕಾನಿಅ/ಲೋಇ/ಯಾವಿ/ತಾಶಾ–1/ಇ–ಟೆಂಡರ್ ಪ್ರಕಟಣೆ/2022–23/397 ದಿನಾಂಕ: 11.05.2022

:: ಅಲ್ಪಾವಧಿ ಇ –ಟೆಂಡರ್ ಅಧಿಸೂಚನೆ ::

1) ಕಾಮಗಾರಿ ವಿವರ: ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ–1 ಮತ್ತು 4 ರಂತೆ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2020–21 ಹಾಗೂ 2021–22ನೇ ಸಾಲಿನ ಕೆ.ಕೆ.ಆರ್.ಡಿ.ಬಿ. ಯೋಜನೆ ಅಡಿಯಲ್ಲಿ ಒಟ್ಟು 03 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ವರ್ಕ ಇಂಡೆಂಟ್ ಸಂಖ್ಯೆಃ (1)148757, (2)152170 (ಕೆಡಬ್ಲ್ಯೂ–4) ಮತ್ತು (3)151671 (ಕೆಡಬ್ಲ್ಯೂ–1), 2) ಕಾಮಗಾರಿ ಅಂದಾಜು ಮೊತ್ತ: **ಕನಿಷ್ಠ ರೂ.20.00 ಲಕ್ಷಗಳು ಹಾಗೂ ಗರಿಷ್ಠ ರೂ:165.86 ಲಕ್ಷಗಳು**, 3) ಗುತ್ತಿಗೆದಾರರ ಅರ್ಹತೆ ವಿವರ: 4ನೇ ದರ್ಜೆ ಹಾಗೂ ಮೇಲ್ಪಟ್ಟು, 4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ: ಅರ್ಜಿ ಬೆಲೆ ಮತ್ತು ಕಾಲಾವಧಿ e-procurement ನಂತೆ, ಇ.ಎಮ್.ಡಿ. ಕನಿಷ್ಠ ರೂ: 44400.00, ಗರಿಷ್ಠ ರೂ: 217200.00, 5) ಪ್ರೀ–ಬಿಡ್ ಮೀಟಿಂಗ್ ದಿನಾಂಕ: **18.05.2022 (17.30 ಗಂಟೆವರೆಗೆ) (ಕೆಡಬ್ಲ್ಯೂ–4ರ ಕಾಮಗಾರಿಗಳಿಗೆ ಮಾತ್ರ)**, 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ: **21.05.2022 (17.30 ಗಂಟೆವರೆಗೆ)**, 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: **24.05.2022 (16.00 ಗಂಟೆವರೆಗೆ)**, 8) ಟೆಂಡರ/ಆರ್ಥಿಕ ಬಿಡ್ ತೆರೆಯುವ ದಿನಾಂಕ: **26.05.2022 (11.30 ಗಂಟೆ)(ಕೆಡಬ್ಲ್ಯೂ– 1ರ ಕಾಮಗಾರಿಗೆ ಮಾತ್ರ)**, 9) ಟೆಂಡರ/ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **26.05.2022 (11.30 ಗಂಟೆ)(ಕೆಡಬ್ಲ್ಯೂ–4 ರ ಕಾಮಗಾರಿಗಳಿಗೆ ಮಾತ್ರ)**, 10) ಆರ್ಥಿಕ ಬಿಡ್ ತೆರೆಯುವ ದಿನಾಂಕ: **30.05.2022 (11.30 ಗಂಟೆ)(ಕೆಡಬ್ಲ್ಯೂ–4 ರ ಕಾಮಗಾರಿಗಳಿಗೆ ಮಾತ್ರ)**, 11) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ, 12) ಅಂತರ್ಜಾಲ ತಾಣದ ವಿಳಾಸ: www.e-proc.karnataka.gov.in

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರರು,
ವಾ.ಸಾ.ಸಂ.ಇ/ಯಾದಗಿರಿ/53/ಎಂಸಿಎ/2022–23 ಲೋಕೋಪಯೋಗಿ ಇಲಾಖೆ. ವಿಭಾಗ: ಯಾದಗಿರಿ

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ
(ಹಿಂದಿನ ಪದನಾಮ: ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ)
ಕುಲಸಚಿವರು(ಮೌಲ್ಯಮಾಪನ) , ಜ್ಞಾನ–ಶಕ್ತಿ ಆವರಣ (ತೊರವಿ) ವಿಜಯಪುರ–586105.
ದೂರವಾಣಿ:08352–229123, ಇ–ಮೇಲ್ :exam@kswu.ac.in ವೆಬ್‌ಸೈಟ್: www.kswu.ac.in
ಕ್ರ.ಸಂಖ್ಯೆ: ಕರಾಅಮವಿವಿ/ಉಗ್ರಾಣ/ಪರೀಕ್ಷಾ–ವಿ/2022–23/579 ದಿನಾಂಕ: 12.05.2022

ಅಲ್ಪಾವಧಿ ಮರು ಟೆಂಡರ್ ಅಧಿಸೂಚನೆ ಪ್ರಕಟಣೆ
ದ್ವಿ–ಲಕೋಟೆ ಪದ್ದತಿ (ಇ–ಪ್ರಾಕ್ಯೂರಮೆಂಟ್)

ಕರ್ನಾಟಕ ಸರ್ಕಾರದ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1992–2000 ರ ಪ್ರಕಾರ ಅಧಿನಿಯಮ 2000 ರ ನಿಯಮದಂತೆ ವಿವಿಧ ನೊಂದಾಯಿತ ಅರ್ಹ–ಏಜೆನ್ಸಿದಾರರು ಇ–ಪ್ರಾಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಮರು ಟೆಂಡರ್‌ನ್ನು ದ್ವಿ–ಲಕೋಟೆ ಪದ್ದತಿಯಲ್ಲಿ ಈ ಕೆಳಕಂಡ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ.
1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 27.05.2022 ರ 16.00 ಗಂಟೆಯವರೆಗೆ
2) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 30.05.2022 ರ 16.00 ಗಂಟೆಯವರೆಗೆ
3) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ : 31.05.2022ರ 16.00 ಗಂಟೆಯವರೆಗೆ ಅಥವಾ ನಂತರ ತಿಳಿಸಲಾಗುವುದು.

ಕ್ರ.ಸಂ	ಕಾಮಗಾರಿಯ ಹೆಸರು	ಸೇವೆ ಪಡೆದುಕೊಳ್ಳುವ ಅಂದಾಜು ಮೊತ್ತ (ರೂ.ಗಳಲ್ಲಿ)	ಟೆಂಡರ್ ಪ್ರೋಸೆಸಿಂಗ್ ಫೀ.	ಬಡ್ಡಿ ರಹಿತ ಇ.ಎಂ.ಡಿ (ರೂ.ಗಳಲ್ಲಿ)	ಟೆಂಡರ್ ಕಾಮಗಾರಿಗಳನ್ನು ನಿರ್ವಹಿಸುವ ಕಾಲವಕಾಶ	ವರ್ಕ್ ಇಂಡೆಂಟ್ ಸಂಖ್ಯೆ:
1	Supply and Installation of Electrical and Electronics equipments in the Exam Section and Various Departments at KSAWU, Vijayapura	27,14,000/-	As per E-Proc-Portal	68,000/-	21 ದಿನಗಳು (ಮಳೆಗಾಲ ಸಹಿತ)	

ಹೆಚ್ಚಿನ ವಿವರ/ವಿಚಾರಣೆಗೆ ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಏಜೆನ್ಸಿದಾರರ ಅರ್ಹತೆ/ಟೆಂಡರ್ ಪ್ರೋಸೆಸ್ಸಿಂಗ ಶುಲ್ಕ ತುಂಬುವ ವಿಧಾನ ಇತ್ಯಾದಿ ವಿವರಗಳಿಗೆ http://eproc.karnataka.gov.in ಮೂಲಕ ಮಾಹಿತಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ಸದರಿ ಕಛೇರಿಯಿಂದ ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080–25501216, 080–25501227 / 9449662003 ರಿಂದ ಪಡೆಯಬಹುದು.

ಸಹಿ/– ಕುಲಸಚಿವರು
ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,
ವಾಸಾಸಂಇ/ವಿಜಯಪುರ/105/ಎಂಸಿಎ/2022–23 ವಿಜಯಪುರ

4 ಮುಖ್ಯ ಎಂಜಿನಿಯರ್, 11 ಹೆಚ್ಚುವರಿ ಮುಖ್ಯ ಎಂಜಿನಿಯರ್ ಹುದ್ದೆ ಹೆಚ್ಚುವರಿ ಸೃಷ್ಟಿಗೆ ಪ್ರಸ್ತಾವನೆ

ಜಲಮಂಡಳಿಯಲ್ಲಿ ಬಡ್ತಿಗಾಗಿಯೇ ಹುದ್ದೆ ಸೃಷ್ಟಿ!

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಬಡ್ತಿಗಾಗಿ ಕಾದಿರುವ ಎಂಜಿನಿಯರ್‌ಗಳನ್ನು ತೃಪ್ತಿಪಡಿಸುವ ಸಲುವಾಗಿಯೇ ಹೆಚ್ಚುವರಿಯಾಗಿ ನಾಲ್ಕು ಮುಖ್ಯ ಎಂಜಿನಿಯರ್ ಸೇರಿ 27 ಹುದ್ದೆಗಳನ್ನು ಸೃಷ್ಟಿಸಲು ಜಲಮಂಡಳಿ ಮುಂದಾಗಿದೆ.

ಜಲಮಂಡಳಿಯಲ್ಲಿ ಸದ್ಯ 6 ಮುಖ್ಯ ಎಂಜಿನಿಯರ್, 11 ಹೆಚ್ಚುವರಿ ಮುಖ್ಯ ಎಂಜಿನಿಯರ್, 43 ಕಾರ್ಯಪಾಲಕ ಎಂಜಿನಿಯರ್ ಹುದ್ದೆಗಳಿವೆ. ಈ ಹುದ್ದೆಗಳ ಸಂಖ್ಯೆಯನ್ನು ಕ್ರಮವಾಗಿ 10, 24 ಮತ್ತು 55ಕ್ಕೆ ಹೆಚ್ಚಿಸಲು ಜಲಮಂಡಳಿ ನಿರ್ಧರಿಸಿದ್ದು, ಈ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆಯೂ ಸಲ್ಲಿಕೆಯಾಗಿದೆ.

'ಈ ಪ್ರಸ್ತಾವನೆಗೆ ಜಲಮಂಡಳಿಯ ಆಡಳಿತ ಮಂಡಳಿ ಒಪ್ಪಿಗೆ ದೊರೆತಿದೆ. ಹಣಕಾಸು ಇಲಾಖೆಯ ಸಮ್ಮತಿಯೂ ಸಿಕ್ಕಿದೆ. ಬಡ್ತಿಗಾಗಿ ಹುದ್ದೆ ಸೃಷ್ಟಿಗೆ ಅವಕಾಶ ನೀಡುವುದಿಲ್ಲ ಎಂದು ಮುಖ್ಯಮಂತ್ರಿ ಇತ್ತೀಚೆಗಷ್ಟೇ ಹೇಳಿದ್ದರು. ಅವರ ಉಸ್ತುವಾರಿಯಲ್ಲೇ ಇರುವ ಜಲಮಂಡಳಿಯಲ್ಲಿ ಬಡ್ತಿ ನೀಡುವ ಸಲುವಾಗಿಯೇ ಹುದ್ದೆಗಳನ್ನು ಸೃಷ್ಟಿ ಮಾಡಲು ಹೊರಟಿರುವುದು ಎಷ್ಟು ಸರಿ. ಬಿಳಿಯಾನೆಯಂತಹ ಈ ಹುದ್ದೆಗಳು ಜಲಮಂಡಳಿಗೆ ಈಗ ನಿಜಕ್ಕೂ ಅಗತ್ಯ ಇವೆಯೇ' ಎಂದು ಮಂಡಳಿ ನಿವೃತ್ತ ಅಧಿಕಾರಿಗಳು ಪ್ರಶ್ನಿಸಿದ್ದಾರೆ.

'ಜಲಮಂಡಳಿಯಲ್ಲಿ ಕೆಳಹಂತದಲ್ಲಿ ಕಾರ್ಯನಿರ್ವಹಿಸಬೇಕಾದ ಸಹಾಯಕ ಎಂಜಿನಿಯರ್‌ಗಳು ಮತ್ತು ಕಿರಿಯ ಎಂಜಿನಿಯರ್‌ಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ನಿಯೋಜಿಸಿಕೊಳ್ಳುವ ಅಗತ್ಯವಿದೆಯೇ ಹೊರತು, ಮೇಲ್ಮಟ್ಟದಲ್ಲಿ ಅಧಿಕಾರಿಗಳ ಹುದ್ದೆಗಳನ್ನು ಸೃಷ್ಟಿಸುವ ಅಗತ್ಯ ಇಲ್ಲ' ಎನ್ನುತ್ತಾರೆ ಜಲ ಮಂಡಳಿ ನಿವೃತ್ತ ಮುಖ್ಯ ಎಂಜಿನಿಯರ್ ಹಾಗೂ ಆಡಳಿತ ಮಂಡಳಿ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದ ಎಸ್. ಎಂ.ಬಸವರಾಜ್.

'ಕೆಲವರು ಕೂಟ ಕಟ್ಟಿಕೊಂಡು ಆಡಳಿತ ಮಂಡಳಿಯನ್ನು ದಿಕ್ಕು ತಪ್ಪಿಸಿದ್ದಾರೆ. ಮಂಡಳಿಗೆ ಅಧ್ಯಕ್ಷರಾಗಿ ಬರುವ ಐಎಎಸ್ ಅಧಿಕಾರಿಗಳಿಗೆ ಈ ಬಗ್ಗೆ ಕಾಳಜಿ ಇರುವುದಿಲ್ಲ. ಸದಸ್ಯರೂ ಇಲಾಖೆ ಅಧಿಕಾರಿಗಳೇ ಆಗಿದ್ದು, ಅವರಿಗೂ ಜಲಮಂಡಳಿ ಆಡಳಿತದ ಬಗ್ಗೆ ಅಷ್ಟೇನೂ ಜವಾಬ್ದಾರಿ ಇರುವುದಿಲ್ಲ. ಸಭೆಯಲ್ಲಿ ಮಂಡನೆಯಾದ ಕಾರ್ಯಸೂಚಿಗೆ ತಲೆಯಾಡಿಸಿ ಹೋಗುತ್ತಾರೆ. ಆದ್ದರಿಂದಲೇ ಈ ರೀತಿಯ ಪ್ರಸ್ತಾವನೆ ಸರ್ಕಾರದವರಗೆ ತಲುಪಿವೆ' ಎಂದು ಅವರು ಹೇಳಿದರು.

'ಬಡ್ತಿ ವಿಷಯದಲ್ಲಿ ಕೋಟಿ ಗಟ್ಟಲೆ ಹಣಕಾಸಿನ ವಹಿವಾಟು ಕೂಡ ನಡೆದಿರುತ್ತದೆ. ಸರ್ಕಾರ ಕಣ್ಮುಚ್ಚಿಕೊಂಡು ಹುದ್ದೆಗಳ ಸೃಷ್ಟಿಗೆ ಅವಕಾಶ ನೀಡುವ ಬದಲು, ಮಂಡಳಿಗೆ ಆರ್ಥಿಕವಾಗಿ ಹೊರೆಯಾಗಲಿರುವ ಈ ಹುದ್ದೆಗಳ ಸೃಷ್ಟಿಯ ಅಗತ್ಯದ ಬಗ್ಗೆ ಯೋಚಿಸಬೇಕು' ಎಂದರು.

'ಜಲಮಂಡಳಿಯ ಹಣಕಾಸಿನ ಸ್ಥಿತಿ ಅಷ್ಟೇನು ಸುಸ್ಥಿತಿಯಲ್ಲಿ ಇಲ್ಲ. ನೀರಿನ ಸಂಪರ್ಕ ಕಲ್ಪಿಸುವಾಗ ಪ್ರೊ–ರೇಟಾ ಶುಲ್ಕದಿಂದ ಸಂಗ್ರಹ ಆಗುವ ಮೊತ್ತವನ್ನೇ ನೌಕರರ ಸಂಬಳಕ್ಕೆ ಬಳಸಿಕೊಂಡು ಖಾಲಿ ಮಾಡಲಾಗುತ್ತಿದೆ. ಇಂತಹ ಸಂದರ್ಭದಲ್ಲಿ ಕೆಲವೇ ಕೆಲವರ ಹಿತಕ್ಕಾಗಿ ಜಲಮಂಡಳಿ ಮೇಲಿನ ಆರ್ಥಿಕ ಹೊರೆಯನ್ನು ಇನ್ನಷ್ಟು ಹೆಚ್ಚಿಸುವುದು ಸರಿಯಾದ ನಿರ್ಧಾರವಲ್ಲ' ಎಂದು ಹೇಳಿದರು.

ಪ್ರಜಾವಾಣಿ ವಿಶೇಷ

'ಅಗತ್ಯಕ್ಕೆ ಅನುಗುಣವಾಗಿ ಹುದ್ದೆ ಸೃಷ್ಟಿ'

'ಕೆಲಸದ ಒತ್ತಡ ಮತ್ತು ಅಗತ್ಯಕ್ಕೆ ಅನುಗುಣವಾಗಿ ಹುದ್ದೆಗಳನ್ನು ಸೃಜಿಸಲಾಗಿದೆಯೇ ಹೊರತು ಯಾರಿಗೋ ಬಡ್ತಿ ನೀಡಬೇಕು ಎಂಬ ಉದ್ದೇಶದಿಂದ ಅಲ್ಲ' ಎಂದು ಜಲ ಮಂಡಳಿ ಅಧ್ಯಕ್ಷ ಎನ್.ಜಯರಾಂ ಸ್ಪಷ್ಟಪಡಿಸಿದರು.

'ಬಿಬಿಎಂಪಿಯಲ್ಲಿ ವಲಯಕ್ಕೊಬ್ಬರು ಮುಖ್ಯ ಎಂಜಿನಿಯರ್‌ಗಳಿದ್ದಾರೆ. ಕೇಂದ್ರ ಕಚೇರಿಯಲ್ಲೂ ವಿಭಾಗಕ್ಕೊಬ್ಬರು ಮುಖ್ಯ ಎಂಜಿನಿಯರ್ ಇದ್ದಾರೆ. ಜಲಮಂಡಳಿಯ ನಿರ್ವಹಣಾ ವಿಭಾಗಕ್ಕೆ ಇಬ್ಬರು ಮಾತ್ರ ಮುಖ್ಯ ಎಂಜಿನಿಯರ್‌ಗಳಿದ್ದಾರೆ. ಕುಡಿಯುವ ನೀರು ಮತ್ತು ಒಳಚರಂಡಿ ನೀರಿನ ನಿರ್ವಹಣೆಯ ಹೊಣೆ ಮಾತ್ರ ಇರುವುದರಿಂದ ಬಿಬಿಎಂಪಿಯಷ್ಟು ಮುಖ್ಯ ಎಂಜಿನಿಯರ್‌ಗಳ ಅಗತ್ಯ ಮಂಡಳಿಗೆ ಇಲ್ಲ ನಿಜ. ಆದರೂ, ಎರಡು ವಲಯಕ್ಕೆ ಒಬ್ಬರು ಮುಖ್ಯ ಎಂಜಿನಿಯರ್ ಇರಬೇಕು ಎಂದು ಆಡಳಿತ ಮಂಡಳಿ ತೀರ್ಮಾನಿಸಿದೆ' ಎಂದು ತಿಳಿಸಿದರು.

ಅಂಕಿ-ಅಂಶಗಳು

4,578 ಜಲಮಂಡಳಿಯಲ್ಲಿನ ಕಾಯಂ ನೌಕರರು

2,400 ಗುತ್ತಿಗೆ ನೌಕರರು

6 ಹಾಲಿ ಇರುವ ಮುಖ್ಯ ಎಂಜಿನಿಯರ್ ಹುದ್ದೆಗಳು

4 ಹೊಸದಾಗಿ ಪ್ರಸ್ತಾಪಿಸಿರುವ ಮುಖ್ಯ ಎಂಜಿನಿಯರ್‌ಗಳ ಹುದ್ದೆಗಳು

ಸುದ್ದಿ 2 ನಿಮಿಷ

ನಳಿನ್ ತಾಯಿ ಖಾತೆಗೆ ಎಲ್ಲಿಂದ ಬಂತು ಹಣ– ಕಾಂಗ್ರೆಸ್ ಪ್ರಶ್ನೆ

ಬೆಂಗಳೂರು: 'ಬಿಜೆಪಿ ರಾಜ್ಯ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರ ತಾಯಿಯ ಬ್ಯಾಂಕ್ ಖಾತೆಗೆ ಸರ್ಕಾರದ ಯಾವ ಯೋಜನೆಯಡಿ ₹1 ಲಕ್ಷ ಜಮೆಯಾಗಿದೆ' ಎಂದು ಕಾಂಗ್ರೆಸ್ ಪ್ರಶ್ನಿಸಿದೆ.

'ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಯೋಜನೆಗಳಿಂದ ಈಗ ಜನರ ಖಾತೆಗೆ ನೇರವಾಗಿ ಸರ್ಕಾರದ ಹಣ ಜಮೆಯಾಗುತ್ತಿದೆ. ನನ್ನ ಅಕೌಂಟ್‌ಗೂ ಸರ್ಕಾರದಿಂದ ₹ 1 ಲಕ್ಷ ಬಂದಿದೆ ಎಂದು ಅಮ್ಮ ಮೊನ್ನೆ ಹೇಳಿದ್ದರು' ಎಂದು ನಳಿನ್ ಕುಮಾರ್ ಕಟೀಲ್ ಇತ್ತೀಚೆಗೆ ಭಾಷಣವೊಂದರಲ್ಲಿ ಹೇಳಿದ್ದರು.

ಕೆಪಿಸಿಸಿ ಅಧಿಕೃತ ಟ್ವಿಟರ್ ಖಾತೆಯಲ್ಲಿ ಶನಿವಾರ ನಳಿನ್ ಭಾಷಣದ ವಿಡಿಯೊ ತುಣುಕು ಹಂಚಿಕೊಂಡು ಕೆಲವು ಪ್ರಶ್ನೆಗಳನ್ನು ಕೇಳಲಾಗಿದೆ. ನಳಿನ್ ಕುಮಾರ್ ಕಟೀಲ್ ಮತ್ತು ಬಿಜೆಪಿ ರಾಜ್ಯ ಘಟಕದ ಟ್ವಿಟರ್ ಖಾತೆಗಳಿಗೂ ಈ ಟ್ವೀಟ್ ಅನ್ನು ಟ್ಯಾಗ್ ಮಾಡಲಾಗಿದೆ.

'ಸಂಸದರ ತಾಯಿಯ ಖಾತೆಗೆ ಕೇಂದ್ರದಿಂದ ಹೇಗೆ ಹಣ ಸಂದಾಯವಾಯಿತು? ಇದು ಯಾವ ಯೋಜನೆಯ ಹಣ? ಲಕ್ಷಗಟ್ಟಲೆ ಸಂಬಳ ಪಡೆಯುವವರ ತಾಯಿ ಫಲಾನುಭವಿ ಆಗಿದ್ದು ಹೇಗೆ? ಯಾವ ರೈತರ ಖಾತೆಗೆ ಲಕ್ಷ ಗಟ್ಟಲೆ ಹಣ ಬಂದಿದೆ? ಅಂತಹ ಯಾವ ಯೋಜನೆ ಇದೆ? ಎಂಬ ಮಾಹಿತಿಯನ್ನು ಸಂಸದರು ನೀಡಬೇಕು' ಎಂದು ಕಾಂಗ್ರೆಸ್ ಆಗ್ರಹಿಸಿದೆ.

ನಿರ್ಮಲಾ ಸೀತಾರಾಮನ್, ವಿಜಯೇಂದ್ರ ಆಯ್ಕೆಗೆ ಸಮ್ಮತಿ

ಪ್ರಜಾವಾಣಿ ವಾರ್ತೆ

ಬಿ.ವೈ. ವಿಜಯೇಂದ್ರ

ನಿರ್ಮಲಾ ಸೀತಾರಾಮನ್

ಬೆಂಗಳೂರು: ರಾಜ್ಯಸಭೆಗೆ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಸೇರಿದಂತೆ ಐವರು ಹಾಗೂ ವಿಧಾನ ಪರಿಷತ್‌ಗೆ ಶಾಸಕ ಬಿ.ಎಸ್. ಯಡಿಯೂರಪ್ಪ ಮಗ, ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಸೇರಿದಂತೆ ಇಪ್ಪತ್ತು ಸಂಭ್ಯಾವರ ಹೆಸರುಗಳನ್ನು ಪಕ್ಷದ ಕೇಂದ್ರೀಯ ಚುನಾವಣಾ ಸಮಿತಿಗೆ ಶಿಫಾರಸು ಮಾಡಲು ಶನಿವಾರ ನಡೆದ ಬಿಜೆಪಿ ರಾಜ್ಯ ಘಟಕದ ಪ್ರಮುಖರ ಸಮಿತಿ ಸಭೆಯಲ್ಲಿ ನಿರ್ಧರಿಸಲಾಗಿದೆ.

ವಿಧಾನಸಭೆಯಿಂದ ವಿಧಾನ ಪರಿಷತ್‌ನ ಏಳು ಸ್ಥಾನಗಳಿಗೆ ನಡೆಯುವ ಚುನಾವಣೆ ಹಾಗೂ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ರಾಜ್ಯದಿಂದ ನಡೆಯುವ ಚುನಾವಣೆಗಳಿಗೆ ಅಭ್ಯರ್ಥಿಗಳ ಆಯ್ಕೆಗೆ ಶಿಫಾರಸು ಕಳುಹಿಸುವ ಕುರಿತು ಸಭೆಯಲ್ಲಿ ಚರ್ಚೆ ನಡೆಸಲಾಯಿತು. ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಜಗದೀಶ ಶೆಟ್ಟರ್ ಸೇರಿದಂತೆ ಹಲವರು ಸಭೆಯಲ್ಲಿ ಪಾಲ್ಗೊಂಡಿದ್ದರು.

ರಾಜ್ಯಸಭೆಯ ಎರಡು ಸ್ಥಾನಗಳಿಗೆ ಬಿಜೆಪಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದ್ದು, ಒಂದು ಸ್ಥಾನ ನಿರ್ಮಲಾ ಅವರಿಗೆ ಮೀಸಲಿಡಲಾಗಿದೆ. ಎರಡನೇ ಸ್ಥಾನಕ್ಕೆ ಹಾಲಿ ಸದಸ್ಯ ಕೆ.ಸಿ. ರಾಮಮೂರ್ತಿ ಸೇರಿದಂತೆ ನಾಲ್ವರ ಹೆಸರುಗಳನ್ನು ಶಿಫಾರಸು ಮಾಡಲು ನಿರ್ಧರಿಸಲಾಗಿದೆ. ವಿಧಾನ ಪರಿಷತ್‌ನ ನಾಲ್ಕು ಸ್ಥಾನಗಳಿಗೆ ವಿವಿಧ ಸಮುದಾಯದ ತಲಾ ಐವರ ಹೆಸರನ್ನು ಶಿಫಾರಸು ಮಾಡುವ ನಿರ್ಧಾರವನ್ನು ಪ್ರಮುಖರ ಸಮಿತಿ ಕೈಗೊಂಡಿದೆ.

ಉಡುಪಿ: ಸಹಬಾಳ್ವೆ ಸಮಾವೇಶದಲ್ಲಿ ಯೋಗೇಂದ್ರ ಯಾದವ್ ಕರೆ

'ದ್ವೇಷದ ಫಸಲು ತಡೆಯೋಣ'

ಪ್ರಜಾವಾಣಿ ವಾರ್ತೆ

ಸಾಮಾಜಿಕ ಹೋರಾಟಗಾರ ಯೋಗೇಂದ್ರ ಯಾದವ್ ಸಮಾವೇಶದಲ್ಲಿ ಮಾತನಾಡಿದರು. ಬೆಳಗಾವಿಯ ಬಸವಧರ್ಮ ಪೀಠದ ಬಸವ ಪ್ರಕಾಶ ಸ್ವಾಮೀಜಿ, ಮೈಸೂರಿನ ಬಸವಜ್ಞಾನ ಮಂದಿರದ ಮಾತೆ ಬಸವಾಂಜಲಿ ದೇವಿ ಹಾಗೂ ವಿವಿಧ ಸಂಘಟನೆಗಳ ಪ್ರತಿನಿಧಿಗಳು ಇದ್ದರು

ಉಡುಪಿ: 'ಸೌಹಾರ್ದದ ನೆಲವಾಗಿರುವ ಕರಾವಳಿಯಲ್ಲಿ ದ್ವೇಷದ ವಿಷ ಬೀಜ ಬಿತ್ತಲಾಗಿದೆ. ಅದರ ಫಸಲು ಅವರ ಕೈ ಸೇರದಂತೆ ನಾವೆಲ್ಲರೂ ಒಟ್ಟಾಗಿ ತಡೆಯಬೇಕಿದೆ' ಎಂದು ಸಾಮಾಜಿಕ ಹೋರಾಟಗಾರ ಯೋಗೇಂದ್ರ ಯಾದವ್ ಕರೆ ನೀಡಿದರು.

ಉಡುಪಿಯಲ್ಲಿ ಸೌಹಾರ್ದಪರ ಸಂಘಟನೆಗಳು ಶನಿವಾರ ಹಮ್ಮಿಕೊಂಡಿದ್ದ 'ಸಹಬಾಳ್ವೆ ಸಮಾವೇಶ'ದಲ್ಲಿ ಮಾತನಾಡಿದ ಅವರು, 'ದೇಶ ಒಡೆದರೆ ಪ್ರತಿಯಾಗಿ ದೇಶ ಕಟ್ಟೋಣ, ಮಂದಿರಗಳನ್ನು ಕಟ್ಟಿದರೆ ಬದಲಾಗಿ ಸೌಹಾರ್ದ–ಸೌಧಗಳನ್ನು ನಿರ್ಮಿಸೋಣ' ಎಂದರು.

'ಎಲ್ಲರನ್ನೂ ಒಟ್ಟಾಗಿ ಕರೆದೊಯ್ಯುವುದು ದೇಶ ಧರ್ಮ. ಧರ್ಮ ಪಾಲಿಸಲು ಆಗದವರಿಗೆ ಅಧಿಕಾರದ ಕುರ್ಚಿಯಲ್ಲಿ ಕೂರುವ ಅರ್ಹತೆ ಇಲ್ಲ. ದೇಶ ಕಟ್ಟುವವರು ದೇಶಪ್ರೇಮಿಗಳು, ಧರ್ಮಗಳ ನಡುವೆ ದ್ವೇಷ ಹುಟ್ಟುಹಾಕುವವರು ದೇಶದ್ರೋಹಿಗಳು' ಎಂದು ವಾಗ್ದಾಳಿ ನಡೆಸಿದರು.

ಸಾಮಾಜಿಕ ಹೋರಾಟಗಾರ ಶಶಿಕಾಂತ್ ಸೆಂಥಿಲ್ ಮಾತನಾಡಿ, 'ಉಡುಪಿಯ ಸಹಬಾಳ್ವೆ ಸಮಾವೇಶ ದೇಶದೆಲ್ಲೆಡೆ ವಿಸ್ತರಿಸಲಿ, ಯುವಜನರು ಇದರ ನೇತೃತ್ವ ವಹಿಸಲಿ. ದ್ವೇಷ ಹರಡುವವರಿಗೂ ಪ್ರೀತಿ, ಸೌಹಾರ್ದ ಹಂಚಲಿ' ಎಂದರು.

ಸಮಾವೇಶಕ್ಕೂ ಮುನ್ನ ನಗರದ ಹುತಾತ್ಮರ ಸ್ಮಾರಕದ ಎದುರು ಹೋರಾಟಗಾರರಾದ ಕೆ.ನೀಲಾ, ನಜ್ಮಾ ಚಿಕ್ಕನೇರಳೆ, ಮಾವಳ್ಳಿ ಶಂಕರ್, ಚಾಮರಸ ಮಾಲಿ ಪಾಟೀಲ್, ಎಚ್.ಆರ್.ಬಸವರಾಜಪ್ಪ, ಸಬಿಹಾ ಫಾತಿಮಾ ಅವರು ಏಳು ಬಣ್ಣದ ಬಾವುಟಗಳನ್ನು ಎತ್ತಿ ಹಿಡಿಯುವ ಮೂಲಕ ಸಾಮರಸ್ಯ ನಡಿಗೆಗೆ ಚಾಲನೆ ನೀಡಿದರು.

ಬಾಲ್ಕಿ ಹಿರೇಮಠ ಸಂಸ್ಥಾನದ ಗುರುಬಸವ ಪಟ್ಟದೇವರು, ಖಾಜಿ ಅಬ್ದುಲ್ ಹಮೀದ್ ಮುಸ್ಲಿಯಾರ್ ಮಾಣಿ, ಪುತ್ತೂರು ಮಲಂಕರ ಕಥೊಲಿಕ್ ಚರ್ಚ್‌ನ ಬಿಷಪ್ ವರ್ಗೀಸ್ ಮಾರ್ ಮಕರಿಕೋಸ್, ಮೈಸೂರು ಬಸವ ಜ್ಞಾನ ಮಂದಿರದ ಡಾ.ಮಾತೆ ಬಸವಾಂಜಲಿ, ಬಸವಧರ್ಮ ಪೀಠದ ಬಸವ ಪ್ರಕಾಶ ಸ್ವಾಮೀಜಿ, ಲೋಕರತ್ನ ಬುದ್ಧವಿಹಾರದ ಭಂತೆ ಮಾತೆ ಮೈತ್ರಿ, ಮೌಲಾನ ಇಫ್ತಿಕಾರ್ ಅಹ್ಮದ್ ಕಾಸ್ಮಿ, ಡಾ.ಎಂ.ಎಸ್.ಎಂ.ಅಬ್ದುಲ್ ರಶೀದ್ ಸಖಾಫಿ ಝೈನಿ ಕಾಮಿಲ್, ಮೌಲಾನ ಯು.ಕೆ. ಅಬ್ದುಲ್ ಅಝೀಜ್ ದಾರಿಮಿ, ಫಾದರ್ ಚೇತನ್ ಲೋಬೋ, ಗ್ಯಾನಿ ಬಲರಾಜ್ ಸಿಂಗ್ ಸಮಾವೇಶದಲ್ಲಿ ಭಾಗವಹಿಸಿದ್ದರು.

'ಅಸಮಾನತೆಯ ಆಯಾಮ ತೆರೆದಿಡುವ ಕೃತಿ'

ಬೆಂಗಳೂರು: 'ಪ್ರೊ.ನರೇಂದ್ರ ಪಾಣಿ ಸಂಪಾದನೆ ಮಾಡಿರುವ 'ಡೈನಾಮಿಕ್ಸ್ ಆಫ್ ಡಿಫರೆನ್ಸ್' ಕೃತಿಯು ಅಸಮಾನತೆಯ ವಿವಿಧ ಆಯಾಮಗಳ ಕುರಿತು ಮಾತನಾಡುತ್ತದೆ' ಎಂದು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆಯ (ಐಎಸ್‌ಇಸಿ) ನಿರ್ದೇಶಕ ಡಿ.ರಾಜಶೇಖರ್ ಅಭಿಪ್ರಾಯಪಟ್ಟರು.

ಪಬ್ಲಿಕ್ ಅಫೇರ್ಸ್ ಸೆಂಟರ್ (ಪಿಎಸಿ) ಹಾಗೂ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್ (ಎನ್‌ಐಎಎಸ್) ಶನಿವಾರ ಹಮ್ಮಿಕೊಂಡಿದ್ದ ಪುಸ್ತಕ ಬಿಡುಗಡೆ ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಪುಸ್ತಕವು ಒಟ್ಟು ಐದು ಅಧ್ಯಾಯಗಳನ್ನು ಒಳಗೊಂಡಿದೆ. 5 ವರ್ಷದೊಳಗಿನ ಶೇ 36ರಷ್ಟು ಮಕ್ಕಳು ಕುಂಠಿತ ಬೆಳವಣಿಗೆ ಹಾಗೂ ಶೇ 32ರಷ್ಟು ಮಕ್ಕಳು ಕಡಿಮೆ ತೂಕದ ಸಮಸ್ಯೆಯಿಂದ ಬಳಲುತ್ತಿದ್ದು, 2019 ಮತ್ತು 2021ರಲ್ಲಿ ನಡೆಸಲಾಗಿದ್ದ ಒಟ್ಟು ಐದು ಸಮೀಕ್ಷೆಗಳಿಂದ ದೃಢಪಟ್ಟಿತ್ತು. ಇದು ಗ್ರಾಮೀಣ ಭಾರತದಲ್ಲಿನ ಅಸಮಾನತೆಯನ್ನು ಬಿಂಬಿಸುತ್ತದೆ' ಎಂದು ತಿಳಿಸಿದರು.

'ಗ್ರಾಮೀಣ ಭಾಗದಲ್ಲಿನ ಅಸಮಾನತೆಯ ಮೇಲೆ ಈ ಪುಸ್ತಕವು ಬೆಳಕು ಚೆಲ್ಲುತ್ತದೆ. ಸಮೀಕ್ಷೆಯ ಆಧಾರದಲ್ಲಿ ಇದನ್ನು ಪ್ರತಿಪಾದಿಸಲಾಗಿದೆ. ಪುಸ್ತಕದ ಅಧ್ಯಾಯವೊಂದರಲ್ಲಿ ಶಿಕ್ಷಣ, ಆರೋಗ್ಯ, ಜಾತಿ ಸೇರಿದಂತೆ ವಿವಿಧ ವಿಷಯಗಳಲ್ಲಿನ ಅಸಮಾನತೆ ಹಾಗೂ ಅದರ ಅಪಾಯದ ಕುರಿತು ಚರ್ಚಿಸಲಾಗಿದೆ. ಸಾಹಿತ್ಯ ಲೋಕಕ್ಕೆ ಇದೊಂದು ಅಮೂಲ್ಯ ಗ್ರಂಥ. ಇದು ಕಾಲೇಜುಗಳಲ್ಲಿ ಬೋಧಿಸಲು ಯೋಗ್ಯವಾದ ಕೃತಿಯಾಗಿದೆ' ಎಂದರು.

ಪುಸ್ತಕ ಸಂಪಾದನೆ ಮಾಡಿರುವ ಪ್ರೊ.ನರೇಂದ್ರ ಪಾಣಿ, 'ಅಸಮಾನತೆ ಪ್ರಕ್ರಿಯೆ, ರೂಪಾಂತರ ಪ್ರಕ್ರಿಯೆ, ದುರ್ಬಲತೆ ಹಾಗೂ ವಿಮೋಚನೆ ಸೇರಿ ವಿವಿಧ ವಿಷಯಗಳ ಕುರಿತು ಇದರಲ್ಲಿ ಚರ್ಚಿಸಲಾಗಿದೆ' ಎಂದರು.

ಮ್ಯಾಚ್ ಫಿಕ್ಸಿಂಗ್‌ಗೆ ಪಾಕ್ ನಂಟು

2019ರ ಐಪಿಎಲ್ ಟೂರ್ನಿಯಲ್ಲಿ ಬೆಟ್ಟಿಂಗ್ ಜಾಲ: ಸಿಬಿಐ

ನವದೆಹಲಿ (ಪಿಟಿಐ): ಪಾಕಿಸ್ತಾನದಿಂದ ಪಡೆದ 'ಮಾಹಿತಿ' ಆಧರಿಸಿ ಭಾರತದಲ್ಲಿ ಜಾಲವೊಂದು 2019ರ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಮ್ಯಾಚ್ ಫಿಕ್ಸಿಂಗ್ ಮತ್ತು ಬೆಟ್ಟಿಂಗ್ ನಡೆಸಿದ ಅನುಮಾನದ ಮೇಲೆ ಕೇಂದ್ರ ತನಿಖಾ ಸಂಸ್ಥೆಯು (ಸಿಬಿಐ) ಏಳು ಮಂದಿ ಶಂಕಿತ ಬುಕ್ಕಿಗಳ ವಿರುದ್ಧ ಪ್ರಕರಣ ದಾಖಲಿಸಿದೆ.

ಎರಡು ಪ್ರತ್ಯೇಕ ಎಫ್‌ಐಆರ್‌ಗಳನ್ನು ದಾಖಲಿಸಿರುವ ಸಿಬಿಐ ದೇಶದೆಲ್ಲೆಡೆ ತನಿಖೆ ನಡೆಸುತ್ತಿದೆ. ನವದೆಹಲಿಯ ಏಳು ಸ್ಥಳಗಳು, ಹೈದರಾಬಾದ್, ಜೋಧಪುರ ಮತ್ತು ಜೈಪುರ ನಗರಗಳಲ್ಲಿ ಶೋಧಕಾರ್ಯ ನಡೆಸಿದೆ.

'ಪಾಕಿಸ್ತಾನದಿಂದ ಪಂದ್ಯಗಳ ಫಲಿತಾಂಶದ ಕುರಿತು ಬರುತ್ತಿದ್ದ ಮಾಹಿತಿಗಳನ್ನು ಆಧರಿಸಿ ಭಾರತದಲ್ಲಿ ಜನರನ್ನು ಬೆಟ್ಟಿಂಗ್ ನಡೆಸಲು ಜಾಲಗಳು ಪ್ರಚೋದಿಸುತ್ತಿದ್ದವು. ಈ ಪೈಕಿ ಒಂದು ಜಾಲವು 2010ರಿಂದ ಹಾಗೂ ಇನ್ನೊಂದು 2013ರಿಂದ ರಾಜಸ್ಥಾನದಿಂದ ಕಾರ್ಯನಿರ್ವಹಿಸುತ್ತಿವೆ' ಎಂದು ಸಿಬಿಐ ಎಫ್‌ಐಆರ್‌ನಲ್ಲಿ ಉಲ್ಲೇಖಿಸಿದೆ.

ದೆಹಲಿಯ ರೋಹಿಣಿ ಪ್ರದೇಶದ ದಿಲೀಪ್ ಕುಮಾರ್, ಹೈದರಾಬಾದಿನ ಗುರಮ್ ವಾಸು ಮತ್ತು ಗುರಮ್ ಸತೀಶ್ ಅವರ ವಿರುದ್ಧ ಒಂದು, ರಾಜಸ್ಥಾನದ ಸಜ್ಜನ್ ಸಿಂಗ್, ಪ್ರಭುಲಾಲ್ ಮೀನಾ, ರಾಮ ಅವತಾರ್ ಮತ್ತು ಅಮಿತ್ ಕುಮಾರ್ ಶರ್ಮಾ ಅವರ ವಿರುದ್ಧ ಎರಡನೇ ಎಫ್‌ಐಆರ್ ಅನ್ನು ಸಿಬಿಐ ದಾಖಲಿಸಿದೆ.

'ಆರೋಪಿಗಳು ನಕಲಿ ವಿಳಾಸ ಮತ್ತು ದಾಖಲೆಗಳನ್ನು (ಕೆವೈಸಿ) ನೀಡಿ ಬ್ಯಾಂಕ್ ಖಾತೆಗಳನ್ನು ತೆರೆದಿದ್ದರು. ಖಾತೆಗಳನ್ನು ತೆರೆಯುವಾಗ ಎರಡಕ್ಕಿಂತ ಹೆಚ್ಚು ಜನ್ಮದಿನಾಂಕಗಳನ್ನು ದಾಖಲಿಸಿಕೊಂಡಿದ್ದಾರೆ. ಈ ಕುರಿತು ಸಮರ್ಪಕ ಪರಿಶೀಲನೆಯನ್ನು ಮಾಡದ ಬ್ಯಾಂಕ್‌ಗಳ ಅಧಿಕಾರಿಗಳೂ ಶಾಮೀಲಾಗಿರುವ ಸಾಧ್ಯತೆ ಇದೆ. ಭಾರತದಲ್ಲಿ ಬೆಟ್ಟಿಂಗ್‌ನಿಂದ ಸಂಗ್ರಹವಾದ ಹಣದ ಒಂದಿಷ್ಟು ಭಾಗವನ್ನು ಹವಾಲಾದಲ್ಲಿ ತೊಡಗಿಸಲಾಗುತ್ತಿತ್ತು' ಎಂದೂ ಉಲ್ಲೇಖಿಸಲಾಗಿದೆ.

ಆರೋಪಿ ದಿಲೀಪ್ ಕುಮಾರ್ ಬ್ಯಾಂಕ್ ಖಾತೆಗಳನ್ನು ಹೊಂದಿದ್ದು 2013ರಿಂದ 43 ಲಕ್ಷ ಹಣವನ್ನು ಡೆಪಾಸಿಟ್ ಮಾಡಿದ್ದ ಮಾಹಿತಿ ಲಭ್ಯವಾಗಿದೆ. ಮತ್ತೊಬ್ಬ ಆರೋಪಿ ಗುರಮ್ ಸತೀಶ್ ಆರು ಖಾತೆಗಳನ್ನು ಹೊಂದಿದ್ದು, ₹ 4.55 ಕೋಟಿ (ಸ್ಥಳೀಯ) ಮತ್ತು ₹ 3.05 ಲಕ್ಷ (ವಿದೇಶಿ) ವಹಿವಾಟು ಮಾಡಿದ ಮಾಹಿತಿ ಇದೆ. 2012–20ರ ಅವಧಿಯಲ್ಲಿ ಈ ವಹಿವಾಟು ನಡೆದಿದೆ. ಗುರಮ್ ವಾಸು ಖಾತೆಯ ಮೂಲಕವೂ ಇದೇ ಅವಧಿಯಲ್ಲಿ ₹ 5.37 ಕೋಟಿ ವಹಿವಾಟು ನಡೆದಿದೆ.

ರಾಜಸ್ಥಾನದಲ್ಲಿರುವ ರಾಮ ಅವತಾರ್, ಶರ್ಮಾ, ಸಿಂಗ್ ಮತ್ತು ಮೀನಾ ಅವರ ಗುಂಪಿಗೆ ಪಾಕ್ ಮೂಲದ ದೂರವಾಣಿ ಸಂಖ್ಯೆಯ ಸಂಪರ್ಕವಿರುವುದು ತಿಳಿದುಬಂದಿದೆ. ಆರೋಪಿ ಸಿಂಗ್ ಯುಕೊ ಬ್ಯಾಂಕ್‌ನಲ್ಲಿ ಮೂರು ಪ್ರತ್ಯೇಕ ಜನ್ಮದಿನಾಂಕಗಳ ದಾಖಲೆ ನೀಡಿ ಖಾತೆಗಳನ್ನು ಆರಂಭಿಸಿರುವ ಮಾಹಿತಿಯನ್ನೂ ಸಿಬಿಐ ಉಲ್ಲೇಖಿಸಿದೆ.

ಮುಖ್ಯಾಂಶಗಳು

- 2019ರ ಐಪಿಎಲ್‌ನಲ್ಲಿ ಮ್ಯಾಚ್ ಫಿಕ್ಸಿಂಗ್
- ಏಳು ಬುಕ್ಕಿಗಳ ವಿರುದ್ಧ ಎಫ್‌ಐಆರ್

ಐಪಿಎಲ್ ಬೆಟ್ಟಿಂಗ್: ಮೂವರ ಬಂಧನ

ಬೆಂಗಳೂರು: ಐಪಿಎಲ್ ಕ್ರಿಕೆಟ್ ಪಂದ್ಯಗಳ ಮೇಲೆ ಬೆಟ್ಟಿಂಗ್ ನಡೆಸುತ್ತಿದ್ದ ಮೂವರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಕಲಾಸಿಪಾಳ್ಯ ಹಾಗೂ ಬಸವನಗುಡಿ ಠಾಣೆ ವ್ಯಾಪ್ತಿಯಲ್ಲಿ ಪ್ರತ್ಯೇಕವಾಗಿ ಕಾರ್ಯಾಚರಣೆ ನಡೆಸಿ ಮೂವರನ್ನು ಬಂಧಿಸಲಾಗಿದೆ. ಅವರಿಂದ ₹ 7 ಲಕ್ಷ ನಗದು ಹಾಗೂ ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಐಪಿಎಲ್ ಆರಂಭವಾದ ದಿನದಿಂದಲೂ ಆರೋಪಿಗಳು ಬೆಟ್ಟಿಂಗ್ ನಡೆಸುತ್ತಿದ್ದರು. ಸೋತವರಿಂದ ಹಣ ಪಡೆದು ಗೆದ್ದವರಿಗೆ ಕೊಡುತ್ತಿದ್ದರು. ಕಮಿಷನ್ ಸಹ ಪಡೆಯುತ್ತಿದ್ದರು' ಎಂದೂ ತಿಳಿಸಿದರು. 'ಮಿನರ್ವ ವೃತ್ತದಲ್ಲಿ ಮೇ 13ರಂದು ಆರೋಪಿ, ಪಂಜಾಬ್ ಕಿಂಗ್ಸ್ ಹಾಗೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ಪಂದ್ಯಗಳ ಮೇಲೆ ಬೆಟ್ಟಿಂಗ್ ನಡೆಸಲು ಜನರಿಂದ ಹಣ ಪಡೆಯುತ್ತಿದ್ದರು. ಇನ್ನಿಬ್ಬರು ಆರೋಪಿಗಳು, ಬಸವನಗುಡಿಯ ಡಿವಿಜಿ ರಸ್ತೆಯಲ್ಲಿ ಜನರಿಂದ ಹಣ ಕಟ್ಟಿಸಿಕೊಳ್ಳುತ್ತಿದ್ದರು. 2 ಕಡೆಯಲ್ಲೂ ಪ್ರತ್ಯೇಕ ದಾಳಿ ಮಾಡಿ ಆರೋಪಿಗಳನ್ನು ಬಂಧಿಸಿ, ಅವರ ವಿರುದ್ಧ ಪ್ರತ್ಯೇಕ ಎಫ್‌ಐಆರ್ ದಾಖಲಿಸಲಾಗಿದೆ' ಎಂದರು.

ಮಾಣಿಕ್ ಸಾಹಾ ತ್ರಿಪುರಾದ ನೂತನ ಸಿ.ಎಂ: ಪಕ್ಷದಲ್ಲಿ ಭಿನ್ನಮತ

ಮಾಣಿಕ್ ಸಾಹಾ

ಅಗರ್ತಲಾ(ಪಿಟಿಐ): ತ್ರಿಪುರಾದಲ್ಲಿ ಶನಿವಾರ ನಡೆದ ಅಚ್ಚರಿಯ ಬೆಳವಣಿಗೆಯಲ್ಲಿ ಮುಖ್ಯಮಂತ್ರಿ ಬಿಪ್ಲವ್ ಕುಮಾರ್ ದೇವ್ ರಾಜೀನಾಮೆ ನೀಡಿದ್ದು, ಬಿಜೆಪಿಯ ರಾಜ್ಯಸಭಾ ಸದಸ್ಯ ಮಾಣಿಕ್ ಸಾಹಾ ನೂತನ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿದ್ದಾರೆ. ಅವರು ಭಾನುವಾರ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಮುಖ್ಯಮಂತ್ರಿಯ ಅಧಿಕೃತ ನಿವಾಸದಲ್ಲಿ ಸಂಜೆ ನಡೆದ ತುರ್ತು ಸಭೆಯಲ್ಲಿ ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷರೂ ಆದ ಮಾಣಿಕ್ ಸಾಹಾ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದರು.

ನವದೆಹಲಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ಭೇಟಿಯಾದ ಮರುದಿನವೇ 50 ವರ್ಷದ ದೇವ್ ಮುಖ್ಯಮಂತ್ರಿ ಸ್ಥಾನ ತೊರೆದಿದ್ದಾರೆ.

'ಶಾಸಕಾಂಗ ಪಕ್ಷದ ನಾಯಕರನ್ನಾಗಿ 69 ವರ್ಷದ ಮಾಣಿಕ್ ಸಾಹಾ ಹೆಸರನ್ನು ದೇವ್ ಅವರು ಪ್ರಸ್ತಾಪಿಸುತ್ತಿದ್ದಂತೆ, ಸಚಿವ ರಾಮ್ ಪ್ರಸಾದ್ ಪಾಲ್ ವಿರೋಧಿಸಿದರು. ಇದು ಶಾಸಕರ ನಡುವೆ ವಾಗ್ವಾದಕ್ಕೂ ಕಾರಣವಾಯಿತು. ಪರಿಸ್ಥಿತಿ ತಿಳಿಯಾಗುವ ಮೊದಲು ರಾಮ್ ಪ್ರಸಾದ್ ಪಾಲ್ ಕುರ್ಚಿಗಳನ್ನು ಮುರಿದು ಆಕ್ರೋಶ ವ್ಯಕ್ತಪಡಿಸಿದರು' ಎಂದು ಮೂಲಗಳು ತಿಳಿಸಿವೆ.

'ತ್ರಿಪುರಾ ರಾಜಮನೆತನದ, ಉಪಮುಖ್ಯಮಂತ್ರಿ ಜಿಷ್ಣು ದೇವ್ ವರ್ಮಾ ಅವರು ಮುಂದಿನ ಮುಖ್ಯಮಂತ್ರಿಯಾಗಬೇಕೆಂದು ಪಾಲ್ ಬಯಸಿದ್ದರು' ಎಂದು ಮೂಲಗಳು ಹೇಳಿವೆ.

ಸುದ್ದಿಗಾರರೊಂದಿಗೆ ಮಾತನಾಡಿದ ಮಾಣಿಕ್ ಸಾಹಾ 'ನಾನು ಪಕ್ಷದ ಸಾಮಾನ್ಯ ಕಾರ್ಯಕರ್ತನಾಗಿದ್ದೆ. ಹಾಗೆಯೇ ಮುಂದುವರಿಯುತ್ತೇನೆ' ಎಂದರು.

ನಗರದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಶನಿವಾರ ನಡೆದ 2022–23ನೇ ಸಾಲಿನ 'ಮುಂಗಾರು ಹಂಗಾಮು' ಕಾರ್ಯಾಗಾರವನ್ನು ಕೃಷಿ ಸಚಿವ ಬಿ.ಸಿ. ಪಾಟೀಲ್ ಉದ್ಘಾಟಿಸಿದರು. ಕೃಷಿ ಇಲಾಖೆಯ ಕಾರ್ಯದರ್ಶಿ ಶಿವಯೋಗಿ ಕಳಸದ ಇದ್ದರು.

ಲಾಂಗ್‌ನಿಂದ ಹೊಡೆದು ಯುವಕನ ಕೊಲೆ

ಹಿರೀಸಾವೆ: ಹೋಬಳಿಯ ಚೋಳಂಬಳಿಯ ವೆಂಕಟರಮಣ ಅರಳಿಕಟ್ಟೆ ವೃತ್ತದ ಬಳಿ ಶುಕ್ರವಾರ ರಾತ್ರಿ ಕಮರವಳ್ಳಿಯ ಸುದೀಪ (25) ಎಂಬುವರ ತಲೆಗೆ ಸುತ್ತಿಗೆ ಹಾಗೂ ಲಾಂಗ್‌ನಿಂದ ಹೊಡೆದು ಕೊಲೆ ಮಾಡಲಾಗಿದೆ.

ಸುದೀಪ ಸ್ನೇಹಿತ ಮಂಜುನಾಥ್ ಜೊತೆ ಹಿರೀಸಾವೆಯಿಂದ ಸ್ವಗ್ರಾಮಕ್ಕೆ ಬೈಕ್‌ನಲ್ಲಿ ಬರುವಾಗ ಹಿಂದಿನಿಂದ ಬಂದ ಕಾರು ಡಿಕ್ಕಿ ಹೊಡೆದಿದೆ. ಕಾರಿನಿಂದ ಇಳಿದ ಮೂವರು ದುಷ್ಕರ್ಮಿಗಳು, ಓಡಿ ಹೋಗುವಂತೆ ಮಂಜುನಾಥ್‌ಗೆ ಸೂಚಿಸಿದ್ದಾರೆ. ಸುದೀಪ ತಲೆಗೆ ಸುತ್ತಿಗೆ ಮತ್ತು ಲಾಂಗ್‌ನಿಂದ ಹೊಡೆದು ಕೊಲೆ ಮಾಡಿದ್ದಾರೆ' ಎಂದು ಹಿರೀಸಾವೆ ಠಾಣೆ ಎಸ್‌ಐ ಶ್ರೀನಿವಾಸ್ ತಿಳಿಸಿದರು.

ಕಳೆದ ವರ್ಷ ಬೆಂಗಳೂರಿನ ರೌಡಿ ಲಿಂಗರಾಜು ಎಂಬಾತನನ್ನು ಕಮರವಳ್ಳಿಯ ತೋಟದ ಮನೆಯಲ್ಲಿ ಕೊಲೆ ಮಾಡಲಾಗಿತ್ತು. ಲಿಂಗರಾಜು ತೋಟದ ಮನೆಯಲ್ಲಿರುವ ಮಾಹಿತಿಯನ್ನು ಸುದೀಪ ಕೊಲೆ ಆರೋಪಿಗಳಿಗೆ ತಿಳಿಸಿದ್ದರು. ಈ ಪ್ರಕರಣದಲ್ಲಿ 10ನೇ ಆರೋಪಿಯಾಗಿದ್ದ ಸುದೀಪ 6 ತಿಂಗಳು ಜೈಲಿನಲ್ಲಿದ್ದರು. ಮೇ 12ರಂದು ಪ್ರಕರಣ ಖುಲಾಸೆಯಾಗಿತ್ತು.

ಗೋಧಿ ರಫ್ತಿಗೆ ಕೇಂದ್ರ ನಿಷೇಧ

ಒಂದನೇ ಪುಟದಿಂದ

ಬೇರೆ ದೇಶಗಳ ಆಹಾರ ಸುರಕ್ಷತೆಗೆ ಮತ್ತು ಆಯಾ ಸರ್ಕಾರಗಳ ಮನವಿಯ ಮೇರೆಗೆ ಭಾರತ ಸರ್ಕಾರದ ಅನುಮತಿ ಪಡೆದು ರಫ್ತು ಮಾಡಬಹುದು ಎಂದೂ ತಿಳಿಸಿದೆ.

ಗೋಧಿ ದಾಸ್ತಾನು ಅಗತ್ಯ ಪ್ರಮಾಣದಲ್ಲಿ ಇದೆ ಎಂದು ಕೇಂದ್ರವು ಸ್ಪಷ್ಟಪಡಿಸಿದೆ. ಒಂದು ವರ್ಷದಲ್ಲಿ ದೇಶದ ದಕ್ಷಿಣ ವಲಯದಲ್ಲಿ ಗೋಧಿ ಬೆಲೆ ಏರಿಕೆಯು ಅತಿಹೆಚ್ಚು (ಶೇಕಡ 33ರಷ್ಟು) ಎಂದು ತಿಳಿಸಿದೆ.

ಈರುಳ್ಳಿ ಬೀಜಗಳ ರಫ್ತು ನೀತಿಯಲ್ಲಿ ಬದಲಾವಣೆ ತಂದಿದ್ದು, ತಕ್ಷಣದಿಂದ ಜಾರಿಗೆ ಬರುವಂತೆ ಅದನ್ನು 'ನಿರ್ಬಂಧಿತ' ವಿಭಾಗಕ್ಕೆ ಸೇರಿಸಲಾಗಿದೆ. ಈ ಮೊದಲು ಈರುಳ್ಳಿ ಬೀಜಗಳ ರಫ್ತು ನಿಷೇಧಿಸಲಾಗಿತ್ತು.

ರಷ್ಯಾ–ಉಕ್ರೇನ್ ಸಂಘರ್ಷದಿಂದಾಗಿ ಜಾಗತಿಕ ಮಟ್ಟದಲ್ಲಿ ಗೋಧಿ ಪೂರೈಕೆಗೆ ಅಡ್ಡಿ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಗೋಧಿ ರಫ್ತು ನಿಷೇಧ ನಿರ್ಧಾರ ತೆಗೆದುಕೊಂಡಿದೆ.

ಗೋಧಿ ರಫ್ತು ಹೆಚ್ಚಿಸಲು ಮೊರಕ್ಕೊ, ಟ್ಯುನಿಷಿಯಾ, ಇಂಡೊನೇಷ್ಯಾ, ಥಾಯ್ಲೆಂಡ್, ವಿಯೆಟ್ನಾಂ, ಟರ್ಕಿ, ಅಲ್ಜೀರಿಯಾ ಮತ್ತು ಲೆಬನಾನ್ ದೇಶಗಳಿಗೆ ವ್ಯಾಪಾರ ನಿಯೋಗ ಕಳುಹಿಸುವುದಾಗಿ ವಾಣಿಜ್ಯ ಸಚಿವಾಲಯ ಈಚೆಗಷ್ಟೇ ಹೇಳಿತ್ತು.

ರಫ್ತಿಗೆ ಬೇಡಿಕೆ ಹೆಚ್ಚಾಗಿದ್ದರಿಂದ ವರ್ತಕರು ಕನಿಷ್ಠ ಬೆಂಬಲ ಬೆಲೆಗಿಂತಲೂ ಹೆಚ್ಚಿನ ದರಕ್ಕೆ ಗೋಧಿ ಖರೀದಿಸಿದ್ದಾರೆ. ಹೀಗಾಗಿ ಪ್ರಸಕ್ತ ಹಿಂಗಾರು ಮಾರುಕಟ್ಟೆ ಅವಧಿಯಲ್ಲಿ ಮೇ 1ರವರೆಗಿನ ಮಾಹಿತಿಯಂತೆ, ಸರ್ಕಾರವು ಗೋಧಿ ಖರೀದಿಸುವ ಪ್ರಮಾಣವು ಶೇಕಡ 44ರಷ್ಟು ಇಳಿಕೆ ಆಗಿ 1.62 ಕೋಟಿ ಟನ್‌ಗೆ ತಲುಪಿದೆ. ಹಿಂದಿನ ಮಾರುಕಟ್ಟೆ ಅವಧಿಯಲ್ಲಿ ಸರ್ಕಾರವು 2.88 ಕೋಟಿ ಟನ್ ಗೋಧಿ ಖರೀದಿಸಿತ್ತು.

2022–23ನೇ ಮಾರುಕಟ್ಟೆ ವರ್ಷದಲ್ಲಿ ಒಟ್ಟಾರೆ 4.44 ಕೋಟಿ ಟನ್ ಗೋಧಿ ಸಂಗ್ರಹಿಸಲು ಸರ್ಕಾರ ಮುಂದಾಗಿದೆ. 2021–22ನೇ ಮಾರುಕಟ್ಟೆ ವರ್ಷದಲ್ಲಿ ಸಾರ್ವಕಾಲಿಕ ದಾಖಲೆಯ 4.33 ಕೋಟಿ ಟನ್ ಗೋಧಿ ಸಂಗ್ರಹ ಆಗಿತ್ತು. 2021–22ರ ಬೆಳೆ ವರ್ಷದಲ್ಲಿ 11.13 ಕೋಟಿ ಟನ್ ಉತ್ಪಾದನೆ ಗುರಿ ಇಟ್ಟುಕೊಳ್ಳಲಾಗಿದೆ.

ಕೃತ್ಯ ನಡೆದ 16 ದಿನಗಳ ಬಳಿಕ ಸಿಕ್ಕಿಬಿದ್ದ ನಾಗೇಶ್ ಬಾಬು

ಆ್ಯಸಿಡ್ ಗಾಯದಿಂದ ಆರೋಪಿ ಸುಳಿವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವತಿ ಮೇಲೆ ಆ್ಯಸಿಡ್ ಎರಚಿ ಪರಾರಿಯಾಗಿದ್ದ ಆರೋಪಿ ನಾಗೇಶ ಬಾಬು (30), ಕೈಯಲ್ಲಿ ಆ್ಯಸಿಡ್‌ನಿಂದಾಗಿ ಆಗಿದ್ದ ಗಾಯದಿಂದಾಗಿ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾನೆ.

'ಆರೋಪಿ ಪತ್ತೆಗೆ 10 ವಿಶೇಷ ತಂಡ ರಚಿಸಲಾಗಿತ್ತು. ಘಟನೆ ನಡೆದು 16 ದಿನಗಳ ಬಳಿ ಆರೋಪಿ ಸಿಕ್ಕಿಬಿದ್ದಿದ್ದು, ಆತನನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಬೇಕಿದೆ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ ಹೇಳಿದರು.

'ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯ ಸುಂಕದಕಟ್ಟೆಯಲ್ಲಿರುವ ಫೈನಾನ್ಸ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಯುವತಿ ಮೇಲೆ ಆರೋಪಿ ಆ್ಯಸಿಡ್ ಎರಚಿದ್ದ. ಆತನ ಬಲಗೈ ಮೇಲೂ ಆ್ಯಸಿಡ್ ಬಿದ್ದಿತ್ತು. ಅದೇ ಸ್ಥಿತಿಯಲ್ಲೇ ಆರೋಪಿ ನಗರದಿಂದ ಪರಾರಿಯಾಗಿದ್ದ.'

'ಕೃತ್ಯದ ನಂತರ ಶರಣಾಗಲೆಂದು ಆರೋಪಿ ನ್ಯಾಯಾಲಯಕ್ಕೆ ಹೋಗಿದ್ದ. ಆದರೆ, ವಕಾಲತ್ತು ವಹಿಸಲು ವಕೀಲರು ಒಪ್ಪಿರಲಿಲ್ಲ. ಆಗ, ಆಟೊದಲ್ಲಿ ಹೊಸಕೋಟೆಗೆ ಆರೋಪಿ ಹೋಗಿದ್ದ. ಅಲ್ಲಿಂದ ತಿರುಪತಿಗೆ ಹೋಗಲೆಂದು ಬಸ್ ಹತ್ತಿದ್ದ. ತಿರುಪತಿ ಬೇಡವೆಂದು ಮಾಲೂರಿನಲ್ಲೇ ಇಳಿದಿದ್ದ. ತಮಿಳುನಾಡು ಬಸ್ ಹತ್ತಿ, ತಿರುವಣ್ಣಾಮಲೈಗೆ ಹೋಗಿದ್ದ' ಎಂದೂ ತಿಳಿಸಿದರು.

'ಅನಾಥನೆಂದು ಹೇಳಿಕೊಂಡಿದ್ದ ಆರೋಪಿ, ಹೊಸೂರಿನ ನಿವಾಸಿಯೆಂದು ಹೆಸರು ನಮೂದಿಸಿ ಶಿವ ದೇವಸ್ಥಾನದ ಆಶ್ರಮಕ್ಕೆ ಸೇರಿದ್ದ. ಅಲ್ಲಿಯೇ ಕೊಠಡಿಯೊಂದರಲ್ಲಿ ಉಳಿದುಕೊಂಡಿದ್ದ. ಸ್ವಾಮೀಜಿ ರೀತಿಯಲ್ಲಿ ಬಟ್ಟೆ ಹಾಕಿಕೊಂಡು, ನಿತ್ಯವೂ ಧ್ಯಾನ ಮಾಡಲಾರಂಭಿಸಿದ್ದ' ಎಂದೂ ಹೇಳಿದರು.

ಗಾರ್ಮೆಂಟ್ಸ್ ಕಾರ್ಖಾನೆ ನೌಕರ ನೀಡಿದ್ದ ಮಾಹಿತಿ: 'ಆಶ್ರಮದಲ್ಲಿದ್ದ ನಾಗೇಶ್‌ನನ್ನು ಸ್ಥಳೀಯರು ಸ್ವಾಮೀಜಿ ಎಂದೇ ತಿಳಿದಿದ್ದರು. ಪರಾರಿಯಾಗಿದ್ದ ನಾಗೇಶ್‌ನ ಫೋಟೊ ಸಮೇತ ಎಲ್ಲ ಭಾಷೆಗಳಲ್ಲಿ ಕರಪತ್ರಗಳನ್ನು ಮುದ್ರಿಸಿ ಹಂಚಿದ್ದೆವು. ಕರಪತ್ರ ನೋಡಿದ್ದ ತಿರುವಣ್ಣಾಮಲೈನ ಗಾರ್ಮೆಂಟ್ಸ್ ಕಾರ್ಖಾನೆಯೊಂದರ ನೌಕರ ಕಾಮಾಕ್ಷಿಪಾಳ್ಯ ಪೊಲೀಸರಿಗೆ ಕರೆ ಮಾಡಿದ್ದರು. 'ಕರಪತ್ರದಲ್ಲಿರುವ ವ್ಯಕ್ತಿಗೆ ಹೋಲಿಕೆಯಾಗುವ ಸ್ವಾಮೀಜಿಯೊಬ್ಬರು ಇಲ್ಲಿದ್ದಾರೆ' ಎಂಬ ಮಾಹಿತಿ ನೀಡಿದ್ದರು' ಎಂದು ಡಿಸಿಪಿ ಸಂಜೀವ್ ಪಾಟೀಲ ತಿಳಿಸಿದರು.

'ಭಕ್ತರ ವೇಷದಲ್ಲಿ ಆಶ್ರಮಕ್ಕೆ ಹೋಗಿದ್ದ ಪೊಲೀಸರು, ಆರಂಭದಲ್ಲಿ ನಾಗೇಶ್ ಮೇಲೆ ನಿಗಾ ವಹಿಸಿದ್ದರು. ಆತನ ಜೊತೆಯಲ್ಲೇ ಧ್ಯಾನ ಹಾಗೂ ಜಪ ಸಹ ಮಾಡಿದ್ದರು. ಆತನ ಕೈ ಮೇಲಿದ್ದ ಗಾಯವನ್ನು ಗಮನಿಸಿ ಖಾತ್ರಿಪಡಿಸಿಕೊಂಡಿದ್ದರು. ನಂತರವೇ, ನಾಗೇಶ್‌ನನ್ನು ಬಂಧಿಸಿದ್ದರು. ಇದಕ್ಕೆ ಕೆಲ ಸ್ಥಳೀಯರು ವಿರೋಧಿಸಿದ್ದರು. ಆ್ಯಸಿಡ್ ಪ್ರಕರಣದ ಬಗ್ಗೆ ತಿಳಿಸಿದಾಗ, ಎಲ್ಲರೂ ಸಹಕರಿಸಿದರು' ಎಂದೂ ಹೇಳಿದರು.

ಆತ್ಮಹತ್ಯೆಗೂ ತೀರ್ಮಾನ: 'ಕೃತ್ಯ ನಂತರ ಆತ್ಮಹತ್ಯೆ ಮಾಡಿಕೊಳ್ಳಲು ಆರೋಪಿ ತೀರ್ಮಾನಿಸಿದ್ದ. ಹೊಸಕೋಟೆ ಕೆರೆ ಬಳಿ ಹೋಗಿದ್ದ. ಅಲ್ಲಿಯೇ ಕೆಲ ಹೊತ್ತು ಕುಳಿತುಕೊಂಡಿದ್ದ. ತೀರ್ಮಾನ ಬದಲಿಸಿ, ಅಲ್ಲಿಂದ ಹೊರಟಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಕಂಪನಿ ಹೆಸರಿನಲ್ಲಿ ಆ್ಯಸಿಡ್ ಖರೀದಿ'

'ಕಂಪನಿಯೊಂದರ ಲೇಟರ್ ಹೆಡ್ ಬಳಸಿಕೊಂಡು ಏಪ್ರಿಲ್ 20ರಂದೇ ಆರೋಪಿ ನಾಗೇಶ್, ಆ್ಯಸಿಡ್ ಖರೀದಿಸಿದ್ದ' ಎಂದು ಪೊಲೀಸರು ಹೇಳಿದರು.

'ಏಪ್ರಿಲ್ 27ರಂದು ರಾತ್ರಿ ಯುವತಿಯನ್ನು ರಸ್ತೆಯಲ್ಲಿ ಅಡ್ಡಗಟ್ಟಿದ್ದ ಆರೋಪಿ, 'ನನ್ನನ್ನು ಪ್ರೀತಿಸು. ಇಲ್ಲದಿದ್ದರೆ, ಆ್ಯಸಿಡ್ ಹಾಕುತ್ತೇನೆ' ಎಂದು ಬೆದರಿಸಿದ್ದ. ತಪ್ಪಿಸಿಕೊಂಡು ಹೋಗಿದ್ದ ಯುವತಿ, ತಂದೆಗೆ ವಿಷಯ ತಿಳಿಸಿದ್ದರು. ನಾಗೇಶ್‌ನ ಸಹೋದರನಿಗೆ ಕರೆ ಮಾಡಿದ್ದ ತಂದೆ, ಮಗಳ ತಂಟೆಗೆ ಬಾರದಂತೆ ಎಚ್ಚರಿಕೆ ನೀಡುವಂತೆ ಹೇಳಿದ್ದರು.'

'ನಾಗೇಶ್‌ನಿಗೆ ಬುದ್ಧಿ ಹೇಳಿದ್ದ ಸಹೋದರ ಈ ಬಗ್ಗೆ ಎಚ್ಚರಿಕೆಯನ್ನೂ ನೀಡಿದ್ದರು. ಅಷ್ಟಕ್ಕೆ ಕೋಪಗೊಂಡ ಆರೋಪಿ, ಆ್ಯಸಿಡ್ ಹಾಕಿಯೇ ತೀರುತ್ತೇನೆಂದು ಕೂಗಾಡಿದ್ದ. ಏಪ್ರಿಲ್ 28ರಂದು ಯುವತಿ ಮೇಲೆ ಆ್ಯಸಿಡ್ ಎರಚಿದ್ದ. ಈ ಬಗ್ಗೆ ಆತ ತಪ್ಪೊಪ್ಪಿಕೊಂಡಿದ್ದಾನೆ' ಎಂದೂ ತಿಳಿಸಿದರು.

'ಕೆಲ ವರ್ಷಗಳ ಹಿಂದೆಯೂ ಆರೋಪಿ ಆ್ಯಸಿಡ್ ಖರೀದಿಸಿದ್ದ ಬಗ್ಗೆ ಮಾಹಿತಿ ಇದೆ. ಅದನ್ನು ಪರಿಶೀಲಿಸಲಾಗುತ್ತಿದೆ' ಎಂದೂ ಹೇಳಿದರು.

ವಿಷಾನಿಲ ಸೋರಿಕೆ: ವರದಿ ಸಲ್ಲಿಸಲು ಡಿ.ಸಿ ಸೂಚನೆ

ಮಂಡ್ಯ: ತಾಲ್ಲೂಕಿನ ಕಾರೇಕಟ್ಟೆ ಗ್ರಾಮದ ಕೀರ್ತಿ ರಾಸಾಯನಿಕ ಕಾರ್ಖಾನೆ ವಿಷಾನಿಲ ಸೋರಿಕೆ ಪ್ರಕರಣದಲ್ಲಿ ಬೆಳೆ ನಷ್ಟ ಅನುಭವಿಸಿದ ರೈತರಿಗೆ ಪರಿಹಾರ ನೀಡುವ ಸಂಬಂಧ ಜಂಟಿ ಸಮೀಕ್ಷೆ ನಡೆಸಿ ವಾರದೊಳಗೆ ವರದಿ ಸಲ್ಲಿಸುವಂತೆ ಜಿಲ್ಲಾಧಿಕಾರಿ ಎಸ್.ಅಶ್ವತಿ, ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜ.15ರಂದು ಕಾರ್ಖಾನೆಯಲ್ಲಿ ವಿಷಾನಿಲ ಸೋರಿಕೆಯುಂಟಾಗಿ 12–15 ಎಕರೆ ಜಮೀನಿನಲ್ಲಿದ್ದ ಭತ್ತ, ಕಬ್ಬು, ತರಕಾರಿ ಬೆಳೆ, ತೆಂಗು, ನೀಲಗಿರಿ ಮರ, 20 ಎಕರೆಗೂ ಹೆಚ್ಚು ಅರಣ್ಯ ಪ್ರದೇಶಕ್ಕೆ ಹಾನಿಯುಂಟಾಗಿತ್ತು. ನಷ್ಟ ಅನುಭವಿಸಿದ ರೈತರಿಗೆ ಪರಿಹಾರ ವಿತರಣೆ ಮಾಡಬೇಕು ಎಂದು ಒತ್ತಾಯಿಸಿ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು.

ಬೆಳೆ, ಅರಣ್ಯಕ್ಕೆ ಹಾನಿಯಾಗಿರುವ ಬಗ್ಗೆ ಜಂಟಿ ಸಮೀಕ್ಷೆ ನಡೆಸಿ ವರದಿ ನೀಡುವಂತೆ ಮಂಡ್ಯ ಉಪ ವಿಭಾಗಾಧಿಕಾರಿ, ತಹಶೀಲ್ದಾರ್, ಸಹಾಯಕ ಕೃಷಿ ನಿರ್ದೇಶಕರು, ಸಹಾಯಕ ತೋಟಗಾರಿಕೆ ನಿರ್ದೇಶಕರು ಹಾಗೂ ವಲಯ ಅರಣ್ಯಾಧಿಕಾರಿಗಳಿಗೆ ಜಿಲ್ಲಾಧಿಕಾರಿ ಸೂಚಿಸಿದ್ದಾರೆ.

'ಆ.9ಕ್ಕೆ ಎಲ್ಲರ ಮನೆಯಲ್ಲಿ ರಾಷ್ಟ್ರಧ್ವಜ ಹಾರಲಿ'

ಒಂದನೇ ಪುಟದಿಂದ

'ಅಮೃತ ಸ್ವಾತಂತ್ರ್ಯೋತ್ಸವದ ನೆನಪಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 75 ಪುಸ್ತಕ ಪ್ರಕಟಿಸಿದೆ. ಚಿಂತನ ಸಭೆಗೆ ಬಂದವರು ಎಲ್ಲವನ್ನು ಇಲ್ಲವೇ ತಮ್ಮ ಜಿಲ್ಲೆಗೆ ಸಂಬಂಧಿಸಿದ ಕೃತಿಗಳನ್ನು ಖರೀದಿಸಬೇಕು' ಎಂದು ಸಚಿವರು ಸಭೆಯಲ್ಲಿ ಹೇಳಿದರು.

'ಮೇ 28ರಂದು ರಾಜ್ಯದ 75 ಕಡೆ ವೀರ ಸಾವರ್ಕರ್ ಜನ್ಮದಿನ ಕಾರ್ಯಕ್ರಮ ಆಯೋಜಿಸಲಾಗುವುದು. ವಿಧಾನ ಪರಿಷತ್ ಚುನಾವಣೆ ನಡೆಯುವ ಜಿಲ್ಲೆಗಳಲ್ಲಿ ಜೂನ್ 25ರಂದು ಆಚರಿಸಬೇಕು. ಪಿಯು ಮತ್ತು ಅದಕ್ಕೂ ಮೇಲಿನ ಹಂತದ ವಿದ್ಯಾರ್ಥಿಗಳು, ಗಣ್ಯರು ಎಲ್ಲರೂ ಭಾಗಿಯಾಗಬೇಕು' ಎಂದರು.

ಜೂನ್ 1ರಿಂದ 15ರ ವರೆಗೆ 'ಹೋರಾಟದ ನೆಲದಲ್ಲಿ ಒಂದು ದಿನ' ಕಾರ್ಯಕ್ರಮ ಆಚರಿಸಲಾಗುವುದು. ಹೋರಾಟ ನಡೆದಿದ್ದ 10–15 ಪ್ರಮುಖ ಸ್ಥಳಗಳನ್ನು ಗುರುತಿಸಿ ಅಲ್ಲಿಗೆ ಪಿಕ್‌ನಿಕ್ ತರಹ 50–100 ಮಂದಿಯ ತಂಡ ಹೋಗಿ ಅಲ್ಲಿ ಅರ್ಧ ದಿನ ಕಾಲ ಕಳೆದು ಬರುವಂತಾಗಬೇಕು ಎಂದು ಹೇಳಿದರು.

ಆ.1ರಿಂದ 8ರ ವರೆಗೆ ನಾಲ್ಕು ಕಂದಾಯ ವಿಭಾಗಗಳಲ್ಲಿ ನಾಲ್ಕು ರಥಯಾತ್ರೆಗಳು ನಡೆಯಲಿವೆ. ಎಲ್ಲ ಜಿಲ್ಲೆಗಳಲ್ಲಿ ಅವು ಸಂಚರಿಸಿ ಆ.8ಕ್ಕೆ ಬೆಂಗಳೂರಿಗೆ ತಲುಪಬೇಕು. ಆ.9ರಿಂದ11ರವರೆಗೆ ಬೆಂಗಳೂರಿನಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದರು.

ಎಸ್‌ಟಿಪಿ ನೀರಿನ ಪರೀಕ್ಷೆಯ ಫಲಿತಾಂಶದ ಆಧಾರದಲ್ಲಿ ನಡೆಯುತ್ತಿದೆ ನಿಯಂತ್ರಣ ಕಾರ್ಯ

ಕೋವಿಡ್ ಮುನ್ಸೂಚನೆ ನೀಡುವ ಶೌಚನೀರು!

• ಪ್ರವೀಣ್ ಕುಮಾರ್ ಪಿ.ವಿ.



ಬೆಂಗಳೂರು: ನಗರದ ಯಾವ ಪ್ರದೇಶದಲ್ಲಿ ಕೋವಿಡ್ ಪ್ರಮಾಣ ಹೆಚ್ಚಾಗಲಿದೆ ಎಂಬ ಬಗ್ಗೆ ಮುನ್ಸೂಚನೆ ಪಡೆಯಲು ಬಿಬಿಎಂಪಿ ವಿನೂತನ ಕಾರ್ಯತಂತ್ರದ ಮೊರೆಹೋಗಿದೆ. ಕೊಳಚೆ ನೀರನ್ನು ಶುದ್ಧೀಕರಿಸುವ ಘಟಕಗಳಲ್ಲಿ (ಎಸ್‌ಟಿಪಿ) ನೀರಿನ ಮಾದರಿಗಳನ್ನು ನಿರಂತರವಾಗಿ ಕೋವಿಡ್ ಪರೀಕ್ಷೆಗೆ ಒಳಪಡಿಸುವ ಮೂಲಕ ಕೋವಿಡ್ ಪ್ರಮಾಣದ ಮಾಹಿತಿ ಪಡೆಯಲಾಗುತ್ತಿದೆ.

ಇದು ಹೇಗೆ ಕಾರ್ಯ ನಿರ್ವಹಿಸುತ್ತದೆ. ಇದರಿಂದಾಗುವ ಪ್ರಯೋಜನಗಳೇನು ಎಂಬುದನ್ನು ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ರಾಷ್ಟ್ರೀಯ ಜೀವವಿಜ್ಞಾನ ಕೇಂದ್ರದ ಪ್ರಾಂಗಣದಲ್ಲಿ (ಎನ್‌ಸಿಬಿಎಸ್) ಕಾರ್ಯನಿರ್ವಹಿಸುತ್ತಿರುವ ಟಾಟಾ ಇನ್‌ಸ್ಟಿಟ್ಯೂಟ್ ಫಾರ್ ಜೆನೆಟಿಕ್ಸ್ ಆ್ಯಂಡ್ ಸೊಸೈಟಿಯ (ಟಿಐಜಿಎಸ್) ವಾತಾವರಣ ಸರ್ವೇಕ್ಷಣೆ ಮತ್ತು ರೋಗ ಪರಿಸರ ವಿಜ್ಞಾನ ವಿಭಾಗದ ಪ್ರಧಾನ ವಿಜ್ಞಾನಿ ಡಾ.ಫರಾ ಇಷ್ತಿಯಾಕ್ ವಿವರಿಸಿದರು.

'ಮನುಷ್ಯನ ದೇಹದಲ್ಲಿ ಕೊರೊನಾ ವೈರಾಣು ಸೇರಿಕೊಂಡ ಏಳರಿಂದ ಹತ್ತು ದಿನಗಳಲ್ಲಿ ರೋಗ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಕೆಲವರಲ್ಲಿ ರೋಗ ಲಕ್ಷಣ ಕಾಣಿಸಿಕೊಳ್ಳದೆಯೂ ಇರಬಹುದು. ದೇಹದಲ್ಲಿ ಕೊರೊನಾ ವೈರಾಣು ಇದ್ದರೆ ಅದು ಶೌಚದ ಮೂಲಕ ಎಸ್‌ಟಿಪಿಗಳನ್ನು ಸೇರುತ್ತದೆ. ಅಂತಹ ನೀರನ್ನು ಆರ್‌ಟಿಪಿಸಿಆರ್ ಪರೀಕ್ಷೆಗೆ ಒಳಪಡಿಸಿ ಕೊರೊನಾ ವೈರಾಣುವಿನ ಅಸ್ತಿತ್ವವನ್ನು ಖಚಿತವಾಗಿ ತಿಳಿದುಕೊಳ್ಳಬಹುದು' ಎಂದು ಡಾ.ಫರಾ 'ಪ್ರಜಾವಾಣಿ'ಗೆ ತಿಳಿಸಿದರು.

ಪ್ರಜಾವಾಣಿ ವಿಶೇಷ

'ನಿರ್ದಿಷ್ಟ ಪ್ರದೇಶದ ಎಸ್‌ಟಿಪಿಯ ಸಂಸ್ಕರಣೆಗೊಳಪಡುವ ಮುನ್ನ ನೀರಿನಲ್ಲಿ ಕೊರೊನಾ ವೈರಾಣುಗಳ ಸಾಂದ್ರತೆ ಹೆಚ್ಚಾಗಿ ಕಂಡು ಬಂದರೆ, ಅದು ಆ ಪರಿಸರದಲ್ಲಿ ರೋಗ ಹರಡುತ್ತಿರುವುದರ ಮುನ್ಸೂಚನೆ. ಅಂತಹ ವಾರ್ಡ್‌ಗಳಲ್ಲಿ ಬಿಬಿಎಂಪಿ ಕೋವಿಡ್ ಪರೀಕ್ಷೆ ಹೆಚ್ಚಿಸಬಹುದು. ನಗರದ ಪ್ರತಿಯೊಂದು ಎಸ್‌ಟಿಪಿಯ ನೀರಿನ ಮಾದರಿಗಳನ್ನು ನಿರಂತರವಾಗಿ ಕೋವಿಡ್ ಪರೀಕ್ಷೆಗೆ ಒಳಪಡಿಸುವ ಮೂಲಕ ರೋಗ ಹರಡುವಿಕೆ ಮೇಲೆ ಸುಲಭವಾಗಿ ನಿಗಾ ಇಡಬಹುದು' ಎಂದು ಅವರು ವಿವರಿಸಿದರು.



ಎಸ್‌ಟಿಪಿ ನೀರಿನ ಪರೀಕ್ಷೆ ಕೊರೊನಾ ನಿಯಂತ್ರಣದ ಶಕ್ತಿಶಾಲಿ ಕಾರ್ಯತಂತ್ರಗಳಲ್ಲೊಂದು. ಎಲ್ಲಿ ಎಷ್ಟು ಪ್ರಮಾಣದಲ್ಲಿ ರೋಗ ಹರಡುತ್ತಿದೆ ಎಂದು ಇದರಿಂದ ತಿಳಿಯಬಹುದು

ಡಾ.ರಾಕೇಶ್ ಮಿಶ್ರಾ, ಟಾಟಾ ಇನ್‌ಸ್ಟಿಟ್ಯೂಟ್ ಫಾರ್ ಜೆನೆಟಿಕ್ಸ್ ಆ್ಯಂಡ್ ಸೊಸೈಟಿಯ ನಿರ್ದೇಶಕ

ವಾರ್ಡ್ ಮಟ್ಟದಲ್ಲೂ ಎಸ್‌ಟಿಪಿ ನೀರನ್ನು ಪರೀಕ್ಷಿಸುತ್ತಿದ್ದೇವೆ. ಬೇರಲ್ಲೂ ಇಂಥ ಪ್ರಯತ್ನ ನಡೆದಿಲ್ಲ. ಕೋವಿಡ್ ನಿಯಂತ್ರಣಕ್ಕೆ ಕಾರ್ಯಯೋಜನೆ ರೂಪಿಸಲೂ ಇದು ಸಹಕಾರಿ

ಡಾ.ಕೆ.ವಿ.ತ್ರಿಲೋಕಚಂದ್ರ, ವಿಶೇಷ ಆಯುಕ್ತರು (ಆರೋಗ್ಯ) ಬಿಬಿಎಂಪಿ

'ನಗರದ 28 ಎಸ್‌ಟಿಪಿಗಳಿಂದ ವಾರದಲ್ಲಿ ಎರಡು ದಿನ ನೀರಿನ ಮಾದರಿ ಸಂಗ್ರಹಿಸಿ ಪರೀಕ್ಷೆಗೊಳಪಡಿಸುತ್ತಿದ್ದೇವೆ. 'ಸ್ವಸ್ತಿ- ದಿ ಹೆಲ್ತ್ ಕೆಟಲಿಸ್ಟ್' ಸಂಸ್ಥೆಯವರು ರಾಜಕಾಲುವೆಗಳಲ್ಲಿ 46 ಕಡೆ ನೀರಿನ ಮಾದರಿ ಸಂಗ್ರಹಿಸಿ ಒಂದು ವರ್ಷದಿಂದ ಈ ಕಾರ್ಯವನ್ನು ನಡೆಸುತ್ತಿದ್ದೇವೆ. ನಗರದ ಶೇ 80ರಷ್ಟು ಜನರಿಗೆ ಸಂಬಂಧಿಸಿದ ಕೋವಿಡ್ ಮಾಹಿತಿ ಇದರಿಂದ ಕಲೆಹಾಕಬಹುದು. ಎನ್‌ಸಿಬಿಎಸ್, ಸ್ವಸ್ತಿ, ಬಯೋಮ್ ಪರಿಸರ ಟ್ರಸ್ಟ್‌ನಂತಹ ಸಂಸ್ಥೆಗಳು ಪ್ರಿಸಿಷನ್ ಹೆಲ್ತ್ ಸಂಸ್ಥೆಯಡಿ ಜಲಮಂಡಳಿ ಮತ್ತು ಬಿಬಿಎಂಪಿ ಸಹಕಾರದಿಂದ ಈ ಕಾರ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತಿವೆ' ಎಂದು ಅವರು ಮಾಹಿತಿ ನೀಡಿದರು.

'ಕೋವಿಡ್ ಪರೀಕ್ಷೆಯ ದತ್ತಾಂಶವನ್ನು ಸುಲಭವಾಗಿ ಅರ್ಥೈಸಲು ಡ್ಯಾಶ್‌ಬೋರ್ಡ್‌ಗಳನ್ನು ನಿರ್ವಹಿಸುತ್ತಿದ್ದೇವೆ. ನೀರಿನ ಮಾದರಿ ಸಂಗ್ರಹಿಸಿದ ಮರುದಿನವೇ ಡಾ.ಸಂಜಯ್ ಲಾಂಬಾ ನೇತೃತ್ವದಲ್ಲಿ ಸಚಿತ್ರ ದತ್ತಾಂಶಗಳ ವರದಿ ಸಿದ್ಧಪಡಿಸಲಾಗುತ್ತಿದೆ. ಸೋಂಕು ವ್ಯಾಪಿಸುವ ಅಪಾಯದ ಮುನ್ಸೂಚನೆಯನ್ನೂ ಅರ್ಥೈಸಲು ಇದು ಸಹಕಾರಿ. ಇದನ್ನು ಸಾರ್ವಜನಿಕವಾಗಿಯೂ ಹಂಚಿಕೊಳ್ಳುತ್ತಿದ್ದೇವೆ' ಎಂದರು.

'ಹೊಸ ರೂಪಾಂತರಿಯ ಸುಳಿವು'

ಡಾ.ಫರಾ ಇಷ್ತಿಯಾಕ್

'ಎಸ್‌ಟಿಪಿ ನೀರಿನ ಮಾದರಿಯಲ್ಲಿ ಕಂಡುಬರುವ ವೈರಾಣುಗಳ ಸಾಂದ್ರತೆಯ ಮೇಲೆ ನಿಗಾ ಇಡುವುದರ ಜೊತೆಗೆ ಅವುಗಳ ವಂಶವಾಹಿ ಸಂರಚನಾ ವಿಶ್ಲೇಷಣೆಯನ್ನೂ (ಜೀನೋಮ್ ಸೀಕ್ವೆನ್ಸಿಂಗ್) ನಡೆಸುತ್ತೇವೆ. ನೀರಿನ ಮಾದರಿಗಳನ್ನು ನಿರಂತರವಾಗಿ ಹಾಗೂ ವ್ಯಾಪಕವಾಗಿ ಪರೀಕ್ಷೆಗೆ ಒಳಪಡಿಸುವುದು ಹಾಗೂ ಜೀನೋಮ್ ಸೀಕ್ವೆನ್ಸಿಂಗ್ ನಡೆಸುವುದು ಕೋವಿಡ್ ನಿಯಂತ್ರಣಕ್ಕೆ ಅತ್ಯಂತ ಸುರಕ್ಷಿತ ವಿಧಾನ. ಹೊಸ ಅಲೆ ಹಾಗೂ ರೂಪಾಂತರಿಗಳ ಬಗ್ಗೆ ಮುನ್ಸೂಚನೆ ಪಡೆಯುವ ಅತ್ಯುತ್ತಮವಾದ ಹಾಗೂ ಅಗ್ಗದ ಮಾದರಿ ಇದು. ನಿರ್ದಿಷ್ಟ ಅವಧಿಯಲ್ಲಿ ಓಮೈಕ್ರಾನ್ ಜಾಸ್ತಿ ಆಗಿದೆಯಾ, ಡೆಲ್ಟಾ ಜಾಸ್ತಿ ಇದೆಯೇ ಎಂಬುದೂ ಗೊತ್ತಾಗುತ್ತದೆ. ಪ್ರಪಂಚದ ಯಾವುದೋ ಪ್ರದೇಶ ಹೊಸ ರೂಪಾಂತರಿ ಪತ್ತೆಯಾದರೆ, ಅದು ಇಲ್ಲೂ ಕಾಣಿಸಿಕೊಂಡಿದೆಯೇ ಎಂಬುದನ್ನೂ ತಿಳಿಯಬಹುದು' ಎಂದು ಡಾ.ಫರಾ ಇಷ್ತಿಯಾಕ್ ವಿವರಿಸಿದರು.

'ಜನರನ್ನು ನೇರವಾಗಿ ಕೋವಿಡ್ ಪರೀಕ್ಷೆಗೆ ಒಳಪಡಿಸದೆಯೂ ಈ ಕಾಯಿಲೆ ಹರಡುತ್ತಿರುವ ಬಗ್ಗೆ ನಿಗಾ ಇಡುವುದು ಈ ಕಾರ್ಯವಿಧಾನದ ವಿಶೇಷತೆ. ಶೌಚನೀರಿನಲ್ಲಿರುವ ಕೊರೊನಾ ವೈರಸ್‌ಗಳ ಬಲಕುಗ್ಗಿರುತ್ತದೆ. ಅವುಗಳನ್ನು ವೈರಸ್ ಆರ್‌ಎನ್‌ಎಯ ಶೇಷ ಪದಾರ್ಥ ಎನ್ನಬಹುದು. ಅವುಗಳಿಂದ ರೋಗ ಹರಡುವುದಿಲ್ಲ' ಎಂದರು.

ಕುತೂಹಲ ಮೂಡಿಸಿದ ಜಿಟಿಡಿ–ಎಸ್‌ಟಿಎಸ್ ಭೇಟಿ

ಪ್ರಜಾವಾಣಿ ವಾರ್ತೆ

ಮೈಸೂರು: ಚುನಾವಣೆ ವರ್ಷದಲ್ಲಿ ಪಕ್ಷಾಂತರ ಪರ್ವ ವೇಗ ಪಡೆಯುತ್ತಿರುವ ಬೆನ್ನಲ್ಲೇ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಹಾಗೂ ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡ ಇಲ್ಲಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಶನಿವಾರ ಭೇಟಿಯಾಗಿ ಚರ್ಚಿಸಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಜೆಡಿಎಸ್ ಚಟುವಟಿಕೆಗಳಿಂದ ದೂರ ಸರಿದಿರುವ ಹಾಗೂ ಜಿಲ್ಲೆಯಲ್ಲಿ ತಮ್ಮದೇ ಪ್ರಭಾವವುಳ್ಳ ದೇವೇಗೌಡರನ್ನು ಸೆಳೆಯಲು ಕಾಂಗ್ರೆಸ್ ಹಾಗೂ ಬಿಜೆಪಿ ಭಾರಿ ಪ್ರಯತ್ನವನ್ನೇ ನಡೆಸಿವೆ.

'ಬಿಜೆಪಿಗೆ ಬರುವುದಾದರೆ ಕ್ಷೇತ್ರವನ್ನೇ ಬಿಟ್ಟುಕೊಡಲು ಸಿದ್ಧ' ಎಂದು ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಶನಿವಾರ ತಿಳಿಸಿದರೆ, 'ಮೈಸೂರು ಭಾಗದ ಪ್ರಮುಖ ನಾಯಕರು ಬಿಜೆಪಿ ಸೇರಲಿದ್ದಾರೆ' ಎಂದು ಸಚಿವ ಸೋಮಶೇಖರ್ ಹೇಳಿರುವುದು ಈ ಭಾಗದ ರಾಜಕೀಯದಲ್ಲಿ ಭಾರಿ ಗುಸುಗುಸು ಎಬ್ಬಿಸಿದೆ.

'ನನ್ನ ಹಾಗೂ ಪುತ್ರನ ರಾಜಕೀಯ ಭವಿಷ್ಯಕ್ಕಾಗಿ ದಿಟ್ಟ ತೀರ್ಮಾನ ಕೈಗೊಳ್ಳುವುದು ನಿಶ್ಚಿತ' ಎಂದು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಜಿ.ಟಿ. ದೇವೇಗೌಡರು, 'ಈಗ ಪಕ್ಷ ತೊರೆದು ಇನ್ನೊಂದು ಪಕ್ಷ ಸೇರಿ ಉಪಚುನಾವಣೆ ಎದುರಿಸಿ ಹಣ ವೆಚ್ಚ ಮಾಡಲು ಸಿದ್ಧನಿಲ್ಲ. ಚುನಾವಣೆಗೆ ಮೂರ್ನಾಲ್ಕು ತಿಂಗಳಿರುವಾಗ ಮತದಾರರ ಮಾತು ಕೇಳಿ ನಿರ್ಧಾರ ಪ್ರಕಟಿಸುವೆ. ಜೆಡಿಎಸ್ ಮುಖಂಡರು ನನ್ನನ್ನು ಕೈಬಿಟ್ಟಿರಬಹುದು; ನಾನಿನ್ನೂ ಪಕ್ಷ ತೊರೆದಿಲ್ಲ' ಎಂದರು.

ಕಾಂಗ್ರೆಸ್, ಬಿಜೆಪಿ ಪ್ರಮುಖರು ನನ್ನ ಮೇಲೆ ಪ್ರೀತಿ ಇರಿಸಿ ಪಕ್ಷಕ್ಕೆ ಆಹ್ವಾನಿಸುತ್ತಿದ್ದಾರೆ. ಸದ್ಯಕ್ಕೆ ಯಾವುದೇ ನಿರ್ಧಾರ ತೆಗೆದುಕೊಳ್ಳುವುದಿಲ್ಲ

ಜಿ.ಟಿ.ದೇವೇಗೌಡ, ಜೆಡಿಎಸ್ ಶಾಸಕ

'ರಾಜ್ಯ ಸಹಕಾರ ಮಹಾಮಂಡಲದ ವ್ಯವಸ್ಥಾಪಕ ನಿರ್ದೇಶಕ ಎಸ್.ಎನ್. ಅರುಣ್ ಕುಮಾರ್ ಅವರನ್ನು ವರ್ಗಾಯಿಸಿದ್ದು, ಅದಕ್ಕೆ ತಡೆ ನೀಡಿ ಒಂದು ವರ್ಷದ ಮಟ್ಟಿಗೆ ಮುಂದುವರಿಸಬೇಕೆಂದು ಕೋರಲು ಸಹಕಾರ ಸಚಿವ ಸೋಮಶೇಖರ್ ಅವರನ್ನು ಭೇಟಿಯಾಗಿದ್ದೆ' ಎಂದು ತಿಳಿಸಿದರು.

'ಬಿಜೆಪಿಯಿಂದ ಆಹ್ವಾನವಿರುವುದು ನಿಜ. ಕ್ಷೇತ್ರವನ್ನೇ ಬಿಡುಕೊಡುವುದಾಗಿ ಹೇಳಿರುವ ನಾಗೇಂದ್ರ ಅವರಿಗೆ ಧನ್ಯವಾದ. ಶಾಸಕರು, ಸಚಿವರು ಪ್ರೀತಿಯಿಂದ ಪಕ್ಷಕ್ಕೆ ಕರೆಯುತ್ತಿದ್ದಾರೆ. ಆದರೆ, ಯಾರೊಂದಿಗೂ ಮಾತುಕತೆ ನಡೆಸಿಲ್ಲ. ಕ್ಷೇತ್ರದ ಅಭಿವೃದ್ಧಿ ನಿಮಿತ್ತ ಮುಖ್ಯಮಂತ್ರಿ, ಸಚಿವರನ್ನು ಭೇಟಿಯಾಗುತ್ತಿರುತ್ತೇನೆ' ಎಂದರು.

'ಕಾಂಗ್ರೆಸ್‌ನವರೂ ಚರ್ಚಿಸಿದ್ದು, ನಮ್ಮಿಬ್ಬರ ಸ್ಪರ್ಧಾ ಕ್ಷೇತ್ರದ ವಿಚಾರ ತಿಳಿಸಿದ್ದೇನೆ. ಹೈಕಮಾಂಡ್ ತೀರ್ಮಾನದ ಬಳಿಕ ನಿರ್ಧಾರ ತಿಳಿಸುವುದಾಗಿ ಹೇಳಿದ್ದಾರೆ. ಸದ್ಯ ಯಾವುದೇ ಪಕ್ಷ ಸೇರುವುದಿಲ್ಲ' ಎಂದರು.

ವಂಶಪಾರಂಪರ್ಯ ರಾಜಕಾರಣ ಕಾಂಗ್ರೆಸ್– ಬಿಜೆಪಿ ವಾಕ್ಸಮರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಸ್ಥಾನದ ಉದಯಪುರದಲ್ಲಿ ನಡೆಯುತ್ತಿರುವ ಕಾಂಗ್ರೆಸ್ ಚಿಂತನ ಶಿಬಿರದಲ್ಲಿ 'ಒಂದು ಕುಟುಂಬಕ್ಕೆ ಒಂದೇ ಟಿಕೆಟ್' ನೀತಿ ಕುರಿತು ಚರ್ಚೆ ನಡೆದ ಬೆನ್ನಲ್ಲೇ ಈ ಕುರಿತು ರಾಜ್ಯದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ವಾಕ್ಸಮರವೂ ನಡೆದಿದೆ.

'ಕಾಂಗ್ರೆಸ್ ಪಕ್ಷದ ನೀತಿ ಗಾಂಧಿ ಕುಟುಂಬಕ್ಕೂ ಅನ್ವಯವಾಗಬೇಕಲ್ಲವೆ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಪ್ರಶ್ನಿಸಿದ್ದಾರೆ. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಮಗ ಬಿ.ವೈ. ವಿಜಯೇಂದ್ರ ಅವರ ಹೆಸರನ್ನು ವಿಧಾನ ಪರಿಷತ್ ಚುನಾವಣೆಯ ಸಂಭವನೀಯ ಅಭ್ಯರ್ಥಿಗಳ ಪಟ್ಟಿಯಲ್ಲಿ ಶಿಫಾರಸು ಮಾಡಿರುವುದನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ತಿರುಗೇಟು ನೀಡಿದೆ.

ಸುದ್ದಿಗಾರರ ಜತೆ ಮಾತನಾಡಿದ ರವಿ, 'ಕಾಂಗ್ರೆಸ್ ಪಕ್ಷವನ್ನು ದೀರ್ಘ ಕಾಲದಿಂದ ಒಂದೇ ಕುಟುಂಬ ನಿಯಂತ್ರಿಸುತ್ತಿದೆ. ವಂಶಪಾರಂಪರ್ಯ ರಾಜಕೀಯ ಕೊನೆಗೊಳಿಸುವ ಕುರಿತು ಅವರು ಈಗ ಪಾಠ ಕಲಿಯುತ್ತಿದ್ದಾರೆ. ವಂಶ ಪಾರಂಪರ್ಯ ರಾಜಕಾರಣಕ್ಕೆ ಕೊನೆ ಹಾಡುವ ನಿರ್ಧಾರ ಗಾಂಧಿ ಕುಟುಂಬಕ್ಕೂ ಅನ್ವಯವಾಗಬೇಕು' ಎಂದರು.

'ಬಿಜೆಪಿಯ ನೀತಿಯನ್ನು ಈಗ ಕಾಂಗ್ರೆಸ್ ಕೂಡ ಪಾಲಿಸುತ್ತಿರುವುದು ಸಂತೋಷದ ವಿಚಾರ. ಅದು ಮೊದಲು ತುಷ್ಟೀಕರಣದ ರಾಜಕಾರಣ ಬಿಡಬೇಕು. ಎಲ್ಲ ಪಕ್ಷಗಳೂ ತುಷ್ಟೀಕರಣದ ರಾಜಕೀಯ ಬಿಟ್ಟರೆ ಅದರಿಂದ ದೇಶಕ್ಕೆ ಒಳಿತಾಗುತ್ತದೆ' ಎಂದು ಹೇಳಿದರು.

ಕಾಂಗ್ರೆಸ್ ವಾಗ್ದಾಳಿ: ವಿಜಯೇಂದ್ರ ಅವರ ಹೆಸರನ್ನು ಸಂಭಾವ್ಯ ಅಭ್ಯರ್ಥಿಗಳ ಪಟ್ಟಿಯಲ್ಲಿ ಸೇರಿಸಿರುವ ಕುರಿತು ಕೆಪಿಸಿಸಿ ಅಧಿಕೃತ ಟ್ವಿಟರ್ ಖಾತೆಯಿಂದ ಪ್ರತಿಕ್ರಿಯಿಸಿರುವ ಕಾಂಗ್ರೆಸ್, 'ವಂಶವಾದವನ್ನು ಪ್ರಬಲವಾಗಿ ಪ್ರತಿಪಾದಿಸುತ್ತಿರುವುದು ಬಿಜೆಪಿಯೇ ಅಲ್ಲವೆ' ಎಂದು ಕೇಳಿದೆ.

'ವಿಜಯೇಂದ್ರ ಅವರಿಗೆ ಪರಿಷತ್ ಸದಸ್ಯ ಸ್ಥಾನ ಮತ್ತು ಮಂತ್ರಿಗಿರಿ ನೀಡಲು ಮುಂದಾಗಿರುವುದು ಅವರು ಬಿ.ಎಸ್. ಯಡಿಯೂರಪ್ಪ ಪುತ್ರ ಎಂಬ ಕಾರಣಕ್ಕೆ ಅಲ್ಲವೆ? ಇದು ಕುಟುಂಬ ರಾಜಕಾರಣ ಅಲ್ಲವೆ?' ಎಂದು ಪ್ರಶ್ನಿಸಿದೆ.

'ಭಾರತದಲ್ಲಿರಲು ಅನರ್ಹರು'

ರಾಷ್ಟ್ರ ಗೀತೆ, ರಾಷ್ಟ್ರ ಧ್ವಜ ಮತ್ತು ಸಂವಿಧಾನವನ್ನು ಗೌರವಿಸದೇ ಇರುವವರು ಭಾರತದಲ್ಲಿರಲು ಅನರ್ಹರು ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿದರು.

ಉತ್ತರ ಪ್ರದೇಶ ಸರ್ಕಾರ ಮದರಸಾಗಳಲ್ಲೂ ರಾಷ್ಟ್ರ ಗೀತೆ ಹಾಡುವುದನ್ನು ಕಡ್ಡಾಯಗೊಳಿಸಿರುವ ಕುರಿತು ಶನಿವಾರ ಪ್ರತಿಕ್ರಿಯಿಸಿದ ಅವರು, 'ಕೆಲವರು ದೇಶದ ಸಂವಿಧಾನ, ರಾಷ್ಟ್ರ ಧ್ವಜ, ರಾಷ್ಟ್ರ ಗೀತೆ ಯಾವುದನ್ನೂ ಗೌರವಿಸುವುದಿಲ್ಲ. ಭೌತಿಕವಾಗಿ ಮಾತ್ರ ಇಲ್ಲಿದ್ದಾರೆ. ಕರ್ನಾಟಕದಲ್ಲಿನ ಮದರಸಾಗಳಲ್ಲಿ ಸ್ವಯಂಪ್ರೇರಿತವಾಗಿ ರಾಷ್ಟ್ರ ಗೀತೆ ಹಾಡುವುದನ್ನು ಆರಂಭಿಸಲಿ' ಎಂದರು.

ದೇಶದಲ್ಲಿ ಹಿಂದುಳಿದ ವರ್ಗಗಳ ರಾಜಕೀಯ ಮೀಸಲಾತಿ ಕೈತಪ್ಪಲು ಕಾಂಗ್ರೆಸ್ ಪಕ್ಷವೇ ಕಾರಣ. ಕಾಂಗ್ರೆಸ್ ಬೆಂಬಲದಲ್ಲಿ ಆಡಳಿತ ನಡೆಸುತ್ತಿರುವ ಮಹಾರಾಷ್ಟ್ರ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಮೀಸಲಾತಿಯನ್ನು ಸರಿಯಾಗಿ ಸಮರ್ಥಿಸಿಕೊಳ್ಳದೇ ಇರುವುದು ಈಗಿನ ಸಮಸ್ಯೆಗೆ ಕಾರಣ ಎಂದು ದೂರಿದರು.

ಸಂಕ್ಷಿಪ್ತ ಸುದ್ದಿ

ಭಾವಸಾರ ಸಮಾಜದ ವಧು–ವರ ಸಮಾವೇಶ

ಬೆಂಗಳೂರು: ಮಲ್ಲೇಶ್ವರದ ಭಾವಸಾರ ಕ್ಷತ್ರಿಯ ಸೇವಾ ಸಮಾಜದ ವಧು–ವರರ ಸಮಾವೇಶ ಮೇ 22ರಂದು ನಡೆಯಲಿದೆ.

ಕುಮಾರಪಾರ್ಕ್ ಪಶ್ಚಿಮದಲ್ಲಿ ಇರುವ ಮಹಾಲಕ್ಷ್ಮಿ ಮಂದಿರದ ಆವರಣದಲ್ಲಿ ಬೆಳಿಗ್ಗೆ 10 ಗಂಟೆಗೆ ಸಮಾವೇಶ ಆರಂಭವಾಗಲಿದೆ. ಆಸಕ್ತರು ಎರಡು ದಿನಗಳ ಮುಂಚಿತವಾಗಿಯೇ ಸಮಾಜದ ಕಚೇರಿಗೆ ವಿವರಗಳನ್ನು ಸಲ್ಲಿಸಬೇಕು ಎಂದು ಸಮಾಜದ ಮುಖಂಡ ಯೋಗೇಂದ್ರ ಎನ್.ವರ್ಣೆ ಮನವಿ ಮಾಡಿದ್ದಾರೆ.

ಯುಎಇ ಅಧ್ಯಕ್ಷರ ನಿಧನ: ರಾಜ್ಯದಲ್ಲೂ ಶೋಕಾಚರಣೆ

ಬೆಂಗಳೂರು: ಶುಕ್ರವಾರ ನಿಧನರಾಗಿರುವ ಅರಬ್ ಸಂಯುಕ್ತ ಸಂಸ್ಥಾನಗಳ (ಯುಎಇ) ಅಧ್ಯಕ್ಷ ಮತ್ತು ಅಬುಧಾಬಿಯ ಆಡಳಿತಗಾರ ಶೇಖ್ ಖಲೀಫಾ ಬಿನ್ ಜಾಯೆದ್ ಅಲ್ ನಹ್ಯಾನ್ ಗೌರವಾರ್ಥ ರಾಜ್ಯದಾದ್ಯಂತ ಶನಿವಾರದ ಒಂದು ದಿನದ ಮಟ್ಟಿಗೆ ಶೋಕಾಚರಣೆ ಮಾಡಲಾಯಿತು.

ಶೇಖ್ ಖಲೀಫಾ ದುಬೈನಲ್ಲಿ ಶುಕ್ರವಾರ ನಿಧನರಾಗಿದ್ದರು. ಅವರ ಗೌರವಾರ್ಥ ಒಂದು ದಿನ ಶೋಕಾಚರಣೆ ಘೋಷಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಶಿಷ್ಟಾಚಾರ ವಿಭಾಗದಿಂದ ಶನಿವಾರ ಬೆಳಿಗ್ಗೆ ಆದೇಶ ಹೊರಡಿಸಿತ್ತು. ನಿಯಮಿತವಾಗಿ ರಾಷ್ಟ್ರ-ಧ್ವಜವನ್ನು ಹಾರಿಸುವ ಸರ್ಕಾರದ ಎಲ್ಲ ಕಟ್ಟಡಗಳ ಮೇಲೆ ರಾಷ್ಟ್ರ ಧ್ವಜವನ್ನು ಅರ್ಧ ಮಟ್ಟದಲ್ಲಿ ಹಾರಿಸಿ ಮೃತರಿಗೆ ಗೌರವ ಸೂಚಿಸಲಾಯಿತು.

'ಆರ್ಥಿಕ ಪರಿಹಾರಕ್ಕಾಗಿ ಸಹಕರಿಸಿ'

ಕೊಲಂಬೊ(ಪಿಟಿಐ): ದೇಶದ ಆರ್ಥಿಕತೆಯನ್ನು ಸರಿದಾರಿಗೆ ತರಲು ರಾಜಕಾರಣವನ್ನು ಬದಿಗಿಟ್ಟು ಸರ್ವಪಕ್ಷಗಳನ್ನು ಒಳಗೊಂಡ ಸರ್ಕಾರ ರಚನೆಗೆ ಕೈಜೋಡಿಸುವಂತೆ ಶ್ರೀಲಂಕಾದ ನೂತನ ಪ್ರಧಾನಿ ರಾನಿಲ್ ವಿಕ್ರಮಸಿಂಘೆ ಅವರು ವಿರೋಧ ಪಕ್ಷದ ನಾಯಕರಿಗೆ ಮನವಿ ಮಾಡಿದ್ದಾರೆ. ಈ ಸಂಬಂಧ, ವಿರೋಧ ಪಕ್ಷ ಎಸ್‌ಜೆಬಿ ನಾಯಕ ಸಜಿತ್ ಪ್ರೇಮದಾಸ ಅವರಿಗೆ ವಿಕ್ರಮಸಿಂಘೆ ಪತ್ರ ಬರೆದಿದ್ದಾರೆ ಎಂದು ಆನ್‌ಲೈನ್ ಪತ್ರಿಕೆ ಡೈಲಿ ಮಿರರ್ ವರದಿ ಮಾಡಿದೆ.

ಸಂಸ್ಮರಣೆ ಕಾರ್ಯಕ್ರಮ

ಆದಿಚುಂಚನಗಿರಿ ಮಹಾಸಂಸ್ಥಾನ ಮಠವು ಬೆಂಗಳೂರಿನಲ್ಲಿ ಶನಿವಾರ ಆಯೋಜಿಸಿದ್ದ ನ್ಯಾಯಮೂರ್ತಿ ದಿವಂಗತ ಕೆ.ಎಲ್.ಮಂಜುನಾಥ್ ಸಂಸ್ಮರಣೆ ಕಾರ್ಯಕ್ರಮವನ್ನು ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಮತ್ತು ಕೆ.ಎಲ್.ಮಂಜುನಾಥ್ ಅವರ ಪತ್ನಿ ಪುಷ್ಪಲತಾ ಅವರು ದೀಪ ಬೆಳಗುವ ಮೂಲಕ ಉದ್ಘಾಟಿಸಿದರು — ಪ್ರಜಾವಾಣಿ ಚಿತ್ರ

ರಸ್ತೆ ಕಾಮಗಾರಿಗಳ ಶೀಘ್ರ ಪೂರ್ಣಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೆಲಗದರನಹಳ್ಳಿ ಮುಖ್ಯ ರಸ್ತೆಯನ್ನು ₹20 ಕೋಟಿ ವೆಚ್ಚದಲ್ಲಿ 30 ಅಡಿಯಿಂದ 60 ಅಡಿಗೆ ವಿಸ್ತರಿಸುವ ಕೆಲಸ ಆರಂಭವಾಗಿದೆ. ಇದರಿಂದ ಈ ಭಾಗದಲ್ಲಿ ಬಹುತೇಕ ಸಂಚಾರ ದಟ್ಟಣೆ ಕಡಿಮೆಯಾಗಲಿದ್ದು, ಅಭಿವೃದ್ಧಿ ಹಕ್ಕು ಹಸ್ತಾಂತರ (ಟಿಡಿಆರ್) ಪ್ರಕ್ರಿಯೆಯನ್ನು ಮುಗಿಸಿ ನಿಗದಿತ ಸಮಯದಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕು' ಎಂದು ಪಾಲಿಕೆಯ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಾಲಿಕೆಯ ದಾಸರಹಳ್ಳಿ ವಲಯ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಮುಖ್ಯ ಆಯುಕ್ತರು ಶುಕ್ರವಾರ ಪರಿಶೀಲಿಸಿದರು.

ಹೆಸರಘಟ್ಟ ಮುಖ್ಯ ರಸ್ತೆಯ (4 ಕಿ.ಮೀ ಉದ್ದ) ಅಭಿವೃದ್ಧಿ ಕಾಮಗಾರಿಯನ್ನು ₹15 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಂಡಿದ್ದು, ಜಲಮಂಡಳಿಯಿಂದ ಒಳಚರಂಡಿ ಹಾಗೂ ಕುಡಿಯುವ ನೀರಿನ ಕಾಮಗಾರಿ ಮುಗಿದಿದೆ. ರಸ್ತೆ ಡಾಂಬರೀಕರಣ ಪ್ರಕ್ರಿಯೆ ಪ್ರಾರಂಭವಾಗಿದೆ. ಈ ಪೈಕಿ ರಸ್ತೆ ದುರಸ್ತಿ ಕಾರ್ಯವನ್ನು ಕೂಡಲೇ ಮುಗಿಸಬೇಕು ಎಂದೂ ಅವರು ಸೂಚಿಸಿದರು.

ಅಬ್ಬಿಗೆರೆ ಮುಖ್ಯ ರಸ್ತೆಯಿಂದ (ಅರಣ್ಯ ರಸ್ತೆ) ವೈ ನಾಗ್ ಜಂಕ್ಷನ್ ಮೂಲಕ ಗಂಗಮ್ಮ ಗುಡಿ ಠಾಣೆಯವರೆಗೆ ₹9.5 ಕೋಟಿ ವೆಚ್ಚದಲ್ಲಿ 1.35 ಕಿ.ಮೀ ಉದ್ದದ ರಸ್ತೆಯನ್ನು 80 ಅಡಿಗೆ ರಸ್ತೆ ವಿಸ್ತರಿಸುವ ಕಾಮಗಾರಿ ಪ್ರಗತಿಯಲ್ಲಿದೆ. ರಸ್ತೆ ಬದಿ ಕಾಲುವೆ, ಪಾದಚಾರಿ ಮಾರ್ಗ ಸೇರಿದಂತೆ ಬಾಕಿ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂದೂ ತುಷಾರ್ ಹೇಳಿದರು.

ಪೂರ್ವ ಭಾಗದಲ್ಲಿ ಉಕ್ರೇನ್ ಸೇನೆಗೆ ಮುನ್ನಡೆ

ಪ್ರತಿದಾಳಿ: ರಷ್ಯಾದ ಸಾವಿರ ಸೈನಿಕರು ಬಲಿ

ಕೀವ್ (ಎಪಿ): ಪೂರ್ವ ಉಕ್ರೇನಿನ ಸೆವೆರೊಡೊನೆಟ್‌ಸ್ಕ್ ನಗರ ಸಮೀಪದ ಸಿವರ್‌ಸ್ಕಿ ಡೊನೆಟ್ಸ್ ನದಿ ದಾಟಲು ರಷ್ಯಾ ಪಡೆಗಳು ಬಳಸುತ್ತಿದ್ದ ದೋಣಿಗಳ (ಪಾಂಟೂನ್) ಸೇತುವೆ ನಾಶಪಡಿಸಿದ ಉಕ್ರೇನ್ ಸೇನೆ, ರಷ್ಯಾದ ಸುಮಾರು ಒಂದು ಸಾವಿರ ಸೈನಿಕರು ಮತ್ತು ಅಪಾರ ಸಂಖ್ಯೆಯ ಸೇನಾ ವಾಹನಗಳನ್ನು ಹೊಡೆದುರುಳಿಸಿದೆ.

ಬಿಲೋಹೊರಿವ್ಕಾದಲ್ಲಿ ಎರಡು ದಿನಗಳು ನಡೆದ ಈ ದಾಳಿಯಲ್ಲಿ ರಷ್ಯಾ ಪಡೆಗಳ ಪಾಂಟೂನ್ ಸೇತುವೆ, ಸೇನಾ ವಾಹನಗಳು, 73 ಯುದ್ಧ ಟ್ಯಾಂಕ್‌ಗಳು, ಶಸ್ತ್ರಾಸ್ತ್ರ ಒಳಗೊಂಡ ಯುದ್ಧ ತಂತ್ರದ ಒಂದು ತುಕಡಿ (ಸುಮಾರು 1,000 ಸೈನಿಕರು)ಯನ್ನು ಧ್ವಂಸ ಮಾಡಿರುವ ಚಿತ್ರಗಳು ಮತ್ತು ವಿಡಿಯೊ ತುಣುಕುಗಳನ್ನು ಉಕ್ರೇನ್ ವಾಯುದಾಳಿ ಕಮಾಂಡ್ ಬಿಡುಗಡೆ ಮಾಡಿದೆ.

ಹಿಂದೆಸರಿದ ರಷ್ಯಾ ಸೇನೆ: ನಿರಂತರ ಬಾಂಬ್ ದಾಳಿ ನಡೆಸಿದ ರಷ್ಯಾ ಪಡೆಗಳು ಹಾರ್ಕಿವ್‌ನಿಂದ ಹಿಂದೆ ಸರಿಯುತ್ತಿದೆ ಎಂದು ಉಕ್ರೇನ್ ಹೇಳಿದೆ.

ರಷ್ಯಾ ಸೈನಿಕರ ವಿಚಾರಣೆ ಶುರು: ರಷ್ಯಾದ ಸಾರ್ಜೆಂಟ್ ವಾಡಿಮ್ ಶಿಶಿಮರಿನ್ (21) ಎಂಬುವವರನ್ನು ಯುದ್ಧಾಪರಾಧದ ಮೊದಲ ಪ್ರಕರಣದಲ್ಲಿ ಉಕ್ರೇನ್ ಪ್ರಾಸಿಕ್ಯೂಟರ್ ಜನರಲ್ ಇರಿನಾ ವೆನೆಡಿಕ್ಟೋವಾ ವಿಚಾರಣೆ ನಡೆಸಿದರು.

ಈಶಾನ್ಯ ಸುಮಿಯ ಹಳ್ಳಿಯೊಂದರಲ್ಲಿ ಫೆ.28ರಂದು ಉಕ್ರೇನ್ ನಾಗರಿಕನ ತಲೆಗೆ ಗುಂಡು ಹಾರಿಸಿದ ಆರೋಪ ಶಿಶಿಮರಿನ್ ಮೇಲಿದೆ. ರಷ್ಯಾದ 41 ಸೈನಿಕರ ವಿರುದ್ಧ ಅಪರಾಧ ಪ್ರಕರಣಗಳನ್ನು ಸಿದ್ಧಪಡಿಸುತ್ತಿರುವುದಾಗಿ ಉಕ್ರೇನ್ ಹೇಳಿದೆ.

ಉಕ್ಕಿನ ಸ್ಥಾವರದಿಂದ ಸಾವಿರ ಸೈನಿಕರು ಪಾರು: ಜೋವ್‌ಸ್ಟಾಲ್ ಉಕ್ಕಿನ ಸ್ಥಾವರದಿಂದ ಉಕ್ರೇನಿನ ಸಾವಿರ ಸೈನಿಕರು ಸುರಕ್ಷಿತವಾಗಿ ಪಾರಾಗಿದ್ದಾರೆ. ಗಾಯಗೊಂಡ 60 ಸೈನಿಕರ ಸ್ಥಳಾಂತರಕ್ಕೆ ರಷ್ಯಾ ಸಮ್ಮತಿಸುತ್ತಿಲ್ಲ ಎಂದು ಉಕ್ರೇನ್ ಉಪ ಪ್ರಧಾನಿ ಇರಿನಾ ವೆರೆಶ್‌ಚುಕ್ ಹೇಳಿದ್ದಾರೆ. ಸ್ಥಾವರದಲ್ಲಿ ಇನ್ನೂ 600 ಗಾಯಾಳು ಸೈನಿಕರಿದ್ದಾರೆ.

ಬಿಜೆಪಿ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಕಾರ್ಯಕಾರಿಣಿ ಸಭೆ

'ಸಾಮಾನ್ಯ ಕಾರ್ಯಕರ್ತರಿಗೂ ಉನ್ನತ ಸ್ಥಾನ'

ಪ್ರಜಾವಾಣಿ ವಾರ್ತೆ

ಭಾರತ ಮಾತೆಯ ಭಾವಚಿತ್ರಕ್ಕೆ ಸಚಿವ ವಿ.ಸೋಮಣ್ಣ ಪುಷ್ಪ ನಮನ ಸಲ್ಲಿಸಿದರು. ಉದಯ ಗರುಡಾಚಾರ್, ಪುಟ್ಟಣ್ಣ, ಎನ್‌.ಆರ್. ರಮೇಶ್, ರವಿ ಸುಬ್ರಹ್ಮಣ್ಯ ಇದ್ದಾರೆ

ಬೆಂಗಳೂರು: 'ಜಗತ್ತಿನಲ್ಲೇ ಅತಿ ಹೆಚ್ಚು ಸದಸ್ಯರನ್ನು ಹೊಂದಿರುವ ಪಕ್ಷ ಬಿಜೆಪಿ. ನಮ್ಮಲ್ಲಿ ಸಾಮಾನ್ಯ ಕಾರ್ಯಕರ್ತರಿಗೂ ಉನ್ನತ ಸ್ಥಾನಮಾನ ಲಭಿಸುತ್ತದೆ. ಈ ಪಕ್ಷದ ಸದಸ್ಯತ್ವ ಹೊಂದುವುದು ಹೆಮ್ಮೆಯ ಸಂಗತಿ' ಎಂದು ವಸತಿ ಸಚಿವ ವಿ.ಸೋಮಣ್ಣ ಹೇಳಿದರು.

ಪಕ್ಷದ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಕಾರ್ಯಕಾರಿಣಿ ಸಭೆಯಲ್ಲಿ ಶನಿವಾರ ಅವರು ಮಾತನಾಡಿದರು.

'ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಬೀದಿ ದೀಪ, ಉದ್ಯಾನ, ರಸ್ತೆ, ಕೊಳವೆಬಾವಿಯಂತಹ ಮೂಲಸೌಕರ್ಯ ಬೇಡಿಕೆಗಳ ಸಮಗ್ರ ಮಾಹಿತಿ ಸಂಗ್ರಹಿಸಿದ್ದೇವೆ. ಜನರ ಅಹವಾಲುಗಳನ್ನು ಬಗೆಹರಿಸಲು ವಾರ್ ರೂಂಗಳನ್ನು ರೂಪಿಸಲಾಗಿದೆ' ಎಂದರು.

'ಪ್ರಧಾನಿ ನರೇಂದ್ರ ಮೋದಿಯವರ ಆಡಳಿತದಲ್ಲಿ ಸರ್ವರಿಗೂ ಸಮಪಾಲು ತತ್ವವನ್ನು ಪಾಲಿಸಲಾಗುತ್ತಿದೆ. ಉಜ್ವಲ, ಮುದ್ರಾ ಯೋಜನೆಗಳು ಕೋಟ್ಯಂತರ ಜನರನ್ನು ತಲುಪಿವೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬೆಂಗಳೂರು ಅಭಿವೃದ್ಧಿಗೆ ₹6 ಸಾವಿರ ಕೋಟಿ ಅನುದಾನ ನೀಡಿದ್ದಾರೆ. ಸಮಾಜ ಕಟ್ಟಕಡೆಯ ವ್ಯಕ್ತಿಗೂ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಭಿವೃದ್ಧಿ ಯೋಜನೆಗಳ ಪ್ರಯೋಜನ ಸಿಗುತ್ತಿದೆ' ಎಂದರು.

ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಎನ್.ರಮೇಶ್, 'ಇದೇ 21ರಂದು 13 ಮಂಡಲ, 19 ಪ್ರಕೋಷ್ಠಗಳ ಸಮಾವೇಶ ಆಯೋಜಿಸಲಾಗಿದೆ. ಮೇ 25ರಿಂದ ಜೂನ್ 10ರವರಗೆ ಪ್ರತಿ ಮಂಡಲದಲ್ಲೂ ಕಾರ್ಯಕಾರಿಣಿ ಆಯೋಜಿಸಬೇಕು' ಎಂದರು.

ಶಾಸಕರಾದ ರವಿ ಸುಬ್ರಹ್ಮಣ್ಯ, ಉದಯ ಗರುಡಾಚಾರ್, ಸಂಜೀವ ಮಠಂದೂರು, ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ, ಪಕ್ಷದ ಗೋವಿಂದರಾಜನಗರ ಮಂಡಲ ಅಧ್ಯಕ್ಷ ವಿಶ್ವನಾಥ ಗೌಡ, ವಿಜಯನಗರ ಮಂಡಲ ಘಟಕದ ಅಧ್ಯಕ್ಷ ಟಿ.ವಿ. ಕೃಷ್ಣ, ಮುಖಂಡರಾದ ಕೆ.ಉಮೇಶ್ ಶೆಟ್ಟಿ, ಡಾ.ಎಸ್.ರಾಜು, ಮೋಹನ್ ಕುಮಾರ್, ವಾಗೇಶ್ ದೊಡ್ಡವೀರಯ್ಯ ಹಾಗೂ ಶ್ರೀಧರ್ ಇದ್ದರು.

ಪಟ್ಟಾಭಿಷೇಕ ನಿಲ್ಲದು: ಪುಟ್ಟಸ್ವಾಮಿ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ನೆಲಮಂಗಲ/ಬೆಂಗಳೂರು: 'ಶ್ರೀಕ್ಷೇತ್ರ ತೈಲೇಶ್ವರ ಗಾಣಿಗರ ಮಹಾ ಸಂಸ್ಥಾನ ಮಠದ ಉದ್ಘಾಟನೆ ಹಾಗೂ ಪೀಠಾರೋಹಣ ನಿಗದಿಯಂತೆ ಭಾನುವಾರ ನಡೆಯಲಿದೆ. ಮುಖ್ಯಮಂತ್ರಿ, ಸಚಿವರು ಹಾಗೂ ಹಿಂದುಳಿದ ವರ್ಗದ ಎಲ್ಲ ಮಠಾಧೀಶರು ಪಾಲ್ಗೊಳ್ಳಲಿದ್ದಾರೆ ಎಂದು ಪೂರ್ಣಾನಂದ ಪುರಿ ಶ್ರೀ (ಬಿ.ಜಿ. ಪುಟ್ಟಸ್ವಾಮಿ) ತಿಳಿಸಿದರು.

'ಜನಾಂಗದ ಅಭಿವೃದ್ಧಿ ಸಹಿಸದ ಕೆಲವರು ನ್ಯಾಯಾಲಯದ ಮಧ್ಯಂತರ ಆದೇಶವನ್ನು ತಿರುಚಿ ತಡೆಯಾಜ್ಞೆ ಎಂದು ಸುದ್ದಿ ಹಬ್ಬಿಸುತ್ತಿದ್ದಾರೆ' ಎಂದು ತಿಳಿಸಿದರು.

'ರಾಜ್ಯದಾದ್ಯಂತ ಜನರು ಆಗಮಿಸುವ ಸಂದರ್ಭದಲ್ಲಿ ತೊಂದರೆ ನೀಡುತ್ತಿರುವುದು ಬೇಸರ ತಂದಿದೆ. ಸಣ್ಣ ಜನಾಂಗವಾದ ಗಾಣಿಗರಿಗೆ ಪ್ರಥಮವಾಗಿ ಗುರುಪೀಠ ಸ್ಥಾಪಿಸಲು ಶ್ರಮವಹಿಸಿದ್ದೇನೆ' ಎಂದರು.

'ಪಟ್ಟಾಭಿಷೇಕಕ್ಕೆ ತಡೆಯಾಜ್ಞೆ ಇಲ್ಲ': 'ನ್ಯಾಯಾಲಯವು ವಿಶ್ವ ಗಾಣಿಗರ ಸಮುದಾಯ ಟ್ರಸ್ಟ್‌ನ ಪೀಠಾಧಿಪತಿಯಾಗಿ ಪಟ್ಟಾಭಿಷೇಕ ಚಟುವಟಿಕೆ ನಿಲ್ಲಿಸಬೇಕೆಂದು ಹೇಳಿದೆ. ಶ್ರೀಕ್ಷೇತ್ರ ತೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠದ ಪೀಠಾಧಿಪತಿಯಾಗಿ ಪಟ್ಟಾಭಿಷೇಕ ಮಾಡಿಕೊಳ್ಳಲು ತಡೆಯಾಜ್ಞೆ ನೀಡಿರುವುದಿಲ್ಲ. ಕೆಲವರು ದುರುದ್ದೇಶದಿಂದ ನ್ಯಾಯಾಲಯದ ಆದೇಶವನ್ನು ತಿರುಚಿ ಸಮುದಾಯದ ದಾರಿ ತಪ್ಪಿಸುತ್ತಿದ್ದಾರೆ' ಎಂದು ಹೈಕೋರ್ಟ್ ವಕೀಲ ಡಿ.ಪ್ರಭಾಕರ್ ತಿಳಿಸಿದ್ದಾರೆ.

'ತೀರ್ಪು ಬರುವವರೆಗೆ ಪಟ್ಟಾಭಿಷೇಕ ಬೇಡ'

'ಬಿ.ಜಿ.ಪುಟ್ಟಸ್ವಾಮಿ ಅವರು ಸ್ವಾರ್ಥದಿಂದ ತೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠದ ಪೀಠಾಧಿಪತಿಯಾಗಲು ಹೊರಟಿದ್ದಾರೆ. ಪಟ್ಟಾಭಿಷೇಕಕ್ಕೆ ನ್ಯಾಯಾಲಯ ತಡೆ ನೀಡಿದ್ದು, ತೀರ್ಪು ಬರುವವರೆಗೆ ಪಟ್ಟಾಭಿಷೇಕ ನಡೆಯಬಾರದು' ಎಂದು ಮೈಸೂರು ಜಿಲ್ಲಾ ಜ್ಯೋತಿಪಣ ಗಾಣಿಗರ ಸಂಘದ ಅಧ್ಯಕ್ಷ ಇಂಟಕ್ ರಾಜು ಎನ್. ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಬಿಎಂಟಿಸಿ: ಹಳೆ ಪಾಸ್ ಬಳಕೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾಥಮಿಕ ಮತ್ತು ಪ್ರೌಢಶಾಲೆಗಳ 2022–23ನೇ ಸಾಲಿನ ತರಗತಿಗಳು ಮೇ 16ರಿಂದ ಆರಂಭವಾಗುತ್ತಿದ್ದು, ಕಳೆದ ಸಾಲಿನಲ್ಲಿ ವಿತರಣೆ ಮಾಡಿರುವ ಸ್ಮಾರ್ಟ್‌ಕಾರ್ಡ್‌ಗಳನ್ನೇ ಬಳಕೆ ಮಾಡಿಕೊಳ್ಳಲು ಬಿಎಂಟಿಸಿ ಅವಕಾಶ ಕಲ್ಪಿಸಿದೆ.

'ಹಳೆ ಪಾಸ್‌ಗಳ ಮಾನ್ಯತಾ ಅವಧಿ ಜೂನ್ 30ರವರೆಗೆ ಇದ್ದು, ಅವುಗಳನ್ನು ತೋರಿಸಿ ಪ್ರಯಾಣ ಮಾಡಬಹುದು. ಪಾಸ್ ಪಡೆಯದ ವಿದ್ಯಾರ್ಥಿಗಳೂ ಶಾಲೆಗೆ ಪಾವತಿಸಿರುವ ಶುಲ್ಕದ ರಸೀದಿ ಮತ್ತು ಗುರುತಿನ ಚೀಟಿ ತೋರಿಸಿ ಮೇ 31ರವರೆಗೆ ಪ್ರಯಾಣ ಮಾಡಬಹುದು' ಬಿಎಂಟಿಸಿ ಪ್ರಕಟಣೆಯಲ್ಲಿ ತಿಳಿಸಿದೆ.

ಕೋಲ, ನೇಮಕ್ಕೂ ಸಂಚಕಾರ: ಆಕ್ರೋಶ

ಧ್ವನಿವರ್ಧಕ ನಿರ್ಬಂಧ: ಯಕ್ಷಗಾನಕ್ಕೂ ತೂಗುಗತ್ತಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಧ್ವನಿವರ್ಧಕ ಬಳಕೆ ಕುರಿತಂತೆ ರಾಜ್ಯ ಸರ್ಕಾರ ಸುತ್ತೋಲೆ ಹೊರಡಿಸಿದ್ದು, ಇದೀಗ ಕರಾವಳಿಯ ಗಂಡು ಕಲೆ ಯಕ್ಷಗಾನಕ್ಕೂ ಕುತ್ತು ಬರಲಿದೆಯೇ ಎನ್ನುವ ಆತಂಕ ಕಾಡುತ್ತಿದೆ. ಸರ್ಕಾರ ರಾತ್ರಿ ವೇಳೆ ಧ್ವನಿವರ್ಧಕ ಬಳಕೆಗೆ ನಿರ್ಬಂಧ ವಿಧಿಸಿದ್ದರಿಂದ ಯಕ್ಷಗಾನ, ನಾಟಕ, ನೇಮ, ಕೋಲಗಳು ತೊಂದರೆ ಎದುರಿಸುವಂತಾಗಿದೆ.

ಸರ್ಕಾರದ ಸುತ್ತೋಲೆಯ ಪ್ರಕಾರ, ಸುಪ್ರೀಂ ಕೋರ್ಟ್ ಆದೇಶದ ಅನ್ವಯ ರಾತ್ರಿ 10 ಗಂಟೆಯಿಂದ ಬೆಳಿಗ್ಗೆ 6 ಗಂಟೆಯವರೆಗೆ ಧ್ವನಿವರ್ಧಕ ಬಳಸುವಂತಿಲ್ಲ. ಒಳಾಂಗಣದ ಕಾರ್ಯಕ್ರಮಗಳಿಗೂ ಅನುಮತಿ ಪಡೆದುಕೊಂಡೇ ನಿಗದಿತ ಡೆಸಿಬಲ್ ಸಾಮರ್ಥ್ಯದ ಧ್ವನಿವರ್ಧಕ ಬಳಸಬೇಕು.

ಕರಾವಳಿ ಜಿಲ್ಲೆಗಳಲ್ಲಿ 6 ತಿಂಗಳು ನಿರಂತರವಾಗಿ ಯಕ್ಷಗಾನ ಪ್ರದರ್ಶನ ನಡೆಯುತ್ತವೆ. ಸಂಜೆ 6ರಿಂದ ಬೆಳಿಗ್ಗೆ 6 ಗಂಟೆಯವರೆಗೆ ಪ್ರದರ್ಶನ ಏರ್ಪಡಿಸಲಾಗುತ್ತಿದ್ದು, ಈ ಅವಧಿಯಲ್ಲಿ ಧ್ವನಿವರ್ಧಕಗಳ ಬಳಕೆಗೆ ನಿರ್ಬಂಧ ವಿಧಿಸುವುದರಿಂದ ಯಕ್ಷಗಾನ ನಡೆಸುವುದು ದುಸ್ತರವಾಗಲಿದೆ ಎನ್ನುವ ಮಾತುಗಳು ಕಲಾವಿದರಿಂದ ಕೇಳಿ ಬರುತ್ತಿವೆ.

ಕಲಾವಿದರಿಗೆ ತೊಂದರೆ: ಯಕ್ಷಗಾನ ಮಾತ್ರವಲ್ಲದೇ, ನಾಟಕ ತಂಡಗಳಿಗೂ ಈ ಸುತ್ತೋಲೆಯಿಂದ ತೊಂದರೆ ಉಂಟಾಗಲಿದೆ. ಇದೀಗ ಕೋವಿಡ್–19 ಸುಳಿಯಿಂದ ಹೊರಬರುತ್ತಿರುವ ಕಲಾವಿದರು ಮತ್ತೊಮ್ಮೆ ಸಂಕಷ್ಟ ಎದುರಿಸುವಂತಾಗಿದೆ.

'ನಾಟಕ ಹಾಗೂ ಯಕ್ಷಗಾನ ಕಲಾವಿದರು ಈಗ ತಕ್ಕಮಟ್ಟಿಗೆ ಆದಾಯ ಗಳಿಸುತ್ತಿದ್ದಾರೆ. ಸರ್ಕಾರ ಸುತ್ತೋಲೆ ಜಾರಿಗೆ ಬಂದರೆ, ಕಲಾವಿದರ ಕುಟುಂಬಗಳು ಬೀದಿಗೆ ಬೀಳುವ ಅಪಾಯವಿದೆ. ಇದರಿಂದ ದೊಡ್ಡ ಗೊಂದಲ ಸೃಷ್ಟಿಯಾಗಲಿದೆ' ಎಂದು ಚಿತ್ರನಟ ತಮ್ಮಣ್ಣ ಶೆಟ್ಟಿ ಆತಂಕ ವ್ಯಕ್ತಪಡಿಸಿದ್ದಾರೆ.

ಹಿಡಿಶಾಪ: ರಾಜ್ಯದಾದ್ಯಂತ ಆರಂಭವಾದ ಸುಪ್ರಭಾತ ಅಭಿಯಾನದಿಂದ ಯಕ್ಷಗಾನ ಕಲಾವಿದರು ಕಂಗೆಡುವಂತಾಗಿದೆ ಎಂದು ಕರಾವಳಿಯ ಜನರು ಪ್ರಮೋದ್ ಮುತಾಲಿಕ್ ಹಾಗೂ ಅವರ ಬೆಂಬಲಿಗರಿಗೆ ಹಿಡಿಶಾಪ ಹಾಕುತ್ತಿದ್ದಾರೆ.

ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಚರ್ಚೆ ನಡೆಯುತ್ತಿದ್ದು, 'ಮುಸ್ಲಿಮರ ಒಂದು ಕಣ್ಣಿಗೆ ಹೊಡೆಯಲು ಹೋಗಿ, ನಮ್ಮ ಎರಡೂ ಕಣ್ಣು ಒಡೆದು ಹಾಕಿದ್ದಾರೆ' ಎನ್ನುವ ಆಕ್ರೋಶ ವ್ಯಕ್ತವಾಗಿದೆ.

'ಮುಸ್ಲಿಂ ದ್ವೇಷದಿಂದ ಮಸೀದಿಯ ಮೈಕ್ ತೆಗೆಸಲು ಹೋಗಿ ಕಲ್ಲು ಹಾಕಿಕೊಂಡಿದ್ದು ನಮ್ಮ ಅನ್ನಕ್ಕೆ. ಮೈಕ್ ಇಲ್ಲದಿದ್ದರೆ ಅವರಿಗೆ ಎಳ್ಳಷ್ಟೂ ನಷ್ಟವಿಲ್ಲ. ಸುಪ್ರೀಂ ಕೋರ್ಟ್ ಆದೇಶ ಕರಾವಳಿಗೆ ಬಲವಾದ ಕೊಡಲಿ ಏಟು' ಎಂದು ವಾಸುದೇವ ಹೆಗ್ಗಡೆ ಎಂಬುವವರು ಹೇಳಿದ್ದಾರೆ. 'ಶ್ರೀರಾಮಸೇನೆಯವರು ಧರ್ಮ ರಕ್ಷಕರಲ್ಲ, ಧರ್ಮ ಭಕ್ಷಕರು' ಎಂದು ಹಲವರು ಆಕ್ರೋಶ ಹೊರಹಾಕುತ್ತಿದ್ದಾರೆ.

ಯಕ್ಷಗಾನ ನಡೆಯುವುದೇ ಮೈಕ್‌ನಿಂದ. ಸರ್ಕಾರದ ಸುತ್ತೋಲೆಯ ಪ್ರಕಾರ ಧ್ವನಿವರ್ಧಕ ಇಲ್ಲದೇ ಯಕ್ಷಗಾನ ಪ್ರದರ್ಶನ ನೀಡುವುದು ಕಷ್ಟಕರ

ರವಿಚಂದ್ರ ಕನ್ನಡಿಕಟ್ಟೆ, ಹನುಮಗಿರಿ ಮೇಳದ ಭಾಗವತ

ಪ್ರಜಾವಾಣಿ
ಭಾನುವಾರದ
ಪುರವಣಿ
ಭಾನುವಾರ, 15 ಮೇ 2022

ಪಾಂಡಿತ್ಯದ ಗಣಿ...
125ರ ಈ ಮಣಿ
7

ಲಖನೌದಿಂದ
ಮುಂಬೈಗೆ
ಬಂದಿಳಿದ ಕಲೆ
ದಾಸ್ತಾನ್‌ಗೋಯಿ
9

ಬುದ್ಧಮಾರ್ಗದ ಸಾಲು ದೀಪಗಳು

ದು.ಸರಸ್ವತಿ

ಮುಟ್ಟಿದರೆ ಮುರಿದು ಬೀಳುವಷ್ಟು ಸಂಬಂಧಗಳು ನಾಜೂಕಾಗಿವೆ. ಕಿಡಿ ತಗುಲಿದರೆ ಉರಿದೇಳಲು ಸಿದ್ಧರಾಗಿದ್ದೇವೆ. ನಂಜು, ದ್ವೇಷಗಳನ್ನು ಹುಲುಸಾಗಿ ಬೆಳೆಯಲು ಬೇಕಾದ ರಾಸಾಯನಿಕ ಗೊಬ್ಬರವೂ ಆಗಿದ್ದೇವೆ. ಏನೇ ಆಗಲಿ ಭೂಮಿ, ಒಂದೇ ಗತಿಯಲ್ಲಿ ಚಲಿಸುವಳಾದ್ದರಿಂದ ಮತ್ತೆ ಬಂದಿದೆ ಬುದ್ಧ ಪೂರ್ಣಿಮೆ. ಸುಡುವ ಸೂರ್ಯನ ಬೆಳಕನ್ನೇ ತಂಪನೆ ಹುಣ್ಣಿಮೆಯಾಗಿಸುವ ಚಂದ್ರ. ನೀರು ಆವಿಯಾಗಿ, ಆವಿ ಮೋಡವಾಗಿ, ಮತ್ತೆ ಮಳೆಯ ನೀರಾಗಿಸುವ ಪ್ರಕೃತಿಯ ಕೊನೆ ಮೊದಲಿಲ್ಲದ ನಿರಂತರ ಚಲನೆಯಲ್ಲಿ ಎಲ್ಲವೂ ರೂಪಾಂತರಗೊಳ್ಳುತ್ತಲೇ ಇರುವಾಗ ಶಾಶ್ವತವೆಂಬುದು ಅಜ್ಞಾನವೆಂದು ತೋರಿದ, ಅರಿವು-ಕರುಣೆಯೇ ಮೈದಾಳಿದ ಬುದ್ಧ ಹುಟ್ಟಿದ್ದು, ಜ್ಞಾನೋದಯ ಪಡೆದುಕೊಂಡದ್ದು, ನಿರ್ವಾಣ ಹೊಂದಿದ್ದು ಎಲ್ಲವೂ ಬೆಳದಿಂಗಳಿನಲ್ಲಿಯೇ.

ಅರಿವೇ ಗುರುವಾದ ಬುದ್ಧ ಮಾರ್ಗದಲ್ಲಿ ನಡೆದ ಮಲಬಾಚುವ ಸುನೀತ, ಕ್ಷೌರಿಕ ಉಪಾಲಿ, ಕೊಲೆಗಡುಕ ಅಂಗುಲಿಮಾಲ, ಎಲ್ಲರನ್ನೂ ಕಳೆದುಕೊಂಡು ಹುಚ್ಚಿಡಿದು ನಗ್ನಳಾಗಿ ತಿರುಗುತ್ತಿದ್ದ ಪಟಾಚಾರಿ, ಏಕೈಕ ಕಂದನನು ಕಳೆದುಕೊಂಡು ಆಘಾತಗೊಂಡ ಕಿಸಾ ಗೌತಮಿ, ವೇಶ್ಯೆ ಉಪ್ಪಲವನ, ಎಮ್ಮೆ ಮೇಯಿಸುವ ಸ್ವಸ್ತಿ ಎಲ್ಲರೂ ಗುರುಗಳಾದರು.

ಬೆಳಕಿನ ದಾರಿ ಹುಡುಕಿದ ಪಯಣ

‘ಹದ್ದುಗಳು ಮೇಲೇರುತ್ತವೆ ಗಾಳಿಯೊಂದಿಗಲ್ಲ, ಗಾಳಿಗೆ ವಿರುದ್ಧವಾಗಿ’, ‘ಗಿಡುಗಗಳು ಗಾಳಿಗತಿಯ ವಿರುದ್ಧವಾಗಿ ಆಕಾಶವನ್ನು ವೀಕ್ಷಿಸುತ್ತವೆ’ ಎಂಬ ಮಾತುಗಳಿಂದ, ಮನುಷ್ಯರೆಂದೇ ಪರಿಗಣಿಸದ ಸಮಾಜದಲ್ಲಿ, ಮನುಷ್ಯರೆಂಬುದನ್ನೇ ಮರೆತುಹೋಗಿದ್ದ ಅಸ್ಪೃಶ್ಯರೊಳಗಿನ ಸ್ವಾಭಿಮಾನವನ್ನು, ಆತ್ಮಸಮ್ಮಾನವನ್ನು ಬಡಿದೆಬ್ಬಿಸಿದ, ಸರ್ವರಿಗೂ ಸಮಪಾಲು, ಸಮಬಾಳು ಸಿಗಲೆಂದು ಸಂವಿಧಾನ ಬರೆದ, ಬಂಧುತ್ವವೇ ದೊಡ್ಡದೆಂದ ನಿನಗೆ ನೀನೇ ಬೆಳಕೆಂದ ಬುದ್ಧಗುರುವ ಅಪ್ಪಿದ ಬಾಬಾಸಾಹೇಬರದು ತಾನೇ ಉರಿದುಹೋಗುತ್ತಿದ್ದರೂ ಬೆಳಕಿನ ದಾರಿ ಕಾಣಲೇಬೇಕೆಂಬ ಪಯಣ. ಅವರ ಪಯಣದಲ್ಲಿ ಪಾಲ್ಗೊಂಡ, ಪಯಣ ಮುಂದುವರೆಸಿದ ದಲಿತ ಮಹಿಳೆಯರನ್ನು ಬುದ್ಧ ಪೂರ್ಣಿಮೆಯಂದು ನೆನಪುಮಾಡಿಕೊಳ್ಳುವ ಪ್ರಯತ್ನವಿದು.

> 1956ರ ಧರ್ಮಾಂತರದಿಂದಾಗಿ ಹಲವು ದಲಿತ ಮಹಿಳೆಯರು ಬೌದ್ಧಮತ ಸೇರಿ, ಭಿಕ್ಷುಣಿಯರಾದರು. ಧರ್ಮದ ತತ್ವಗಳನ್ನು ಜನರಿಗೆ ಸರಳವಾಗಿ ವಿವರಿಸುವ ಮತ್ತು ಬುದ್ಧ ವಿಹಾರ ಕಟ್ಟಲು ಚಂದಾ ಸಂಗ್ರಹಿಸುವಂಥ ಕೆಲಸ ಮಾಡಿದ ಅಂತಹ ಕೆಲವು ಮಹಿಳೆಯರ ಬದುಕಿನ ಹೆಜ್ಜೆಗಳನ್ನು ಬುದ್ಧಪೂರ್ಣಿಮೆಯ ನೆಪದಲ್ಲಿ ನೆನಪಿಸಿಕೊಳ್ಳುವ ಒಂದು ಪ್ರಯತ್ನ...

ಬಾಬಾಸಾಹೇಬರು ಯೆವಲಾದಲ್ಲಿ 1935ರ ಅಕ್ಟೋಬರ್ 13ರಂದು ಹತ್ತು ಸಾವಿರದಷ್ಟು ಸೇರಿದ್ದ ಜನರೆದುರಿನಲ್ಲಿ ‘ಹಿಂದೂವಾಗಿ ಹುಟ್ಟಿರುವೆ, ಹಿಂದೂವಾಗಿ ಸಾಯುವುದಿಲ್ಲ’ ಎಂದು ತಮ್ಮ ಮತಾಂತರದ ಇಚ್ಛೆಯನ್ನು ಘೋಷಿಸಿದ ನಂತರ ದೇಶದುದ್ದಗಲಕ್ಕೂ ದಲಿತರ ಸಭೆಗಳು ನಡೆದವು. ದಾದರಿನ ಪುರಂದರೆ ಸ್ಟೇಡಿಯಂನಲ್ಲಿ 1936ರ ಮೇ 30 ಮತ್ತು 31ರಂದು ಬಾಬಾಸಾಹೇಬರ ಕರೆ ಕುರಿತು ನಡೆದ ಬಾಂಬೆ ಪ್ರೆಸಿಡೆನ್ಸಿಯ ಮಹಾರ್ ಪರಿಷತ್ ಸಭೆಯ ಸಂದರ್ಭದಲ್ಲಿ ಮಹಿಳೆಯರು ತಮ್ಮದೇ ಪ್ರತ್ಯೇಕ ಸಭೆ ನಡೆಸಿ ಮತಾಂತರಕ್ಕೆ ತಮ್ಮ ಸಮ್ಮತಿ ಘೋಷಿಸಿದರು. ಜನಾಬಾಯಿ ಮೋರೆಯವರು ಬಾಂಬೆಯ ಮಹಿಳಾ ಸಮುದಾಯದ ಪರವಾಗಿ ‘ಮತಾಂತರಕ್ಕೆ ನಾವು ಸಿದ್ಧರಿದ್ದೇವೆ’ ಎಂದು ಬೆಂಬಲ ಸೂಚಿಸಿದರು.

‘ಅಸ್ಪೃಶ್ಯರ ಗೋಳನ್ನು ಕೇಳುವಂತೆ ಮಾಡಿ ನಮಗೆ ರಾಜಕೀಯ ಹಕ್ಕುಗಳನ್ನು ಕೊಡಿಸಿದ ಮಹಾತ್ಮರ ಕರೆಗೆ ಓಗೊಡದೆ ಇರಲು ಸಾಧ್ಯವೇ’ ಎಂದು ರಾಜಾಬಾಯಿ ಗಾಯಕ್ವಾಡ್ ಹೇಳಿದರು. ಏಳು ಕೋಟಿ ಅಸ್ಪೃಶ್ಯರ ಪ್ರಗತಿಗಾಗಿ ಹೋರಾಡುತ್ತಿರುವ ಅವರನ್ನು ಬೆಂಬಲಿಸುವುದು ನಮ್ಮ ಕರ್ತವ್ಯ ಎಂದು ಸೋನುಬಾಯಿ ದಾವರೆಯವರು ಹೇಳಿದರು. ಅಂಬೇಡ್ಕರ್ ಅವರು ತಮ್ಮ ವಿವೇಕದ ಮಾತುಗಳಿಂದ ಧಾರ್ಮಿಕ ಮತಾಂತರಕ್ಕೆ ಕರೆಕೊಟ್ಟ ದಿನವೇ ನಮ್ಮ ಸೋದರ, ಸೋದರಿಯರನ್ನು ಕಟ್ಟಿಹಾಕಿದ್ದ ಸಂಕೋಲೆಗಳು ಕಳಚಿಕೊಂಡು ಹಗುರಾದಂತೆ ಎನಿಸಿತು, ದೇವರೇ ಬಾಬಾಸಾಹೇಬರ ದನಿಯಾಗಿ ಮಾತನಾಡುತ್ತಿದ್ದಾರೆನಿಸಿತು ಎಂದು ಭಾಗೀರಥಿಬಾಯಿ ತಾಂಬೆ ಹೇಳಿದರು. ನಾವು ಸೋದರಿಯರು ಬಾಬಾಸಾಹೇಬರ ನಂಬಿಕೆಗಳ ಪ್ರಕಾರ ಕೆಲಸ ಮಾಡಲು ನಮ್ಮನ್ನು ಅರ್ಪಿಸಿಕೊಳ್ಳೋಣ ಎಂದು ಅನಸೂಯ ವಾವಲ್ ಹೇಳಿದರು.

ಜನರು ತಮ್ಮ ಮೇಲಿಟ್ಟಿದ್ದ ವಿಶ್ವಾಸ ಮತ್ತು ಅವರ ಭವಿಷ್ಯದ ಅರಿವಿದ್ದ ಬಾಬಾಸಾಹೇಬರು 21 ವರ್ಷಗಳ ಕಾಲ ಹುಡುಕಾಟ, ಅಧ್ಯಯನ ನಡೆಸಿ ಬೌದ್ಧ ಧರ್ಮವನ್ನು ಸೇರಲು ತೀರ್ಮಾನಿಸಿದ್ದು ಭಾರತದೆಲ್ಲೆಡೆಯ ದಲಿತರನ್ನು ಅರಿವಿನ ಮಾರ್ಗದತ್ತ ನಡೆಯಲು ಪ್ರೇರೇಪಿಸಿತು.

1956ರ ಅಕ್ಟೋಬರ್ 14ರಂದು, ಬುದ್ಧನ ಮಹಾಪರಿನಿರ್ವಾಣದ 2500ನೇ ಜಯಂತಿಯಂದು, ನಾಗಪುರದ ಶ್ರದ್ಧಾನಂದ ಪೇಟೆಯಲ್ಲಿದ್ದ 14 ಎಕರೆ ಮೈದಾನದಲ್ಲಿ ಧರ್ಮಾಂತರ ಕಾರ್ಯಕ್ರಮ ನಡೆಯಿತು. ದೇಶದ ಹಳ್ಳಿ, ಪಟ್ಟಣಗಳಿಂದ ಅಸ್ಪೃಶ್ಯ ಬಂಧುಗಳು ಸಿಕ್ಕ ರೈಲು, ಕಾರು, ಗೂಡ್ಸ್ ರೈಲು, ಲಾರಿ, ಟ್ಯಾಕ್ಸಿ, ಆಟೊ ರಿಕ್ಷಾ ಹೀಗೆ ಸಿಕ್ಕ ಸಿಕ್ಕ ವಾಹನಗಳ ಹಿಡಿದೋ, ನಡೆದುಕೊಂಡೋ ರೊಟ್ಟಿ ಗಂಟಿನೊಂದಿಗೆ ಮಕ್ಕಳನ್ನು ಹೊತ್ತು ಹೊಳೆ, ತೊರೆ, ನದಿಗಳಂತೆ ಹರಿದು ಬಂದರು. ಸಣ್ಣಪುಟ್ಟ ಒಡವೆಗಳ ಅಡವಿಟ್ಟೋ ಮಾರಿಯೋ ಬಿಳಿ ಬಟ್ಟೆಯನ್ನು ತೊಟ್ಟು ಬಂದರು. ನೀರು, ಆಹಾರ, ವೈದ್ಯಕೀಯ ಸೇವೆಗೆಂದು ಸ್ವಯಂ ಸೇವಕರು ಸಾವಿರಾರು ಸಂಖ್ಯೆಯಲ್ಲಿ ಸೇವೆ ಮಾಡಿದರು.

ಅಂದು ಬಾಬಾಸಾಹೇಬರ ತಂದೆಯವರ ಮರಣದ ದಿನವೂ ಆಗಿದ್ದರಿಂದ ಒಂದು ನಿಮಿಷದ ಮೌನ ಆಚರಿಸಿದ ನಂತರ ಬೌದ್ಧಗುರುಗಳಾದ ಚಂದ್ರಮಣಿಯವರು ಬಾಬಾಸಾಹೇಬರು ಮತ್ತು ಸವಿತಾ ಅಂಬೇಡ್ಕರ್ ಅವರಿಗೆ ದೀಕ್ಷೆ ನೀಡಿದರು. ನಂತರ ಬಾಬಾಸಾಹೇಬರು ನೆರೆದಿದ್ದ ಎಲ್ಲರಿಗೂ ತ್ರಿಶರಣ (ಬುದ್ಧನಿಗೆ ಶರಣು, ಧಮ್ಮಕ್ಕೆ ಶರಣು, ಸಂಘಕ್ಕೆ ಶರಣು), ಮತ್ತು ಪಂಚಶೀಲಗಳನ್ನು (ಹಿಂಸೆ ಮಾಡುವುದಿಲ್ಲ, ಕದಿಯುವುದಿಲ್ಲ, ವ್ಯಭಿಚಾರ ಮಾಡುವುದಿಲ್ಲ, ಸುಳ್ಳು ಹೇಳುವುದಿಲ್ಲ, ಮದ್ಯ ಸೇವಿಸುವುದಿಲ್ಲ) ಬೋಧಿಸಿದರು. ಜೊತೆಗೆ ಹಿಂದೂ ಧರ್ಮದ ದೇವರುಗಳು, ಜಾತೀಯತೆ, ಆಚರಣೆಗಳು ಬುದ್ಧ ವಿಷ್ಣುವಿನ ಅವತಾರವೆಂಬ ನಂಬಿಕೆ ಬಿಡಬೇಕು ಇತ್ಯಾದಿ 17 ಪ್ರಮಾಣಗಳನ್ನು ಸಹ ಮಾಡಿಸಿದರು.

ಧರ್ಮ, ಜಾತಿ, ಮತ, ಕೋಮು ಯಾವುದೇ ಇರಲಿ ಪುರುಷ ಸಂಸ್ಕೃತಿಯ ಕಟ್ಟು, ಕಟ್ಟಳೆಗೆ ತಕ್ಕಂತೆ, ಉಡುವ, ಉಣ್ಣುವ, ಯೋಚಿಸುವುದನ್ನು ಉಸಿರಾಟದಂತೆ ಮಹಿಳೆಯರಿಗೆ ಅಭ್ಯಾಸ ಮಾಡಿಸಲಾಗುತ್ತಿತ್ತು. ಇದು ದಲಿತ ಮಹಿಳೆಯರಿಗೂ ಅನ್ವಯಿಸುತ್ತಿತ್ತು. ಬಾಬಾಸಾಹೇಬರು ಧರ್ಮಾಂತರಕ್ಕೆ ಕರೆ ಕೊಟ್ಟಾಗ ದಲಿತ ಮಹಿಳೆಯರು ಪೂಜಿಸುತ್ತಿದ್ದ ದೇವರುಗಳನ್ನು ಬುಟ್ಟಿಯಲ್ಲಿ ತುಂಬಿ ನೀರಿಗೆ ಹಾಕಲು ಸಿದ್ಧರಾದದ್ದು ಬಾಬಾಸಾಹೇಬರಲ್ಲಿ ಮಹಿಳೆಯರು ಇಟ್ಟಿದ್ದ ವಿಶ್ವಾಸದ ಸಂಕೇತ. 1956ರ ಧರ್ಮಾಂತರದಿಂದಾಗಿ ಹಲವಾರು ದಲಿತ ಮಹಿಳೆಯರು ಬೌದ್ಧಮತದ ಅನುಯಾಯಿಗಳಾದರಷ್ಟೇ ಅಲ್ಲದೆ ಭಿಕ್ಷುಣಿಯರಾಗಿ ಸಮಾಜಸೇವೆಗೆ ತಮ್ಮ ಬದುಕನ್ನು ಮುಡಿಪಾಗಿಟ್ಟರು. ನಡತೆಯನ್ನು ಶುದ್ಧವಾಗಿಟ್ಟುಕೊಂಡು, ಸಾಂಸಾರಿಕ ಬಂಧನಗಳಿಂದ ಮುಕ್ತರಾಗಿ, ಬೌದ್ಧ ಮತಸ್ಥರಿಗೆ ತಕ್ಕ ಮಾದರಿಗಳಾಗಿರುವುದರ ಬಗ್ಗೆ ಎಚ್ಚರವಹಿಸಿ ಹೊಸ ಧರ್ಮವನ್ನು ಅಧ್ಯಯನ ಮಾಡುವ, ಅದರ ತತ್ವಗಳನ್ನು ಜನರಿಗೆ ಸರಳವಾಗಿ ವಿವರಿಸುವ, ಬೌದ್ಧಮತದ ಆಚರಣೆಗಳನ್ನು ನಡೆಸಿಕೊಡುವ ಮತ್ತು ಬುದ್ಧ ವಿಹಾರವನ್ನು ಕಟ್ಟಲು ಚಂದಾ ಸಂಗ್ರಹಿಸುವಂಥ ಕೆಲಸಗಳನ್ನು ಮಾಡಿದ ಕೆಲವು ಮಹಿಳೆಯರು ಇಲ್ಲಿ ಉಲ್ಲೇಖಾರ್ಹರು.



ಬಾಲ್ಯದಿಂದಲೇ ಏಕತಾರಿ ಹಿಡಿದು, ಭಜನೆ ಮಾಡುವ ತಂದೆಯೊಂದಿಗೆ ದನಿ ಸೇರಿಸುತ್ತಿದ್ದವರು ಸೀತಾಬಾಯಿ ಥಾಕೂರ್. ಮಿಲಿಟರಿಯಲ್ಲಿದ್ದ ಸುಂದರರಾಮ್ ಥಾಕೂರ್‌ನೊಂದಿಗೆ ಅವರ ಮದುವೆಯಾಯಿತು. ಮಕ್ಕಳಾಗದಿದ್ದರಿಂದ ಗಂಡ ಮತ್ತೊಂದು ಮದುವೆ ಮಾಡಿಕೊಂಡ ಮೇಲೆ ಅವರಿಂದ ದೂರವಾಗಿ ತಂದೆಯ ಬಳುವಳಿಯಾಗಿ ಬಂದ ಹಾಡುಗಾರಿಕೆಯಲ್ಲಿ ಮನಸ್ಸು ತೊಡಗಿಸಿಕೊಂಡರು. ಬಾಬಾಸಾಹೇಬರ ಚಳವಳಿ ಸೇರಿ ಹಾಡುವುದನ್ನು ಮುಂದುವರೆಸಿದರಲ್ಲದೆ ‘ನಿಂತ ಭೀಮ ಬೋಧಿವೃಕ್ಷದಡಿ/ ಬುದ್ಧ ಭಗವಾನರ ಬಾಬಾ ಕಂಡ/ ಧಮ್ಮ ಚಕ್ರವ ಕೈಗೆತ್ತಿಕೊಂಡ/ನಮ್ಮ ನೆಲದಲ್ಲಿ ಕ್ರಾಂತಿ ಮಾಡಿದ/ ಬಾಬಾ ಕಂಡ ಬುದ್ಧ ಭಗವಾನರ ಅವನಿಗವ ಧಮ್ಮವ ನೀಡಿದ...’ ಎಂಬಂತಹ ಹಾಡುಗಳನ್ನು ಬರೆಯತೊಡಗಿದರು. ಹಾಡಿನ ಮೂಲಕ ಜನರಿಗೆ ಅರಿವು ಮೂಡಿಸುವುದೇ ಅವರ ಕೆಲಸವಾಯಿತು.

ಮುಂದೆ ಬಾಂಬೆಯ ವರ್ಲಿಯ ಬುದ್ಧವಿಹಾರದಲ್ಲಿ ಹಲವಾರು ವರ್ಷಗಳ ಕಾಲ ಮುಖ್ಯ ಸಂಗೀತ ಸಂಯೋಜಕಿ, ಹಾಡುಗಾರ್ತಿ ಮತ್ತು ಕಾರ್ಯಕರ್ತೆಯೂ ಆಗಿ ಕೆಲಸ ಮಾಡಿದರು. ದ್ರಾಕ್ಷಾಬಾಯಿ ಬನ್ಸೊಡೆ, ತನುಬಾಯಿ ಪಾತಾರೆ, ಸಾಕ್ರುಬಾಯಿ ಚಂದನಶಿವೆ, ಶಾರದಾಬಾಯಿ ಆವಾಢೆ ಮತ್ತು ಇತರರನ್ನು ಸೇರಿಸಿಕೊಂಡು ಭಜನೆಯ ಗುಂಪನ್ನು ಕಟ್ಟಿ ಬಾಂಬೆಯ ಚೆಂಬೂರ್, ಥಾಣೆ, ಜೋಗೇಶ್ವರಿ, ಅಂಧೇರಿ, ಮಾತುಂಗ ಲೇಬರ್ ಕ್ಯಾಂಪ್, ಕಲಿನಾ, ಕಾಮಾಟಿಪುರದಂಥ ಸ್ಥಳಗಳಿಗೆ ಹೋಗಿ ಹಾಡುವ ಮೂಲಕ ಅರಿವು ಮೂಡಿಸುತ್ತಿದ್ದರು.

ದೇವಕಿ ಚಂದ್ರಬಾನ್ ಖಂದರೆಯವರು ಅಕೋಲಾದವರು. ಕುಷ್ಠರೋಗದಿಂದ ಪತಿ ತೀರಿಕೊಂಡ ಕೆಲ ಸಮಯದಲ್ಲೇ ಇದ್ದೊಬ್ಬ ಮಗನೂ ಕಾಯಿಲೆಯಿಂದ ತೀರಿಕೊಂಡಾಗ ಅವರಿಗೆ ಲೋಕವೇ ಕುಸಿದಂತಾಗಿ ಜೀವನಕ್ಕೆ ಅರ್ಥವೇ ಇಲ್ಲವೆನಿಸಿದರೂ ದುಃಖ ನುಂಗಿಕೊಂಡು, ಇತರರಿಗಾಗಿ ಬದುಕಬೇಕೆಂದು ನಿರ್ಧರಿಸಿ ಬೌದ್ಧ ತತ್ವಗಳಿಗೆ ಮೊರೆ ಹೋಗಿ ಬದುಕಿನ ಅರ್ಥ ಮತ್ತು ಮೌಲ್ಯ ಕಂಡುಕೊಂಡರು. ಮುಂದೆ ಭಿಕ್ಷುಣಿಯಾಗಿ ಅಕೋಲಾದ ಬುದ್ಧವಿಹಾರದಲ್ಲಿ ವಾಸಿಸುತ್ತ ಧಾರ್ಮಿಕ ಪಠ್ಯಗಳನ್ನು ಓದುವುದು, ಧ್ಯಾನ ಮಾಡುವುದು, ಉಪದೇಶ ಹಾಗೂ ಸಮಾಜಸೇವೆ ಮಾಡುತ್ತ ಬದುಕಿದರು. ಒಮ್ಮೆ ಸಿಲೋನಿನ ಭಿಕ್ಷುಣಿಯರು ಅಕೋಲಾಗೆ ಬಂದಾಗ ದೇವಕಿ ಅವರಿಗೆ ನಂದಶೀಲ ಎಂಬ ಹೆಸರು ನೀಡಿದರು.

ಚಂದ್ರಭಾಗ ಚೌತ್ಮಲ್ ಹತ್ತನೇ ವಯಸ್ಸಿಗೇ ಮದುವೆಯಾಗಿದ್ದರು. ಮುಂದೆ ಗಂಡನ ಹಿಂಸೆ ತಾಳಲಾರದೆ ಆತನನ್ನು ಬಿಟ್ಟು ಬಟ್ಟೆ ಹೊಲಿದು ಬದುಕು ಕಟ್ಟಿಕೊಂಡರು. ಬಾಬಾಸಾಹೇಬರ ಹೆಸರು ಕೇಳಿ ಅವರ ಚಳವಳಿಯಲ್ಲಿ ಸೇರಬೇಕೆಂದು ಅಕೋಲಾದಲ್ಲಿ ನಡೆಯುತ್ತಿದ್ದ ಸಭೆಗಳಿಗೆ ಹೋಗತೊಡಗಿದರು. ಬಾಬಾರವರ ‘ಜನತಾ’ ಮತ್ತು ‘ಪ್ರಬುದ್ಧ್ ಭಾರತ್’ ಪತ್ರಿಕೆಗಳನ್ನು ಓದತೊಡಗಿದರು. ‘ಭೀಮ ಗೀತೆ’ಗಳನ್ನು ಹಾಡಲು, ಬರೆಯಲು ಪ್ರಯತ್ನಿಸಿದರು.

9ನೇ ಪುಟಕ್ಕೆ...

ನಮಗೆ ನಾವೇ ಬೆಳಕಾಗೋಣ...

ನಿಂಗಪ್ಪ ಮುದೇನೂರು

ಈಗ ಕತ್ತಲೆಗಿಂತ ಹಗಲ ಬೆಳಕಿನಲ್ಲಿಯೇ ಕ್ರೌರ್ಯಗಳು ಹೆಚ್ಚು ನಡೆಯುತ್ತಿವೆ. ಕತ್ತಲನ್ನು ದೂಷಿಸುತ್ತಿದ್ದ ಮನುಷ್ಯ ಈಗ ಕತ್ತಲಿನ ಆಶ್ರಯವನ್ನೇ ಬಯಸುವಂತಾಗಿದೆ. ಬುದ್ಧದೇವನು ಹಾಗೇನೇ ಜಗತ್ತಿನ ಘೋರ ದುಃಖವನ್ನು ಕಂಡು ತನ್ನ ಸೇವಕ ಚೆನ್ನನೊಡನೆ ದುಃಖದ ಮೂಲ ಹುಡುಕಿ ಹೊರಟ. ಅದೂ ಜಗವೆಲ್ಲಾ ಮಲಗಿರುವಾಗ, ಒಂದು ಕತ್ತಲಿನ ಸಮಯದಲ್ಲಿ. ಕೊನೆಗೆ ಅವನಿಗೆ ಹೊಳೆದದ್ದು ಆಸೆಯೇ ದುಃಖಕ್ಕೆ ಮೂಲ ಎಂಬ ಬಾಳಿನ ಸತ್ಯ.

ಬುದ್ಧ ನಮಗಷ್ಟೇ ಬೆಳಕಲ್ಲ, ಆತ ಏಷ್ಯಾದ ಬೆಳಕು. ಬುದ್ಧನ ಜನ್ಮದಿನವನ್ನು ಹಲವೆಡೆ ಹೂವಿನ ದಿನವನ್ನಾಗಿ, ದೀಪದ ದಿನವನ್ನಾಗಿ, ಸರೋವರದ ಹೊಸಬೆಳಕ ಚಿತ್ತಾರವಾಗಿ, ಬುದ್ಧನ ಜಾಗೃತಿ ದಿನವನ್ನಾಗಿ, ವೈಶಾಖ ಹುಣ್ಣಿಮೆ ದಿನದ ಜ್ಞಾನೋದಯದ ಸಂಗತಿಯಾಗಿ ಆಚರಿಸುವ ಬದುಕಿನ ವಿಶಿಷ್ಟ ಹಬ್ಬವೊಂದು ಆತನಿರುವ ಜಗತ್ತಿನೆಲ್ಲೆಡೆ ನಡೆಯುತ್ತಿದೆ. ಹಾಗೆ ನೋಡಿದರೆ, ಇದು ಆತನ ಹುಟ್ಟುಹಬ್ಬವೂ ಹೌದು ಮತ್ತು ಮಹಾ ಮರಣದ ದಿನವೂ ಹೌದು!

ಬದುಕಿನ ನಿತ್ಯ ವ್ಯವಹಾರಗಳಲ್ಲಿ, ನಮ್ಮ ನಮ್ಮ ದಂದುಗಗಳಲ್ಲಿ ಕಳೆದುಹೋಗಿರುವ ನಮ್ಮೊಳಗಿನ ವಿವೇಕದ ಮನುಷ್ಯನನ್ನು ಸಾಂಸ್ಕೃತಿಕವಾಗಿ ಮತ್ತೆ ಎತ್ತರಿಸುವ ಕೆಲಸವನ್ನು ನಾವೇ ಮಾಡಬೇಕಿದೆ. ನಮಗೆ ಈ ಎಲ್ಲಾ ಬಾಳಿನ ಸತ್ಯದ ಪಾಠಗಳು ಅಪಥ್ಯವೆನ್ನಿಸಬಾರದು. ಬುದ್ಧಪೂರ್ಣಿಮೆಯ ಈ ದಿನದಲ್ಲಾದರೂ ನಾವು ಮತ್ತೆ ಶಪಥ ಮಾಡೋಣ. ಹೊಸ ಸಮಾಜದ ಕಾಣ್ಕೆಗೆ ನಮಗೆ ನಾವೇ ದೀಪವಾಗೋಣ. ಪ್ರಜ್ಞೆಯ ಕೂರಿಗೆ ಹಿಡಿದು ಹೊಸ ಭರವಸೆಯ ಬೀಜವ ಬಿತ್ತೋಣ.

ಲೇಖನದ ಪೂರ್ಣಪಾಠಕ್ಕೆ ನೋಡಿ:
www.prajavani.net

ಯಾರಿಗೆ ಗೊತ್ತು? ಇಂಥ ಹೀಟ್ ಆಫೀಸರನ್ನು ಬೆಂಗಳೂರು ಕೂಡಾ ಕಾಣುವ ದಿನ ಹತ್ತಿರವೇ ಇರಬಹುದು!

ಹೀಟ್ ಆಫೀಸರ್ ಬಂದರು ದಾರಿಬಿಡಿ...

ತಾಪಮಾನದ ತಲ್ಲಣ... ಉಷ್ಣಗಾಳಿಯಿಂದ ರಕ್ಷಿಸಿಕೊಳ್ಳಲು ಬುಟ್ಟಿಯನ್ನೇ ಕೊಡೆ ಮಾಡಿಕೊಂಡ ಕಾರ್ಮಿಕರು

ಜೇನ್ ಗಿಲ್ಬರ್ಟ್

ಸುನೀಲ್ ಬಾರ್ಕೂರ್

ಅಮೆರಿಕದ ಮಿಯಾಮಿ ನಗರಸಭೆಯ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಜೇನ್ ಗಿಲ್ಬರ್ಟ್ ಅವರಿಗೆ ಕಳೆದ ವರ್ಷದ ಏಪ್ರಿಲ್‌ನಲ್ಲಿ ತುರ್ತು ಸಂದೇಶದ ಪತ್ರವೊಂದು ಬಂತು. ನಗರಸಭೆ ಅಧಿಕಾರಿಯ ಜವಾಬ್ದಾರಿಯಿಂದ ಅವರನ್ನು ಮುಕ್ತಿಗೊಳಿಸಿ 34 ನಗರಸಭೆಗಳ ವ್ಯಾಪ್ತಿಯ ಮಿಯಾಮಿ ಡೇಡ್ ಕೌಂಟಿಯ ಮುಖ್ಯ ಅಧಿಕಾರಿಯನ್ನಾಗಿ ನೇಮಿಸಿ ಪದೋನ್ನತಿ ನೀಡಿದ ಪತ್ರವದು. ಅದರಲ್ಲೇನು ವಿಶೇಷ ಎನ್ನುವಿರಾ? ಜೇನ್‌ಗೆ ನೀಡಿದ್ದ ನೂತನ ಹುದ್ದೆಯ ಹೆಸರು ಮಾತ್ರ ಹಿಂದೆಂದೂ ಕೇಳಿರದಂಥದು! ಆ ಹುದ್ದೆಯನ್ನು ಜೇನ್ ಗಿಲ್ಬರ್ಟ್ ವಹಿಸಿಕೊಂಡಾಗ ಜಗತ್ತಿನ ಪ್ರಥಮ ಶಾಖ ಅಧಿಕಾರಿ (ಶಾಖಾಧಿಕಾರಿ ಅಲ್ಲ, Heat Officer!) ಎಂಬ ಖ್ಯಾತಿಗೆ ಪಾತ್ರರಾದರು.

ವರ್ಷದಿಂದ ವರ್ಷಕ್ಕೆ ಜಾಗತಿಕ ತಾಪಮಾನ ಹೆಚ್ಚುತ್ತ ಭೂಮಿಯು ಕಾದ ಬಾಣಲೆಯಂತಾಗಿ ಬೇಸಿಗೆ ದುಃಸ್ವಪ್ನದಂತೆ ಕಾಡುತ್ತಿರುವುದು ಎಲ್ಲರ ಅನುಭವಕ್ಕೂ ಬರುತ್ತಿದೆ. ಹಿಂದೆಲ್ಲ ನಾವು ಬರೀ ಸುದ್ದಿಯಲ್ಲಿ ಓದುತ್ತಿದ್ದ ಉಷ್ಣ ಮಾರುತಗಳು ಇದೀಗ ನಮ್ಮ ಮನೆಯಂಗಳದಲ್ಲೂ ಬೀಸಲಾರಂಭಿಸಿವೆ. ನೈಸರ್ಗಿಕ ಹವಾನಿಯಂತ್ರಿತ ತಾಣಗಳೆಂಬ ಹೆಗ್ಗಳಿಕೆಯ ನಮ್ಮ ಮಲೆನಾಡಿನ ಶಹರಗಳೇ 40 ಡಿಗ್ರಿ ಸೆಲ್ಸಿಯಸ್‌ನ ಎಡಬಲದಷ್ಟು ತಾಪಮಾನ ಅನುಭವಿಸುತ್ತಿವೆ. ಮುಂಬರುವ ದಿನಗಳಲ್ಲಿ ಈ ಉಷ್ಣ ಮಾರುತಗಳ ಭೇಟಿ ಇನ್ನೂ ಹೆಚ್ಚಲಿದೆ. ಹೀಗಾಗಿ ಹವಾನಿಯಂತ್ರಕಗಳು ಮಧ್ಯಮವರ್ಗಗಳ ಬೇಕುಗಳ ಪಟ್ಟಿಯಲ್ಲೂ ಸ್ಥಾನ ಪಡೆಯುತ್ತಿವೆ. ಭಾರತದಲ್ಲಿ ಕಳೆದ ವರ್ಷ ದಾಖಲೆಯ ಸಂಖ್ಯೆಯಲ್ಲಿ ಹವಾನಿಯಂತ್ರಕಗಳು ಬಿಕರಿಯಾಗಿವೆ. ಈ ಸಾಧನಗಳು ಇನ್ನಷ್ಟು ವಿದ್ಯುತ್ ಬೇಡಿಕೆಯನ್ನು ಸೃಷ್ಟಿಸುವುದು, ಅದಕ್ಕಾಗಿ ಮತ್ತಷ್ಟು ಕಲ್ಲಿದ್ದಲನ್ನು ಸುಡುವುದು, ಜೊತೆಗೆ ಖುದ್ದು ಈ ಸಾಧನಗಳೇ ತಾವು ಬಳಸುವ ಅನಿಲದಿಂದ ಪರಿಸರಕ್ಕೆ ಸವಾಲೊಡ್ಡುವುದು... ಒಟ್ಟಾರೆ ಹಸಿರುಮನೆ ಪರಿಣಾಮಕ್ಕೆ ತಮ್ಮ ದೇಣಿಗೆಯನ್ನು ನೀಡಿ ಹೊರಬರಲಾಗದ ಚಕ್ರವ್ಯೂಹವನ್ನು ಸೃಷ್ಟಿಸುತ್ತಿವೆ.

ಉಳ್ಳವರು ಶಿವಾಲಯವನ್ನು ಕಟ್ಟುವರಯ್ಯ ಎಂಬಂತೆ ಅನುಕೂಲಸ್ಥರೇನೋ ಈ ಬಿರುಬೇಸಿಗೆಯ ಆತಂಕದಿಂದ ಬಚಾವಾಗಬಹುದು. ಆದರೆ ಉಳಿದವರು? ಇಂತಹುದೊಂದು ಪ್ರಶ್ನೆ ಇದೀಗ ಎಲ್ಲೆಡೆ ಕಾಡುತ್ತಿದೆ. ಬದಲಾದ ಹವಾಮಾನದ ಪರಿಸ್ಥಿತಿಯಲ್ಲಿ ಮುಂಬರುವ ಘೋರ ದಿನಗಳನ್ನು ಎದುರಿಸಲು ಸಾಕಷ್ಟು ಪೂರ್ವತಯಾರಿಯ ಜರೂರತ್ತಿದೆ. ಇದನ್ನು ಮನಗಂಡ ಮಿಯಾಮಿ ಡೇಡ್ ಕೌಂಟಿಯ ಆಡಳಿತ ಮಂಡಳಿ ಹೀಟ್ ಆಫೀಸರ್ ಹುದ್ದೆ ಸೃಷ್ಟಿಸಿದೆ.

ಅತಿಉಷ್ಣದಿಂದ ಜನ, ಜಾನುವಾರುಗಳ ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳ ಕುರಿತು ಅರಿವು ಮೂಡಿಸಿ ಅಂತಹ ಪರಿಸ್ಥಿತಿಯಲ್ಲಿ ತಮ್ಮನ್ನು ಹೇಗೆ ಕಾಪಾಡಿಕೊಳ್ಳಬೇಕು ಎಂಬುದರ ಕುರಿತು ತಿಳಿಹೇಳುವುದು, ಮಕ್ಕಳಿಗಾಗಿ ಶಿಬಿರ ಆಯೋಜಿಸುವುದು, ಬಿಸಿಲಿನಲ್ಲಿ ದುಡಿಯುವ ಕಾರ್ಮಿಕರಿಗಾಗಿ ಝಳ ಹೆಚ್ಚಿರುವ ಸಮಯವನ್ನು ಹೊರತುಪಡಿಸುವಂತಹ ಕೆಲಸದ ಪಾಳಿಯನ್ನು ನಿಗದಿಪಡಿಸುವುದು, ನಗರದ ವ್ಯಾಪ್ತಿಯಲ್ಲಿ ತಾಪಮಾನವನ್ನು ನಿಯಂತ್ರಿಸಲು ಸಾಕಷ್ಟು ಗಿಡಮರ ಬೆಳೆಸಿ ಹಸಿರುಪಟ್ಟಿಗಳನ್ನು ಅಭಿವೃದ್ಧಿಪಡಿಸುವುದು, ಉಷ್ಣ ಮಾರುತಗಳ ಸಮಯದಲ್ಲಿ ಕಾರ್ಮಿಕರಿಗೆ, ನಿರ್ಗತಿಕರಿಗೆ ಉಳಿದುಕೊಳ್ಳಲು ಆಸರೆಯಾಗುವಂತೆ ತಂಗುದಾಣ ನಿರ್ಮಿಸುವುದು... ಇವುಗಳೆಲ್ಲ ಹೀಟ್ ಆಫೀಸರ್ ಹೊಣೆ.

ದಿನ ಕಳೆದಂತೆ ಶಹರಗಳು ತಮ್ಮ ವ್ಯಾಪ್ತಿಯನ್ನು ಹಿಗ್ಗಿಸಿಕೊಂಡು ಅರಣ್ಯಪ್ರದೇಶವನ್ನು ಕಬಳಿಸುತ್ತ ಶಾಖ ದ್ವೀಪ ಪರಿಣಾಮಕ್ಕೆ ಕಾರಣವಾಗುತ್ತಿವೆ. ಅಂದರೆ ಹಸಿರನ್ನು ಕಬಳಿಸಿ ಆ ಜಾಗವನ್ನು ಆಕ್ರಮಿಸಿಕೊಳ್ಳುವ ಕಾಂಕ್ರೀಟ್ ಕಟ್ಟಡಗಳು ಮೊದಲಿದ್ದ ಹಸಿರು ವಲಯಕ್ಕಿಂತ ಹೆಚ್ಚಿನ ಪ್ರಮಾಣದ ಶಾಖವನ್ನು ಹೀರಿಕೊಂಡು ಆ ಪ್ರದೇಶದ ತಾಪಮಾನದ ಏರಿಕೆಗೆ ಕಾರಣವಾಗುತ್ತವೆ. 7ನೇ ಪುಟಕ್ಕೆ...

ಅರೆರೆ ಮಿಲನ ಪತಂಗ

ಈ ಪತಂಗದ ಆಯುಷ್ಯ ಏಳೇ ಏಳು ದಿನಗಳು. ಹೆಣ್ಣಿನ ಮಿಲನಕ್ಕಾಗಿ ತನ್ನ ಶಕ್ತಿಯನ್ನೆಲ್ಲ ಕಾಪಿಟ್ಟುಕೊಂಡಿರುತ್ತದೆ

ರಾಮಾಂಜಿನಯ್ಯ ವಿ.

ರಾತ್ರಿ ಪಯಣದಿಂದ ಬಳಲಿದ ದೇಹಕ್ಕೆ ಉತ್ಸಾಹ ನೀಡಿದ ಮೂಡಿಗೆರೆಯ ಕಾಫಿ ಹೀರಿ, ಹ್ಯಾಂಡ್‌ಪೋಸ್ಟಿನಿಂದ ಬಲಕ್ಕೆ ತಿರುಗಿ ಈ ಕಡೆಗೆಲ್ಲೋ ‘ನಿರುತ್ತರ’ವಿರುವುದೆಂದು (ಪೂರ್ಣಚಂದ್ರ ತೇಜಸ್ವಿ ಅವರ ಮನೆ) ನಡೆಯತೊಡಗಿದೆವು. ಡೈಸಿಯೂ ಬಿರುಬಿರನೆ ನಡೆಯುತ್ತಿದ್ದಳು. ತಂಪಾದ ಗಾಳಿಗೆ ಅವಳ ಗುಂಗುರು ಕೂದಲು ಕೆದರುತ್ತಿತ್ತು. ನೋಟವೆಲ್ಲಾ ಕಾನನದ ಕಡೆಗಿತ್ತು.

ದಟ್ಟ ಹಸುರು ತೋಟಗಳ ನಡುವಿನ ಎತ್ತರದ ಮರಗಳು ನಿದ್ದೆ ಮಾಡುತ್ತಿದ್ದವು. ಎದುರುಗಡೆ ಬಲಕ್ಕೆ ಕಾಣಿಸಿದ ಕೃಷಿ ವಿಜ್ಞಾನ ಕೇಂದ್ರ ಮೂವತ್ತು ನಲವತ್ತು ವರ್ಷಗಳ ಹಿಂದಿನ ಏಲಕ್ಕಿ ತಳಿ, ಅಲ್ಲಿನ ಕೀಟಜಗತ್ತು, ಈ ಜಗತ್ತಿನ ಸುತ್ತಲಿನ ನಿಗೂಢ ಮನುಷ್ಯರನ್ನು ನೆನಪಿಸುತ್ತಿತ್ತು. ಪಕ್ಕದಲ್ಲೆಲ್ಲ ಕಾಡಿನಂತಿದ್ದ ಕಾಫಿ ತೋಟದ ನಡುವಿನಿಂದ ಎರಡು ಸ್ವರ. ಒಂದು, ದೀರ್ಘ ಧ್ವನಿಯಿಂದ ಕೂಡಿದ್ದ ‘ಟ್ವುಟೂ ಟ್ವುಟೂ ಟೂ....ಟು’ ಎಂಬ ಕೂಗಿಗೆ ನಮ್ಮ ಪಕ್ಕದಲ್ಲೇ ಇದ್ದ ಪೊದೆಯಿಂದ ಇನ್ನೊಂದು ಹಕ್ಕಿ ಪ್ರತಿಕ್ರಿಯೆಯಾಗಿ ಅದೇ ತೆರನಾದ ಕೂಗನ್ನ ಹೊಮ್ಮಿಸುತ್ತಿತ್ತು.

‘ಡೈಸಿ ನಿಲ್ಲೂ...’ ಎಂದೆ.

ಎರಡು ನಿಮಿಷ ನಡೆದಾಡದೆ ಒಂದು ಕಡೆ ನಿಂತಾಗ, ಅವು ಒಂದೊಂದಾಗಿ ಒಂದು ಕಡೆಯಿಂದ ದಾರಿಯ ಇನ್ನೊಂದು ಕಡೆಗೆ ತೋಟಕ್ಕೆ ಹಾರತೊಡಗಿದವು. ನಮ್ಮ ಬಯಲು ಸೀಮೆಯ ಕಡೆ ಕಾಣದ ಇವುಗಳ ಹೆಸರು ‘ಉಬ್ಬು ಕಂಠದ ಹರಟೆಮಲ್ಲ’ (puff throated babbler). ಗುಂಪಲ್ಲಿ ಇರುವ ಇವು ಹರಟೆ ಹೊಡೆಯುತ್ತಾ, ಕೀಟಗಳನ್ನು ಹಿಡಿದು ತಿನ್ನುತ್ತಾ ಜೀವಿಸುತ್ತವೆ.

ಡೈಸಿಯ ಕ್ಯಾಮೆರಾ ಧ್ವನಿ ಮಾಡಿತು. ಅಂದದ ಒಂದೆರಡು ಚಿತ್ರಗಳ ಸೆರೆಹಿಡಿದು. ಮುಂದೆ ಸಾಗುತ್ತಾ ಕೈಮರವೆಂಬ ಜಾಗದ ಮನೆಗಳವರೆಗೂ ಚಲಿಸಿ, ಹಾದಿ ತಪ್ಪಿದ ಅರಿವಾಗಿ ವಾಪಸ್ಸು ಹ್ಯಾಂಡ್‌ಪೋಸ್ಟಿನಿಂದ ಎಡಕ್ಕೆ ಸಾಗಿ ವೃತ್ತದಿಂದ ದಾರಿ ಹೋದ ಹಾಗೆ ನಡೆದಾಗ ಎಡಬದಿ ಹಳದಿ ಬಣ್ಣ ಉಳಿಸಿಕೊಂಡ ‘ನಿರುತ್ತರ’ದ ಗೇಟು ಸ್ವಾಗತಿಸಿತು.

ಎರಡು ನಿಮಿಷ ನಿಂತು ನಮ್ಮನ್ನ ಸದಾ ತಿದ್ದುವ ಶಾಲೆಯ ಮಾಸ್ತರು ಅಲ್ಲದಿದ್ದರೂ ನಮಗೆಲ್ಲರಿಗೂ ಮಾಸ್ಟರ್ ಆದಂತಹ ತೇಜಸ್ವಿ ಹಾಗೂ ಅವರ ಸಂಗಾತಿ ರಾಜೇಶ್ವರಿ ಅಮ್ಮನವರನ್ನು ನೆನೆದು, ಅಲ್ಲಿನ ಸುತ್ತಲಿನ ಚಿಲಿಪಿಲಿ ಗಾನದೆಡೆಗೆ ಗಮನಕೊಟ್ಟಾಗ ಅದ್ಭುತವಾದ ಪಕ್ಷಿಸಂಪತ್ತು ಕಾಣಿಸುತ್ತಿತ್ತು.

ಈ ಕಾಡಿಗೇ ಸೀಮಿತವಾದ ನಾಚಿಕೆ ಸ್ವಭಾವದ, ವೆಲ್ವೆಟ್ ಬಣ್ಣದ ವಸ್ತು ಮುಖದ ಎದುರು ಇದೆಯೇನೋ ಎಂಬಂತ ಕಲ್ಪನೆ ಮೂಡಿಸುವ ‘ವೆಲ್ವೆಟ್ ಮುಖದ ನಟ್ಯಾಚ್’ ಹಕ್ಕಿಯ ದರ್ಶನವಾಯ್ತು. ಕೆಂಪು ಬೀಕ್, ನೀಲಿಯ ಮೇಲ್ಭಾಗ, ಕೆಳಭಾಗ ಬಿಳಿ, ಮರದ ಕಾಂಡ ಕೊಂಬೆಗಳಲ್ಲಿ ತಲೆಕೆಳಗು ಮಾಡಿ ಕೆಳಮುಖವಾಗಿ ಜಿಗಿಯುತ್ತಾ ಕೀಟಾನ್ವೇಷಣೆ ಮಾಡುತ್ತಿತ್ತು. ಬಿಳಿ ಹೊಟ್ಟೆಯ ಮರಕುಟಿಕ, ಜೇಡರಬೇಟೆ ಹಕ್ಕಿ, ಕಪ್ಪು ಹಿಂಗತ್ತಿನ ಮೊನಾರ್ಕ್, ಪರ್ವತ ಮೈನಾ, ಬಿಳಿ ಕದುಗ ಇವುಗಳನ್ನು ವೀಕ್ಷಿಸಿ, ಅದನ್ನು ‘ಇಂಡಿಯನ್ ಇ-ಬರ್ಡ್’ ಎಂಬ ತಾಣದಲ್ಲಿ ದಾಖಲು ಮಾಡಿ, ಇಲ್ಲಿಗೆ ಬಂದುದರ ಮೂಲ ಉದ್ದೇಶ ಮುಗಿಸಿ, ಅಲ್ಲಿಂದ ಎತ್ತಿನ ಭುಜದ ದುರ್ಗಮ ಕಾಡಿನ ಕಡೆ ಡೈಸಿ ಬೈಕ್ ತಿರುಗಿಸಿದಳು. ಅಲ್ಲಿನ ಕೀಟಗಳ ಹುಡುಕುವುದು ನಮ್ಮ ಮೂಲ ನಿರೀಕ್ಷೆಯಾಗಿತ್ತು.

ಕಾಲ್ನಡಿಗೆ ಶುರುವಾಗುತ್ತಿದ್ದಂತೆ ರಣ ಬಿಸಿಲಿನ ಅನುಭವ. ಬೆಂಗಳೂರು, ಮತ್ತಿತರ ಕಡೆಗಳಿಂದ ಬಂದಂತಹ ಹಲವು ಪ್ರವಾಸಿಗರು ಬಿರು ಹೆಜ್ಜೆಗಳನ್ನಿಡುತ್ತಾ ಸಾಗುತ್ತಿದ್ದರು. ಕೆಲವರ ಸೆಲ್ಫಿಗಳು, ರೀಲ್ಸ್‌ಗಳು ನಡೆಯುತ್ತಿದ್ದವು. ಹಸುರು ಹೊದಿಕೆಯ ಕಾಡು ಮಾತ್ರ ಡಿಂಮ್ಮನೆ ತೂಕಡಿಕೆಯಲ್ಲಿತ್ತು.

7ನೇ ಪುಟಕ್ಕೆ...

ಪಾಂಡಿತ್ಯದ ಗಣಿ...125 ರ ಈ ಮಣಿ

ಶೈಲಜ

ಯಾರನ್ನೂ ನೋಯಿಸದ, ಎಲ್ಲರನ್ನೂ ಅವರಿಚ್ಛೆಯಂತೆ ಬದುಕಲು ಬಿಡುತ್ತಿದ್ದಂತಹ ಆರ್ದ್ರ ಜೀವಿ; ಇಂದಿನ ಕಾಲಮಾನಕ್ಕೆ ಅನ್ಯಗ್ರಹ ಜೀವಿಯೇನೋ ಎಂದು ಭಾಸವಾಗುವ ಉದಾತ್ತ ಚೇತನ ಖ್ಯಾತ ವಾಗ್ಗೇಯಕಾರ ಎಚ್. ಯೋಗನರಸಿಂಹಂ. ಮೇ 17 ಅವರ 125ನೇ ಜಯಂತಿ (ಜನನ 1897). ಸಂಗೀತ, ಸಂಸ್ಕೃತ, ಇಂಗ್ಲಿಷ್ ಭಾಷಾಶಾಸ್ತ್ರಗಳ ಅಧ್ಯಯನ, ಅಧ್ಯಾಪನ, ಹೀಗೆ ಹಲವು ಕ್ಷೇತ್ರಗಳಲ್ಲಿ ಪರಿಣತಿ ಹೊಂದಿದ್ದ ಇವರು ಸದ್ದುಗದ್ದಲವಿಲ್ಲದೆ ಬದುಕಿದವರು. ಆದರೆ ತಮ್ಮ ಒಡನಾಟಕ್ಕೆ ಬಂದವರೆಲ್ಲರ ಮೇಲೆಯೂ ಅಳಿಸಲಾಗದ ಪರಿಣಾಮವನ್ನು ಬೀರಿದರು. ಯಾವ ವಶೀಲಿಬಾಜಿ ಇಲ್ಲದೆ ಸ್ವಂತ ವರ್ಚಸ್ಸಿನಿಂದ ಬೆಳಗಿ, ಮಕ್ಕಳನ್ನೂ ಹಾಗೆಯೇ ಬೆಳಗುವಂತೆ ಬೆಳೆಸಿದ ಮಹಾನುಭಾವರು.

ಹೊಳೆನರಸೀಪುರದ ನಾರಣಪ್ಪ ಮತ್ತು ಪಾಲಳ್ಳಿ ಲಕ್ಷ್ಮೀದೇವಮ್ಮ ದಂಪತಿಯ ಪುತ್ರರಾದ ಯೋಗನರಸಿಂಹಂ ಅವರ ಅಧ್ಯಯನವೆಲ್ಲಾ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ. ಉತ್ಕೃಷ್ಟ ದರ್ಜೆಯ ವಿದ್ಯಾರ್ಥಿ. ಪ್ರೊ. ಹಿರಿಯಣ್ಣ, ಡಾ. ರಾಧಾಕೃಷ್ಣನ್, ಪ್ರೊ. ವಾಡಿಯಾ ಮುಂತಾದವರ ಅಚ್ಚುಮೆಚ್ಚಿನ ಶಿಷ್ಯ. ಸಂಸ್ಕೃತ, ತತ್ತ್ವಶಾಸ್ತ್ರ, ಆಂಗ್ಲಭಾಷೆಗಳಲ್ಲಿ ಅಸಾಧಾರಣ ಪಾಂಡಿತ್ಯ. ಆದರೆ, ಅವರು ಮನಸಾರೆ ಒಲಿದು, ತಮ್ಮನ್ನು ಕೊಟ್ಟುಕೊಂಡಿದ್ದು ಸಂಗೀತಕ್ಕೆ.

1917ರಲ್ಲೇ ಮೈಸೂರಿನ ಮಹಾರಾಜ ಕಾಲೇಜಿನ ಸಂಸ್ಕೃತ ಟ್ಯೂಟರ್ ಆದರು. ಅತ್ಯಂತ ಪ್ರೀತಿಯಿಂದ, ರಸಭರಿತವಾಗಿ, ವಿದ್ವತ್‌ಪೂರ್ಣವಾಗಿ ಆದರೆ ಎಲ್ಲರಿಗೂ ಮನದಟ್ಟಾಗುವಂತೆ ಪಾಠ ಮಾಡುತ್ತಿದ್ದರು ಎಂದು ಅವರ ವಿದ್ಯಾರ್ಥಿ, ಕವಿ ವಿ. ಸೀತಾರಾಮಯ್ಯ ಹೇಳುತ್ತಿದ್ದರು. ನಂತರದಲ್ಲಿ ಅವರು ಶಿಕ್ಷಣ ಇಲಾಖೆಯಲ್ಲಿ ವಿಭಿನ್ನ ಸ್ಥಳಗಳಲ್ಲಿ, ವಿಭಿನ್ನ ಹುದ್ದೆಗಳನ್ನು ನಿರ್ವಹಿಸಿ, ಡಿಸ್ಟ್ರಿಕ್ಟ್ ಎಜುಕೇಷನ್ ಆಫೀಸರ್(ಡಿಇಒ) ಆಗಿ ನಿವೃತ್ತಿ ಹೊಂದಿದರು.

ಕೆಲಕಾಲ ಮೈಸೂರಿನ ಶಾರದಾವಿಲಾಸ ಶಿಕ್ಷಣ ಸಂಸ್ಥೆಯಲ್ಲೂ ಕಾರ್ಯ ನಿರ್ವಹಿಸಿದ್ದರು. ಸಹಜ ಗಾಂಭೀರ್ಯ, ಹಿತಮಿತವಾದ ಮಧುರ ಧ್ವನಿ, ಸೌಜನ್ಯಪೂರಿತ ನಡವಳಿಕೆ, ಸರಳ ಸದಭಿರುಚಿಯ ಉಡುಗೆ ತೊಡುಗೆ, ನಿಷ್ಕೃಷ್ಟವಾದ ಜ್ಞಾನ, ಆಳವಾದ ವಿಚಾರ, ಇವು ಇವರ ವ್ಯಕ್ತಿತ್ವದ ಹೆಗ್ಗುರುತುಗಳಾಗಿದ್ದವು. ಇಂತಹ ಶುದ್ಧ ಸುಸಂಸ್ಕೃತ ಜೀವಕ್ಕೆ ಸಹಧರ್ಮಿಣಿಯಾಗಿ ಬಂದವರು ಸರಸ್ವತಿ. ಸ್ವಾತಂತ್ರ್ಯ ಸಂಗ್ರಾಮ ಹಾಗೂ ಸಮಾಜಸೇವೆಗೆ ಬದುಕನ್ನು ಮುಡಿಪಾಗಿಟ್ಟಿದ್ದ, ಗೋಖಲೆಯವರ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಸದಸ್ಯರಾಗಿದ್ದ ವಾಜಪೇಯಂ ವೆಂಕಟಸುಬ್ಬಯ್ಯನವರ ಮಗಳು. ಸ್ವಾತಂತ್ರ್ಯ, ಸ್ವಾಭಿಮಾನ, ಸ್ವಾವಲಂಬನೆ, ಸರಳತೆ, ಕಠಿಣ ಪರಿಶ್ರಮ ಮುಂತಾದ ಮೌಲ್ಯಗಳನ್ನು ಮೈಗೂಡಿಸಿಕೊಂಡಿದ್ದ ಮಹಿಳೆ.

ದಿನನಿತ್ಯದ ಈ ಬದುಕಿನ ನಡುವೆ ಸಂಗೀತ ಅವರ ಉಸಿರಿನ ಜೊತೆಗೇ ಸೇರಿಹೋಗಿತ್ತು. ಸಂಗೀತಲೋಕದಲ್ಲಿ ತಾನೇನೋ ಆಗಬೇಕು, ಕೀರ್ತಿ ಪಡೆದು ಹೆಸರು ಮಾಡಬೇಕು ಎನ್ನುವ ಆಸೆಯೇ ಅವರಿಗಿರಲಿಲ್ಲ. ವೇದಿಕೆ ಕಲಾವಿದರಾಗುವ ಕನಸು ಎಂದೂ ಅವರದಾಗಿರಲಿಲ್ಲ. ತಮ್ಮ ಆನಂದಕ್ಕೆ ತಾವು ಹಾಡಿಕೊಳ್ಳುತ್ತಿದ್ದರು. ದೇಹಕ್ಕೆ ಉಸಿರಿನಷ್ಟೇ ಸಹಜವಾಗಿ ಸಂಗೀತ ಅವರೊಡನಿತ್ತು. ಮನೆಯಲ್ಲಿದ್ದ ಸಂಗೀತಪ್ರೀತಿ ಇವರಲ್ಲಿಯೂ ಚಿಗುರೊಡೆದಿತ್ತು. ವಾಸುದೇವಾಚಾರ್ಯರಲ್ಲಿ ಸೊಗಸಾದ ಪಾಠವಾಗಿತ್ತು. ಹಿತವಾದ, ಶ್ರುತಿಶುದ್ಧವಾದ, ಮೆಲುವಾದ, ಮಧುರಕಂಠ. ತಾರಸ್ಥಾಯಿಯಲ್ಲಿ ಅಂತಹ ಸೌಖ್ಯವಿರಲಿಲ್ಲ. ನೆಮ್ಮದಿಯಾದ, ಆಡಂಬರ-ಅಬ್ಬರ ಇಲ್ಲದ, ಕೇಳುಗರ ಹೃದಯದೊಡನೆ ಸಂವಾದಿಸುವ ಹಾಡುಗಾರಿಕೆ. ಅವರು ಅತ್ಯಂತ ಸಂವೇದನಾಶೀಲ ಕೇಳುಗರು ಮತ್ತು ವಿಮರ್ಶಕರೂ ಆಗಿದ್ದರು.

ಆರಂಭದಲ್ಲಿ ಶ್ಲೋಕಗಳಿಗೆ ರಾಗ ಸಂಯೋಜಿಸುತ್ತಿದ್ದರು. ಓಂಕಾರಪಂಜರಶುಕೀಂ, ಕಾಳಿದಾಸನ ಶ್ಯಾಮಲಾದಂಡಕ ಅವುಗಳಲ್ಲಿ ತುಂಬಾ ಹೆಸರುವಾಸಿ. ನಂತರದಲ್ಲಿ ಕರ್ನಾಟಕ ಸಂಗೀತದ ಎಲ್ಲಾ ಪ್ರಕಾರಗಳಲ್ಲೂ ದೇವ ಎಂಬ ಅಂಕಿತವಿಟ್ಟು ತೆಲುಗು, ಸಂಸ್ಕೃತ ಮತ್ತು ಕನ್ನಡದಲ್ಲಿ ವಾಗ್ಗೇಯ ಕೃತಿಗಳನ್ನು ರಚಿಸಿದರು. ಗೀತಕುಸುಮಾಂಜಲಿ ಇವರ ರಚನೆಗಳ ಸಂಕಲನ. ಹಲವು ರಚನೆಗಳು ತೀರಾ ಅಪರೂಪದ ರಾಗಗಳಲ್ಲಿವೆ. ಇದಕ್ಕೆ ಅವರಿಗೆ ತ್ಯಾಗರಾಜರೇ ಮೇಲ್ಪಂಕ್ತಿ. ಇವರ ರಚನೆಗಳಲ್ಲಿ ರಾಷ್ಟ್ರಧ್ವಜವಂದನೆಯೂ ಇದೆ. ಇವರ ಕೃತಿಗಳ ಸೊಬಗು ಮತ್ತು ವಿದ್ವತ್ತಿಗೆ ಮಾರುಹೋದ ಎಂ.ಎಸ್. ಸುಬ್ಬುಲಕ್ಷ್ಮಿಯವರು ಇವರ ಕೃತಿಗಳನ್ನು ಹಾಡಿ ಒಂದು ಧ್ವನಿಮುದ್ರಿಕೆಯನ್ನೇ ಹೊರತಂದರು.

ಶ್ರೀಯುತರು ವೀಣೆ ಶೇಷಣ್ಣ ಮತ್ತು ಮೈಸೂರು ಸದಾಶಿವರಾಯರ ಕೃತಿಗಳ ಸಂಕಲನವನ್ನು ಸಂಪಾದಿಸಿದ್ದಾರೆ. ಬರ್ಟ್ರಂಡ್ ರಸೆಲ್ಲನ ಕಾನ್‌ಕ್ವೆಸ್ಟ್ ಆಫ್ ಹ್ಯಾಪಿನೆಸ್ ಮತ್ತು ಮಹರ್ಷಿ ಕರ್ವೆಯವರ ಆತ್ಮಕಥೆಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ನಾಟಕ ಅವರಿಗೆ ಪ್ರಿಯವಾದ ಮತ್ತೊಂದು ಕ್ಷೇತ್ರವಾಗಿತ್ತು. ಭಾಸನ ಊರುಭಂಗವನ್ನು ಮಹಾರಾಜ ಕಾಲೇಜಿನಲ್ಲಿ ಪ್ರದರ್ಶಿಸಿದ್ದರು. ಆಕಾಶವಾಣಿಗಾಗಿ ಕಾಳಿದಾಸನ ಶಾಕುಂತಲವನ್ನು ಅಳವಡಿಸಿದ್ದರು. ಎಡಿಎ ರಂಗಮಂದಿರದಲ್ಲಿ ಹಲವು ನಾಟಕಗಳಲ್ಲಿ ಪಾತ್ರ ವಹಿಸಿದ್ದರು. ಫ್ರೆಂಚ್ ನಾಟಕಕಾರ ಮೋಲಿಯರ್‌ನ ನಾಟಕವನ್ನು ಕನ್ನಡಕ್ಕೆ 'ಮನ್ಸಿಲ್ಲದ್ಮದ್ವೆ' ಎಂದು ಭಾಷಾಂತರಿಸಿದ್ದರು.

ತೆರೆದ ಮನಸ್ಸಿನ ಯೋಗನರಸಿಂಹಂ ಅವರಲ್ಲಿ ಕರ್ಮಠತೆ ಎನ್ನುವುದೇ ಇರಲಿಲ್ಲ. ಹಿಂದುಸ್ತಾನಿ, ಘಜಲ್, ಸಿನಿಮಾ ಸಂಗೀತವನ್ನೂ ಹೀಗೆ ಎಲ್ಲಾ ಬಗೆಯ ಸಂಗೀತವನ್ನು ಸುಖಿಸುತ್ತಿದ್ದರು. ಆಸಕ್ತಿ ಇರುವುದನ್ನು ಕಲಿಯುವುದೇ ಶಿಕ್ಷಣ ಎಂದು ಭಾವಿಸಿ ಮಕ್ಕಳಿಗೆ ಅವರವರ ಆಸಕ್ತಿಯ ಬೆನ್ನತ್ತಲು ಅವಕಾಶ ನೀಡಿದ್ದರು. ವ್ಯಕ್ತಿಸ್ವಾತಂತ್ರ್ಯವನ್ನು ತುಂಬಾ ಗೌರವಿಸುತ್ತಿದ್ದರು. ದ್ವೇಷ ಹಾಗೂ ಅಸಹನೆ ಎನ್ನುವುದೇ ಅವರಲ್ಲಿರಲಿಲ್ಲ. ಅಸಹನೆಯ ದಳ್ಳುರಿಯಲ್ಲಿ ಬೆಂದು ಹೋಗುತ್ತಿರುವ ಈ ಕಾಲಘಟ್ಟದಲ್ಲಿ ನಮಗೆ ಮಾದರಿಯಾಗಬೇಕಾದಂಥವರು ಯೋಗನರಸಿಂಹಂ.

ಸ್ಮರಣೆ

ಎಚ್. ಯೋಗನರಸಿಂಹಂ

> ಮಧುರ ಧ್ವನಿ, ಆಳವಾದ ವಿಚಾರದ ವಾಗ್ಗೇಯಕಾರರಾಗಿದ್ದ ಯೋಗನರಸಿಂಹಂ ಅವರ 125ನೇ ವರ್ಷದ ಜಯಂತಿಯ ಸಂದರ್ಭವಿದು. ಆ ನೆಪದಲ್ಲೊಂದು ಈ ಮೇರು ವ್ಯಕ್ತಿತ್ವದ ಮೇಲೊಂದು ಇಣುಕು ನೋಟ

ಹೀಟ್ ಆಫೀಸರ್

6ನೇ ಪುಟದಿಂದ...

ಈ ಕಾರಣಕ್ಕೆ ಶಹರ ಪ್ರವೇಶಿಸುತ್ತಿದ್ದಂತೆಯೇ ತಾಪಮಾನದ ಏರಿಕೆಯ ಅನುಭವ ಆಗುವುದು. ಶಹರಗಳಲ್ಲಿ ಈಗ ತುರ್ತಾಗಿ ಆಗಬೇಕಿರುವುದು ತಂಪೆರೆಯುವ ಕೆಲಸ. ಗಿಲ್ಬರ್ಟ್ ಅವರಿಗೆ ದೊರೆತ ಈ ಹೊಸ ಹುದ್ದೆಯೂ ಇಂಥದೊಂದು ದೂರದೃಷ್ಟಿ ಚಿಂತನೆಯ ಪರಿಣಾಮವೇ.

ಹೀಟ್ ಆಫೀಸರ್ ಎಂಬ ಹೊಸ ಹುದ್ದೆಯನ್ನು ಸೃಷ್ಟಿಸಿದ ಸಮಾಚಾರ ಎಲ್ಲೆಡೆ ಹರಡಿದ ಪರಿಣಾಮ ಗ್ರೀಸ್‌ನ ಅಥೆನ್ಸ್, ಅಮೆರಿಕದ ಫಿನಿಕ್ಸ್ ನಗರ, ಆಫ್ರಿಕಾದ ಫ್ರೀಟೌನ್, ಚಿಲಿಯ ಸಾಂಟಿಯಾಗೊ ನಗರಗಳಲ್ಲೂ ಇಂತಹ ಅಧಿಕಾರಿಗಳು ಬಂದಿದ್ದಾರೆ. ವರ್ಷದಿಂದ ವರ್ಷಕ್ಕೆ ಮೈಬಿಸಿ ಏರಿಸಿಕೊಳ್ಳುತ್ತಿರುವ ಬೆಂಗಳೂರಿನಲ್ಲೂ ಶಾಖ ಅಧಿಕಾರಿಯನ್ನು ಬರಮಾಡಿಕೊಳ್ಳುವ ದಿನಗಳು ದೂರವಿಲ್ಲ.

1998ರಿಂದ 2017ರ ಅವಧಿಯಲ್ಲಿ ಜಾಗತಿಕವಾಗಿ ಸುಮಾರು ಒಂದು ಲಕ್ಷ ಎಪ್ಪತ್ತು ಸಾವಿರದಷ್ಟು ಜನ ಉಷ್ಣ ಮಾರುತಗಳಿಂದ ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದಾರೆ. 2010ರ ಮೇ ತಿಂಗಳಿನಲ್ಲಿ ಗುಜರಾತಿನ ಅಹ್ಮದಾಬಾದ್ ತನ್ನ ಇತಿಹಾಸದ ಅತ್ಯಂತ ಘೋರ ಉಷ್ಣ ಮಾರುತವನ್ನು ಅನುಭವಿಸಿತು. 1334 ಜನರ ಪ್ರಾಣಕ್ಕೆ ಎರವಾದ ಈ ಮಾರುತವು ಸ್ಥಳೀಯ ಆಡಳಿತಕ್ಕೆ ಎಂದೂ ಮರೆಯದಂತಹ ಪಾಠ ಕಲಿಸಿತು. ಇದರಿಂದ ಎಚ್ಚೆತ್ತ ಆಡಳಿತ ವರ್ಗವು 2013ರಲ್ಲಿ ಉಷ್ಣ ಕ್ರಿಯಾಯೋಜನೆಯನ್ನು ರೂಪಿಸಿತು. ಉಷ್ಣ ಮಾರುತಗಳು ಬರುವ ಮೊದಲು ಮಾಡಿಕೊಳ್ಳಬೇಕಾದ ಪೂರ್ವತಯಾರಿಗಳು, ಬಂದಾಗ ನಿರ್ವಹಿಸಬೇಕಾದ ಕರ್ತವ್ಯಗಳ ಕುರಿತು ಈ ಯೋಜನೆಯಲ್ಲಿ ವಿವರವಾಗಿ ಚರ್ಚಿಸಲಾಗಿತ್ತು. ಇದೇ ರೀತಿಯ ಯೋಜನೆಯನ್ನು ನಂತರ ಅನೇಕ ರಾಜ್ಯಗಳು, ನಗರ ಸಂಸ್ಥೆಗಳು ಅಳವಡಿಸಿಕೊಂಡವು.

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಸಮತಟ್ಟಾದ ಪ್ರದೇಶಗಳಲ್ಲಿ 40 ಡಿಗ್ರಿ ಹಾಗೂ ಘಟ್ಟದ ಮೇಲಿನ ಎತ್ತರದ ಪ್ರದೇಶಗಳಲ್ಲಿ 30 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಿನ ತಾಪಮಾನವಿದ್ದಲ್ಲಿ ಅದು ಉಷ್ಣ ಮಾರುತದ ಲಕ್ಷಣ. ಬೇಸಿಗೆಯಲ್ಲಿ ಮಳೆ ಬಾರದಿರುವಿಕೆಯೇ ನಮ್ಮಲ್ಲಿನ ಉಷ್ಣ ಮಾರುತಗಳಿಗೆ ಮೂಲ ಕಾರಣವಾಗಿದ್ದು, ಈ ಪ್ರಕ್ರಿಯೆ ಬರುವ ವರ್ಷಗಳಲ್ಲಿ ಮತ್ತಷ್ಟು ಹೆಚ್ಚಲಿದೆ ಎಂದು ಪರಿಣತರು ಎಚ್ಚರಿಸಿದ್ದಾರೆ.

ಕಳೆದ ಏಪ್ರಿಲ್ ತಿಂಗಳಿನಲ್ಲಿ ದೆಹಲಿಯೂ ಸೇರಿದಂತೆ ಉತ್ತರಭಾರತದಲ್ಲಿ ಹಲವೆಡೆ ಉಷ್ಣ ಮಾರುತದ ಕಾರಣ ಶಾಲಾ ಕಾಲೇಜುಗಳಿಗೆ ರಜೆ ನೀಡಲಾಗಿತ್ತು. ಕೆಲ ದಿನಗಳ ಹಿಂದೆ ಪಾಕಿಸ್ತಾನದ ಸಿಬಿ ನಗರವು 47 ಡಿಗ್ರಿ ಸೆಲ್ಸಿಯಸ್ ತಾಪಮಾನವನ್ನು ದಾಖಲಿಸಿ ಉತ್ತರ ಗೋಳಾರ್ಧದ ಅಂದಿನ ಅತಿಹೆಚ್ಚು ತಾಪಮಾನವೆಂಬ ಕುಖ್ಯಾತಿಗೆ ಒಳಗಾಯಿತು. ಈ ಬೇಸಿಗೆಯಲ್ಲಿ ನಮ್ಮ ಶಹರಗಳು ಪೈಪೋಟಿಗೆ ಬಿದ್ದಂತೆ ಮೈಬಿಸಿ ಏರಿಸಿಕೊಳ್ಳುವುದನ್ನು ನೋಡುತ್ತಿದ್ದಲ್ಲಿ ನಮ್ಮಲ್ಲೂ ಶಾಖ ಅಧಿಕಾರಿಗಳ ಸಂಖ್ಯೆ ಹೆಚ್ಚುವುದರಲ್ಲಿ ಅನುಮಾನವಿಲ್ಲ.

ಅರೆರೆ ಮಿಲನ ಪತಂಗ!

6ನೇ ಪುಟದಿಂದ...

ಬಿಸಿಲು ಹೆಚ್ಚಾದ್ದರಿಂದ ಹಕ್ಕಿಗಳು, ಕೀಟಗಳು ಸ್ತಬ್ಧವಾಗಿ ಒಂದೆಡೆ ನೆಲೆಸಿ ವಿಶ್ರಮಿಸುತ್ತಿದ್ದವು. ದೂರದ ಎತ್ತಿನ ಭುಜದಂತೆ ಕಾಣುವ ಆ ಬೆಟ್ಟದ ಭುಜ 'ಈ ಬಿಸಿಲಲ್ಲಿ ನನ್ನ ತಲುಪಿ ನೋಡುವ' ಎನ್ನುವ ಸವಾಲೆಸೆದಂತೆ ಕಾಣುತ್ತಿತ್ತು. ಅಲ್ಲಲ್ಲಿ ಸಣ್ಣ ಸಣ್ಣಗೆ ಬೆಳೆದಿದ್ದ ಈಚಲು ಹಣ್ಣಿನ ಗೊಂಚಲುಗಳ ಅರಿಶಿಣ ಬಣ್ಣದ ಹಣ್ಣುಗಳ ಮೂಲ ಯಾವ ಹಕ್ಕಿಯ ಹಿಕ್ಕೆಯೋ! ಕೆಲವು ಹಣ್ಣಾಗಿದ್ದವುಗಳನ್ನು ಡೈಸಿ ಹುಡುಕಿ ತಂದಳು. ರುಚಿಕರವಾಗಿದ್ದವು.

ಬೆಳಕಿನ ಕಿರಣಗಳನ್ನ ನೆಲಕ್ಕೆ ತಾಕದ ಹಾಗೆ ಹರಡಿದ್ದ ತುಸು ದಟ್ಟ ಹಸುರಿನ ಎಲೆಗಳ ಚಾವಣಿಯ (canopy) ಕೆಳಗಿನ ನೆಲದಲ್ಲಿ ತೇವಾಂಶವಿದ್ದ ಕಾರಣ ತಂಪಾಗಿತ್ತು. ಕೈಹಿಡಿದು ಜಗ್ಗುತ್ತಾ ಡೈಸಿ 'ಹೇ, ನಿಂಗೇನು ಅನ್ನಿಸುತ್ತಿಲ್ಲವಾ?' ಎಂದಳು ವಾರೆ ನೋಟದಿಂದ.

'ಅನ್ನಿಸ್ತಿದೆ. ಮೇಲೆ ಬಿಸಿ, ಪಕ್ಕದಲ್ಲಿ ಬೆವರಿನ ಘಮಲು' 'ಅಷ್ಟೇನಾ''ಅ..ಲ್ಲಾ.. ಇನ್ನೂ...' ಮಾತು ಕೊನೆಯಾಗಲೇ ಇಲ್ಲ, ಅಷ್ಟರಲ್ಲೇ, ಯಾವುದೋ ಜೀವಿ ಹಾವಿನ ತಲೆ ಹೆಡೆ ಬಿಚ್ಚಿದ ಹಾಗೆ ಭಾಸವಾಗಿ, ಒಮ್ಮೆಲೇ ಬೆಚ್ಚಿದ ಡೈಸಿ 'ಅರೇ ಇಲ್ಲೇನೊ ಇದೆ' ಎಂದು ಚೀರಿದಳು. ಬೆಚ್ಚಿ ಹಿಂದೆ ಸರಿದಾಗ ನನ್ನ ಕೈ ಡೈಸಿಯ ಕೈಯನ್ನ ಗಟ್ಟಿಯಾಗಿ ಹಿಡಿದಿತ್ತು. ನಿಧಾನಕ್ಕೆ ಕಣ್ಣರಳಿಸಿ ನೋಡಿದೆವು. ಅಂಗೈ ಅಗಲದ ಹಸಿರೆಲೆ, ಬಲಿತ ಕಾಂಡ ನಡುವೆತ್ತರಕ್ಕೆ ಬೆಳೆದು ನಿಂತು ಈ ವಿಶ್ವದ ವಿಶೇಷ ಜೀವಿಯ ನೆಲೆಗೆ ಸಾಕ್ಷಿಯಾಗಿತ್ತು, ಈ ಯಾವುದೋ ಜಾತಿಯ ಕಾಡು ಗಿಡ! ಅದರ ಮುಂದಿನ ರೆಕ್ಕೆಗಳು (forewings) ತ್ರಿಭುಜಾಕೃತಿಯಂತೆ. ಎರಡೂ ಕಡೆಯ ಮೇಲ್ಭಾಗದ ಅಂಚಿಗೆ ವಿಸ್ತರಣೆಯಿದ್ದು, ಕಪ್ಪು ಕಣ್ಣುಗಳುಳ್ಳ ಒಂದು ಹಾವಿನ ತಲೆಯ ಹಾಗೆ ಕಾಣಿಸಿತು. ಇಡೀ ರೆಕ್ಕೆಗಳೇ ಹಾವಿನಂತೆ ಕಂಡರೂ ನಿಧಾನಕ್ಕೆ ಗಮನಿಸಿದರೆ ಇದೊಂದು ದೈತ್ಯ ಚಿಟ್ಟೆ ಎಂದು ತಿಳಿಯಬಹುದಿತ್ತು. ಆದರೆ ಇದು ಚಿಟ್ಟೆಯಲ್ಲ. ಇದು ವಿಶ್ವದಲ್ಲೇ ದೊಡ್ಡದಾದ ಪತಂಗ! ಇದನ್ನು ಟಿ.ವಿ, ಪುಸ್ತಕಗಳಲ್ಲಿ, ನಮ್ಮ ಕಾಲೇಜಿನ ಕೀಟಶಾಸ್ತ್ರದ ತರಗತಿಗಳಲ್ಲಿ ಕೇಳಿದ್ದೇವೆ ಹೊರತು ಕಣ್ಣಿಂದ ಕಂಡಿರಲಿಲ್ಲ.

ದೊಡ್ಡದಾದ ವಿಶಾಲ ರೆಕ್ಕೆಗಳು. ರೆಕ್ಕೆಗಳ ಮೊದಲ ಹೊರ ಅರ್ಧ ಕೆಂಪುಗಂದು ಬಣ್ಣಕ್ಕೆ ಇದ್ದರೆ ಒಳ ಅರ್ಧ ಗಾಢಕಂದು ಬಣ್ಣದ್ದು. ಒಳ-ಹೊರ ಭಾಗವ ವಿಭಾಗಿಸುವ ಅಲೆಗಳಂತಹ ಬಿಳಿಯ ಬಣ್ಣದ ಪಟ್ಟಿ ಕಾಣುತ್ತಿತ್ತು. ಮೇಲಿನಿಂದ ಕೆಳಗೆ ಮೂರು ಬಿಳಿಯ ನಿರಾಕಾರದ ಮಚ್ಚೆಗಳು. ಹೊರ ಅಂಚಿನ ಉದ್ದಕ್ಕೂ ಅಲೆಯಾಗಿ ಹರಡಿರುವ ಕಪ್ಪು, ಬಿಳಿ, ಪಿಂಕ್, ತಿಳಿನೀಲಿ ಬಣ್ಣದ ಬಾರ್ಡರ್ ಗೆರೆಗಳು. ದೊಡ್ಡ ಗಾತ್ರದ ಹಾಗೂ ವಿಶೇಷವಾಗಿ ಕಾಣುವ ಎರಡು ಆಂಟೆನಾ. ದಪ್ಪನಾದ ಹೊಟ್ಟೆ.

ಸುಮಾರು 8-9 ಇಂಚಿನ ಅಗಲವಾದ ರೆಕ್ಕೆಯನ್ನು ಹೊಂದಿರುವ ಪ್ರಪಂಚದ ಅತಿದೊಡ್ಡ ಪತಂಗವಾದ ಇದರ ಹೆಸರು 'ಅಟ್ಲಾಸ್ ಪತಂಗ' (Atlas moth). ಇದನ್ನು ನೋಡುತ್ತಾ ಡೈಸಿ ಕಣ್ಣುಗಳು ಹೊಳೆಯುತ್ತಿದ್ದವು. ನಾನು ಆ ಚಂದ್ರನಂತಿದ್ದ ಆ ಹೊಳಪು ಕಣ್ಣುಗಳನ್ನು ಸೆರೆ ಹಿಡಿಯುತ್ತಿದ್ದೆ.

'ಅರೇ, ಐದ್ ಮಾರ್ಕ್ಸ್ ಮಿಸ್ ಮಾಡಿಕೊಂಡ್ನಲ್ಲಾ...' ಎಂದು ಬೊಬ್ಬೆ ಶುರುವಿಟ್ಟಳು. 'ಏನ್ ಡೈಸಿ...? ನಿಧಾನ ನಿಧಾನ. ಅದು ಹಾರಿ ಹೋಗೋದೂ...' 'ಕೀಟ ಸಂಗ್ರಹಣೆ ಮಾಡುವಾಗ ಇದು ಸಿಗಬಾರದಿತ್ತೇ... ಮಿಸ್ ಆಯ್ತಲ್ಲಾ ಐದು ಮಾರ್ಕ್ಸು..' ಬೇಸರಿಸಿಕೊಳ್ಳುತ್ತಿದ್ದಳು. ನಗುತ್ತಾ, 'ಬಿಡು, ಹೀಗ ಸಿಕ್ಕಿದೆಯಲ್ಲಾ...' ಎನ್ನುತ್ತಾ ಅದರ ನಾನಾ ರೀತಿಯ ಭಂಗಿಗಳಿಂದ ಫೋಟೊ ಕ್ಲಿಕ್ಕಿಸುವ ಸಾಹಸ ಮಾಡುತ್ತಾ ಗಮನಿಸಿದರೆ, ಅದರ ತಲೆ ಭಾಗದ ಅಂಗಗಳ ಯಾವ ಚಲನೆಯೂ ಕಾಣಿಸುತ್ತಿರಲಿಲ್ಲ. ವಿಶೇಷವೆಂದರೆ ಇವುಗಳಿಗೆ ಬಾಯಿ ಎಂಬ ಅಂಗವೇ ಇರುವುದಿಲ್ಲ. ಸಾಯುವ ತನಕ ಆಹಾರ ಸೇವನೆಯನ್ನೂ ಮಾಡುವುದಿಲ್ಲ. ಮತ್ತೇನಿದರ ಕೆಲಸ? ಮತ್ತೆ ಹೇಗೆ ಇದು ಬದುಕುತ್ತದೆ ಎಂಬ ಕುತೂಹಲ ನಮಗೆಲ್ಲರಿಗೂ ಬರುತ್ತದೆ.



ಹೌದು, ಇದು ಬದುಕುವುದೇ ಹೆಣ್ಣಿನ ಜತೆಗಿನ ಮಿಲನಕ್ಕಾಗಿ! ಮಿಲನವೇ ಇದರ ಮೂಲ ಉದ್ದೇಶ. ಇದಕ್ಕೆ ಸಹಾಯ ಮಾಡಲು ವಿಶೇಷವಾಗಿ ರೂಪುಗೊಂಡಿರುವ 'ಆಂಟನಾ' ನೋಡುವುದಕ್ಕೆ ಗರಗಸದ ಚೂಪು ಹಲ್ಲುಗಳ ಹಾಗೆ.

ಸುಮಾರು ಕಿಲೊ ಮೀಟರ್‌ಗಳ ದೂರದಿಂದ ಹೆಣ್ಣು ಪತಂಗ ಹೊರಸೂಸುವ ಫೆರಮೋನ್‌ಗಳನ್ನು ಗ್ರಹಿಸಿ ಅಲ್ಲಿಯತನಕ ಹುಡುಕಿಕೊಂಡು ಹೋಗಿ (ಅದೂ ರಾತ್ರಿ ಮಾತ್ರ ಹಾರುವುದು. ಬೆಳಗ್ಗೆ ಕಡಿಮೆ) ಹೆಣ್ಣು ಪತಂಗದೊಡನೆ ಮಿಲನವಾದ ನಂತರ ಇದರ ಜೀವನ ಸಾರ್ಥಕ ಹಾಗೂ ಅಂತ್ಯದ ಕ್ಷಣಗಣನೆ.

ಲಾರ್ವಾವಸ್ಥೆಯ ಸಮಯದಲ್ಲಿ ಶೇಖರವಾಗುವ ಕೊಬ್ಬಿನ ಅಂಶ ಹೊಟ್ಟೆಯ ಆಸುಪಾಸಿನಲ್ಲಿ ಇರುತ್ತದೆ. ಅದು ಗೂಡಿನಿಂದ (ಕಕೂನ್) ಹೊರ ಜಗತ್ತಿಗೆ ಬಂದಾಗ ರೆಕ್ಕೆಗಳನ್ನು ಪಡೆದು ಬಾಯಿಯನ್ನು ಪಡೆಯದೆ ಬಂದಿರುತ್ತದೆ. ಇದರ ಜೀವಿತಾವಧಿ ಬಹಳ ಕಡಿಮೆ. ಸುಮಾರು ಒಂದು ವಾರ ಅಥವಾ ಎರಡು ವಾರ!

ಶೇಖರವಾಗಿರುವ ಕೊಬ್ಬಿನ ಶಕ್ತಿಯೇ ಇದು ಹಾರಲು, ಜೀವಿಸಲು ಮೂಲಾಧಾರ. ಹಾಗಾಗಿ ಇದರ ಒಂದೊಂದು ರೆಕ್ಕೆ ಬಡಿತಕ್ಕೂ ಬೆಲೆ ತೆರುವುದು. ಮಿತಿಯಾದ ಶಕ್ತಿ ಬಳಕೆಯು ಇದರ ಜವಾಬ್ದಾರಿ.

'Attacus atlas' ಎಂಬ ವೈಜ್ಞಾನಿಕ ಹೆಸರು. ಅಟ್ಲಾಸ್ ಪತಂಗದ ರೆಕ್ಕೆಗಳಿಗೆ ಹೋಲಿಸಿದರೆ ಹೊಟ್ಟೆಯ ಭಾಗ ತುಂಬಾ ಚಿಕ್ಕದು. ಹೆಣ್ಣು ಪತಂಗ ಗಂಡಿಗಿಂತ ಗಾತ್ರದಲ್ಲಿ ದೊಡ್ಡದು. ಈ ವ್ಯತ್ಯಾಸವನ್ನು ಲೆಪೆಡಾಪ್ಟರಾಗಳಲ್ಲಿ (leps) ಸಾಮಾನ್ಯವಾಗಿ ಗಮನಿಸಬಹುದು. ಕಾಡುಗಳಲ್ಲಿ ಮಾತ್ರ ಕಾಣುವ ಇವುಗಳಲ್ಲಿ ಹೆಣ್ಣು ಗೂಡಾವಸ್ಥೆಯಿಂದ ಹೊರಬಂದಾಗ ಗಾಳಿಯ ಚಲನೆ ಉತ್ತಮವಾಗಿರುವ ಕಡೆ ಆವಾಸವನ್ನು ಹುಡುಕುತ್ತದೆ. ಇದರ ಹಿಂದಿನ ಸೋಜಿಗವೆಂದರೆ ತಾನು ಹೊರಬಿಡುವ ಪೆರಮೋನ್‌ಗಳು ಉತ್ತಮವಾಗಿ ಹರಡಿ, ಚಲಿಸಿ ಗಂಡಿಗೆ ತಲುಪಬೇಕು ಹಾಗೂ ಆ ಗಂಡು ತನ್ನನ್ನು ಹುಡುಕಿಕೊಂಡು ಬಂದು ಮಿಲನವಾಗಬೇಕು, ಸಂತತಿ ಮುಂದುವರೆಯಬೇಕು ಎಂಬುದು.

ಇಂತಿಪ್ಪ ಪತಂಗದ ನಾನಾ ಚಿತ್ರಗಳನ್ನು ಸೆರೆ ಹಿಡಿಯುತ್ತಿದ್ದ ಡೈಸಿಗೆ ಅದನ್ನು ಅಲ್ಲಿಂದ ಎಬ್ಬಿಸಿ, ಅದು ಹಾರುವಾಗ ಅದರ ಅಂದವನ್ನು ನೋಡುವ ಮನಸ್ಸಾಯಿತು.

'ಏ ಬೇಡ ಮಾರಾಯ್ತಿ, ಅದು ವಿಶ್ರಾಂತಿ ಮಾಡ್ತಿದೆ' 'ಹೆದುರುಪುಕ್ಲ ಅದು 'ಮಾತ್' ಕಣಪ್ಪಾ ಕಚ್ಚಲ್ಲಾ' 'ಆದ್ರೂ ಬೇಡ್ವೆ...' ಎಂಬ ನನ್ನ ಗೋಳನ್ನ ಸಹಿಸುತ್ತಾ, ಮನ್ನಿಸುತ್ತಾ, 'ಸರಿ ಓಕೆ...' ಎಂದೇಳುತ್ತಾ ನೋಡುತ್ತಿದ್ದಳು. ಇವತ್ತಿನ ಪಯಣದ ಸಾರ್ಥಕ ಭಾವ ಅವಳ ಮುಖದಲ್ಲಿತ್ತು. ಅಂಗೈ ಹಿಡಿದಿದ್ದ ಕೈಯಲ್ಲಿ ಉತ್ಸಾಹದ ಒಲವಿತ್ತು... ಜೊತೆಗೆ ಬೆವರೂ!

ಮುನ್ನೋಟ 15-05-2022 ರಿಂದ 21-05-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಪಾರಂಪರಿಕವಾಗಿ ನಡೆದು ಬಂದ ವ್ಯವಹಾರಗಳನ್ನು ಬಿಡುವುದು ಬೇಡ. ಸಿನಿಮಾ ರಂಗದವರಿಗೆ ಉತ್ತಮ ಅವಕಾಶಗಳು ದೊರೆತು ಹೆಚ್ಚು ಸಂಪಾದನೆ ಹಾಗೂ ಹೆಸರು ಬರುತ್ತದೆ. ಪಶುಪಕ್ಷಿಗಳಿಗೆ ಆಹಾರ ನೀಡಬೇಕೆಂಬ ಹಂಬಲ ಉಂಟಾಗಿ ಅದನ್ನು ಕಾರ್ಯಗತ ಮಾಡುವಿರಿ. ಆದಾಯದಲ್ಲಿ ಸಾಕಷ್ಟು ಏರಿಕೆಯನ್ನು ಕಾಣಬಹುದು. ಆರೋಗ್ಯದಲ್ಲಿ ವ್ಯತ್ಯಯ ಕಂಡುಬಂದರೂ ಆತಂಕವೇನಿಲ್ಲ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಕುಟುಂಬದ ಸದಸ್ಯರೊಡನೆ ಆರ್ಥಿಕ ವಿಚಾರಗಳ ಬಗ್ಗೆ ಚರ್ಚೆ ನಡೆಸುವ ಸಾಧ್ಯತೆ ಇದೆ. ಅತಿಯಾದ ಆತ್ಮಗೌರವ ನಿಮ್ಮನ್ನು ಕಾಡಬಹುದು. ಯಾವುದೇ ರೀತಿಯ ಮಾತುಕತೆಯಲ್ಲಿ ನಿಧಾನವಾಗಿ ವ್ಯವಹರಿಸಿದಲ್ಲಿ ನಿಮ್ಮ ಕಾರ್ಯಗಳು ಆಗುವವು. ಹಣದ ಒಳಹರಿವು ನಿಮ್ಮ ನಿರೀಕ್ಷೆಯ ಮಟ್ಟದಲ್ಲಿ ಇರುತ್ತದೆ. ನಿಮ್ಮ ಕೆಲಸಕಾರ್ಯಗಳಲ್ಲಿ ಸ್ನೇಹಿತರ ಸಹಕಾರ ಸಿಗುತ್ತದೆ. ಹಿಡಿದ ಕೆಲಸವನ್ನು ಸಾಧಿಸಿ ಜನಮನ್ನಣೆಯನ್ನು ಪಡೆಯುವಿರಿ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಕುಟುಂಬದ ಸದಸ್ಯರಿಂದಲೇ ಸಣ್ಣಪುಟ್ಟ ವಿರೋಧಗಳನ್ನು ಕಾಣಬಹುದು. ಎಲ್ಲರೊಂದಿಗೂ ಸೌಹಾರ್ದಯುತವಾಗಿ ಮಾತನಾಡಿದಲ್ಲಿ ಸಮಸ್ಯೆ ಬಗೆಹರಿಯುತ್ತದೆ. ನಿಮ್ಮೆಲ್ಲಾ ಕೆಲಸಗಳಲ್ಲಿ ಸಕಾರಾತ್ಮಕ ಬದಲಾವಣೆಯನ್ನು ಕಾಣಬಹುದು. ಅನೇಕ ದಿನಗಳಿಂದ ವೃತ್ತಿಯಲ್ಲಿ ಕಾಡುತ್ತಿದ್ದ ಸಮಸ್ಯೆಗಳನ್ನು ಹಿರಿಯ ಅಧಿಕಾರಿಗಳ ಬಳಿ ಚರ್ಚೆ ಮಾಡಿ ಪರಿಹರಿಸಿಕೊಳ್ಳುವಿರಿ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಬೇರೆಯವರ ವಿಚಾರಗಳ ಬಗ್ಗೆ ತಲೆಕೆಡಿಸಿಕೊಳ್ಳುವುದು ಬೇಡ. ಆರ್ಥಿಕ ಸ್ಥಿತಿಯು ಪ್ರಗತಿಯನ್ನು ಕಾಣುತ್ತದೆ. ಹಿತಶತ್ರುಗಳ ಬಗ್ಗೆ ಹೆಚ್ಚು ಜಾಗರೂಕತೆಯಿಂದ ಇರುವುದು ಒಳ್ಳೆಯದು. ನಿಮ್ಮ ಉಪಕಾರಿ ಗುಣವನ್ನು ಕೆಲವರು ದುರುಪಯೋಗ ಮಾಡಿಕೊಳ್ಳಬಹುದು. ಹಣದ ಒಳಹರಿವು ನಿಮ್ಮ ನಿರೀಕ್ಷೆಯಷ್ಟು ಇದ್ದೇ ಇರುತ್ತದೆ. ಹೊಸ ಸ್ಫೂರ್ತಿಯೊಂದಿಗೆ ಕೆಲಸವನ್ನು ಮಾಡುವಿರಿ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ನಿಮ್ಮ ಪ್ರಾಮಾಣಿಕತೆಯ ಫಲವು ನಿಮ್ಮನ್ನು ಅರಸಿ ಬರುತ್ತದೆ. ಉದ್ಯೋಗದಲ್ಲಿ ಮೇಲೇರುವ ಸಾಧ್ಯತೆ ಇದೆ. ಕರಕುಶಲ ವಸ್ತುಗಳನ್ನು ತಯಾರಿಸುವವರಿಗೆ ಬೇಡಿಕೆ ಹೆಚ್ಚುತ್ತದೆ. ಸರ್ಕಾರದಿಂದ ಬರಬೇಕಾಗಿದ್ದ ಸಹಾಯಧನ ಬರುತ್ತದೆ. ಆರ್ಥಿಕ ಸ್ಥಿತಿಯು ಉತ್ತಮವಾಗಿರುತ್ತದೆ. ಖರ್ಚು ಅತಿಯಾಗಿರುತ್ತದೆ. ವೃತ್ತಿಯಲ್ಲಿ ಭರವಸೆ ಮೂಡುವ ಸಂತೋಷದ ವಿಚಾರಗಳು ಕೇಳಿಬರುತ್ತವೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ವೃತ್ತಿಯಲ್ಲಿ ಅತಿಯಾದ ಒತ್ತಡ ಕಾಣಿಸಿದರೂ ಸ್ನೇಹಿತರ ಸಹಕಾರದಿಂದ ನಿರಾಳವಾಗುತ್ತದೆ. ಚಿಕ್ಕಮಕ್ಕಳ ಯೋಗಕ್ಷೇಮದ ಬಗ್ಗೆ ಹೆಚ್ಚು ಗಮನವಿರಲಿ. ಅನಿವಾರ್ಯ ಬದಲಾವಣೆಗೆ ಒಳಗಾಗಿ ಇದ್ದದ್ದನ್ನು ಕಳೆದುಕೊಳ್ಳುವುದರ ಜೊತೆಗೆ ನಿಮ್ಮತನವನ್ನೂ ಕಳೆದುಕೊಳ್ಳಬೇಡಿ. ವೈದ್ಯರಿಗೆ ಅತಿಯಾದ ಕಾರ್ಯದೊತ್ತಡ ಬರಬಹುದು, ಇದನ್ನು ಸಮಾಧಾನದಿಂದ ನಿಭಾಯಿಸಿರಿ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಯಾವುದೇ ಯೋಜನೆಯನ್ನು ರೂಪಿಸುವ ಮುನ್ನ ಅದರ ಬಗ್ಗೆ ಅವಲೋಕನ ಬಹಳ ಅಗತ್ಯ. ಮಿತ್ರರ ನೇತೃತ್ವದಲ್ಲಿ ವ್ಯವಹಾರ ಸುಗಮವಾಗಿ ನಡೆಯುತ್ತದೆ. ಯಾವುದೋ ಒಂದು ಸ್ಥಾನವನ್ನು ಪಡೆಯಲು ತಂತ್ರಗಾರಿಕೆ ನಡೆಸಿ ಅದರಲ್ಲಿ ಸಫಲತೆಯನ್ನು ಕಾಣುವಿರಿ. ಕಟ್ಟಡ ವಿನ್ಯಾಸಕಾರರಿಗೆ ಹೆಚ್ಚು ಕೆಲಸ ದೊರೆಯುತ್ತದೆ. ಅಚಾತುರ್ಯದಿಂದ ಆಡಿದ ಮಾತು ನಿಮ್ಮನ್ನು ಮುಜುಗರಕ್ಕೆ ಸಿಲುಕಿಸಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ನೌಕಾಯಾನದಲ್ಲಿ ಕೆಲಸ ಮಾಡುವವರಿಗೆ ಒಳ್ಳೆಯ ಸಮಯ. ಸಮಾಜ ಸೇವಕರು ಸಮಾಜಕ್ಕೆ ಉತ್ತಮ ಸಂದೇಶವನ್ನು ಕೊಡುವ ಕೆಲಸ ಮಾಡುವರು. ಸ್ಥಿರಾಸ್ತಿಯ ವಿಚಾರದಲ್ಲಿ ಹೆಚ್ಚು ತಗಾದೆ ಉಂಟಾಗಬಹುದು. ಹಣದ ಒಳಹರಿವು ನಿಮ್ಮ ನಿರೀಕ್ಷೆಯಷ್ಟು ಇರುತ್ತದೆ. ಸಂಗಾತಿಯ ಆದಾಯದಲ್ಲಿ ಸಾಕಷ್ಟು ಏರಿಕೆಯನ್ನು ಕಾಣಬಹುದು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಆದಾಯದಲ್ಲಿ ಸ್ಥಿರತೆಯನ್ನು ಕಾಣಬಹುದು. ಹೊಸ ಆದಾಯ ತರುವ ಮಾರ್ಗದ ಬಗ್ಗೆ ಆಲೋಚನೆ ಮಾಡುವಿರಿ. ಪರಿಸರವಾದಿಗಳಿಗೆ ಹೆಚ್ಚಿನ ಬೆಲೆ ಮತ್ತು ಗೌರವ ದೊರೆಯುತ್ತದೆ. ಸ್ವಯಂ ಉದ್ಯೋಗ ಮಾಡುವವರು ಉತ್ತಮ ಆದಾಯದ ನಿರೀಕ್ಷೆ ಮಾಡಬಹುದು. ಎಲ್ಲಾ ಅಡೆತಡೆಗಳನ್ನು ಮೀರಿ ನಿಮ್ಮ ಕೆಲಸವನ್ನು ಸಾಧಿಸುವಿರಿ. ಸತ್ಪುರುಷರ ದರ್ಶನ ಭಾಗ್ಯವಿರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಆದಾಯದ ಹೊಸ ದಾರಿ ಗೋಚರವಾಗುವ ಸಾಧ್ಯತೆ ಇದೆ. ಖರ್ಚನ್ನು ಸಾಕಷ್ಟು ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದು ಬಹಳ ಮುಖ್ಯ. ಯಂತ್ರಾಗಾರಗಳಲ್ಲಿ ಅಗ್ನಿ ಅವಘಡಗಳು ಸಂಭವಿಸುವ ಸಾಧ್ಯತೆ ಇದೆ. ಒಳ್ಳೆಯ ಕೆಲಸದ ನಿರೀಕ್ಷೆಯಲ್ಲಿ ಇರುವಿರಿ. ನಿಮ್ಮ ಪ್ರತಿಭೆಗೆ ತಕ್ಕಂತೆ ಪ್ರಬುದ್ಧ ನಡವಳಿಕೆಯನ್ನು ಎಲ್ಲರ ಮುಂದೆ ಪ್ರದರ್ಶಿಸಿ ಗೌರವಕ್ಕೆ ಪಾತ್ರರಾಗುವಿರಿ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಬಂಧುಗಳು ನಿಮಗೆ ಕಿರಿಕಿರಿ ಮಾಡಿದರೂ ದೈವಕೃಪೆಯಿಂದ ನೀವು ಪಾರಾಗುವಿರಿ. ವಿದ್ಯಾರ್ಥಿಗಳಿಗೆ ಬೇಕಾದ ಎಲ್ಲಾ ರೀತಿಯ ಅನುಕೂಲ ದೊರೆಯುತ್ತದೆ. ಸರ್ಕಾರಿ ನೌಕರರಿಗೆ ಮೇಲಧಿಕಾರಿಗಳಿಂದ ಸಹಾಯ ದೊರೆಯುತ್ತದೆ. ಪ್ರೀತಿ-ಪ್ರೇಮದಲ್ಲಿ ಅನಿರೀಕ್ಷಿತ ತಲೆನೋವು ಎದುರಾಗಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಬ್ಯಾಂಕಿನಿಂದ ಹಣಕಾಸು ಸಹಾಯದ ನಿರೀಕ್ಷೆಯಲ್ಲಿರುವ ನಿಮಗೆ ಈ ಸಹಾಯ ಒದಗಿಬರುತ್ತದೆ. ಸಂಗಾತಿ ಆರೋಗ್ಯದಲ್ಲಿ ವ್ಯತ್ಯಾಸ ಕಾಣಬಹುದು. ಸಂಗಾತಿಯ ಧೋರಣೆ ಕೆಲವೊಮ್ಮೆ ನಿಮಗೆ ಬೇಸರ ತರಿಸಬಹುದು. ಹಣದ ಒಳಹರಿವು ಸಾಮಾನ್ಯವಾಗಿರುತ್ತದೆ. ವಿದೇಶಗಳಿಂದ ಬರುವ ಬಂಧುಗಳಿಂದ ನಿಮಗೆ ಅನುಕೂಲವಾಗುತ್ತದೆ. ಅತಿಯಾದ ಉದ್ವೇಗ ನಿಮ್ಮನ್ನು ಕಾಡಬಹುದು.

ಪದಬಂಧ 2738



ಮೇಲಿನಿಂದ ಕೆಳಕ್ಕೆ

1. ವನದಿಂದ ಪ್ರೇರಿತ ಪದ್ಯ 3
2. ಸೀರೆಯಲ್ಲಿ ಇಳಿಬಿಟ್ಟ ಮಡಿಕೆ 3
3. ಹಾರಿಪ ತಲೆಕೆಳಕಾಗಲು ಪರಿಹಾಸದ ಆರಂಭವಾಗುತ್ತದೆ 3
4. ಮತ್ತೆ ಹಿಂತಿರುಗಿ 3
7. ಮದುವೆಗೆ ದಿಬ್ಬದ ಮೇಲೆ ಹೊರಟ ಮೆರವಣಿಗೆ 3
9. ಚಿನ್ನದಂತಹ ಒಳ್ಳೆಯ ಬಣ್ಣ 3
10. ನೌಕೆ ನಡೆಸುವ ಅಂಬಿಗ 3
11. ಸಿಂಧೂ ನಾಗರಿಕತೆಯ ಪ್ರಮುಖ ನಗರ ತಲೆಕೆಳಗು 3
12. ಅಮೃತಮಯಿ ಈ ಭೂಮಿ 3
13. ರುಚಿಯಾದ ರಸದಿಂದ ತುಂಬಿದ ಮಾವು 3
16. ಸೂರ್ಯ ಚಂದ್ರರು ಗ್ರಸ್ತರಾದಾಗ ಹಣ ಮಾಡಬಹದೆ? 3
18. ದೈತ್ಯ ಸ್ವರೂಪಿ ಹೆಣ್ಣು 3
19. ಜನ್ಮ ಭೂಮಿ ನಮ್ಮ ತಾಯಿಗಿಂತಲೂ ಶ್ರೇಷ್ಠ 3
20. ಮೇಲೆ ಮೇಲೆ ಹಾರುವ ನಮ್ಮ ಮೂರು ಬಣ್ಣದ ಬಾವುಟ 3
21. ತಲೆಕೆಳಕಾದ ಸಾಮಿಪ್ಯ 3
22. ತಿಮಿಂಗಲದಂತೆ ಆವರಿಸುವ ಕತ್ತಲು 3

ಎಡದಿಂದ ಬಲಕ್ಕೆ

1. ಕಾವ್ಯ ರಚಿಸುವವನ ವಾಸ್ತವವಲ್ಲದ ಚಿತ್ರಣ 5
3. ಸಿಂಹಾಸನದ ಮೇಲೆ ವಿರಾಜಮಾನನಾದ ದಶರಥ ಪುತ್ರ 5
5. ರೀ, ರೀ ದುರಸ್ತಿ ಮಾಡಿಸಿ 3
6. ತಿಂಗಳ ಎರಡನೇ ದಿನ ಹೊಸದಾಗಿ ಹೀಗೆ 5
8. ಹೊದೆಯುವುದಕ್ಕೆ ಬೆಚ್ಚಗಿದ್ದರು ಇದರ ಮೇಲೆ ನಡೆಯುವುದೂ ಚೆನ್ನ 5
10. ವಿಷ್ಣುವಿನ ತಂದೆ ಕನ್ನಡಿಗನಾದಲ್ಲಿ ಆತನ ಹೆಸರು 5
12. ಬಣ್ಣಗಳ ಬೆರೆಕೆಯಾಗಿ ಭಿನ್ನ ಕುಲಗಳ ಸೇರ್ಪಡೆ 5
14. ರಂಜಿಸು, ಮುದ ನೀಡು 3
15. ಘಟನೆಗಳ ನಿರೂಪಣೆಯನ್ನು ಒಟ್ಟುಗೂಡಿಸಿರುವ ಪ್ರಕಟಣೆ 5
17. ಭೋಜರಾಜನ ಸುಸಂಸ್ಕೃತ ನಗರ 5
19. ಹತ್ತು ವರ್ಷಕ್ಕೊಮ್ಮೆ ಮಂದಿಯನ್ನು ಲೆಕ್ಕ ಹಾಕುವ ಪ್ರಕ್ರಿಯೆ 5
21. ದೇಶದಲ್ಲಿ ಬೆಳೆ ಪೈರು ಸಮೃದ್ಧವಾಗಲು ಆಮೂಲಾಗ್ರ ಪರಿವರ್ತನೆ 5
23. ರಾಗದಿಂದ ರಂಜಿಸುವ ಹುಡುಗಿ 3
24. ಯಾವುದೇ ಪ್ರಯೋಜನಕ್ಕೆ ಬಾರದ್ದು 5
25. ನಿಜಕ್ಕೂ ನಿಜವೆಂಬುದು ಅತಿ ಆಕರ್ಷಕ 5

ಪದಬಂಧ ಉತ್ತರ -2737

ಮೇಲಿಂದ ಕೆಳಕ್ಕೆ

1. ಹಣತೆ 2.ಸಭಾಭವನ 3. ಪರಂತಪ 4.ಸಿಹಿಸಮಾಚಾರ 6.ಮಾತಾಮಹಿ 8.ಬಸವಜಯಂತಿ 10.ರಬಕವಿ 14.ಗಧಾಪ್ರಹಾರ 16.ತಾಮರಸ 19.ಯದ್ಭಾವ

ಎಡದಿಂದ ಬಲಕ್ಕೆ

1. ಹರಿದಾಸ 3.ಪಗಾರೆ 4.ಸಿದ್ಧತೆ 5.ಭಗವಂತ 6.ಮಾಧವ 9.ನಗಾರ 11.ಮಾತೃಪ್ರೇಮ 12.ಬಲದೇವ 13.ಹಿಮ್ಮೊಗ 15.ರಕ್ಷಿತಾ 17.ಧಾರವಿ 18.ಮಹಾವಿಪ್ರ 19.ಯಯಾತಿ 20.ಸಾಹಸ 21.ರಥೋತ್ಸವ

ಆದಿಕಾವ್ಯ: ಎಲ್ಲರಿಗಾಗಿ ತ್ರಾಸಲ್ಲದ ಕ್ಲಾಸು

ರಘುನಾಥ ಚ.ಹ.

ಒಳನೋಟ

‘ಅಕ್ಷಯ ಕಾವ್ಯ’, ‘ಅವ್ಯಯ ಕಾವ್ಯ’ದ ಬೃಹತ್ ಕಾವ್ಯಸಂಪುಟಗಳ ನಂತರ ಕೆ.ವಿ. ತಿರುಮಲೇಶರ ಹೊಸ ಪ್ರಕಟಣೆ, ‘ಆದಿಕಾವ್ಯ’.

ಸಮಾಜದಲ್ಲಿ ‘ಎಲ್ಲಕೂ ಮೊದಲು’ ಮಕ್ಕಳೆನ್ನುವ ನಂಬಿಕೆಯಿಂದಾಗಿ ಮಕ್ಕಳ ಕಾವ್ಯಕ್ಕೆ ‘ಆದಿಕಾವ್ಯ’ವೆನ್ನುವ ಗರಿ ಒಪ್ಪುತ್ತದೆ. ತಿರುಮಲೇಶರ ‘ಆದಿಕಾವ್ಯ’ ಹತ್ತು ಸಂಕಲನಗಳಲ್ಲಿ ಪ್ರಕಟಗೊಂಡಿದೆ.

10 ಕೃತಿ, 1496 ಪುಟ, 925 ಪದ್ಯಗಳು. ಇದು ನಿಸ್ಸಂಶಯವಾಗಿಯೂ ಚಿಣ್ಣರ ಹಬ್ಬ.

ಮಕ್ಕಳಿಗಾಗಿ ಪ್ರೀತಿ–ಕಾಳಜಿಯಿಂದ ಬರೆದವರು ಕನ್ನಡದಲ್ಲಿ ಕಡಿಮೆ. ಪಂಜೆ, ಕುವೆಂಪು, ಬೇಂದ್ರೆ, ರಾಜರತ್ನಂ, ಸುಮತೀಂದ್ರ ನಾಡಿಗ, ಎಚ್ಚೆಸ್ವಿ, ಶ್ರೀನಿವಾಸ ಉಡುಪ, ಆನಂದ ಪಾಟೀಲ – ಹೀಗೆ ಮಕ್ಕಳಿಗಾಗಿ ಬರೆಯುವುದನ್ನು ಸಾಂಸ್ಕೃತಿಕ ಕರ್ತವ್ಯವೆಂದು ಭಾವಿಸಿದವರ ಸಂಖ್ಯೆ ಹೆಚ್ಚಿಲ್ಲ. ಈ ಪುಟ್ಟ ಪರಂಪರೆಯ ಭಾಗವಾಗಿ ತಿರುಮಲೇಶರ ದೊಡ್ಡ ಹೆಜ್ಜೆ ಗಮನಸೆಳೆಯುವಂತಹದು. ಚಿಣ್ಣರಿಗಾಗಿ ಹತ್ತು ಪದ್ಯಪುಸ್ತಕಗಳನ್ನು ಒಂದೇ ಏಟಿಗೆ ತಂದವರು ತಿರುಮಲೇಶರೇ ಮೊದಲಿಗರಿರಬೇಕು. ಆ ದೃಷ್ಟಿಯಿಂದಲೂ ಇದು ‘ಆದಿಕಾವ್ಯ’ವೇ.

ಮೇಷ್ಟರೊಬ್ಬರು ಎಳೆಯರಿಗೆ ಕನ್ನಡದ ಮೂಲಕ ಜಗತ್ತನ್ನು ಕಲ್ಪಿಸಿಕೊಳ್ಳುವುದನ್ನು ಕಲಿಸುವ ರೀತಿಯಲ್ಲಿ ತಿರುಮಲೇಶರ ಪದ್ಯಗಳಿವೆ; ಅಜ್ಜನೊಬ್ಬ ಮೊಮ್ಮಕ್ಕಳನ್ನು ತನ್ನ ಅನುಭವದ ಜಗತ್ತಿನಲ್ಲಿ ಸುತ್ತಾಡಿಸುತ್ತಿರುವಂತಿವೆ. ಈ ರಚನೆಗಳಲ್ಲಿ ನೀತಿಬೋಧನೆಯಿಲ್ಲ. ಇರುವುದು, ಪ್ರೇರಣೆ–ರಂಜನೆ; ಭಾಷೆಯ ಬಗ್ಗೆ ಪ್ರೀತಿ ಉಕ್ಕಿಸುವ ಒತ್ತಾಸೆ. ‘ಕನ್ನಡದಲ್ಲಿ ಏನಿದೆ ಏನಿಲ್ಲ / ಕನ್ನಡದಲ್ಲಿ ಎಲ್ಲಾ ಇದೆ / ಇನ್ನೇನು ಬೇಕಿದೆ?’ ಎನ್ನುತ್ತಾರೆ ಕವಿ. ಈ ಮಾತು ಅವರ ಪದ್ಯಲೋಕಕ್ಕೂ ಅನ್ವಯಿಸುವಂತಹದ್ದು. ಪ್ರಾಣಿಜಗತ್ತು, ಊಟದ ವೈವಿಧ್ಯ, ಹೂವು, ಸೂರ್ಯ, ಚಂದ್ರ, ಕಾಡು, ವಾರ, ಅಮ್ಮ, ದಾಸರು, ಕವಿಗಳು, ಗಾಂಧಿ – ‘ಆದಿಕವಿ’ಯ ತೆಕ್ಕೆಯಲ್ಲಿ ಯಾರಿಲ್ಲ? ಏನಿಲ್ಲ?

ಮಕ್ಕಳು ನಂಬುವಂತೆ ಬರೆಯುವುದು ಸುಲಭವಲ್ಲ. ಮಕ್ಕಳನ್ನು ನಂಬಿಸುವುದೂ ಕವಿಯ ಉದ್ದೇಶವಲ್ಲ. ಸುಳ್ಳೆಂದು ತಿಳಿದರೂ ಮಕ್ಕಳು ಇಷ್ಟಪಡುವಂತೆ ಬರೆಯುವುದರಲ್ಲಿ ಪದ್ಯದ ಯಶಸ್ಸು ಇರುತ್ತದೆ. ಅಂಥದೊಂದು ಪದ್ಯ, ಅಮ್ಮ–ಮಗು ಸಂವಾದದ ‘ಅದಕೇ ಅದು ಹಾಗಿರತೆ’ ಕವಿತೆ: ‘ಅಮ್ಮಾ ಅಮ್ಮ ಐಸ್‌ಕ್ರೀಮ್ ಯಾಕೆ / ಅಷ್ಟೊಂದು ತಣ್ಣಗೆ ಇರತೆ? / ಚಂದಿರನಿಂದ ಕೆರೆದಿರ್ತಾರೆ / ಅದಕೇ ಅದು ಹಾಗಿರತೆ’, ‘ಅಮ್ಮಾ ಅಮ್ಮಾ ಕಬ್ಬು ಯಾಕೆ / ತುಂಬಾ ಸಿಹಿಯಾಗಿರತೆ? / ಸಕ್ಕರೆ ತುಂಬಿಸಿ ನಟ್ಟಿರ್ತಾರೆ / ಅದಕೇ ಅದು ಹಾಗಿರತೆ’ – ಹೀಗೆ ಮುಂದುವರೆಯುವ ಕವಿತೆ ಕೊನೆಗೊಳ್ಳುವುದು ತಾರ್ಕಿಕ ನೆಲೆಗಟ್ಟಿನಲ್ಲಿ: ‘ಅಮ್ಮಾ ಅಮ್ಮಾ ಬೆಕ್ಕಿನ ಹಾಗೇ / ಬೆಕ್ಕಿನ ಮರಿ ಯಾಕಿರತೆ? / ತಪ್ಪಿಸಿಕೊಂಡರೆ ಗೊತ್ತಾಗತ್ತೆ / ಅದಕೇ ಅದು ಹಾಗಿರತೆ.’

ಹೊಸ ಪದಗಳ ಪರಿಚಯ, ಪದ ಚಮತ್ಕಾರ, ಪ್ರಾಸದ ಕಚಗುಳಿ, ಆಡಾಡ್ತಾ ಕಲಿಯುವ ಅವಕಾಶ, ಗಣಿತದ ಲೆಕ್ಕಗಳೂ ಒಗಟುಗಳೂ ಇಲ್ಲಿನ ಪದ್ಯಗಳಲ್ಲುಂಟು. ಕನ್ನಡ ಕಾವ್ಯ ಪರಂಪರೆಯನ್ನು ಮಕ್ಕಳಿಗೆ ಅಪ್ರಜ್ಞಾಪೂರ್ವಕವಾಗಿ ತಲುಪಿಸುವ ತಂತ್ರ ಸೊಗಸಾದುದು. ‘ಎಲ್ಲಾ ಬಿಟ್ಟು ಕುಮಾರವ್ಯಾಸ / ಕೋಳಿವಾಡದಲಿ ಯಾಕ್ಹುಟ್ಟಿದ?’ ಎನ್ನುವ ಗಾಂಪರ ಪ್ರಶ್ನೆಗೆ ಗುರುಗಳ ಉತ್ತರ: ‘ಬೆಳಿಗ್ಗೇನೆ ಎದ್ದು ಬರೀಬೇಕಿತ್ತಲ್ಲ ಕಾವ್ಯ / ಆಗಿನ್ ಕಾಲ್ದಲ್ಲಿ ಕೋಳೀನೆ ಕ್ಲಾಕು ಕಣ್ರ.’ ಇದೇ ಗುರು, ‘ಕವಿರಾಜಮಾರ್ಗ’ದ ಬಗ್ಗೆ ಬರೆಯುತ್ತ, ‘ಅಮ್ಮ ದೊಂಗ ರಾಜಾ ನೃಪತುಂಗ’ ಎಂದು ಮಾರ್ಮಿಕವಾಗಿ ಹೇಳಬಲ್ಲರು; ಕವಿ ಚಕ್ರವರ್ತಿಗಳಾದ ಪಂಪ ಪೊನ್ನ ರನ್ನರನ್ನು ಗಲ್ಲಿಗೇರಿಸುವ ಪ್ರಹಸನವನ್ನೂ ಸೃಷ್ಟಿಸಬಲ್ಲರು; ಮಂಕುತಿಮ್ಮನನ್ನು ಮಂಕುಬೊಮ್ಮನಾಗಿಸಬಲ್ಲರು; ಕರ್ವಾಲೋರಿಂದ ಕರ್ವಾಲೋ ಕಾದಂಬರಿ ಓದಿಸಬಲ್ಲರು.

ಭಾಷೆಯ ಬಗ್ಗೆ ಕವಿಗೆ ಮಡಿವಂತಿಕೆಯಿಲ್ಲ. ಆ ಮುಕ್ತತೆಯಿಂದಾಗಿಯೇ ಕನ್ನಡದೊಂದಿಗೆ ಇತರೆ ಭಾಷೆಗಳ ಪದಗಳೂ ಸಹಜವಾಗಿಯೇ ಪದ್ಯದ ಕೈಹಿಡಿದಿವೆ. ಸಿಕಂದರನೊಂದಿಗೆ ಪುರಂದರರನ್ನೂ ಬುಲ್ಲಿನೊಂದಿಗೆ ಇಸ್ತಾಂಬುಲ್ಲನ್ನೂ ಒಟ್ಟಿಗಿಟ್ಟು ನೋಡಲು ಕವಿಗೆ ಸಾಧ್ಯವಾಗಿದೆ. ಈ ಮುಕ್ತಮನಸಿಗೆ ‘ಮಂಡರಗಪ್ಪೆ’ ಒಳ್ಳೆಯ ಉದಾಹರಣೆ: ‘ಮಂಡೂಕಗಳಲಿ ಮಂಡರಗಪ್ಪೆ / ಸ್ಯಾಂಡೋ ಇದ್ದಂಗೆ / ಅಕ್ಕಿಗಳಲಿ ಮಂಡಕ್ಕಿ / ಮರ್ಲಿನ್ ಬ್ರಾಂಡೋ ಇದ್ದಂಗೆ’, ‘ತರಕಾರಿಗಳಲಿ ಉಡುಪಿ ಗುಳ್ಳ / ಗೂಂಡಾ ಇದ್ದಂಗೆ / ತಿಂಡಿಗಳಲಿ ಆಮ್ಲೆಟ್ ಬ್ರ– / ಹ್ಮಾಂಡ ಇದ್ದಂಗೆ!’

ಪದ್ಯದ ಓಘಕ್ಕೆ ತಕ್ಕಂತೆ ಕಾಗುಣಿತದಲ್ಲಿ ರಾಜಿಯಾಗಿದ್ದರೂ, ‘ಕಾಗುಣಿತ’ದ ಮಹತ್ವವನ್ನು ಮೇಷ್ಟ್ರು ಮರೆತಿಲ್ಲ. ‘ಕಾಗುಣಿತ’ ಹೆಸರಿನ ಪದ್ಯವೇ ಇದೆ. ‘ಒತ್ತಿಲ್ಲದ ಕಡೆ ಒತ್ತು ಕೊಟ್ಟರೆ / ಏನಾಗುವುದೋ ಪುಟ್ಟ? / ಕತೆ ಹೋಗಿ ಕತ್ತೆಯಾಗುತ್ತೆ / ಉಳಿದುದ ನೀವೇ ಊಹಿಸಿಕೊಳ್ಳಿ’ ಎಂದು ಮುಂದುವರೆಯುವ ಕಾಗುಣಿತ ಪಾಠ – ಇಳಿ, ಸುಳಿ, ತಲಕಟ್ಟು, ಅಕಾರ ಹಕಾರ, ಹೊಕ್ಕುಳಗಳ ಭಾಷಾ ಮಹತ್ವದ ಬಗ್ಗೆ ಪ್ರಾಸದ ಜೊತೆಗೆ ಮಂದಹಾಸದೊಂದಿಗೆ ಆಪ್ತವೆನ್ನಿಸುತ್ತದೆ.

ಭಾಷೆಯಲ್ಲಿ ಇಲ್ಲದ ಮಡಿವಂತಿಕೆ ಭಾವದಲ್ಲಿರುವುದುಂಟೆ? ‘ಮಡಿವಂತರು ಕೇಳ್ಬೇಡಿ ನಮ್ಮ ಮಿಶ್ರ ಭಾಷೆಯ, ಮಡಿವಂತರು ಓದ್ಬೇಡಿ ನಮ್ಮ ವಿಚಿತ್ರ ಬರಹವ’ ಎನ್ನುವ ಕವಿ ಭಾಷೆಯ ಜೊತೆಗೆ ಸಾಮಾಜಿಕ ಮಡಿಯಿಂದಲೂ ದೂರವುಳಿದವರು. ‘ಮಡಿ ಮಡಿಯೆನುವೆವು’ ಕವಿತೆ ಮಡಿಯನ್ನು ಸೊಗಸಾಗಿ ಹುಡಿಯಾಗಿಸುತ್ತದೆ.

‘ಮಡಿ ಮಡಿಯೆನುವೆವು / ರೇಶಿಮೆಯನುಡುವೆವು / ಮಡಿವುದು ರೇಶಿಮೆ ಹುಳವು / ಅಯ್ಯಾ ಮಡಿವುದು ರೇಶಿಮೆ ಹುಳವು’, ‘ಮಡಿ ಮಡಿಯೆನುವೆವು / ಕೃಷ್ಣಾಜಿನ ತೊಡುವೆವು / ಮಡಿವುದು ಕೃಷ್ಣಾ ಮೃಗವು /ಅಯ್ಯಾ ಮಡಿವುದು ಕೃಷ್ಣಾ ಮೃಗವು’ – ಮಡಿಯ ಹುಸಿತನವನ್ನು ವಿಡಂಬಿಸುವ ಕವಿತೆಯಲ್ಲಿ ವಿಷಾದವೂ ಇದೆ. ಮಡಿ ಏನೆಲ್ಲವನ್ನೂ ಬಲಿ ತೆಗೆದುಕೊಂಡಿದೆ ಎನ್ನುವ ಆ ವಿಷಾದ, ಪದ್ಯಕ್ಕೆ ಪರಿಸರ ಕಾಳಜಿಯ ಆಶಯವನ್ನು ಕಸಿ ಮಾಡಿದೆ. ‘ಎಲ್ಲ ಬೇಕು ಮನುಷ್ಯರಿಗೆ / ಮನುಷ್ಯ ಬೇಕು ಯಾರಿಗೆ?’ ಎನ್ನುವ ವಿಷಾದದಲ್ಲಿ ಅದ್ದಿದ ಸಾಲು ಕೂಡ ಪರಿಸರ ಕಾಳಜಿಯದ್ದೇ.

ಎಳೆಯರಿಗಾಗಿ ಬರೆದ ಕೆಲವು ಪದ್ಯಗಳು ತಿರುಮಲೇಶರು ಈ ಮೊದಲು ಹಿರಿಯರಿಗಾಗಿ ಬರೆದ ಕವಿತೆಗಳನ್ನು ನೆನಪಿಸುವಂತಿವೆ. ಅಂಥದೊಂದು ರಚನೆ ‘ಬೆಕ್ಕಿನ ಕಣ್ಣುಗಳು’: ‘ಕತ್ತಲಾದರೆ ಬೆಕ್ಕಿಗೆ / ಮೊದಲು ಅದರ ಬಾಲ ಮಾಯ / ಆಮೇಲದರ ಕಾಲು ಮಾಯ’ – ಹೀಗೆ ಆರಂಭವಾಗಿ, ಬೆಕ್ಕಿನ ಎಲ್ಲ ಅಂಗಗಳೂ ಕತ್ತಲಲ್ಲಿ ಮಾಯವಾಗಿ, ಅದರ ಕಣ್ಣುಗಳ ಫಳಫಳ ಹೊಳಪಷ್ಟೇ ಉಳಿಯುವ ಕವಿತೆ, ತಿರುಮಲೇಶರ ಬಹುಪ್ರಸಿದ್ಧ ‘ಮುಖಾಮುಖಿ’ ಕವಿತೆಯನ್ನು ನೆನಪಿಸುತ್ತದೆ.

ಪುಸ್ತಕದ ಮಹತ್ವದ ಬಗ್ಗೆ ಹೇಳದಿದ್ದರೆ ಕನ್ನಡ ಮೇಷ್ಟ್ರ ಪಾಠ ಪೂರ್ಣವಾದೀತೆ? ‘ಯಾವಾಗ್ಲೂ ಪುಸ್ತಕ’ ಪದ್ಯ ಹೇಳುತ್ತೆ ಕೇಳಿ: ‘ಯಾಕೋ ಪುಟ್ಟ ಕಿಟ್ಟನ ಕೈಲಿ / ಯಾವಾಗ್ಲೂ ಒಂದು ಪುಸ್ತಕ’, ‘ಹೇಳಲಿಲ್ವೇ ಹಿರಿಯೋರು / ಭೂಷಣ ಅಂತ ಹಸ್ತಕ?’

ಪುಸ್ತಕದ ಮಹತ್ವವನ್ನು ಚಿಣ್ಣರಿಗೆ ಮನದಟ್ಟು ಮಾಡುವ ಮತ್ತೊಂದು ಪದ್ಯ ‘ಓದು ಪುಟ್ಟಿ ಓದೇ.’ ‘ಓದು ಪುಟ್ಟಿ ಓದೇ / ಓದುವೆನ್ನ ಓದೇ / ಸಣ್ಣ ಸಣ್ಣ ಪುಸ್ತಕ / ಬಣ್ಣ ಬಣ್ಣದ ಪುಸ್ತಕ’ ಎನ್ನುವ ಕವಿ, ಏನೆಲ್ಲ ಓದಬೇಕು ಎನ್ನುವುದನ್ನೂ ಪಟ್ಟಿ ಮಾಡಿದ್ದಾರೆ. ಆ ಪಟ್ಟಿಯಲ್ಲಿ ಕುವೆಂಪು, ಬೇಂದ್ರೆ, ಅನಕೃ, ತರಾಸು ಅವರನ್ನೊಳಗೊಂಡ ಕನ್ನಡ ಲೇಖಕಗಡಣದ ಜೊತೆಗೆ ಪತ್ರಿಕೆಗಳನ್ನೂ ಮಾಸಿಕಗಳನ್ನೂ ಓದುವಂತೆ ಕವಿ ಪುಟ್ಟಿಗೆ ಸೂಚಿಸಿದ್ದಾರೆ. ಆದರೆ, ಓದುವ ಸಾವಧಾನ ಕನ್ನಡದ ಮಕ್ಕಳಿಗೆ ಉಳಿದುಕೊಂಡಿದೆಯೆ? ಕನ್ನಡದ ಮಹತ್ವದ ಕವಿಯೊಬ್ಬರ ಈ ‘ಮಕ್ಕಳ ಪರ್ವ’ ಎಳೆಯರಿಗೆ ಮಾತ್ರವಲ್ಲ, ಹಿರಿಯರಿಗೂ ಹಬ್ಬವಾಗಬೇಕಷ್ಟೆ? ಆದರೆ, ಸಾಹಿತ್ಯಲೋಕ ವಿಸ್ಮೃತಿಯಲ್ಲಿರುವ ಹಾಗೂ ಸಹೃದಯರು ದ್ವೀಪಗಳಾಗಿರುವ ದಿನಗಳಲ್ಲಿ ಸಮಸ್ತ ಕನ್ನಡಿಗರನ್ನೂ ತಾಕುವ ಶಕ್ತಿ ಯಾವ ಸೃಜನಶೀಲ ಸಾಹಸಕ್ಕೂ ಇಲ್ಲವೇನೊ? ಈ ವಿರೋಧಾಭಾಸ ಹಾಗೂ ಕನ್ನಡದಲ್ಲಿನ ಮಕ್ಕಳ ಸಾಹಿತ್ಯದ ನಿರಾಶಾದಾಯಕ ಪರಿಸ್ಥಿತಿಯನ್ನೇ ‘ಆದಿಕಾವ್ಯ’ದ ಹತ್ತೂ ಸಂಕಲನಗಳ ತಲಾ 500 ಪ್ರತಿಗಳಷ್ಟೇ ಮುದ್ರಣಗೊಂಡಿರುವುದು ಸಂಕೇತಿಸುತ್ತಿರುವಂತಿದೆ.

ಚಿಕ್ಕಣಿ ರಾಜ
ಪು: 100; ₹100

ಓಡೋ ಪುಟ್ಟಾ ಓಡೋ
ಪು: 100; ₹100

ಬೀಸಿದರೆ ಉದುರಬೇಕು ನನ್ನತ್ರ ಹೂ ಹಣ್ಣು ನಕ್ಷತ್ರ!
ಪು: 160; ₹150

ನಂಬಿ ಕೆಟ್ಟವರಿಲ್ಲ ಪುಟ್ಟನ
ಪು: 156; ₹150

ನಾನಿದ್ದೀನಲ್ಲ ಅಂತಾನ್ ಪುಟ್ಟ
ಪು: 152; ₹150

ನೆನೆ ಪುಟ್ಟ ನೆನೆ
ಪು: 164; ₹150

ಅಟ್ಟದಲ್ಲೇನಿದೆಯೋ ಪುಟ್ಟನಿಗೇ ಗೊತ್ತು
ಪು: 164; ₹150

ಇಂತಪ್ಪ ಪುಟ್ಟ ಈಗೆಲ್ಲಿ ಪುಟ್ಟ?
ಪು: 176; ₹150

ಮೆಟ್ರೋದಲ್ಲಿ ಇಲಿ
ಪು: 156; ₹150

ಓ ಲಲ
ಪು: 164; ₹150

ಪ್ರ: ಅಭಿನವ ಪ್ರಕಾಶನ, ಬೆಂಗಳೂರು.
ಫೋನ್: 9448804905

ಇಂಗ್ಲಿಷ್‌ಗೆ ದಕ್ಕಿದ ಮಧ್ಯಕಾಲೀನ ಕನ್ನಡ ಸಾಹಿತ್ಯ

ಪುರುಷೋತ್ತಮ ಬಿಳಿಮಲೆ

ವಿಮರ್ಶೆ

ಕನ್ನಡವು ಆರಂಭದಿಂದಲೂ ಬೇರೆ ಭಾಷೆಗಳಿಂದ ತನಗೆ ಬೇಕಾದದ್ದನ್ನು ಮುಕ್ತವಾಗಿ ತೆಗೆದುಕೊಂಡು ಬೆಳೆದಿದೆ. ಹೀಗೆ ಕನ್ನಡದ ಒಳಬರುತ್ತಿರುವ ಕೃತಿಗಳಿಗೆ ಹೋಲಿಸಿದರೆ ಕನ್ನಡದಿಂದ ಅನುವಾದಗೊಂಡು ಹೊರಹೋಗುತ್ತಿರುವ ಕೃತಿಗಳ ಸಂಖ್ಯೆ ಇಲ್ಲವೆಂಬಷ್ಟು ಕಡಿಮೆ. ಅದರಲ್ಲೂ ಹಳಗನ್ನಡ ಮತ್ತು ನಡುಗನ್ನಡ ಪಠ್ಯಗಳನ್ನು ಕೇಳುವವರೇ ಇಲ್ಲ. ಮೇಲಿನ ಮಾತಿಗೆ ಅಪವಾದವೆಂಬಂತೆ ಹಿರಿಯ ವಿದ್ವಾಂಸರಾದ ಪ್ರೊ. ಸಿ. ಎನ್. ರಾಮಚಂದ್ರನ್ ಮತ್ತು ಪ್ರೊ. ವಿವೇಕ ರೈಯವರು 2015ರಲ್ಲಿ ಅಭಿಜಾತ ಕನ್ನಡ ಸಾಹಿತ್ಯದ ಬಗ್ಗೆ ಇಂಗ್ಲಿಷಿನಲ್ಲಿ ಉತ್ತಮವಾದ ಕೈಪಿಡಿಯೊಂದನ್ನು ಸಿದ್ಧಪಡಿಸಿದರು. ಆ ಕೆಲಸದ ಮುಂದುವರಿಕೆಯಾಗಿ ಅವರಿಬ್ಬರೂ ಇದೀಗ ಮಧ್ಯಕಾಲೀನ ಕನ್ನಡ ಸಾಹಿತ್ಯದ ಕುರಿತ ಸಮಗ್ರ ಅನ್ನಬಹುದಾದ ಕೈಪಿಡಿಯೊಂದನ್ನು ಇಂಗ್ಲಿಷ್ ಭಾಷೆಯಲ್ಲಿ ಸಿದ್ಧಪಡಿಸಿದ್ದಾರೆ.

ಮಧ್ಯಕಾಲೀನ ಕನ್ನಡ ಸಾಹಿತ್ಯವನ್ನು ಅನುವಾದಕ್ಕೆ ಆಯ್ದುಕೊಳ್ಳುವುದು ಅಷ್ಟು ಸುಲಭವಲ್ಲ. ಹಳಗನ್ನಡದ ವಸ್ತು ಮತ್ತು ಛಂದೋರೂಪಗಳಿಗಾದರೋ ಒಂದು ಶಾಸ್ತ್ರೀಯ ಚೌಕಟ್ಟಿದೆ. ಜೈನ ಕಾವ್ಯಗಳು ತಮಗೆ ತಾವೇ ಒಂದು ಮಾರ್ಗವನ್ನು ನಿರ್ಮಿಸಿಕೊಂಡಿವೆ. ಕಂದ, ಚಂಪೂ ಮತ್ತು ಖ್ಯಾತ ಕರ್ನಾಟಕಗಳನ್ನು ಹೆಚ್ಚಿನ ಕವಿಗಳು ಬಳಸಿಕೊಂಡಿದ್ದಾರೆ. ಆದರೆ ನಡುಗನ್ನಡ ಕಾವ್ಯಗಳು ಹೆಚ್ಚು ಮುಕ್ತ. ಅದರ ಛಂದೋ ವೈವಿಧ್ಯವೇ ಅಚ್ಚರಿ ಹುಟ್ಟಿಸುತ್ತದೆ. ಗಮಕ ಮತ್ತು ಹರಿಕತೆಗಳಿಗೆ ಪೂರಕವಾದ ದೇಸಿ ಛಂದಸ್ಸಿನತ್ತ ನಡುಗನ್ನಡ ಕವಿಗಳು ವಾಲಿಕೊಂಡರು. ಭಕ್ತಿಯು ಎಲ್ಲದರ ಕೇಂದ್ರದಲ್ಲಿದ್ದರೂ ಅದು ಏಕರೂಪದಲ್ಲಿರಲಿಲ್ಲ. ಸುಮಾರು 600 ವರ್ಷಗಳ ಕಾಲ ನಾಡಿನಾದ್ಯಂತ ಹರಡಿದ್ದ ನಡುಗನ್ನಡ ಸಾಹಿತ್ಯದ ಉತ್ತಮಾಂಶಗಳನ್ನು ಗ್ರಹಿಸಲು ವ್ಯಾಪಕ ಓದಿನ ಅಗತ್ಯವಿದೆ. ಜೊತೆಗೆ ಛಂದೋರೂಪಗಳಲ್ಲಿನ ವೈವಿಧ್ಯವನ್ನು ತಿಳಿಯುವ ಶಾಸ್ತ್ರಜ್ಞಾನವೂ ಬೇಕು. ಇವೆಲ್ಲವನ್ನೂ ವಿಸ್ತಾರವಾದ ಚೌಕಟ್ಟಿನಲ್ಲಿ ಗ್ರಹಿಸಿ, ಅಗತ್ಯವಾದದ್ದನ್ನು ಮಾತ್ರ ಆಯ್ದು ಅನುವಾದಿಸಲು ಅನುವಾದಕನಿಗೆ ನಡುಗನ್ನಡ ಸಾಹಿತ್ಯದ ಬಗ್ಗೆ ವಿಶೇಷ ಜ್ಞಾನ ಬೇಕು. ಈ ಕೆಲಸವನ್ನು ರಾಮಚಂದ್ರನ್ ಮತ್ತು ವಿವೇಕ ರೈಗಳು ಜೊತೆ ಸೇರಿ ಯಾವುದೇ ಲೋಪವಿಲ್ಲದೆ ನಿರ್ವಹಿಸಿದ್ದು ಮಹತ್ವದ ಘಟನೆಯಾಗಿದೆ.

ಪುಸ್ತಕದಲ್ಲಿ ಗಮನಿಸಬೇಕಾದ ಎರಡು ಮುಖ್ಯ ಅಂಶಗಳಿವೆ. ಮೊದಲನೆಯದು, ಅನುವಾದಕರು ನಡುಗನ್ನಡದ ಬಹುತೇಕ ಎಲ್ಲ ಪ್ರಕಾರಗಳನ್ನು ಎಚ್ಚರದಿಂದ ಆಯ್ದುಕೊಂಡಿರುವುದು. ವಚನ, ರಗಳೆ, ಷಟ್ಪದಿ, ಕೀರ್ತನೆ, ಸಾಂಗತ್ಯ, ತ್ರಿಪದಿ, ತತ್ವಪದ, ಶತಕ, ಮತ್ತು ಯಕ್ಷಗಾನ ಕಾವ್ಯಗಳು ಇಲ್ಲಿ ಸೇರಿಕೊಂಡಿವೆ. ಈ ಪ್ರಕಾರಗಳು ಬಹುಮಟ್ಟಿಗೆ ನಡುಗನ್ನಡ ಕಾವ್ಯದ ಪ್ರಾತಿನಿಧಿಕ ಛಂದೋರೂಪಗಳೂ ಹೌದು, ಕಾವ್ಯವನ್ನು ಜನರ ನಡುವೆ ಕೊಂಡೊಯ್ದ ವಾಹಕಗಳೂ ಹೌದು. ಇವೆಲ್ಲವುಗಳ ಬಗ್ಗೆ ಬಹಳ ಅಚ್ಚುಕಟ್ಟಾದ ಪ್ರವೇಶಿಕೆಯನ್ನು ಬರೆದಿರುವುದರಿಂದ ಕನ್ನಡೇತರರು ಇವುಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ಎರಡನೆಯದಾಗಿ, ವಿಸ್ತಾರವಾಗಿರುವ ನಡುಗನ್ನಡ ಸಾಹಿತ್ಯದಲ್ಲಿಯ ಪ್ರಧಾನ ಕವಿಗಳನ್ನೂ, ಅವರ ಕಾವ್ಯಗಳ ಮುಖ್ಯ ಭಾಗಗಳನ್ನೂ ಬಹಳ ಎಚ್ಚರದಿಂದ ಅನುವಾದಕ್ಕೆ ಆಯ್ಕೆ ಮಾಡಿಕೊಂಡಿರುವುದು. ನಡುಗನ್ನಡ ಪಠ್ಯಗಳಿಗೆ ಅನೇಕ ಪಾಠ ಭೇದಗಳಿದ್ದರೂ ಬಹುಮಟ್ಟಿಗೆ ಜನರಿಂದ ಸ್ವೀಕೃತವಾದ ಪಠ್ಯಗಳನ್ನು ಮಾತ್ರ ಆರಿಸಿಕೊಂಡು ವಿವಾದಗಳಿಗೆ ಸಿಕ್ಕಿಕೊಳ್ಳದ ಎಚ್ಚರವನ್ನು ಅನುವಾದಕರು ಕಾಪಾಡಿಕೊಂಡಿದ್ದಾರೆ. ಉದಾಹರಣೆಗೆ, ಉತ್ತಂಗಿ ಚೆನ್ನಪ್ಪನವರ ಸರ್ವಜ್ಞನ ವಚನಗಳು, ಕಲಬುರ್ಗಿಯವರ ಹರಿಹರನ ರಗಳೆಗಳು ಇತ್ಯಾದಿ. ಅನುವಾದವು ಸಾಹಿತ್ಯಕ್ಕೆ ಸೀಮಿತವಾಗಿದ್ದರಿಂದ ಶಾಸ್ತ್ರ ಗ್ರಂಥಗಳನ್ನು ಸಹಜವಾಗಿ ಕೈಬಿಡಲಾಗಿದೆ.

ವಚನಕಾರರಲ್ಲಿ ಮಾದಾರ ಚೆನ್ನಯ್ಯ, ಜೇಡರ ದಾಸಿಮಯ್ಯ, ಅಲ್ಲಮ, ಬಸವಣ್ಣ, ಅಕ್ಕ ಮಹಾದೇವಿ, ಮತ್ತು ಚೆನ್ನಬಸವಣ್ಣನವರ ಒಟ್ಟು ಸುಮಾರು 91 ವಚನಗಳು ಇಲ್ಲಿವೆ. ಈ ವಚನಗಳಲ್ಲಿ ಹಲವನ್ನು ಎ.ಕೆ. ರಾಮಾನುಜನ್, ಎಚ್.ಎಸ್. ಶಿವಪ್ರಕಾಶ್, ಓ.ಎಲ್. ನಾಗಭೂಷಣಸ್ವಾಮಿ ಮೊದಲಾದವರು ಈಗಾಗಲೇ ಇಂಗ್ಲಿಷಿಗೆ ತಂದಿದ್ದರೂ ಅನುವಾದಕರು ಅವುಗಳನ್ನು ಎತ್ತಿಕೊಳ್ಳದೆ ತಮ್ಮದೇ ರೀತಿಯಲ್ಲಿ ಅನುವಾದ ಮಾಡಿದ್ದಾರೆ. ಈ ಎಲ್ಲ ಅನುವಾದಗಳನ್ನು ತೌಲನಿಕವಾಗಿ ಪರಿಶೀಲಿಸಲು ಇಲ್ಲಿ ಅವಕಾಶ ಇಲ್ಲ. ಅನುವಾದಗಳು ಮೂಲಕ್ಕೆ ನಿಷ್ಠವಾಗಿವೆ ಮತ್ತು ಸುಲಭವಾಗಿ ಓದುವಂತಿವೆ ಎಂದಷ್ಟೇ ಇಲ್ಲಿ ಹೇಳಬಯಸುತ್ತೇನೆ.

ರಗಳೆಗಳಲ್ಲಿ ಕೋಳೂರು ಕೊಡಗೂಸು, ಷಟ್ಪದಿಗಳಲ್ಲಿ ರಾಘವಾಂಕನ ಹರಿಶ್ಚಂದ್ರ ಕಾವ್ಯದ ಹೊಲತಿಯರ ಪ್ರಸಂಗ, ಕುಮಾರವ್ಯಾಸನ ಕರ್ನಾಟ ಭಾರತ ಕಥಾಮಂಜರಿಯ ವಸ್ತ್ರಾಪಹರಣ, ಕರ್ಣಾವಸಾನ ಪ್ರಸಂಗಗಳು, ಲಕ್ಷ್ಮೀಶನ ಜೈಮಿನಿ ಭಾರತದ ಸೀತಾ ಪರಿತ್ಯಾಗ ಪ್ರಸಂಗ, ಪ್ರಕೃತಿಯಿಂದ ಚಂದ್ರಹಾಸನ ರಕ್ಷಣೆ, ಕನಕದಾಸನ ರಾಮಧಾನ್ಯ ಚರಿತೆಯ ಗೌತಮನ ಆತಿಥ್ಯ ಭಾಗ – ಇವಿಷ್ಟು ಇಲ್ಲಿ ಸೇರಿವೆ. ಚಾಮರಸನ ಪ್ರಭುಲಿಂಗ ಲೀಲೆಯ ಬಗ್ಗೆ ಉಪಯುಕ್ತ ಟಿಪ್ಪಣಿಯನ್ನು ಕೊಡಲಾಗಿದೆ. ದಾಸ ಸಾಹಿತ್ಯದಲ್ಲಿ ಶ್ರೀಪಾದರಾಯ, ವ್ಯಾಸರಾಯ, ವಾದಿರಾಜ ತೀರ್ಥ, ಪುರಂದರ ದಾಸ, ಕನಕದಾಸ, ಹೆಳವನಕಟ್ಟೆ ಗಿರಿಯಮ್ಮ ಮತ್ತು ಹರಪನಹಳ್ಳಿ ಭೀಮವ್ವರ ಆಯ್ದ ಕೀರ್ತನೆಗಳನ್ನು ಅನುವಾದಿಸಲಾಗಿದೆ. ತಮಿಳು, ತೆಲುಗು ಮತ್ತು ಸಂಸ್ಕೃತ ಭಾಷೆಗಳಲ್ಲಿಯ ಭಕ್ತಿ ಹಾಡುಗಳ ಬಗ್ಗೆ ನಡೆದ ಅಧ್ಯಯನಗಳನ್ನು ಗಮನಿಸಿದರೆ ಕನ್ನಡ ಬಹಳ ಹಿಂದೆ ಬಿದ್ದಿದೆ. ಈ ಅನುವಾದಗಳು ಅಂತಹ ಅಧ್ಯಯನಗಳಿಗೆ ಪ್ರೇರಣೆ ನೀಡಬಲ್ಲುವು.

ನಂಜುಂಡನ ಕುಮಾರರಾಮ ಚರಿತೆ ಮತ್ತು ರತ್ನಾಕರವರ್ಣಿಯ ಭರತೇಶ ವೈಭವದಲ್ಲಿ ದೇಸಿ ಛಂದೋರೂಪವಾದ ಸಾಂಗತ್ಯವು ಬಳಕೆಯಾದದ್ದು ವಿಶೇಷ ಘಟನೆ. ಅದರಲ್ಲಿಯೂ ನಂಜುಂಡನು ಐತಿಹಾಸಿಕ ಕಾವ್ಯ ಬರೆದು ಪ್ರಸಿದ್ಧನಾದನು. ಈ ಇಬ್ಬರ ಕಾವ್ಯ ಭಾಗಗಳೂ ಇಲ್ಲಿವೆ. ಉಳಿದಂತೆ ಸರ್ವಜ್ಞನ ವಚನಗಳು, ಮುಪ್ಪಿನ ಷಡಕ್ಷರಿ, ರಾಮಾಪುರ ಬಕ್ಕಪ್ಪಯ್ಯ, ಕಡಕೋಳ ಮಡಿವಾಳಪ್ಪ, ಸರ್ಪಭೂಷಣ ಶಿವಯೋಗಿ ಮತ್ತು ಶಿಶುನಾಳ ಶರೀಫರ ತತ್ವಪದಗಳನ್ನೂ ಅನುವಾದಿಸಲಾಗಿದೆ. ಸೋಮೇಶ್ವರ ಶತಕದ ಬಗ್ಗೆಯೂ ಮಾಹಿತಿಯಿದೆ. ಕೊನೆಯಲ್ಲಿ ಪಾರ್ತಿಸುಬ್ಬನ ಪಂಚವಟಿ ಮತ್ತು ಮುದ್ದಣನ ರತ್ನಾವತಿ ಕಲ್ಯಾಣದ ಕೆಲವು ಯಕ್ಷಗಾನ ಪದ್ಯಗಳನ್ನೂ ಅನುವಾದಿಸಲಾಗಿದೆ. ಬಹುಶಃ ಇದೇ ಮೊದಲ ಬಾರಿಗೆ ಬಹಳ ಸಮರ್ಪಕವಾಗಿ ಯಕ್ಷಗಾನ ಪದ್ಯಗಳು ಇಂಗ್ಲಿಷಿಗೆ ಅನುವಾದಗೊಂಡಿವೆ. ಪುಸ್ತಕದ ಕೊನೆಯಲ್ಲಿ ನಡುಗನ್ನಡ ಭಾಷೆ ಮತ್ತು ಗದ್ಯದ ಕುರಿತಾಗಿಯೂ ಪರಿಚಯಾತ್ಮಕ ಮಾತುಗಳಿವೆ. ಕೊನೆಯಲ್ಲಿ ನೀಡಲಾದ ಸಾಂಸ್ಕೃತಿಕ ಪದಕೋಶವು ಬಹಳ ಉಪಯುಕ್ತ.

ಇಂಥ ಪುಸ್ತಕಗಳನ್ನು ಅನುವಾದಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡುವುದಷ್ಟೇ ಕೆಲಸ ಆಗಬಾರದು. ಅನುವಾದಿತ ಕೃತಿಗಳ ಬಗ್ಗೆ ಅನುವಾದಗೊಂಡ ಭಾಷೆಯಲ್ಲಿ ವಿಚಾರ ಸಂಕಿರಣ, ಉಪನ್ಯಾಸ, ಚರ್ಚೆಗಳು ಏರ್ಪಡಬೇಕು. ಆಗಮಾತ್ರ ಇಂಥ ಪುಸ್ತಕಗಳ ಹಿಂದಿನ ಶ್ರಮಕ್ಕೆ ಗೌರವ ನೀಡಿದಂತಾಗುತ್ತದೆ.



ಪು: 326 ₹500

ಮಿಡೀವಲ್ ಕನ್ನಡ ಲಿಟರೇಚರ್: ಎ ರೀಡರ್
ಲೇ: ಪ್ರೊ. ಸಿ. ಎನ್. ರಾಮಚಂದ್ರನ್ ಹಾಗೂ ಪ್ರೊ. ವಿವೇಕ ರೈ
ಪ್ರ: ಪ್ರಸಾರಂಗ, ಕನ್ನಡ ವಿ.ವಿ ಹಂಪಿ
ಸಂ: 08394-210410

ಗಾಢ–ಚುಟುಕು ಕಥೆಗಳ ಮಾಯಾ ಮಾಲೆ

ಅವಲೋಕನ

ಮೃತ್ಯುಂಜಯ ಹೊಸಮನೆ ಅವರ ಚೊಚ್ಚಲ ಕಥಾಸಂಕಲನ ‘ದೇವರೆಂಬ ಮಾಯೆ’. ಈ ಚಿಕ್ಕ ಚೊಕ್ಕ ಸಂಕಲನದಲ್ಲಿ ಏಳು ಕಥೆಗಳ ಗುಚ್ಛ ಅರಳಿದೆ. ಕೃತಿಯ ಕೊನೆಯಲ್ಲಿನ ಮೂರು ಕಥೆಗಳು ಓದಿನ ವೇಗಕ್ಕೆ ಕಣ್ಮುಚ್ಚುಕಿಸುವಷ್ಟರಲ್ಲೇ ಮುಗಿಯುತ್ತವೆ. ಆದರೆ ಅವುಗಳೊಳಗಿನ ಅರ್ಥ, ತಿಳಿವಳಿಕೆ ಗಾಢವಾಗಿವೆ.

ಕೃತಿಯ ಶೀರ್ಷಿಕೆಯಾಗಿರುವ ಕಥೆ ‘ದೇವರೆಂಬ ಮಾಯೆ’ ಈಗಿನ ವಾಸ್ತವ. ಯಾವುದೋ ಮೂಲೆಯಲ್ಲಿರುವ ಹಳ್ಳಿಯ ದೇವಾಲಯವೊಂದು ಮಾಧ್ಯಮದ ಕಾರಣ ರಾತ್ರೋರಾತ್ರಿ ವಿಶ್ವಪ್ರಸಿದ್ಧಿಯಾದಂತೆ, ಹನೂರು ಎಂಬ ಊರು ಅಲ್ಲಿರುವ ಹನುಮನಿಗಿಂತಲೂ ಮೀರಿ ಬೆಳೆಯುತ್ತದೆ. ಹರಿಯುವ ಕಿರುಬೆರಳ ಗಾತ್ರದ ನೀರು ಏಕಾಏಕಿ ತೀರ್ಥವಾಗಿ, ದೇವಾಲಯ ಬಿಜಿನೆಸ್ ಸೆಂಟರ್ ಆಗುವ ಕಥೆ ನಯವಾಗಿ ಹೆಣೆಯಲ್ಪಟ್ಟಿದೆ.

‘ಸಾವಿನೊಂದಿಷ್ಟು ನೆರಳು’ ಕಥೆ ಒಂದು ಹೆಣದ ಸುತ್ತ ಸಾವಿರಾರು ಪ್ರತಿಕ್ರಿಯೆಗಳ ತೋರಣ ಕಟ್ಟಿದೆ. ಕಥಾಗುಚ್ಛದಲ್ಲಿರುವ ಉಳಿದ ಕಥೆಗಳಿಗಿಂತ ಇದರ ನಿರೂಪಣೆ ಕೊಂಚ ಭಿನ್ನ. ‘ಬಚ್ಚ’ ಹೆಣವಾದಾಗ ಸರಣಿಯಲ್ಲಿ ಬರುವ ಪಾತ್ರಗಳು ಅವುಗಳ ಯೋಚನೆ, ಪ್ರತಿಕ್ರಿಯೆ, ಭಾವನೆಯನ್ನು ಕಥೆಗಾರ ಇಲ್ಲಿ ಕಟ್ಟಿದ್ದಾರೆ. ಒಂದು ರೀತಿಯಲ್ಲಿ ಹೆಣದಂತೆಯೇ ಇಲ್ಲಿನ ಕೆಲ ಪಾತ್ರಗಳು ಭಾವನೆಯಲ್ಲಿ ತಣ್ಣಗೆ ಹೆಪ್ಪುಗಟ್ಟಿವೆ. ಗುಚ್ಛದಲ್ಲಿ ‘ಸಂಚಾರಿ’ ಕೊಂಚ ದೀರ್ಘವಾದ ಕಥೆ.

ಆಶೆ ಬಲೆಯನು ಬೀಸಿ, ನಿನ್ನ ತನ್ನೆಡೆಗೆಳೆದು| ಘಾಸಿ ನೀಂ ಬಡುತ ಬಾಯ್ಬಿಡಲೋರೆ ನೋಡಿ| ಮೈಸವರಿ ಕಾಲನೆಡವಿಸಿ, ಗುಟ್ಟಿನಲಿ ನಗುವ| ಮೊಸದಾಟವೋ ದೈವ–ಮಂಕುತಿಮ್ಮ. ಈ ಕಗ್ಗ ‘ಸ್ವರ್ಗ–ನರಕ’ವೆಂಬ ಕಥೆಯ ಜೀವಾಳ ಎನ್ನಬಹುದು. ಈ ಕಥೆ ನಾಯಿಮರಿಗಳೆರಡರ ನಡುವಿನ ಕೆಲ ವಾಕ್ಯಗಳ ಮನಸ್ಸಿನೊಳಗಿನ ಸಂಭಾಷಣೆ. ಎರಡು ಪುಟದಲ್ಲೇ ಕಥೆಗೆ ಪೂರ್ಣವಿರಾಮ. ಮನೆಯಿದ್ದರೆ ಅರಮನೆ ಬೇಕೆನ್ನುವಂಥ ಆಸೆಯ ಕಥೆ ಹೊತ್ತ ಈ ಕಥೆಯಲ್ಲಿ ನಾಯಿಮರಿಗಳೆರಡು ಪಾತ್ರವಾಗಿದ್ದರೂ ಹೇಳಿರುವುದು ಮನುಷ್ಯರಿಗೇ. ‘ನಾಯಿ ಮತ್ತು ನರ’ ಕಥೆಯಲ್ಲೂ ನಾಯಿಮರಿಯೇ ಅರಿವು ನೀಡುವ ಪಾತ್ರ. ‘ಕೊತ್ತಂಬರಿಕಟ್ಟು ಮತ್ತು ಮಸಾಲೆದೋಸೆ’ ಕಥೆಯಲ್ಲಿ ನಿರೂಪಕನೇ ಪ್ರಧಾನ ಪಾತ್ರಧಾರಿ. ಐಷಾರಾಮಿ ಹೋಟೆಲ್‌ನಲ್ಲಿ ವೇಟರ್‌ಗೆ ₹20–50 ಟಿಪ್ಸ್ ನೀಡಿ, ಬೀದಿಬದಿ ತರಕಾರಿ ಅಂಗಡಿಗಳಲ್ಲಿ ಒಂದೆರಡು ರೂಪಾಯಿಗೆ ಚೌಕಾಸಿ ಮಾಡುವ ನಮ್ಮ ಗುಣವನ್ನು ಎತ್ತಿ ತೋರಿರುವುದು ಸೊಗಸಾಗಿ ಬಿಂಬಿತವಾಗಿದೆ.



ಪು: 112 ₹90

ದೇವರೆಂಬ ಮಾಯೆ
ಲೇ: ಮೃತ್ಯುಂಜಯ ಹೊಸಮನೆ
ಪ್ರ: ಚಾರುಮತಿ ಪ್ರಕಾಶನ
ಸಂ: 9448235553

ಮೊದಲ ಓದು

ಜೋಗದ ಗುಂಡಿಯಷ್ಟೇ ಆಳ ಈ ಕೃತಿ



ಪು: 563 ₹480

ಜೋಗ ಜಲಪಾತದ ಜನನ ಮತ್ತು ಇತರ ಜನಪ್ರಿಯ ಲೇಖನಗಳು
ಲೇ: ಡಾ.ಹೆಚ್.ಚಂದ್ರಶೇಖರ
ಪ್ರ: ಸಪ್ನ
ಸಂ: 080-40114455

‘ಮಾನವನಾಗಿ ಹುಟ್ಟಿದ ಮೇಲೆ ಏನೇನ್ ಕಂಡಿ.. ಇರೋದ್ರೊಳಗೆ ಒಮ್ಮೆ ನೋಡು ಜೋಗಾದ್ ಗುಂಡಿ...’ ಹೀಗೊಮ್ಮೆ ಗುನುಗುನಿಸಿದಾಗ ಜೋಗ ಜಲಪಾತದ ಆಳ, ಅಬ್ಬರ ಕಣ್ಮುಂದೆ ಬರುತ್ತದೆ. ಆದರೆ ಈ ಜಲಪಾತದ ಜನನ ಹೇಗಾಯಿತು ಎಂಬುದೂ ಸೇರಿದಂತೆ ಜಗತ್ತಿನಲ್ಲಿರುವ ಅದ್ಭುತ ಜಲಪಾತಗಳ ವಿವರವನ್ನರಿಯಲು ಈ ಕೃತಿಯನ್ನೊಮ್ಮೆ ಓದಬೇಕು.

ಈ ಕೃತಿ ವೈಜ್ಞಾನಿಕ ಲೇಖನಗಳ ಸಂಗ್ರಹ. ಪತ್ರಿಕೆಗಳಿಗೆ ಬರೆದ ಲೇಖನಗಳ ಸಂಕಲನ. ಮೂಲತಃ ಭೂವಿಜ್ಞಾನ ತಜ್ಞರಾಗಿರುವ ಹೆಚ್.ಚಂದ್ರಶೇಖರ ಅವರ ಈ ಕೃತಿಯಲ್ಲಿನ ಲೇಖನಗಳು ಈ ವಿಷಯಕ್ಕೇ ಹೆಚ್ಚು ಒತ್ತು ನೀಡಿವೆ. ಮಂಡ್ಯ ಜಿಲ್ಲೆಯ ದೊಡ್ಡೇಗೌಡನ ಕೊಪ್ಪಲಿನಲ್ಲಿ 1972ರಲ್ಲಿ ಸಂಭವಿಸಿದ ಭೂಕಂಪ, ರಾಜ್ಯದಲ್ಲಿನ ಪುರಾತನ ಬಾವಿಗಳು, ಜಲಪಾತಗಳು, ಭೂಕಂಪದ ಸಂಭವ ಎಷ್ಟಿದೆ, ಖನಿಜ ಸಂಪತ್ತು, ಹಂಪಿಯ ಶಿಲೆ, ಇರ್ದೆಯ ಬಿಸಿ ನೀರಿನ ಬುಗ್ಗೆ ಮುಂತಾದ ವಿಷಯಗಳ ಕುರಿತ ಲೇಖನಗಳು ಇಲ್ಲಿವೆ. ಅಂಕಿ–ಅಂಶ, ನಕ್ಷೆಗಳು ಲೇಖನಗಳನ್ನು ಮತ್ತಷ್ಟು ಅರ್ಥೈಸಿಕೊಳ್ಳಲು ಪೂರಕವಾಗಿವೆ. ಹೀಗಾಗಿ ಇಲ್ಲಿ 50 ಲೇಖನಗಳಷ್ಟೇ ಇದ್ದರೂ, ಕೃತಿಯ ಗಾತ್ರ ಬೃಹತ್ ಆಗಿದೆ.

ಕರ್ನಾಟಕದ ಮಣ್ಣಿನಲ್ಲಿರುವ ಖನಿಜ ಸಂಪತ್ತನ್ನು ವಿವರಿಸುವ ಲೇಖನದಲ್ಲಿ ‘ಬಹುರತ್ನಾ ವಸುಂಧರಾ’ ಎಂಬ ಕನ್ನಡ ಕವಿತೆಯ ಮೂಲಕ ಲೇಖಕರು ವರ್ಣನೆಗೆ ಇಳಿಯುತ್ತಾರೆ. ಇದೇ ರೀತಿ ಕನ್ನಡ ಕವಿಗಳ ಕವಿತೆಗಳು ಹಲವು ಲೇಖನಗಳಲ್ಲಿ ಉಲ್ಲೇಖಿಸಲ್ಪಡುತ್ತವೆ. ಇದು ಅವರ ಸಾಹಿತ್ಯ ಪ್ರೀತಿಯ ಸಂಕೇತವಾಗಿದೆ.

ಸ್ತ್ರೀ ಜಗತ್ತಿನ ಬೆಳಕಿನ ಗುಚ್ಛಗಳು

ಹೆಣ್ಣಿನ ಕಣ್ಣು, ಕರುಳು ನೋಡಿದ ಸಂಕಥನಗಳ ಗುಚ್ಛಗಳನ್ನು ಬೆನಕ ಬುಕ್ಸ್ ಬ್ಯಾಂಕ್ ಹೊರತಂದಿದೆ. ಬೇರೆ ಬೇರೆ ಕ್ಷೇತ್ರಗಳಲ್ಲಿ ಸಕ್ರಿಯರಾಗಿರುವ ಲೇಖಕಿಯರು ತಮ್ಮ ವೃತ್ತಿ ಹಾಗೂ ಬದುಕಿನ ಅನುಭವಗಳನ್ನು ಕಥನ ರೂಪದಲ್ಲಿ ಹೇಳಿರುವ ಕೃತಿಗಳಿವು. ತಾವು ಕಂಡ, ಅನುಭವಿಸಿದ, ಅನುಭವಿಸುತ್ತಲೇ ಇರುವ ಘಟನೆಗಳನ್ನು ಸ್ಫೂರ್ತಿ ನೀಡಬಹುದಾದ ಕಥನಗಳನ್ನಾಗಿ ನಿರೂಪಿಸಿದ್ದಾರೆ.

ವಿವಿಧ ಪತ್ರಿಕೆ, ಮಾಧ್ಯಮ, ಡಿಜಿಟಲ್ ವೇದಿಕೆಗಳಲ್ಲಿ ಪ್ರಕಟವಾಗಿ ಹಾಗೆಯೇ ಮಾಯವಾಗಬಹುದಾಗಿದ್ದ ಬರಹಗಳನ್ನು ಒಂದೆಡೆ ಹಿಡಿದಿಟ್ಟು ಓದುಗರಿಗೆ ಕೊಡುವ ಪ್ರಯತ್ನ ಮಾಡಲಾಗಿದೆ. ನಾಲ್ಕು ಕೃತಿಗಳನ್ನು ಬರೆದವರ ಪೈಕಿ ಸುಧಾ ಶರ್ಮಾ, ಮಾಲತಿ ಭಟ್ ಪತ್ರಕರ್ತರು, ಚಿತ್ರ ಸಿ. ಅವರು ಆಪ್ತ ಸಮಾಲೋಚಕಿ, ಜೀವನ ಕೌಶಲ ತರಬೇತಿ ನೀಡುವವರು ಮತ್ತು ಶೋಭಾ ಹೆಗಡೆ ಬರಹಗಾರ್ತಿಯಾಗಿ ಗುರುತಿಸಿಕೊಂಡವರು. ಕೃತಿಗಳ ಕುರಿತ ಝಲಕ್ ಇಲ್ಲಿದೆ.

ದೀಪದ ಮಲ್ಲಿಯರು: ಬದುಕಿನಲ್ಲಿ ನಿಜ ಅರ್ಥದಲ್ಲಿ ಬೆಳಗಿ, ಸಮಾಜವನ್ನೂ ಬೆಳಗಿಸಿದ ಸಾಧಕಿಯರನ್ನು ಹುಡುಕಿ ಹೆಕ್ಕಿ ತೆಗೆದು ಅವರ ಕಥನ ಕಟ್ಟಿಕೊಟ್ಟಿದ್ದಾರೆ ಮಾಲತಿ ಭಟ್. ಬದುಕಿನ ಅಗ್ನಿದಿವ್ಯದಲ್ಲಿ ಬೆಂದು ಮತ್ತೆ ಪುಟಿದೆದ್ದು ಬೆಳೆದ ಅಸಾಧಾರಣ ಸಾಧಕಿಯರು ಇಲ್ಲಿದ್ದಾರೆ. ಉದ್ಯಮಿ ಕಲ್ಪನಾ ಸರೋಜ್, ಅಮೆರಿಕದಲ್ಲಿ ಉದ್ಯಮಿಯಾಗಿ ಬೆಳೆದ ಅನಿಲಾ ಜ್ಯೋತಿ ರೆಡ್ಡಿ, ಎವರೆಸ್ಟ್ ಏರಿದ ಅರುಣಿಮಾ ಸಿನ್ಹಾ, ಆ್ಯಸಿಡ್ ದಾಳಿಗೊಳಗಾಗಿಯೂ ಬದುಕು ಕಟ್ಟಿಕೊಂಡ ದಿಟ್ಟೆ ಲಕ್ಷ್ಮೀ ಅಗರ್‌ವಾಲ್... ಹೀಗೆ ಸಾಲು ಸಾಲು ಸಾಧಕಿಯರ ಕಥನಗಳು ಇಲ್ಲಿವೆ.

ಸಾವಿರ ಕಹಿಗಳ ನಡುವೆಯೂ ಜೀವನ ಪ್ರೀತಿಯನ್ನು ಉಳಿಸಿಕೊಂಡು ಮತ್ತೊಂದಿಷ್ಟು ಜನರನ್ನು ಬೆಳೆಸಿದ ಸ್ಫೂರ್ತಿಯ ಚಿಲುಮೆಗಳು ಈ ‘ದೀಪದ ಮಲ್ಲಿಯರು’. ಒಂದೇ ಗುಕ್ಕಿನಲ್ಲಿ ಓದಿಸಿಕೊಂಡು ಹೋಗುವ ಕಥನಗಳಿವು. ಹತಾಶ ಮನಸ್ಸುಗಳಿಗೆ ಒಂದಿಷ್ಟು ಗೆಲುವಿನ ಭರವಸೆ ತುಂಬಬಲ್ಲ ಶಕ್ತಿ ಈ ಕಥನಗಳಿಗಿದೆ.

ನಮ್ಮೊಳಗೆ ನಾವು: ವ್ಯಕ್ತಿತ್ವ ವಿಕಸನಕ್ಕೆ ಬೇಕಾದ ಪರಿಕರಗಳ ಗುಚ್ಛವಾಗಿದೆ ಈ ಕೃತಿ. ಸಣ್ಣ ಸಣ್ಣ ಉದಾಹರಣೆಗಳು, ಸನ್ನಿವೇಶಗಳ ಉಲ್ಲೇಖಗಳು ಓದುಗ ತನ್ನನ್ನು ತಾನು ಪ್ರಶ್ನಿಸಿಕೊಳ್ಳುವ ಹಾಗೆ ಮಾಡುತ್ತವೆ. ಎಲ್ಲ ವಯೋಮಾನದವರನ್ನೂ ತಲುಪುವ ಪ್ರಯತ್ನ ಇಲ್ಲಿನ ಲೇಖನಗಳಲ್ಲಿದೆ. ಕೆಲವು ಸ್ವಗತಗಳಂತೆ, ಅನುಭವ ಕಥನಗಳಂತೆ ಹಾಗೂ ಕೆಲವು ಸ್ವಾನುಭವದ ಲಹರಿಗಳಂತೆ ಈ ಲೇಖನಗಳು ಮೂಡಿಬಂದಿವೆ. ಹಾಗೆಂದು ಇವೇನೂ ತಿಳಿಹೇಳುವ ಬೋಧನೆಗಳಲ್ಲ. ಸ್ವಾವಲೋಕನಕ್ಕೆ ಎಡೆಮಾಡಿಕೊಡುವ ಸಾಲುಗಳು. ಸಹಜವಾಗಿರಿ (ಇರುವಂತೆ ತೋರುವುದು) ಎಂದು ಹೇಳಿರುವ ಲೇಖನದ ಹಾಗೆಯೇ ಕೃತಿಯೂ ಅಷ್ಟೇ ಸಹಜ ಮತ್ತು ಸರಳವಾಗಿದೆ.

ಅವಳೆಂಬ ಸುಗಂಧ: ಹಳ್ಳಿಯಲ್ಲಿ ಕಾಣುವ ಮಹಿಳಾ ಜಗತ್ತಿನ ನಿತ್ಯ ಜೀವನ ಸಂಗತಿಗಳ ಪುಟ್ಟ ಪುಟ್ಟ ಫ್ರೇಮ್‌ಗಳಿವು. ಸಣ್ಣ ಸಂಗತಿಗಳನ್ನೇ ನವಿರು ಹಾಸ್ಯ ಬೆರೆಸಿ ನಿರೂಪಿಸಿದ್ದಾರೆ ಲೇಖಕಿ. ಅತ್ತೆ ಸೊಸೆಯ ಕಾಳಗ ಸಾಯುವವರೆಗೂ ಮುಂದುವರಿದು, ಕೊನೆಗೆ ಅಜ್ಜ ಸರಳ ಸೂತ್ರದಲ್ಲಿ ಬಗೆಹರಿಸುವ ಸಂಗತಿ, ‘ಹಿರಿಯಬ್ಬೆ’ಯ ವ್ಯಕ್ತಿ ಚಿತ್ರಣ, ಅಜ್ಜಿ ಕತೆಗಳ ಜೊತೆಗೆ ಬರುವ ಸಂಭಾಷಣೆಗಳು ಹೀಗೆ ಒಟ್ಟಾರೆ ಸಹಜ ಬದುಕಿನ ಚಿತ್ರಗಳಿವು.

ಬರಹಗಳಲ್ಲಿ ಮಲೆನಾಡಿನ ಪರಿಸರ, ಜನಜೀವನ, ವ್ಯವಹಾರದ ಬದುಕು ಹಾದು ಹೋಗುತ್ತವೆ. ನಮ್ಮದೇ ಅನ್ನಬಹುದಾದ ಸಂಗತಿಗಳೇ ಅನ್ನಿಸುವಷ್ಟು ಆಪ್ತವಾಗುತ್ತವೆ.

ಅನಾಮಿಕಳ ಅಂತರಂಗ: ಲೇಖಕಿಯ ಅನುಭವದ ಮೂಸೆಯಿಂದ ಹೊರಬಂದ ನೈಜ ಘಟನೆಗಳು. ಪಾತ್ರಗಳಿಗೆ ಹೆಸರು ಕೊಟ್ಟಿಲ್ಲ. ಆದರೆ, ಪಾತ್ರಗಳ ಮನಸ್ಸಿನ ಸಂವೇದನೆಯನ್ನು ಕಟ್ಟಿಕೊಟ್ಟಿದ್ದಾರೆ. ಹದಿಹರೆಯದ ಹೆಣ್ಣು ಮಕ್ಕಳಿಂದ ಹಿಡಿದು ಈಗಷ್ಟೇ ಉದ್ಯೋಗಕ್ಕೆ ಸೇರಿರುವವರು, ಉದ್ಯೋಗ ಕ್ಷೇತ್ರದಲ್ಲಿ ಹಲವು ವೈಪರೀತ್ಯ ಎದುರಿಸಿ ಹಣ್ಣಾಗಿರುವವರು ಈ ನೈಜ ಕಥನಗಳನ್ನು ಓದಬೇಕು. ಒಂದಿಷ್ಟು ಹೊಸ ಬೆಳಕು ಕಾಣಿಸಬಹುದು.

ಪ್ರತಿಯೊಬ್ಬರ ಜೀವನದಲ್ಲೂ ಸಮಸ್ಯೆ ಇರುತ್ತದೆ. ಸಮಸ್ಯೆಯನ್ನು ಹೇಗೆ ನೋಡುತ್ತೇವೆ ಎನ್ನುವುದು ಮುಖ್ಯ. ನಾವು ಸಮಸ್ಯೆಯನ್ನು ಮಾತ್ರ ಗಮನಿಸುವ ಬದಲು ಪರಿಹಾರವನ್ನೂ ಫೋಕಸ್ ಮಾಡಿದಾಗ ಅವಕಾಶಗಳು ತೆರೆದುಕೊಳ್ಳುತ್ತವೆ ಎಂದಿದ್ದಾರೆ ಲೇಖಕಿ. ಎಲ್ಲ ಲೇಖನ ಹಾಗೂ ಘಟನೆಗಳಿಗೆ ಈ ಮಾತು ಅನ್ವಯಿಸುತ್ತದೆ.

ಸಾವಿನ ಸನಿಹಕ್ಕೆ ಹೋಗಿಬಂದವರು, ಚಿಂತೆಯಲ್ಲಿ ಒದ್ದಾಡಿ ಖಿನ್ನರಾಗಿರುವವರು ಹೊಸ ಬದುಕಿನತ್ತ ಹೊರಳಿರುವ ಘಟನೆಯೊಂದಿಗೆ ಇಲ್ಲಿನ ಕಥೆಗಳು ಅಂತ್ಯಗೊಳ್ಳುತ್ತವೆ. ಹಾಗಾಗಿ ಇದೊಂದು ಸ್ಫೂರ್ತಿಯ ಕಥನಗಳ ಗುಚ್ಛ ಎಂದು ಕರೆಯಬಹುದು.



ಪು: 140 ₹130

ದೀಪದ ಮಲ್ಲಿಯರು
ಲೇ: ಮಾಲತಿ ಭಟ್

ಪು:144 ₹130

ನಮ್ಮೊಳಗೆ ನಾವು
ಲೇ: ಸುಧಾ ಶರ್ಮಾ ಚವತ್ತಿ



ಪು: 140 ₹130

ಅನಾಮಿಕಳ ಅಂತರಂಗ
ಲೇ: ಚಿತ್ರ ಸಿ.



ಪು: 172 ₹160

ಅವಳೆಂಬ ಸುಗಂಧ
ಲೇ: ಶೋಭಾ ಹೆಗಡೆ

ಎಲ್ಲ ಕೃತಿಗಳ ಪ್ರಕಾಶಕರು: ಬೆನಕ ಬುಕ್ಸ್ ಬ್ಯಾಂಕ್, ಶಿವಮೊಗ್ಗ.
ಸಂ: 73384 37666

ಕಥೆ
ಮಾರುತಿ ದಾಸಣ್ಣವರ ಅವರ ಕಂದೀಲು
ಕಥೆ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ವಿಶ್ವನಾಥ ಎನ್. ನೇರಳಕಟ್ಟೆ ಅವರ ಸೆಲೂನಿನಲ್ಲಿ ಎಂಕ
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಲಖನೌದಿಂದ ಮುಂಬೈಗೆ ಬಂದಿಳಿದ ಕಲೆ

ದಾಸ್ತಾನ್‌ಗೋಯಿ

ಡಿ.ಎಸ್.ಚೌಗಲೆ

‘ದಾಸ್ತಾನ್‌ಗೋಯಿ’ ಉರ್ದು ಪ್ರಕಾರದ ಕಥನರೂಪಿ ಅಭಿನಯದ ನಾಟಕ. ಉತ್ತರ ಭಾರತದ ದಿಲ್ಲಿ, ಲಖನೌ ಮುಂತಾದ ಪ್ರದೇಶಗಳಲ್ಲಿ ಚಾಲ್ತಿಯಲ್ಲಿದೆ. ‘ದಾಸ್ತಾನ್’ ಅಂದರೆ ‘ಕಥೆ’, ‘ಗೋಯಿ’ ಅಂದರೆ ‘ಹೇಳುವುದು’. ದಾಸ್ತಾನ್‌ಗೋಯಿ ಅಂದರೆ ದೀರ್ಘವಾದ ಕಥೆಯನ್ನು ಸಾದರಪಡಿಸುವುದು. ಕಥೆ ನಿಲ್ಲುತ್ತದೆ, ಮುಗಿಯುತ್ತದೆ. ಆದರೆ, ದಾಸ್ತಾನ್‌ಗೋಯಿ ಮಾತ್ರ ಆರಂಭಗೊಂಡದ್ದು ನಿಲ್ಲುವುದೇ ಇಲ್ಲ. ಇದಕ್ಕೆ ಅಲ್ಪವಿರಾಮವಿದೆ, ಪೂರ್ಣವಿರಾಮವಿಲ್ಲ.

ಈ ಕಲಾಪ್ರಕಾರ ಪರ್ಶಿಯಾದಿಂದ ಭಾರತಕ್ಕೆ ಬಂತು. ಮೊಘಲರ ಕಾಲದಲ್ಲಿ ಅರಳಿ ತನ್ನ ಪರಿಮಳವನ್ನು ಪಸರಿಸಿತು. ಅಕ್ಬರನ ಕಾಲಕ್ಕೆ ಇನ್ನೂ ಉತ್ತುಂಗಕ್ಕೇರಿತು. ಇದನ್ನು ರಾಜರ ದರ್ಬಾರಿನಲ್ಲಿ ಮುಖ್ಯವಾಗಿ ಪ್ರಸ್ತುತಪಡಿಸಲಾಗುತ್ತಿತ್ತು. ದಾಸ್ತಾನ್‌ಗೋಯಿ ಪುರುಷರು ಪ್ರಸ್ತುತಪಡಿಸುವ ಕಲೆ. ಮಹಿಳೆಯರಿಗೆ ನಿಷೇಧವಿತ್ತು. ಉರ್ದುವಿನಲ್ಲಿ ಅಲೀಫ್ ಲೈಲಾ, ಹಾತೀಮತಾಯಿ ತರಹದ ದಾಸ್ತಾನ್‌ಗಳು ಸಾದರಗೊಳ್ಳುತ್ತಿದ್ದವು. ‘ಅಮೀರ್ ಹಮ್ಜಾ’ನ ಶೌರ್ಯ ಬಿಂಬಿಸುವ ‘ದಾಸ್ತಾನ್-ಎ-ಅಮೀರ್ ಹಮ್ಜಾ’ ಹಿಂದೆಯೂ ಪ್ರಸಿದ್ಧವಾಗಿತ್ತು. ಈಗಲೂ ಇದೆ.

ಎಂಟು-ಒಂಬತ್ತನೆಯ ಶತಮಾನದಲ್ಲಿ ಇರಾನ್‌ನಲ್ಲಿ ಜನ್ಮತಳೆದ ದಾಸ್ತಾನ್‌ಗೋಯಿ ಮೊಘಲರ ಕಾಲದಲ್ಲಿ ಭಾರತಕ್ಕೆ ಬಂತು ಮತ್ತು ಗಟ್ಟಿಯಾಗಿ ಬೇರೂರಿತು. ಆದರೆ, 19ನೆಯ ಶತಮಾನವು ಇದಕ್ಕೆ ಪೂರಕವಾಗಿತ್ತು. ಲಖನೌ ಪರಿಸರದಲ್ಲಿ ಈ ಕಲೆಗೆ ಹೊಸ ಆಯಾಮ ದೊರಕಿತು. ಇರಾನ್‌ನಿಂದ ಬಂದ ಈ ದಾಸ್ತಾನ್‌ದಲ್ಲಿ ಕೇವಲ ‘ರಜ್ಮ್’ (ಯುದ್ಧವರ್ಣನೆ) ಮತ್ತು ‘ಬಜ್ಮ್’ (ಮೈಫಿಲ್) ಎಂಬ ಎರಡು ಘಟಕಗಳಿದ್ದವು. ಅದರಲ್ಲಿ ‘ಅಯ್ಯಾರಿ’ (ಚಾಲಾಕು, ಚತುರತೆ) ಮತ್ತು ‘ತಿಲಿಸ್ಮ್’ (ಜಾದೂ) ಇವುಗಳನ್ನು ಸೇರಿಸಲಾಯಿತು. ಹೀಗಾಗಿ ‘ದಾಸ್ತಾನ್ ಎ ಅಮೀರ್ ಹಮ್ಜಾ’ಕ್ಕೆ ಜೀವ ಬಂತು.

‘ದಾಸ್ತಾನ್‌ಗೋಯಿ’ ಪ್ರಸ್ತುತಪಡಿಸುವವರನ್ನು ದಾಸ್ತಾಂಗೋ ಎನ್ನುವರು. ಫಾರ್ಸಿಯಲ್ಲಿ ಬಚ್ಚಿಟ್ಟು ಕೂತಿದ್ದ ವಿದೇಶಿ ಕಥೆಗಳಿದ್ದವು. ಸಾಮಾನ್ಯರಿಗೆ ಕಗ್ಗಂಟಾದವುಗಳು. ಈ ದಾಸ್ತಾನ್‌ಗೋಯಿಗಳು ಲಖನೌನಲ್ಲಿ ‘ಅಯ್ಯಾರಿ’ ಮತ್ತು ‘ತಿಲಿಸ್ಮ್’ ಮೂಲಕ ಉರ್ದುವಿನ ಹಿಂದೂಸ್ತಾನಿ ಶೈಲಿ, ಗಾದೆಗಳ ಭಾಷಿಕ ಪ್ರಯೋಗದಿಂದ ಜನಸಾಮಾನ್ಯರನ್ನು ಮಂತ್ರಮುಗ್ಧರನ್ನಾಗಿಸಿದ್ದವು.

ಲಖನೌನಲ್ಲಿ ಆ ಕಾಲದಲ್ಲಿ ಮುಹಮ್ಮದ್ ಹುಸೇನ್ ಜಾಹ್, ಅಹ್ಮದ್ ಹುಸೇನ್ ಕಮರ್, ಮೀರ್ ಅಹ್ಮದ್ ಅಲಿ, ಅಂಬಾಪ್ರಸಾದ್ ರಸಾ, ತಶದ್ದುಕ್ ಹುಸೇನ್ ಮತ್ತು ಹಕೀಮ್ ಅಸಗರ್ ಅಲೀಖಾನ್- ಹೀಗೆ ಇಡೀ ದೇಶದಲ್ಲಿ ಹೆಸರುವಾಸಿ ದಾಸ್ತಾಂಗೋಗಳು ಇದ್ದರು. ಕೆಲವು ಕಥಾನಕಗಳು ಅದೆಷ್ಟು ಮೈನವಿರೇಳುವಷ್ಟು ಗಟ್ಟಿಯೆಂದರೆ ಪ್ರೇಕ್ಷಕ ಅದರ ಒಂದು ಅನುಭವದ ಭಾಗವಾಗಿ ಪರಿವರ್ತಿತಗೊಳ್ಳುತ್ತಾನೆ. ದಾಸ್ತಾನ್‌ಗೋಯಿ ಮೌಖಿಕ ಪರಂಪರೆಯ ಕಲೆ. ಲಿಖಿತವಾದುದಲ್ಲ. ಅದು ಕೇಳುಗ, ನೋಡುಗನ ಪ್ರಕಾರ. ಆದರೆ, ಕೋಲ್ಕತ್ತದ ಮುನ್ಷಿ ನವಲಕಿಶೋರರು ದಾಸ್ತಾನ್-ಎ-ಅಮೀರ್-ಹಮ್ಜಾವನ್ನು ಉರ್ದುವಿನಲ್ಲಿ ಮುದ್ರಿಸಲು ಮುಂದಾದರು. ಆಗ ಒಂದು ಖಂಡದಲ್ಲಿ ಮಾತ್ರ ದಾಸ್ತಾನ್‌ಗೋಯಿ ಲಭ್ಯವಿತ್ತು. ಕೋಲ್ಕತ್ತ ಫೋರ್ಟ್ ವಿಲಿಯಮ್ ಕಾಲೇಜಿನಿಂದ 1855ರಲ್ಲಿ ಪ್ರಕಾಶನಗೊಂಡಿತು.

1881ರಲ್ಲಿ ನವಲಕಿಶೋರ್ ಪ್ರೆಸ್‌ನಲ್ಲಿ ದಾಸ್ತಾನ್-ಎ-ಅಮೀರ್ ಹಮ್ಜಾ ಮುದ್ರಣದ ಪ್ರಕ್ರಿಯೆ ಆರಂಭಗೊಂಡಿತು. ಅಂದಿನಿಂದ 1910ರ ತನಕ 46 ಖಂಡಗಳಲ್ಲಿ ಮುದ್ರಣಗೊಂಡಿತು. ಪ್ರತೀ ಖಂಡದಲ್ಲಿ 1000 ಪುಟಗಳಿದ್ದವು. ನವಲಕಿಶೋರ್ ಪ್ರೆಸ್‌ನ ಒಟ್ಟು 46000 ಪುಟಗಳ ಪ್ರಪಂಚದ ಅತಿ ದೊಡ್ಡ ದಾಸ್ತಾನ್‌ಗೋಯಿ ಇದಾಗಿದೆ. ಇದರೊಳಗಿನ ಅಮೀರ್ ಹಮ್ಜಾ ಅತ್ಯಂತ ಜನಪ್ರಿಯ ಕಥೆ. ತಿಲಿಸ್ಮೆ ಹೋಶ್ ರುಬಾ-ಏಳು ಖಂಡಗಳಷ್ಟು ವಿಸ್ತಾರವಾಗಿದೆ. ದಾಸ್ತಾನ್‌ಗೋಯಿ ಮಧ್ಯದಲ್ಲಿ ಕೊಂಚ ಕಾಲ ವಿರಮಿಸಿತ್ತು. ನಂತರ ಅದರ ಪುನರುಜ್ಜೀವನಕ್ಕೆ ಕಾರಣವಾದವರು ಮಹಮೂದ್ ಫಾರೂಖಿ.

ಸಮಕಾಲೀನ ಸಂದರ್ಭದಲ್ಲಿ ವಿಷಯಾಧಾರಿತ ದಾಸ್ತಾನ್‌ಗೋಯಿಗಳನ್ನು ಪ್ರಸ್ತುತಪಡಿಸಲಾಗುತ್ತಿದೆ. ಮನರಂಜನೆಗೆ ಸೀಮಿತವಾಗದೇ ಸಾಮಾಜಿಕ, ರಾಜಕೀಯ ವಿಷಯ ವಸ್ತುಗಳನ್ನು ಇದು ಅಳವಡಿಸಿಕೊಂಡಿದೆ. ರಾತ್ರಿಯಿಡಿ ನಡೆಯುತ್ತಿದ್ದ ಪ್ರಸಂಗಗಳು ಈಗ ಕೆಲವು ಗಂಟೆಗಳಿಗೆ ಸೀಮಿತವಾಗಿವೆ. ರಾಜಾ ವಿಕ್ರಮನ ಪ್ರೇಮಕಥೆಯಲ್ಲದೇ ವಿನಾಯಕ ಸೇನ್ ಅವರ ಬಂಧನದ ಕುರಿತ ವಿವರವುಳ್ಳ ‘ದಾಸ್ತಾನ್-ಎ-ಸೆಡಿಶನ್’, ವಿಭಜನೆಯ ಕಥೆ ಹೇಳುವ ‘ದಾಸ್ತಾನ್-ಎ-ತಕಸೀಮ-ಎ-ಹಿಂದ್’, ಪದ್ಮಶ್ರೀ ವಿಜಯದಾನ ದೇಥಾ ಅವರ ಕಥೆ ಆಧರಿಸಿದ ‘ದಾಸ್ತಾನ್-ಎ-ಚೌಬುಲಿ’ ಜನಪ್ರಿಯವಾದವುಗಳು.

***

ಮರಾಠಿಗೆ ಮೊತ್ತಮೊದಲು ದಾಸ್ತಾನ್‌ಗೋಯಿ ತಂದವರು ಪ್ರಸಿದ್ಧ ರಂಗನಟ, ನಿರ್ದೇಶಕ ಅಕ್ಷಯ್ ಶಿಂಪಿ ಅವರು. ಮರಾಠಿ ಜಾನಪದ ಪರಂಪರೆ ಮತ್ತು ದಾಸ್ತಾನ್‌ಗೋಯಿಯ ಉರ್ದು ಕಲಾಪ್ರಕಾರಗಳ ಮಿಶ್ರಣದ ‘ಫ್ಯೂಜನ್’ ಇದಾಗಿದೆ. ಉತ್ತರ ಪ್ರದೇಶ, ಮಹಾರಾಷ್ಟ್ರದ ಸಾಮ್ಯತೆಗಳನ್ನು ಚರ್ಚಿಸುವಾಗ ಮರಾಠಿ ಪರಂಪರೆಯ ಓವಿ, ಸಾಕಿ, ದಿಂಡಿ ಮತ್ತು ವೃತ್ತಛಂದದೊಳಗಿನ ರಚನೆಗಳು, ಜನಪದ ಕಥೆಗಳು ಹೇರಳವಾಗಿರುವುದನ್ನು ಗಮನಿಸಬಹುದು. ಮರಾಠಿಯಲ್ಲಿ ಶಾಯರಿಗಳ ಬದಲಿಗೆ ವಿಷಯಾಧಾರಿತ ಜಾನಪದ ಕಾವ್ಯ, ನವಕವಿತೆಗಳಿವೆ. ನಮ್ಮಲ್ಲಿರುವ ಅಜ್ಜಿ ಕಥೆಯೂ ದಾಸ್ತಾನ್‌ಗೋಯಿಯೇ. ಅಕ್ಷಯ್ ಶಿಂಪಿ ಮೊದಲು ಲಖನೌನ ದಾಸ್ತಾನ್‌ಗೋಯಿಯ ಉರ್ದು ತಂಡದಲ್ಲಿದ್ದು ತದನಂತರ ಆ ಅನುಭವದ ಹಿನ್ನೆಲೆಯಲ್ಲಿ ಮರಾಠಿಯಲ್ಲಿ ಇದನ್ನು ಪ್ರಯೋಗಿಸಲು ಚಿಂತಿಸಿದರು. ಅಕ್ಷಯ್ ತನ್ನ ಸಹ ಕಲಾವಿದೆ ಧನಶ್ರೀ ಖಂಡಕರ್ ಜೊತೆ ‘ದಾಸ್ತಾನ್-ಎ-ಬಡೀ-ಬಾಂಕಾ’ ಪ್ರಸ್ತುತಪಡಿಸತೊಡಗಿದರು. ಈ ನಾಟಕವನ್ನು ಕೊಲ್ಲಾಪುರದ ಬಾಲಜಿ ಪೆಂಡಾರಕರ್ ಸಾಂಸ್ಕೃತಿಕ ಕೇಂದ್ರದಲ್ಲಿ ನಾನು ನೋಡಿದೆ. ಮುಂಬೈ ಮಾಯಾನಗರಿ ಕಥೆಯನ್ನು ಎರಡು ಗಂಟೆ ಅವಧಿಯಲ್ಲಿ ಹೇಳುತ್ತ ಪ್ರೇಕ್ಷಕನನ್ನು ಕದಲದಂತೆ ಕೂರಿಸುತ್ತದೆ ಈ ದಾಸ್ತಾನ್‌ಗೋಯಿ.

ಬೈಠಕಿಯಲ್ಲಿ ಕತೆ ಸಾಗುತ್ತದೆ. ಓವಿ, ಕವಿತೆ, ಸಂವಾದ, ಗಜಲ್ ಇತ್ಯಾದಿಗಳ ಸಾದರೀಕರಣದ ಮಿಶ್ರಣದಲ್ಲಿ ಢಾಳವಾಗಿ ಎದ್ದು ಕಾಣುವ ಅಂಶವೆಂದರೆ ಅಕ್ಷಯ್ ಮತ್ತು ಧನಶ್ರೀ ಅವರ ಜಬರದಸ್ತ್ ಟೈಮಿಂಗ್‌ಸೆನ್ಸ್. ಅದಕ್ಕೆ ಪ್ರೇಕ್ಷಕನ ವಾವ್ಹ್ ಎಂಬ ಪ್ರತಿಕ್ರಿಯಾತ್ಮಕ ಉದ್ಗಾರದ ಸ್ಫೂರ್ತಿ. ಒಂದು ರಂಗದ ಮಧ್ಯ ಶುಭ್ರ ಹಾಸಿಗೆಯ ಮಂಚ. ಇಬ್ಬರೂ ಪಾತ್ರಧಾರಿಗಳು ಶುಭ್ರ ಬಿಳಿ ವಸ್ತ್ರದಲ್ಲಿ. ಮುಂಬೈ ಕಥೆ ಹೇಳುವುದೆಂದರೆ ಸವಾಲಿನದ್ದೇ. ‘ಮುಂಬಯಿ ನಗರಿ ಬಡೀ ಬಾಂಕಾ ಅಶೀ ರಾವಣಾಚಿ ದುಸರೀ ಲಂಕಾ’ ಎಂದು ಶಾಹೀರ್ ಪಠ್ಠೆ ಬಾಪುರಾವ್ ಅವರೇ ಬಣ್ಣಿಸಿದ್ದಾರೆ.

ಎರಡೂ ಪಾತ್ರಗಳಲ್ಲಿ ಪ್ರೇಕ್ಷಕನೂ ಪ್ರತಿಕ್ರಿಯಿಸುತ್ತ ಏಕೀಭವಿಸುವನು. ಅವನಿಂದ ವಾವ್ಹ್, ಚಪ್ಪಾಳೆ ಸದ್ದು. ಗಂಟಲು ಆರಿದಾಗ ದಾಸ್ತಾಂಗೋಗಳಿಬ್ಬರು ಎದುರಿರುವ ಚೆಂಬುನಿಂದ ನೀರು ಕುಡಿಯುತ್ತಾರೆ. ನೇಪಥ್ಯದ ಆರ್ಭಟವಿಲ್ಲದ ಆಟ. ಅಭಿನಯವೇ ಇದರ ಜೀವಾಳ. ನಟನೆಯೇ ಶಕ್ತಿ. ಸಂವಾದ, ಹಾಡು, ಚಿಟಿಕೆ, ಚಪ್ಪಾಳೆ ಬಾರಿಸಿ ತಾಳ ಹಿಡಿಯುವುದು ಇದರ ಸೊಬಗು. ಅಕ್ಷಯ್, ಧನಶ್ರೀಯವರ ಒಂದು ನಮೂನೆಯ ಜುಗಲ್‌ಬಂದಿ. ಮುಂಬಯಿ ವೇಗದಲ್ಲಿ ಬದಲುಗೊಳ್ಳುತ್ತಲೇ ಇರುತ್ತದೆ. ಇದು ದೇಶದ ಮೂಲೆಗಳಿಂದ ಬಂದ ವಿವಿಧ ಭಾಷಿಕರು, ಆಪೀಸಿನಲ್ಲಿ ಕ್ಷುದ್ರ ಹುಳು, ಮನೆಯಲ್ಲಿ ಸೂರ್ಯನೆನಿಸುವ ‘ಕಲೊಜಸ್’ ಅಂದರೆ ಮುಂಬೈಕರ್, ಲೋಕಲ್ ಗಾಡಿ, ಎತ್ತರದ ಕಟ್ಟಡ, ಜೋಪಡಿ, ಚಾಳು, ಆಫೀಸು, ಸೈರನ್ ಕೂಗದೇ ನಿಂತ ಗಿರಣಿಗಳ ಪ್ರಶಾಂತ ಗಿರಣಿಗಾಂವ್ ಮುಂಬೈ.

‘ಏ ದಿಲ್ ಹೈ ಮುಶ್ಕಿಲ್ ಜೀನಾ ಯಹಾಂ...ಯೇ ಬಾಂಬೇ ಹೈ ಮೇರಿ ಜಾನ್!’ ಈ ಹಾಡು ದಾಸ್ತಾಂಗೊಗಳ ಧ್ವನಿಯಲ್ಲಿ ಕೇಳಿ ಬರುತ್ತಿದ್ದಂತೆಯೇ ಪ್ರೇಕ್ಷಕ ಚಪ್ಪಾಳೆ ತಟ್ಟುತ್ತಾ ಅದರಲ್ಲಿ ತಲ್ಲೀನನಾಗುವನು. ಭಾವು ಪಾಧ್ಯೆ, ಮರ್ಡೇಕರ, ವಿಂದಾ ಕರಂದೀಕರ, ನಾರಾಯಣ ಸುರ್ವೆ, ಅರುಣ ಸಾಧು, ಅಣ್ಣಾ ಭಾವು ಸಾಠೆ, ಮಂಟೋ, ತನ್ವೀರ್ ಸಿದ್ದಿಕಿ-ಸರ್ವ ದಿಗ್ಗಜರೊಟ್ಟಿಗೆ ಅಕ್ಷಯನ ಕವಿತೆಯೂ ಈ ರಂಗದಲ್ಲಿ ತೆರೆದುಕೊಳ್ಳುತ್ತದೆ. ಮುಂಬಯಿಯ ಯಾತನೆ, ದಣಿವು, ಗೊಂದಲ, ಸ್ಪರ್ಧೆ, ಶಾಂತತೆ, ಅಪರಿಹಾರ್ಯತೆ, ಅಗತಿತನ-ಎಲ್ಲ ಭಾವನೆಗಳನ್ನು ಪೋಣಿಸಿ ಎರಡು ಗಂಟೆಗಳಲ್ಲಿ ಅದೇ ಕಾವು ಕಾಯ್ದುಕೊಂಡು ದಾಸ್ತಾನ್ ಹೇಳುವುದು ಸುಲಭದ ಮಾತಲ್ಲ. ಅತೀ ಕಡಿಮೆ ಸವಲತ್ತು ಮತ್ತು ವೆಚ್ಚದಲ್ಲಿ ಕಡಿಮೆ ಪ್ರೇಕ್ಷಕರಿಗೂ ತೋರಿಸಬಹುದಾದ ಈ ‘ಇಂಟಿಮೇಟ್ ಪ್ಲೇ’ ದಾಸ್ತಾನ್‌ಗೋಯಿ ಕನ್ನಡಕ್ಕೂ ಬರಲಿ ಎಂಬುದೇ ಆಶಯ.

> ದಾಸ್ತಾನ್‌ಗೋಯಿಗಳು ಮನರಂಜನೆಗೆ ಸೀಮಿತವಲ್ಲ. ಅವುಗಳಲ್ಲಿ ಸಾಮಾಜಿಕ, ರಾಜಕೀಯ ವಿಷಯಗಳೂ ಇವೆ. ಮೊಘಲರ ಕಾಲದಲ್ಲಿ ಅರಳಿದ ಕುಸುಮ ಇಂದಿಗೂ ಘಮಲನ್ನು ಪಸರಿಸುತ್ತಲೇ ಇದೆ. ಅತೀ ಕಡಿಮೆ ಸವಲತ್ತು ಮತ್ತು ವೆಚ್ಚದಲ್ಲಿ ಕಡಿಮೆ ಪ್ರೇಕ್ಷಕರಿಗೂ ತೋರಿಸಬಹುದಾದ ಈ ಕಲೆ ಕನ್ನಡಕ್ಕೂ ಬರಬಹುದೇ...

ದಾಸ್ತಾನ್‌ಗೋಯಿ ಕಥನ ನಿರೂಪಣೆಯಲ್ಲಿ ತಲ್ಲೀನತೆ

ದಾಸ್ತಾನ್‌ಗೋಯಿ ಕಥೆಯನ್ನು ಕಣ್ಣಿಗೆ ಕಟ್ಟುವಂತೆ ಹೇಳುವ ಮುಖಭಾವದ ಝಲಕ್

ಸಾಲು ದೀಪಗಳು

6ನೇ ಪುಟದಿಂದ...

ಮತಾಂತರದ ಸಂದರ್ಭದಲ್ಲೇ ನಾಗಪುರಕ್ಕೆ ಹೋಗಿ ಬೌದ್ಧಧರ್ಮಕ್ಕೆ ಸೇರಿಕೊಂಡಾಗಿನಿಂದಲೂ ಇಂಡಿಯನ್ ಬುದ್ಧಿಸ್ಟ್ ಕೌನ್ಸಿಲ್‌ನಲ್ಲಿ ಮತ್ತು ಸಮತಾ ಸೈನಿಕ ದಳದಲ್ಲಿ ಕೆಲಸ ಮಾಡತೊಡಗಿದರು. ಗೌತಮ ಬುದ್ಧರ ಕುರಿತು ನಾಟಕ ಬರೆದು ಸಮತಾ ಸೈನಿಕ ದಳದ ಸಮ್ಮೇಳನದಲ್ಲಿ ಮಕ್ಕಳಿಂದ ಪ್ರದರ್ಶನ ಮಾಡಿಸಿದ್ದಕ್ಕಾಗಿ ಮತ್ತು ಉತ್ತಮ ಕೆಲಸಕ್ಕಾಗಿ ಎನ್.ಶಿವರಾಜ್ ಅವರಿಂದ ಬಹುಮಾನ ಪಡೆದರು. ಅಮರಾವತಿ, ಜಾಲನಾ ಮುರ್ತಿಜಾಪುರ್, ಪರತ್‌ವಾಡಾ, ವಾಶಿಂ, ಅಕೋಲಾ ಹಾಗೂ ಆಹ್ವಾನ ಬಂದ ಕಡೆಗೆಲ್ಲಾ ಶ್ರದ್ಧೆ, ಬದ್ಧತೆಗಳಿಂದ ಬೌದ್ಧಮತ ಪ್ರಚಾರದ ಕೆಲಸ ಮುಂದುವರೆಸಿದರು. 1975ರಲ್ಲಿ ಬೋಧಗಯಾದ ಶ್ರಾಮ್ನೇರಿಯಲ್ಲಿ ಭಿಕ್ಷುಣಿ ಶುಜಾನ ಅವರ ಮಾರ್ಗದರ್ಶನದಲ್ಲಿ ದೀಕ್ಷೆ ಪಡೆದುಕೊಂಡು ಭಿಕ್ಷುಣಿ ಚಂದ್ರಶೀಲಳಾದರು.

ಲಕ್ಷ್ಮಿಬಾಯಿ ನಾಯಕ್ ಅಕೋಲಾದ ಭೀಮ್‌ನಗರದವರು. ಏಳನೇ ತರಗತಿ ಪಾಸಾಗಿ, ಶಿಕ್ಷಕಿಯಾಗಿ ತರಬೇತಿ ಪಡೆದುಕೊಂಡಿದ್ದ ಲಕ್ಷ್ಮಿಯವರು ಸಂಪತ್‌ರಾವ್ ನಾಯಕ್‌ರನ್ನು ಮದುವೆಯಾದ ಮೇಲೆ ಅತ್ಯಂತ ಹಿಂದುಳಿದಿದ್ದ ಅಮರಾವತಿಯ ಬೇಲ್‌ಪುರದಲ್ಲಿ ತಮ್ಮದೇ ಶಾಲೆಯನ್ನು ತೆರೆದರು.

ಬಾಬಾಸಾಹೇಬರು ಬೌದ್ಧ ಧರ್ಮಕ್ಕೆ ಮತಾಂತರಗೊಂಡಾಗ, ಲಕ್ಷ್ಮಿಬಾಯಿಯವರೂ ಮತಾಂತರವಾದರು. ಬೌದ್ಧ ಸಾಹಿತ್ಯ ಓದುವುದು ಮತ್ತು ಬೌದ್ಧ ತತ್ವಗಳನ್ನು ಅರಿಯಲು ಮಾಡುತ್ತಿದ್ದ ಪ್ರಯತ್ನಗಳು ಅವರಿಗೆ ಎಂತಹ ಸ್ಫೂರ್ತಿ ನೀಡಿದವೆಂದರೆ ಭಿಕ್ಷುಣಿಯರಂತೆ ತಲೆ ಬೋಳಿಸಿಕೊಂಡು ಬಿಳಿ ಬಟ್ಟೆ ತೊಟ್ಟು ಬೌದ್ಧ ಉಪಾಸಕರಂತೆ ಹಳ್ಳಿಗಳನ್ನು ಸುತ್ತತೊಡಗಿದರು. ಭೋದ್ ಗಯಾದ ಬೌದ್ಧವಿಹಾರದಲ್ಲಿ ಒಂದು ವರ್ಷ ನೆಲೆಸಿ ಬೌದ್ಧತತ್ವಗಳ ಅಧ್ಯಯನ ಮತ್ತು ಧ್ಯಾನ ಮಾಡುವುದನ್ನು ಕಲಿತರು. ಕುಶಿನಗರ, ಭೋದ್ ಗಯಾ ಹಾಗೂ ಇನ್ನಿತರ ಬೌದ್ಧ ಪವಿತ್ರ ಕ್ಷೇತ್ರಗಳಿಗೆ ಯಾತ್ರೆ ಕೈಗೊಂಡು ಸಾರನಾಥದಲ್ಲಿ ಭಂತೆಯವರಿಂದ ಭಿಕ್ಷುಣಿಯಾಗಿ ದೀಕ್ಷೆ ಪಡೆದರು.

ವರ್ಷದಲ್ಲಿ ಮೂರು ತಿಂಗಳ ಕಾಲ ಬದ್ನೆರಾದ ಸಮೀಪವಿರುವ ಜನವಸತಿಯಿಂದ ಮೂರು ಕಿಲೋಮೀಟರ್ ದೂರವಿದ್ದ ಕೊಂಡೇಶ್ವರ ಎಂಬ ಹಳ್ಳಿಯಲ್ಲಿ ಲಕ್ಷ್ಮಿಬಾಯಿಯವರು ಒಂಟಿಯಾಗಿ ಧ್ಯಾನಮಾಡುತ್ತಿದ್ದರು. ಶಾಲಾಶಿಕ್ಷಕಿಯಾಗಿ ಪಡೆಯುತ್ತಿದ್ದ ಸಂಪಾದನೆಯನ್ನೆಲ್ಲ ಬಡವರಿಗಾಗಿ ಮತ್ತು ಬೌದ್ಧ ಮತ ಪ್ರಚಾರಕ್ಕಾಗಿ ವಿನಿಯೋಗಿಸಿದರು. ನಡೆದುಕೊಂಡೇ ಹಳ್ಳಿಗಳಿಗೆ ಹೋಗಿ ಬೌದ್ಧತತ್ವಗಳನ್ನು ಸಾರುತ್ತಲೇ ಅವರು ತಮ್ಮ ಜೀವನವನ್ನು ಕಳೆದರು. ಇಂತಹ ಓಡಾಟದಲ್ಲಿರುವಾಗ ಮುಂಡ್‌ಗಾವ್ ಎಂಬಲ್ಲಿ ಬಿಸಿಲಿನ ಝಳದಿಂದ ಅವರ ಆರೋಗ್ಯ ಕೆಟ್ಟಿತು. ಮಗ ಮನೋಹರ್ ಬಂದು ಅವರನ್ನು ಆಸ್ಪತ್ರೆಗೆ ದಾಖಲಿಸಿದರೂ ಪ್ರಯೋಜನವಾಗದೆ ತೀರಿಕೊಂಡರು.

ದ್ವೇಷ, ಹಿಂಸೆಯ ರಾಜಕಾರಣದ ‘ಅಂಧ’ಕಾರ ಆವರಿಸಿಕೊಳ್ಳುತ್ತಿರುವಾಗ ತಾರತಮ್ಯ, ದೌರ್ಜನ್ಯ, ಅವಮಾನದಲ್ಲಿ ಬೇಯುತ್ತಿದ್ದರೂ ಬಾಬಾಸಾಹೇಬರು ತೋರಿದ ಬುದ್ಧಬೆಳಕಿನ ಮಾರ್ಗದಲ್ಲಿ ಸಾಗಿದ ಮಹಿಳೆಯರು ದೊಂದಿಗಳಂತೆ ಕಾಣುತ್ತಿದ್ದಾರೆ.

ಆಧಾರ: ಊರ್ಮಿಳಾ ಪವಾರ್ ಮತ್ತು ಮೀನಾಕ್ಷಿ ಮೂನ್‌ರವರ ‘ವಿ ಆಲ್ಸೋ ಮೇಡ್ ಹಿಸ್ಟರಿ-ವಿಮೆನ್ ಇನ್ ಅಂಬೇಡ್ಕರೈಟ್ ಮೂಮೆಂಟ್’ ಪುಸ್ತಕ

ಬೌದ್ಧ ವಿಹಾರದಲ್ಲಿ ವಿಶೇಷ ಪೂಜೆ

ರಜ ಮಜ ಮಜಕೂರ

• ಎಂ.ಎಸ್.ಪೂಜಾರ

ಸ- ರಸ ಪ್ರಶ್ನೆಗಳು

1. 100 ರೂಪಾಯಿಗಳಲ್ಲಿ 25ರಂತೆ ಎಷ್ಟು ಸಲ ಕಳೆಯಬಹುದು?
2. 100 ಮೀಟರ್ ರಿಬ್ಬನ್‌ನಿಂದ ಪ್ರತಿ ಮೀಟರ್‌ಗೊಂದು ತುಂಡು ಮಾಡಬೇಕಿದೆ. 1 ತುಂಡು ಮಾಡಲು 1 ಸೆಕೆಂಡು ವೇಳೆಯಂತೆ 100 ತುಂಡು ಮಾಡಲು ಎಷ್ಟು ಸೆಕೆಂಡುಗಳು ಬೇಕು?
3. ಒಂದು ಬುಟ್ಟಿಯಲ್ಲಿ 10 ಮಾವಿನ ಹಣ್ಣುಗಳಿವೆ. ಪ್ರತಿಯೊಬ್ಬರಿಗೂ ಒಂದೊಂದರಂತೆ 10 ಮಂದಿಗೆ ಹಂಚಬೇಕು. ಬುಟ್ಟಿಯಲ್ಲಿ ಒಂದು ಹಣ್ಣು ಇರಬೇಕು. ಇದು ಹೇಗೆ ಸಾಧ್ಯ?
4. UBIQUITY ಈ ಪದವನ್ನು ನಾಲ್ಕು ಅಕ್ಷರಗಳಲ್ಲಿ ಬರೆಯಬಲ್ಲಿರಾ?
5. ಒಂದು ವಾಹನದ ಹೆಸರನ್ನು ಹೊಂದಿರುವ ಜಿಲ್ಲೆ ಯಾವುದು?
6. ಎಡದಿಂದಲೂ ಹಾಗೂ ಬಲದಿಂದಲೂ ಓದಿದರೆ ಒಂದೇ ಪದವಾಗುವ ತರಕಾರಿ ಯಾವುದು?
7. ಕ್ರಿಕೆಟ್ ಆಟಗಾರನೊಬ್ಬನ ಹೆಸರಿನ ಉತ್ತರಾರ್ಧದ ಪದ ಎಡದಿಂದಲೂ ಬಲದಿಂದಲೂ ಓದಿದರೆ ಅದೇ ಆಗುವುದು ಯಾವುದು?
8. 2, 5, 10, 17 - - ಈ ಶ್ರೇಣಿಯ ಮುಂದಿನ ಎರಡು ಸಂಖ್ಯೆ ಯಾವುವು?
9. 2, 7, 4, 12, 6, 17, 8 – – ಈ ಶ್ರೇಣಿಯ ಮುಂದಿನ ಎರಡು ಸಂಖ್ಯೆ ಯಾವುವು?
10. 6 + 6 + 6 + 8 ಹೇಗಾದರೂ ಕೂಡಿಸಿ 35 ಮಾಡುವುದು ಹೇಗೆ?
11. ಇಪ್ಪತ್ತನೇ ಶತಮಾನದ ಯಾವ ಇಸವಿ ತಲೆಕೆಳಗಾಗಿ ಓದಿದರೂ ಬದಲಾಗುವುದಿಲ್ಲ?
12. ಪಂಚೇಂದ್ರಿಯಗಳಲ್ಲಿ ಒಂದಾದ ಇದನ್ನು ಎಡದಿಂದಲೂ ಓದಿ. ಬಲದಿಂದಲೂ ಓದಿ. ಒಂದೇ ಶಬ್ದ – ಯಾವುದು?
13. ದೂರವಾಣಿ ಮೂಲಕ ಪ್ರಸಾರವಾದ ಮೊದಲ ವಾಕ್ಯ ಯಾವುದು?
14. BCDGJ - - ಮುಂದಿನ ಎರಡು ಅಕ್ಷರ ಪತ್ತೆ ಮಾಡಬಲ್ಲಿರಾ?

ಮಾತೆಯ ‘ಮಮ’ಕಾರದ ಬಳ್ಳಿ

ಮಮತೆಯ ಸುಧೆಯನು ಮಗುವಿಗೆ ಉಣಿಸಿ
ಮಾತೆಯು ಸಂತಸಪಡುವಳು
ಮಿಗಿಲೇನಿಹುದು ಆಕೆಯ ಪ್ರೀತಿಗೆ
ಮೀರಿಸಿ ದೈವವ ಮೆರೆಯುವಳು
ಮುಖದಲಿ ಮಗುವಿಗೆ ಮುತ್ತನು ನೀಡಿ
ಮೂಲೋಕಕೂ ಮಿಗಿಲೆನ್ನುವಳು
ಮೆಚ್ಚಿನ ನಗುವಿನ ರೂಪವ ಕಂಡು
ಮೇರೆಯೇ ಇಲ್ಲದೇ ನಲಿಯುವಳು
ಮೈಮರೆತಾಡುತ ಇರುತಿರೆ ಕಂದ
ಮೊಗದಲಿ ನಗುವನು ತರುತಿಹಳು
ಮೋದದಿ ನಗುವಿನ ಸಂಭ್ರಮ ಕಂಡು
ಮೌನದಿ ಮನದಲೇ ಹಿಗ್ಗುವಳು
ಮಂಜುಳ ಗಾನದಿ ಮಂಗಳ ಹಾಡುತ
ಮ(ಃ)ಹದಾನಂದವ ಹೊಂದುವವಳು



ಗುಣಾಕಾರದ ಪ್ರಾಚೀನ ಪದ್ಧತಿ

23X34ನ್ನು ಚಿತ್ರ 1ರಂತೆ ಚೌಕದಲ್ಲಿ ಅಡ್ಡಗೆರೆ ಎಳೆದು ಒಂದು ವಿಶಿಷ್ಟ ಪಟ್ಟಿಯನ್ನು ತಯಾರಿಸಿಕೊಳ್ಳಿ. ಮೇಲ್ಭಾಗದಲ್ಲಿ ಎಡಕ್ಕೆ 23ನ್ನು ಕೆಳಕ್ಕೆ 34ನ್ನು ಹಚ್ಚಿಕೊಳ್ಳಿ. ಈಗ ಚಿತ್ರ 2ರಂತೆ ಬಲಭಾಗದ 3ರಿಂದ ಮೇಲಿನ 2ಕ್ಕೆ ಗುಣಿಸಿ 0/6ನ್ನು ಹಚ್ಚಿರಿ. ಅದರಂತೆ ಈಗ 3ರಿಂದ 3ಕ್ಕೆ ಗುಣಿಸಿ 0/9ನ್ನು ಹಚ್ಚಿರಿ. ಅದರಂತೆ ಈಗ 4ರಿಂದ ಮೇಲಿನ 2ಕ್ಕೆ ಗುಣಿಸಿ 0/8ನ್ನು ಹಚ್ಚಿರಿ. ಹಾಗೆ 4ರಿಂದ ಮೇಲಿನ 2ಕ್ಕೆ ಗುಣಿಸಿ 0/8ನ್ನು ಹಚ್ಚಿರಿ. ಹಾಗೆ 4ರಿಂದ 3ಕ್ಕೆ ಗುಣಿಸಿ 1/2ನ್ನು ಹಚ್ಚಿರಿ.

ಈಗ ಚಿತ್ರ 3ರಲ್ಲಿಯ ಅಡ್ಡಗೆರೆ ಗಮನಿಸಿ 3 ಅಡ್ಡಗೆರೆಗಳಿವೆ. ಕೆಳಭಾಗದಿಂದ ಮೊದಲ ಅಡ್ಡಗೆರೆಯ ಮುಂದಿನ ಅಂಕಿ 2 ಇದ್ದು ಅದನ್ನು ಕೆಳಗೆ ಹಚ್ಚಿ. ಹಾಗೆ ಎರಡನೆ ಅಡ್ಡಗೆರೆ ಮುಂದೆ 8, 1, 9 ಅಂಕಿಗಳಿಂದ ಅವುಗಳನ್ನು ಕೂಡಿಸಿ 8 + 1 + 9 = 18ಕ್ಕೆ 8 ಕೆಳಗೆ ಹಚ್ಚಿ 1 ಕೈಲೆ ಮುಂದಿನ ಮನೆಗೆ ಇಡಿ. ಈಗ ಮೂರನೇ ಅಡ್ಡಗೆರೆಯ ಮುಂದೆ ಕೈಲೆ ಹಿಡಿದು 1, 0, 6, 0 ಕೂಡಿಸಿದರೆ 1 + 0 + 6 + 0 = 7 ಹಚ್ಚಿರಿ. ನಂತರ ಕೊನೆಯ 0ನ್ನು ಹಚ್ಚಿ. ಈಗ 0782 ಅಂದರೆ 782 ಉತ್ತರ ಸಿದ್ಧ.

ಅಕ್ಷರ ಚಮತ್ಕಾರ

ಮಲ್ಲಯ್ಯನ ಮದುವೆ

(ಇಡೀ ಕಥೆಯ ಪ್ರತಿ ಪದದ ಮೊದಲ ಅಕ್ಷರ ‘ಮ’ ಬಳ್ಳಿಯಿಂದ ಕೂಡಿರುವುದು ತುಂಬಾ ಸೋಜಿಗ)

ಮುಳಗುಂದದ ಮಧ್ಯಕೇರಿಯಲ್ಲಿದ್ದ ಮೂಲಿಮನೆಯ ಮಲ್ಲಾರಪ್ಪನ ಮಗನಾದ ಮಲ್ಲಯ್ಯನ ಮದುವೆಯನ್ನು ಮಹಾ ಸಂಭ್ರಮದಿಂದ ಮಾಡಬೇಕೆಂದು ಮನೆಯವರೆಲ್ಲಾ ಮಾತನಾಡಿದರು. ಮಲ್ಲ ಸಮುದ್ರದ ಮಲ್ಲೇಶಪ್ಪನ ಮಗಳು ಮಂಜುಳಾ ಮುತ್ತಿನಂಥವಳು. ಮುಂಬರುವ ಮುಖದ ಮೇಲಿನ ಮುಂಗುರುಳಿನಿಂದ ಮುಗ್ಧಳಾಗಿದ್ದಳು. ಮಲ್ಲೇಶಪ್ಪ ಮಲ್ಲಯ್ಯನೊಂದಿಗೆ ಮಗಳನ್ನು ಮದುವೆ ಮಾಡಲು ಮಹಾಸಂತೋಷದಿಂದಿದ್ದನು. ಮಲ್ಲೇಶಪ್ಪ ಮಲ್ಲಾರಪ್ಪನಲ್ಲಿ ಮದುವೆಯ ಮಾತುಗಳಾದವು. ಮಾತನ್ನರಿತ ಮಲ್ಲಯ್ಯ ಮೀಸೆಯ ಮೇಲೆ ಮುಂಗೈಯಾಡಿಸಿ ಮಹಾ ಸಂತೋಷದಿಂದ ಮೆರೆದಾಡಿದನು. ಮಾಘ ಮಾಸದ ಮಂಗಳವಾರದಂದು ಮಹಾಬಲೇಶ್ವರದ ಮಹಾದೇವನ ಮಂದಿರದಲ್ಲಿ ಮಂಜುಳಾ ಮತ್ತು ಮಲ್ಲಯ್ಯನ ಮದುವೆ ಮಾಡಬೇಕೆಂದು ಮಲ್ಲಾರಪ್ಪ ಮತ್ತು ಮಲ್ಲೇಶಪ್ಪನ ಮನೆಯವರೆಲ್ಲರೂ ಮುಹೂರ್ತವನ್ನಿಟ್ಟು ಮಂದಿಗ್ಹೇಳಿದರು. ಮಲ್ಲೇಶಪ್ಪನ ಮನೆಯಲ್ಲಿ ಮಂಜುಳಾಳೊಂದಿಗೆ ಮಿಕ್ಕೆಲ್ಲವರು ಮಹೋಲ್ಲಾಸದಿಂದ ಮಾತನಾಡುತ್ತಿದ್ದಾಗ ಮಧ್ಯರಾತ್ರಿ ಮುಗಿದದ್ದು ಮನವರಿಕೆಯಾಗಲಿಲ್ಲ. ಮರೆಯಾದ ಮಂಜನ್ನು ಮುಂದೂಡಿಕೊಂಡು ಮೂಡಣದಲ್ಲಿಯ ಮುಗಿಲಲ್ಲಿ ಮಹಾಪ್ರಭೆಯಸೂರ್ಯ ಮೂಡಿದ್ದು ಮನವರಿಕೆಯಾಗಿತ್ತು. ಮರುದಿನ ಮಹತ್ಕಾರ್ಯದಿಂದ ಮನೆಯವರೆಲ್ಲರೂ ಮಾಲತೇಶ ಮೋಟಾರಿನಲ್ಲಿ ಮಹಾಬಲೇಶ್ವರಕ್ಹೊರಟರು. ಮಂದಿರದಲ್ಲಿ ಮಂಟಪ ಮಘಮಘಿಸುವ ಮಲ್ಲಿಗೆಯಿಂದ ಮುಚ್ಚಿತ್ತು. ಮಂಗಳ ಮುಹೂರ್ತದಲ್ಲಿ ಮದುಮಕ್ಕಳು ಮಾಲೆಯನ್ಹಾಕಿಕೊಂಡರು. ಮಹಾಜನರು ಮದುಮಕ್ಕಳಿಗೆ ಮಂತ್ರಾಕ್ಷತೆಗಳನ್ಹಾಕಿದರು. ಮುತ್ತೈದೆಯರು ಮಂಗಳಾರತಿ ಮಾಡಿದರು. ಮಂಜುಳಾ ಮಲ್ಲಯ್ಯರಿಂದ ಮನೆತುಂಬಿಸಿಕೊಂಡರು. ಮೆರವಣಿಗೆಯಿಂದ ಮಹಾದೇವನ ಮುಖದರ್ಶನ ಮಾಡಿಕೊಂಡು ಮಂಟಪಕ್ಕೆ ಮರಳಿದರು. ಮುಂಜಾನೆಗಾಗಿ ಮಸಾಲೆದೋಸೆ ಮತ್ತು ಮಧ್ಯಾಹ್ನದ ಮದುವೆಯೂಟಕ್ಕಾಗಿ ಮಾಡಿದ ಮಂಡಿಗೆ ಮಜ್ಜಿಗೆಹುಳಿ, ಮೊಸರನ್ನ ಮಹಾಸಂತೋಷವಾಗುವಷ್ಟುಂಡು ಮತ್ತೆ ಮುಸ್ಸಂಜೆಯಲ್ಲಿ ಮಿನಿ ಮೋಟಾರನ್ನಿಡಿದು ಮದುಮಕ್ಕಳೀರ್ವರನ್ನು ಮುಂದಿಟ್ಟುಕೊಂಡು ಮಜ-ಮಜ ಮಾತನಾಡುತ್ತಾ ಮಂಗಳವಾದ್ಯದೊಂದಿಗೆ ಮಹಾ ಸಡಗರದಿಂದ ಮುಳಗುಂದವನ್ನು ಮುಟ್ಟಿದರೆಂದರೆ ಮಹದಾಶ್ಚರ್ಯವಾಗಲಿಕ್ಕಿಲ್ಲವೇ?!

ದಶ್ಯ ಚಿತ್ರ ಶ್ರೇಷ್ಠ ಕಥೆಯ

ಮಿಡತೆ ಮತ್ತು ಇರುವೆ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ


ಇದು ಸೋಂಬೇರಿ ಮಿಡತೆಯ ಕಥೆ. ಬೇಸಿಗೆ ಕಾಲದಲ್ಲಿ ಹಸಿರು ಮಿಡತೆ ಒಂದು ಗಿಡದಿಂದ ಇನ್ನೊಂದಕ್ಕೆ ಕುಪ್ಪಳಿಸುತ್ತಾ ಹಾಯಾಗಿ ಕಾಲ ಕಳೆಯುತ್ತಿತ್ತು


ಇದೇ ಹೊತ್ತಿಗೆ ಇರುವೆಯೊಂದು ಆಹಾರ ಹುಡುಕುತ್ತಾ ಸಾಗುತ್ತಿತ್ತು. ಬಿರು ಬಿಸಿಲನ್ನು ಕಂಡೇ ಇರುವೆಯು ಮಳೆ ಸುರಿಯುವ ಬಗ್ಗೆ ಯೋಚಿಸಿತ್ತು. ಅದು ಶ್ರಮಜೀವಿಯೂ ಹೌದು


ಆಹಾರ ಸಿಕ್ಕ ಕೂಡಲೇ ಇರುವೆಯು ತನ್ನ ಬಳಗದೊಂದಿಗೆ ಸೇರಿ ಕಾಳುಗಳನ್ನು ಗೂಡಿಗೆ ಸಾಗಿಸಿತು. ಹೀಗೆ ಇರುವೆ ಗೂಡಿನಲ್ಲಿ ಸಾಕಷ್ಟು ಧಾನ್ಯ ಸಂಗ್ರಹವಾಯಿತು


ಕಾಳು ಹೊತ್ತು ಸಾಗುತ್ತಿದ್ದ ಇರುವೆಯನ್ನು ಕಂಡ ಮಿಡತೆಯು, ‘ಇಷ್ಟು ಸೊಗಸಾದ ಕಾಲದಲ್ಲಿ ಕಷ್ಟಪಡುತ್ತೀ ಇರುವೇ? ಬಾ ಕುಣಿದು ಕುಪ್ಪಳಿಸೋಣ’ ಎಂದಿತು. ಆದರೆ ಇರುವೆ ಒಪ್ಪಲಿಲ್ಲ

ಒಂದು ದಿನ ಜೋರಾಗಿ ಮಳೆ ಸುರಿಯಿತು. ಎಲ್ಲಿಯೂ ಕೂಡಾ ಆಹಾರ ಸಿಗುತ್ತಿರಲಿಲ್ಲ. ಕಂಗಾಲಾದ ಮಿಡತೆ ಮಳೆಯಲ್ಲಿ ತೋಯ್ದು ಸಾಯುವ ಸ್ಥಿತಿಗೆ ಬಂತು


ಇರುವೆ ಬಳಿ ಮಿಡತೆ ಆಹಾರಕ್ಕಾಗಿ ಬೇಡಿತು. ಬೇಸಿಗೆಯಲ್ಲಿ ಆಹಾರ ಕೂಡಿಡಬೇಕಿತ್ತು ಎಂದಿತು ಇರುವೆ. ಮಿಡತೆ ಬೇಸರಿಸಿತು. ಬುದ್ದಿ ಹೇಳಿದ ಇರುವೆಯು ಸ್ವಲ್ಪ ಕಾಳು ನೀಡಿ ನೆರವಾಯಿತು

ಕಳೆದ ಸಂಚಿಕೆಯ ಸರಿ ಉತ್ತರಗಳು

ಒಗಟುಗಳು: 1 ಬೀಜ, 2 ದೀಪದ ಕುಡಿ 3 ಚಂದ್ರ 4 ಉಂಗುರ 5 ಹಾಗಲಕಾಯಿ

ಗಾದೆಗಳು: 1 ಗುಬ್ಬಿ 2 ರಾತ್ರಿ 3 ರಾಮೇಶ್ವರ 4 ಕುಡಿಕೆ ಹೊನ್ನು 5 ತೋಳ

ಮಜ ಮಜ ಮಜಕೂರದ ಮೇ 8ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಸನ್‌ರೈಸರ್ಸ್ ಹೈದರಾಬಾದ್ ತಂಡದ ವಿರುದ್ಧ ಭರ್ಜರಿ ಗೆಲುವು; ಅಭಿಷೇಕ್ ಬ್ಯಾಟಿಂಗ್ ವ್ಯರ್ಥ

ರಸೆಲ್ ಆರ್ಭಟ; ಕೋಲ್ಕತ್ತ ಜಯಭೇರಿ

ಪುಣೆ (ಪಿಟಿಐ): ಸ್ಫೋಟಕ ಬ್ಯಾಟಿಂಗ್ ಮೂಲಕ ಅಬ್ಬರಿಸಿದ ಆ್ಯಂಡ್ರೆ ರಸೆಲ್ ಬೌಲಿಂಗ್‌ನಲ್ಲೂ ಮಿಂಚಿದರು. ಇದರ ಫಲವಾಗಿ ಕೋಲ್ಕತ್ತ ನೈಟ್ ರೈಡರ್ಸ್ ತಂಡ ಭರ್ಜರಿ ಜಯ ಸಾಧಿಸಿತು.

ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆಯ ಕ್ರೀಡಾಂಗಣದಲ್ಲಿ ಶನಿವಾರ ರಾತ್ರಿ ನಡೆದ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಎದುರು ಕೋಲ್ಕತ್ತ 54 ರನ್‌ಗಳಿಂದ ಗೆದ್ದಿತು.

178 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಹೈದರಾಬಾದ್ 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 123 ರನ್ ಗಳಿಸಿತು.

ತಂಡದ ಪರವಾಗಿ ಆರಂಭಿಕ ಬ್ಯಾಟರ್ ಅಭಿಷೇಕ್ ಶರ್ಮಾ ಮತ್ತು ನಾಲ್ಕನೇ ಕ್ರಮಾಂಕದ ಏಡನ್ ಮರ್ಕರಮ್ ಮಾತ್ರ ಹೋರಾಟ ತೋರಿದರು. ನಾಯಕ ಕೇನ್ ವಿಲಿಯಮ್ಸನ್ ಮತ್ತು ಸ್ಫೋಟಕ ಬ್ಯಾಟರ್ ನಿಕೋಲಸ್ ಪೂರನ್ ಸೇರಿದಂತೆ ಐವರು ಎರಡಂಕಿ ಮೊತ್ತ ದಾಟದೆ ಔಟಾದರು.



ಕೇನ್ ವಿಲಿಯಮ್ಸನ್ ವಿಕೆಟ್ ಗಳಿಸಿದ ಆ್ಯಂಡ್ರೆ ರಸೆಲ್ ಸಂಭ್ರಮ –ಪಿಟಿಐ ಚಿತ್ರ

ಮಲಿಕ್ ದಾಳಿ; ರಸೆಲ್ ಹೋರಾಟ: ಟಾಸ್ ಗೆದ್ದ ಕೋಲ್ಕತ್ತ ತಂಡ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ವೇಗಿ ಉಮ್ರಾನ್ ಮಲಿಕ್ (33ಕ್ಕೆ3) ದಾಳಿಯ ಮುಂದೆ ಅಲ್ಪ ಮೊತ್ತಕ್ಕೆ ಕುಸಿಯುವ ಭೀತಿ ಎದುರಿಸಿದ್ದ ತಂಡಕ್ಕೆ ವಿಂಡೀಸ್ ಬ್ಯಾಟರ್ ರಸೆಲ್ (ಔಟಾಗದೆ 49, 28ಎ, 4X3, 6X4) ಶಕ್ತಿ ತುಂಬಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 177 ರನ್ ಗಳಿಸಿತು.

ಎರಡನೇ ಓವರ್‌ನಲ್ಲಿಯೇ ಜಾನ್ಸೆನ್ ಹಾಕಿದ ಸ್ವಿಂಗ್ ಎಸೆತವನ್ನು ಆಡುವ ಭರದಲ್ಲಿ ಎಡವಿದ ವೆಂಕಟೇಶ್ ಅಯ್ಯರ್ ಕ್ಲೀನ್‌ಬೌಲ್ಡ್ ಆದರು. ಬಿರುಸಿನ ಬ್ಯಾಟಿಂಗ್ ಮಾಡುತ್ತಿದ್ದ ಅಜಿಂಕ್ಯ ರಹಾನೆ ಮತ್ತು ನಿತೀಶ್ ರಾಣಾ ಅವರನ್ನು ಎಂಟನೇ ಓವರ್‌ನಲ್ಲಿ ಪೆವಿಲಿಯನ್‌ಗೆ ಮರಳಿಸುವಲ್ಲಿ ಮಲಿಕ್ ಯಶಸ್ವಿಯಾದರು. ತಮ್ಮ ಇನ್ನೊಂದು ಓವರ್‌ನಲ್ಲಿ ಶ್ರೇಯಸ್ ಅಯ್ಯರ್ (15) ವಿಕೆಟ್ ಕೂಡ ಗಳಿಸಿದ ಮಲಿಕ್ ಸಂಭ್ರಮಿಸಿದರು.ಭರವಸೆಯ ಬ್ಯಾಟರ್ ರಿಂಕು ಸಿಂಗ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಬೀಳಿಸುವಲ್ಲಿ ನಟರಾಜನ್ ಸಫಲರಾದರು. ಕ್ರೀಸ್‌ಗೆ ಬಂದ ರಸೆಲ್ ಆಟಕ್ಕೆ ಹೈದರಾಬಾದ್ ಬೌಲರ್‌ಗಳ ಶ್ರಮವೆಲ್ಲ ನೀರುಪಾಲಾಯಿತು. ಸ್ಯಾಮ್ ಬಿಲಿಂಗ್ಸ್ ಮತ್ತು ರಸೆಲ್ 6ನೇ ವಿಕೆಟ್ ಜೊತೆಯಾಟದಲ್ಲಿ 63 ರನ್‌ಗಳನ್ನು ಸೇರಿಸಿದರು. 19ನೇ ಓವರ್‌ನಲ್ಲಿ ಸ್ಯಾಮ್ ಔಟಾದರು. ವಾಷಿಂಗ್ಟನ್ ಸುಂದರ್ ಹಾಕಿದ ಕೊನೆಯ ಓವರ್‌ನಲ್ಲಿ ರಸೆಲ್ ಮೂರು ಸಿಕ್ಸರ್ ಹೊಡೆದರು. ಒಟ್ಟು 20 ರನ್‌ಗಳು ಈ ಓವರ್‌ನಲ್ಲಿ ಹರಿದುಬಂದವು.

ಇಂದಿನ ಪಂದ್ಯಗಳು

ಚೆನ್ನೈ ಸೂಪರ್ ಕಿಂಗ್ಸ್– ಗುಜರಾತ್ ಟೈಟನ್ಸ್
ಸ್ಥಳ: ವಾಂಖೆಡೆ ಕ್ರೀಡಾಂಗಣ, ಮುಂಬೈ
ಮಧ್ಯಾಹ್ನ 3.30

ಲಖನೌ ಸೂಪರ್ ಜೈಂಟ್ಸ್– ರಾಜಸ್ಥಾನ್ ರಾಯಲ್ಸ್
ಸ್ಥಳ: ಬ್ರೆಬೋರ್ನ್ ಕ್ರೀಡಾಂಗಣ, ಮುಂಬೈ
ರಾತ್ರಿ 7.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್

ಸ್ಕೋರ್ ಕಾರ್ಡ್

ಕೋಲ್ಕತ್ತ ನೈಟ್ ರೈಡರ್ಸ್ 6ಕ್ಕೆ 177 (20 ಓವರ್)
ವೆಂಕಟೇಶ್ ಬಿ ಜಾನ್ಸೆನ್ 7 (6ಎ, 4X1), ರಹಾನೆ ಸಿ ಶಶಾಂಕ್ ಬಿ ಉಮ್ರಾನ್ 28 (24ಎ, 6X3), ನಿತೀಶ್ ಸಿ ಶಶಾಂಕ್ ಬಿ ಉಮ್ರಾನ್ 26 (16ಎ, 4X1, 6X3), ಶ್ರೇಯಸ್ ಸಿ ತ್ರಿಪಾಠಿ ಬಿ ಉಮ್ರಾನ್ 15 (9ಎ, 4X2), ಬಿಲಿಂಗ್ಸ್ ಸಿ ವಿಲಿಯಮ್ಸನ್ ಬಿ ಭುವನೇಶ್ವರ್ 34 (29ಎ, 4X3, 6X1), ರಿಂಕು ಎಲ್‌ಬಿಡಬ್ಲ್ಯು ಬಿ ನಟರಾಜನ್ 5 (6ಎ), ರಸೆಲ್ ಔಟಾಗದೆ 49 (28ಎ, 4X3, 6X4), ಸುನಿಲ್ ಔಟಾಗದೆ 1 (2ಎ)
ಇತರೆ (ಲೆಗ್‌ಬೈ 4, ವೈಡ್ 8) 12
ವಿಕೆಟ್ ಪತನ: 1–17 (ವೆಂಕಟೇಶ್ ಅಯ್ಯರ್, 1.6), 2-65 (ನಿತೀಶ್ ರಾಣಾ, 7.3), 3-72 (ಅಜಿಂಕ್ಯ ರಹಾನೆ, 7.6), 4-83 (ಶ್ರೇಯಸ್ ಅಯ್ಯರ್, 9.6), 5-94 (ರಿಂಕು ಸಿಂಗ್, 11.3), 6-157 (ಸ್ಯಾಮ್ ಬಿಲಿಂಗ್ಸ್, 18.5)
ಬೌಲಿಂಗ್: ಭುವನೇಶ್ವರ್ ಕುಮಾರ್ 4-0-27-1, ಮಾರ್ಕೊ ಜಾನ್ಸೆನ್ 4-0-30–1, ಟಿ.ನಟರಾಜನ್ 4-0-43-1, ವಾಷಿಂಗ್ಟನ್ ಸುಂದರ್ 4-0-40-0, ಉಮ್ರಾನ್ ಮಲಿಕ್ 4-0-33-3

ಸನ್‌ರೈಸರ್ಸ್ ಹೈದರಾಬಾದ್ 8ಕ್ಕೆ 123 (20 ಓವರ್)
ಅಭಿಷೇಕ್ ಸಿ ಬಿಲಿಂಗ್ಸ್ ಬಿ ವರುಣ್ 43 (28 ಎ, 4x4, 6x2), ವಿಲಿಯಮ್ಸನ್ ಬಿ ರಸೆಲ್ 9 (17 ಎ, 4x1), ರಾಹುಲ್ ಸಿ ಮತ್ತು ಬಿ ಸೌಥಿ 9 (12 ಎ, 4x1), ಮರ್ಕರಮ್ ಬಿ ಯಾದವ್ 32 (25 ಎ, 6x3), ನಿಕೋಲಸ್ ಸಿ ಮತ್ತು ಬಿ ನಾರಾಯಣ್ 2 (3 ಎ), ಸುಂದರ್ ಸಿ ವೆಂಕಟೇಶ್ ಬಿ ರಸೆಲ್ 4 (9 ಎ), ಶಶಾಂಕ್ ಸಿ ಶ್ರೇಯಸ್ ಬಿ ಸೌಥಿ 11 (12 ಎ, 4x1), ಜಾನ್ಸೆನ್ ಸಿ ಬಿಲಿಂಗ್ಸ್ ಬಿ ರಸೆಲ್ 1 (2 ಎ), ಭುವನೇಶ್ವರ್ ಔಟಾಗದೆ 6 (7 ಎ, 4x1), ಉಮ್ರನ್ ಔಟಾಗದೆ 3 (5 ಎ)
ಇತರೆ (ವೈಡ್ 3) 3
ವಿಕೆಟ್ ಪತನ: 1-30 (ಕೇನ್ ವಿಲಿಯಮ್ಸನ್, 5.2), 2-54 (ರಾಹುಲ್ ತ್ರಿಪಾಠಿ, 8.2), 3-72 (ಅಭಿಷೇಕ್ ಶರ್ಮಾ, 11.5), 4-76 (ನಿಕೋಲಸ್ ಪೂರನ್, 12.3), 5-99 (ಏಡನ್ ಮರ್ಕರಮ್, 14.4), 6-107 (ವಾಷಿಂಗ್ಟನ್ ಸುಂದರ್, 17.1), 7-113 (ಮಾರ್ಕೊ ಜಾನ್ಸೆನ್, 17.5), 8-113 (ಶಶಾಂಕ್ ಸಿಂಗ್, 18.1)
ಬೌಲಿಂಗ್: ಉಮೇಶ್ ಯಾದವ್ 4-0-19-1, ಟಿಮ್ ಸೌಥಿ 4-0-23-2, ಸುನಿಲ್ ನಾರಾಯಣ್ 4-0-34-1, ಆ್ಯಂಡ್ರೆ ರಸೆಲ್ 4-0-22-3, ವರುಣ್ ಚಕ್ರವರ್ತಿ 4-0-25-1

ಫಲಿತಾಂಶ: ಕೋಲ್ಕತ್ತ ನೈಟ್ ರೈಡರ್ಸ್‌ಗೆ 54 ರನ್‌ಗಳ ಜಯ

ಅಂಬಟಿ ನಿವೃತ್ತಿ ಟ್ವೀಟ್ ಡಿಲೀಟ್!

ಮುಂಬೈ (ಪಿಟಿಐ): ಹಾಲಿ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಬ್ಯಾಟರ್ ಅಂಬಟಿ ರಾಯುಡು ಐಪಿಎಲ್‌ನಿಂದ ನಿವೃತ್ತಿಯಾಗುತ್ತಿರುವುದಾಗಿ ಟ್ವೀಟ್ ಮಾಡಿದ ಕೆಲ ಹೊತ್ತಿನ ನಂತರ ಅಳಿಸಿ ಹಾಕಿದ್ದಾರೆ. ಇದು ಕ್ರಿಕೆಟ್ ವಲಯದಲ್ಲಿ ಭಾರಿ ಕುತೂಹಲಕ್ಕೆ ಕಾರಣವಾಗಿದೆ.

‘ಇದು ನನ್ನ ಕೊನೆಯ ಐಪಿಎಲ್ ಎಂದು ಘೋಷಿಸಲು ಸಂತೋಷಿಸುತ್ತೇನೆ. ಕಳೆದ 13 ವರ್ಷಗಳಲ್ಲಿ ಎರಡು ಖ್ಯಾತನಾಮ ತಂಡಗಳಲ್ಲಿ ಆಡಿರುವುದಕ್ಕೆ ಹೆಮ್ಮೆಪಡುತ್ತೇನೆ. ಮುಂಬೈ ಇಂಡಿಯನ್ಸ್ ಮತ್ತು ಸಿಎಸ್‌ಕೆ ತಂಡಗಳಿಗೆ ಧನ್ಯವಾದಗಳು’ ಎಂದು 36 ವರ್ಷದ ಅಂಬಟಿ ರಾಯುಡು ಶನಿವಾರ ಬೆಳಿಗ್ಗೆ ಟ್ವೀಟ್ ಮಾಡಿದ್ದರು.

ಅಂಬಟಿ ರಾಯುಡು

ಆದರೆ ಒಂದು ಗಂಟೆ ಕಳೆಯುವುದರೊಳಗೆ ಅಂಬಟಿ ಪೋಸ್ಟ್ ಡಿಲೀಟ್ ಆಗಿತ್ತು. ಆದರೆ ಅಂಬಟಿಯ ನಿರ್ಧಾರದ ಬಗ್ಗೆ ಚೆನ್ನೈ ಫ್ರ್ಯಾಂಚೈಸಿಯ ವ್ಯವಸ್ಥಾಪನ ಮಂಡಳಿಗೆ ಅರಿವು ಇರಲಿಲ್ಲ. ಈ ಘಟನೆಯಿಂದಾಗಿ ತಂಡದಲ್ಲಿ ಸಂವಹನ ಕೊರತೆ ಇರುವುದು ಎದ್ದು ಕಾಣುತ್ತಿದೆ.

ಚೆನ್ನೈ ತಂಡದ ಆಲ್‌ರೌಂಡರ್ ರವೀಂದ್ರ ಜಡೇಜ ಪಕ್ಕೆಲುಬಿನ ಗಾಯದಿಂದಾಗಿ ಟೂರ್ನಿಯಿಂದ ಹೊರನಡೆದಿದ್ದರು. ಆಗಲೂ ಜಡೇಜ ತಮ್ಮನ್ನು ನಾಯಕಪಟ್ಟದಿಂದ ಇಳಿಸಿದ್ದಕ್ಕೆ ಬೇಸರಗೊಂಡು ಹೊರನಡೆದಿದ್ದಾರೆಂಬ ಚರ್ಚೆ ಸಾಮಾಜಿಕ ಜಾಲತಾಣಗಳಲ್ಲಿ ನಡೆದಿದ್ದವು.

‘ಅಂಬಟಿ ರಾಯುಡು ಐಪಿಎಲ್‌ನಿಂದ ನಿವೃತ್ತಿಯಾಗುವುದಿಲ್ಲ. ಅವರು ಟ್ವೀಟ್ ಮಾಡಿದ್ದು ನಿಜ. ಅದು ಭಾವನಾತ್ಮಕವಾಗಿ ಮಾಡಿದ್ದಿರಬಹುದು. ನಂತರ ಮ್ಯಾನೇಜ್‌ಮೆಂಟ್‌ನೊಂದಿಗೆ ಚರ್ಚಿಸಿದ ಅವರು ಟ್ವೀಟ್ ಅಳಿಸಿಹಾಕಿದ್ದಾರೆ’ ಎಂದು ತಂಡದ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಕಾಶಿ ವಿಶ್ವನಾಥನ್ ತಿಳಿಸಿದ್ದಾರೆ.

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	625
ರಾಹುಲ್	ಲಖನೌ	459
ವಾರ್ನರ್	ಡೆಲ್ಲಿ	427

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹಸರಂಗ	ಬೆಂಗಳೂರು	23
ಯಜುವೇಂದ್ರ	ರಾಜಸ್ಥಾನ	23
ಕಗಿಸೊ	ಪಂಜಾಬ್	21

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	12	9	3	0	0	18	0.376
ಲಖನೌ	12	8	4	0	0	16	0.385
ರಾಜಸ್ಥಾನ	12	7	5	0	0	14	0.228
ಬೆಂಗಳೂರು	13	7	6	0	0	14	-0.323
ಡೆಲ್ಲಿ	12	6	6	0	0	12	0.210
ಕೋಲ್ಕತ್ತ	13	6	7	0	0	12	0.160
ಪಂಜಾಬ್	12	6	6	0	0	12	0.023
ಹೈದರಾಬಾದ್	12	5	7	0	0	10	-0.270
ಚೆನ್ನೈ	12	4	8	0	0	8	-0.181
ಮುಂಬೈ	12	3	9	0	0	6	-0.613

*ಶನಿವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಸೆರೆನಾ ದಾಖಲೆ ಸರಿಗಟ್ಟಿದ ಸ್ವಟೆಕ್

ರೋಮ್ (ಎಪಿ): ಪೋಲೆಂಡ್ ಆಟಗಾರ್ತಿ ಇಗಾ ಸ್ವಟೆಕ್ ಅವರು ಇಟಾಲಿಯನ್ ಓಪನ್ ಟೆನಿಸ್ ಟೂರ್ನಿಯ ಪ್ರಶಸ್ತಿ ಸುತ್ತಿಗೆ ತಲುಪಿದ್ದಾರೆ. ಇದರೊಂದಿಗೆ ಅಮೆರಿಕದ ಸೆರೆನಾ ವಿಲಿಯಮ್ಸ್ ಅವರ ಏಳು ವರ್ಷದ ಹಿಂದಿನ ದಾಖಲೆಯೊಂದನ್ನು ಸರಿಗಟ್ಟಿದ್ದಾರೆ.

ಇಗಾ ಸ್ವಟೆಕ್

ಶನಿವಾರ ನಡೆದ ಟೂರ್ನಿಯ ಮಹಿಳಾ ಸಿಂಗಲ್ಸ್ ಸೆಮಿಫೈನಲ್ ಪಂದ್ಯದಲ್ಲಿ ಸ್ವಟೆಕ್ 6–2, 6–1ರಿಂದ ಬೆಲಾರೂಸ್‌ನ ಅರಿನಾ ಸಬಲೆಂಕಾ ಅವರನ್ನು ಮಣಿಸಿ ಸತತ 27 ಪಂದ್ಯ ಗೆದ್ದ ಸಾಧನೆ ಮಾಡಿದರು. 2014 ಮತ್ತು 2015ರಲ್ಲಿ ಸೆರೆನಾ ಈ ಸಾಧನೆ ಮಾಡಿದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

RUBBER RECYCLING company is looking for agents, Residential Associates and Employees for Supply/Sourcing cured scraprubber. Interested People send their details to mailid: tsrubberrecycling@gmail.com

REQUIRED URGENTLY BABY SITTERS, HOUSE MAID/HOME NURSE, Male/Female 24/12 hours duty. Contact: 6366883838, 7022399993

Engg/ Production Technical

ಹೊಸೂರು, ತಮಿಳುನಾಡು ಕಂಪನಿಯೊಂದಕ್ಕೆ ಬೇಕಾಗಿದ್ದಾರೆ (1) ಎಲೆಕ್ಟ್ರೀಷಿಯನ್ಸ್ ITI (2) ಹೆಲ್ಪರ್ಸ್ (3) ಫಿಟ್ಟರ್ಸ್ ಮೆಕ್ಯಾನಿಕಲ್ ಅಸೆಂಬ್ಲಿ (4) Autocad Draftsman Mechanical Drawings. ಸಂಪರ್ಕಿಸಿ: 9789055141

Drivers

ಕವಿ ಲಾಜಿಸ್ಟಿಕ್ಸ್ ಬೆಂಗಳೂರು ಹೈದರಾಬಾದ್ ಮಾರ್ಗದಲ್ಲಿ ಚಲಾಯಿಸಲು ಡ್ರೈವರ್ಸ್ ಬೇಕಾಗಿದ್ದಾರೆ, ಹೆವಿ ಡ್ರೈವಿಂಗ್ ಲೈಸೆನ್ಸ್ ನೊಂದಿಗೆ ನಂ.4/1, 2ನೇ ಮುಖ್ಯ ರಸ್ತೆ, ಶ್ರೀರಾಂಪುರಂ, ಬೆಂಗಳೂರು: 9738421001, 9886683188

ಕ್ರೈನ್ ಆಪರೇಟರ್ಸ್ ಮತ್ತು ಲಾರಿ ಡ್ರೈವರ್ಸ್‌ಗಳು ಬೇಕಾಗಿದ್ದಾರೆ.ಮಾರುತಿ ವುಡ್ ಇಂಡಸ್ಟ್ರೀಸ್ ಗುಬ್ಬಿ ಗೇಟ್, ಬಿ.ಎಚ್.ರೋಡ್ ತುಮಕೂರು7892748045, 9448473988

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್ : ಒತ್ತಡ ಮುಕ್ತ ಚಾಲನೆ ಸಂಬಳ: 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 08047106868

Placement Bureaus/Consultants

ಸಮರ್ಥನಂ ಅಂಗವಿಕಲರ ಸಂಸ್ಥೆಯು ಉದ್ಯೋಗ ಮೇಳವನ್ನು ವಿಕಲಚೇತನರಿಗೆ ದಿನಾಂಕ 20.05.2022 ರಂದು ಅಂಧ ಮಕ್ಕಳ ಸರ್ಕಾರಿ ಪಾಠಶಾಲೆ ದೇವರಾಜ್ ಅರಸ್ ಬಡಾವಣೆ ಬಿ ಬ್ಲಾಕ್ ಶಿವಾಲಿ ಟಾಕೀಸ್ ಹತ್ತಿರ ದಾವಣಗೆರೆ- 577006 ಅರ್ಹತೆ 10ನೇ ತರಗತಿ ಮತ್ತು ಅದಕ್ಕಿಂತ ಹೆಚ್ಚಿನ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗೆ ಸಮರ್ಥನಂ ಸಹಾಯವಾಣಿಯನ್ನು ಸಂಪರ್ಕಿಸಿ: 080 68333999 ಮೊಬೈಲ್ ನಂಬರ್: 6364867818/ 6364867795/ 9449864693

Wanted

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ Ot. 17,800-68,000/- 8884666594/ 8884666597

ಎಲೆಕ್ಟ್ರಿಷಿಯನ್ಸ್ ಹೆಲ್ಪರ್ಸ್ ಚಾಲಕರು 407/909 ಬೊಲೆರೊಜೀಪ್ (ಎಸಿ ಸಹಿತ) ಮೈಕ್ ಸೆಟ್,ಸೀರಿಯಲ್ ಸೆಟ್ ಜೆನರೇಟರ್ ಆಪರೇಟರ್ಸ್ ತಕ್ಷಣ ಬೇಕಾಗಿದ್ದಾರೆ.ಅನುಭವಸ್ಥರಿಗೆ ಮೊದಲ ಆದ್ಯತೆ.ಸಂಪರ್ಕಿಸಿ: 9743412669

ಬೇಕಾಗಿದ್ದಾರೆ: ಅಟೆಂಡರ್, ಸೆಕ್ಯೂರಿಟೀ ಗಾರ್ಡ್‌ಗಳು, ಆಯಾಗಳು, ಸಂಪರ್ಕಿಸಿ: ಕ್ಯಾಮ್ಲಿನ್ ಆಂಗ್ಲಶಾಲೆ, 6ನೇ 'ಸಿ' ಮೇನ್, 4ನೇ ಕ್ರಾಸ್, ಹಂಪಿನಗರ ಬೆಂಗಳೂರು.

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Flat

Rajarajeshwari Nagar

ನಗರದ ಬಾಗದಲ್ಲಿರುವ ರಾಜರಾಜೇಶ್ವರಿ ನಗರದ ಗಿರಿದಾಮ ಬಡಾವಣೆ ಗಟ್ಟಿಗೆರೆಯಲ್ಲಿ ನೂತನವಾಗಿ ನಿರ್ಮಾಣ ಮಾಡಿರುವ 2 ಬಿ.ಹೆಚ್. ಕೆ ಪ್ಲ್ಯಾಟ್ ಗಳು ಮಾರಾಟಕ್ಕಿವೆ.ಅನುಕೂಲಕರ ವ್ಯವಸ್ಥೆಯೊಂದಿಗೆ ತಕ್ಷಣಕ್ಕೆ ಗೃಹ ಪ್ರವೇಶಕ್ಕೆ ಯೋಗ್ಯವಾಗಿದೆ.ಸಂಪರ್ಕಿಸಿ: 9743412669

General

North

PROPERTY FOR sale. #21 'Hari krupa' 3rd cross lower palace orchards.1550 sq ft. 9591932764

ADMISSION CORNER

ADMISSIONS OPEN
MAA SHREE DEVI EDUCATIONAL INSTITUTE
Regular & Correspondence
MBBS, BAMS, BHMS, BEMS, BUMS, BNYS, B.PHARMA, D.PHARMA, B.SC. NURSING, POST B.SC NURSING, B.SC MLT, DMLT, OT & X-RAY TECHNICIAN, DIPLOMA IN ENGINEERING, B.TECH, M.TECH, MBA, BBA, BCA, MCA, MA, M COM, MSC, BA, BSC, B COM, 10th 12th ETC From UGC/AICTE/ AIU/PCI/ BCI/ Recognised Universities and best Suggestions.
CONTACT FOR ADMISSIONS - 88535 29329 / 95917 25892
MAA SHREE DEVI EDUCATIONAL INSTITUTE
Bannerghatta Main Road, Bangalore - 560076

TRAVEL CORNER

ಪ್ರವಾಸ
24-5.2022 ರಿಂದ 6 ದಿನ
ರಾಮೇಶ್ವರ – ಕನ್ಯಾಕುಮಾರಿ – ಅಲಪ್ಪಿ ಬೋಟಿಂಗ್ ತ್ರಿವೆಂಡ್ರಂ – ಕೋವಲಂ ಬೀಚ್
26-5-2022 ರಿಂದ 4 ದಿನ
ಧರ್ಮಸ್ಥಳ– ಹೊರನಾಡು – ಮುರಡೇಶ್ವರ ಕೊಲ್ಲೂರು – ಸಿಗಂದೂರು
ಶ್ರೀಗುರುರಾಜ ಟ್ರಾವೆಲ್ಸ್ ಕೋಲಾರ
9900124333, 9611082432, 9611082432

Sites

Out-Station

45 CENTS Converted Road side corner plot for sale at Kidiyoor, Udupi. Owner Bala: 9901658812.

26.5.2022 ಗುಜರಾತ್, ಮಧ್ಯಪ್ರದೇಶ್14-6-2022 ಕಾಶಿ,ಗಯಾ ಪ್ರಯಾಗ್‌ರಾಜ್ ಕೋಲ್ಕತ್ತ ಭುವನೇಶ್ವರ್2-7-2022 ಅಮರನಾಥ್ ಯಾತ್ರಾ 4-9-2022 ಯಮುನೋತ್ರಿ ಗಂಗೋತ್ರಿ ಕೇದಾರನಾಥ್ ಬದ್ರಿನಾಥ್ ಕರ್ನಾಟಕ ಹೆರಿಟೇಜ್ ಟೂರಿಸ್ಟ (ಹನುಮಂತನಗರ್)9845035349, 9482435755

14.06.2022 21.06.2022 ಕುಲು,ಮನಾಲಿ 7ದಿನಗಳು. 06.06.2022 20.06.2022 ಲೇಹಾಲಡಕ್ 10ದಿನಗಳು 16.06.2022 23.06.2022 ಕಲ್ಕತ್ತ,ಡಾರ್ಜಲಿಂಗ್ 11 ದಿನಗಳು 03.06.2022 10.06.2022 ಕಾಶಿ,ನೈಮೀಶಾರಣ್ಯ 7ದಿನಗಳು 04.07.2022 18.07.2022 ಅಮರನಾಥ್‌ಯಾತ್ರೆ 11ದಿನಗಳು 07.09.2022 21.09.2022 ಚಾರ್‌ಧಾಮ್ 13 ದಿನಗಳು. 'ಶ್ರೀಮಲ್ಲಿಕಾರ್ಜುನ ಟ್ರಾವಲ್ಸ್' ಬೆಂಗಳೂರು.40. 9880847001 9342848791

ಭವಿಷ್ಯ

Astrology

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಪ್ರವಾಸ

Travel

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 23.06.2022 ಗುಜರಾತ್ ದ್ವಾರಕ, ಸೋಮನಾಥ್, ನಾಗನಾಥ, 01.07.2022 ಅಮರ್‌ನಾಥ್ ಯಾತ್ರ. 26.05.2022, ಕಾಶಿ, ಜಾರ್ಖಂಡ, ಬೈದ್ಯನಾಥ್ 9964527782.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
EFFECTIVE FROM May 1, 2022
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	70	100	80	135

CD Per Sqcm	Single Col	Double Col	Multi Col
	480	450	475

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹440
12 ಮೊಟ್ಟೆಗೆ ₹60
ಮೈಸೂರು
100 ಮೊಟ್ಟೆಗೆ ₹445

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1630 (1630)
ಸೋಯಾ (ರಿಫೈನ್ಡ್)	₹1580 (1575)
ಸೂರ್ಯಕಾಂತಿ (ರಿಫೈನ್ಡ್)	₹1970 (1900)
ಪಾಮೋಲಿನ್	₹1570 (1565)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹150-480
ದ್ವಿತಳಿ (ಬಿ.ವಿ) ₹222-678

ಚಿನ್ನ, ಬೆಳ್ಳಿ ಬೆಂಗಳೂರು

ಸ್ಟ್ಯಾಂಡರ್ಡ್ ಚಿನ್ನ (10ಗ್ರಾಂ)	₹51900
ಆಭರಣ ಚಿನ್ನ (1 ಗ್ರಾಂ)	₹4840
ಬೆಳ್ಳಿ (ಕೆ.ಜಿಗೆ)	₹61400

ಡಿ–ಮಾರ್ಟ್‌ಗೆ ಲಾಭ

ನವದೆಹಲಿ (ಪಿಟಿಐ): ಡಿ–ಮಾರ್ಟ್ ಮಳಿಗೆಗಳನ್ನು ನಿಯಂತ್ರಿಸುತ್ತಿರುವ ಅವೆನ್ಯು ಸೂಪರ್‌ಮಾರ್ಕೆಟ್ಸ್, 2022ರ ಮಾರ್ಚ್ ತ್ರೈಮಾಸಿಕದಲ್ಲಿ ₹ 426.75 ಕೋಟಿ ಲಾಭ ಗಳಿಸಿದೆ.

ಮುಂಬೈ ಧಾರಣೆ

ಶೇಂಗಾ 14-5-2022

ಜಾವಾ 70/80(ಹೊಸ)	10250-10300
ಜಾವಾ 80/90(ಹೊಸ)	9600-9650
ದಪ್ಪ ಮಧ್ಯಪ್ರದೇಶ(ಹೊಸ)	10950-11000
ದಪ್ಪ ಗುಜರಾತ್(ಹೊಸ)	10050-10100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1640 (1640)
ಒಂದು ವಾರದ ಡೆಲಿವರಿ	1635 (1635)
ಸೋಯಾ ಕಚ್ಚಾ	1560 (1550)
ಪಾಮ್ ವಾರದ ಡೆಲಿವರಿ	1568 (1563)
ಸೂರ್ಯಕಾಂತಿ ಎಣ್ಣೆ ಕಚ್ಚಾ	1840 (1840)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,250 (50,150)
ಬೆಳ್ಳಿ ಕೆ.ಜಿ 59,650 (59,150)

ಕೇಂದ್ರದ ಕ್ರಮಕ್ಕೆ ಜಿ–7 ವಿರೋಧ

ಸ್ಟಟ್‌ಗಾಟ್ (ಎಎಫ್‌ಪಿ): ಗೋಧಿ ರಫ್ತಿಗೆ ನಿಷೇಧ ಹೇರಿರುವ ಕೇಂದ್ರ ಸರ್ಕಾರದ ಕ್ರಮವನ್ನು ಜಿ–7 ರಾಷ್ಟ್ರಗಳ ಕೃಷಿ ಸಚಿವರು ಖಂಡಿಸಿದ್ದಾರೆ.

‘ಎಲ್ಲ ದೇಶಗಳೂ ರಫ್ತು ನಿಷೇಧ ಜಾರಿಗೆ ತಂದರೆ ಅಥವಾ ತಮ್ಮ ಮಾರುಕಟ್ಟೆಯ ಬಾಗಿಲು ಮುಚ್ಚಿದರೆ ಪರಿಸ್ಥಿತಿ ಬಿಗಡಾಯಿಸುತ್ತದೆ’ ಎಂದು ಜರ್ಮನಿಯ ಕೃಷಿ ಸಚಿವ ಜೆಮ್ ಒಜ್ಡೆಮಿರ್ ಹೇಳಿದ್ದಾರೆ.

2 ಕೋಟಿ ಟನ್ ಗೋಧಿ ಈಗ ಉಕ್ರೇನ್‌ನಲ್ಲಿ ಇದೆ. ಆದರೆ ಅಲ್ಲಿನ ಬಂದರುಗಳಿಂದ ರಫ್ತು ಮಾಡಲು ಆಗುತ್ತಿಲ್ಲ. ಪರಿಸ್ಥಿತಿ ಹೀಗಿರುವಾಗ ಜಿ–7 ದೇಶಗಳ ಸಚಿವರು ಇತರ ದೇಶಗಳಿಗೆ ನಿರ್ಬಂಧಗಳನ್ನು ವಿಧಿಸದಂತೆ ಮನವಿ ಮಾಡಿದ್ದಾರೆ.

‘ಜಿ–7 ದೇಶಗಳು ರಫ್ತು ನಿಷೇಧಗಳ ವಿರುದ್ಧ ಮಾತನಾಡಿವೆ. ಮಾರುಕಟ್ಟೆಗಳನ್ನು ಮುಕ್ತವಾಗಿ ಇರಿಸಬೇಕು ಎಂದೂ ಹೇಳಿವೆ’ ಎಂದು ಒಜ್ಡೆಮಿರ್ ತಿಳಿಸಿದ್ದಾರೆ. ‘ಜಿ–20 ಗುಂಪಿನ ಸದಸ್ಯ ದೇಶವಾಗಿರುವ ಭಾರತವು ತನ್ನ ಪಾತ್ರ ನಿಭಾಯಿಸಬೇಕು’ ಎಂದು ಆಗ್ರಹಿಸಿದ್ದಾರೆ.

ಜೂನ್‌ನಲ್ಲಿ ಜರ್ಮನಿಯಲ್ಲಿ ನಡೆಯಲಿರುವ ಜಿ–7 ಶೃಂಗ ಸಭೆಯಲ್ಲಿ ಗೋಧಿ ರಫ್ತು ನಿಷೇಧದ ಬಗ್ಗೆ ಚರ್ಚಿಸಲು ಕೃಷಿ ಸಚಿವರು ಮುಂದಾಗಿದ್ದಾರೆ. ಈ ಸಭೆಗೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಆಹ್ವಾನ ಇದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ

ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250

ಕಾಳು ಮೆಣಸು 490

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ ಮುದ್ರೆಮನೆ	ಹಾಸನ ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	15800	15950	215.30 ಸೆಂಟ್ಸ್
ಎಸಿ	---	8500	8750	
ಆರ್‌ಪಿ	---	9800	9975	ಲಂಡನ್
ಆರ್‌ಸಿ	---	4300	4450	2040ಡಾಲರ್ಸ್

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪ್ರಥಮ ವರ್ಷದ ಪುಣ್ಯಸ್ಮರಣೆ



ಶ್ರೀ ಮುನಿಕಾಮಯ್ಯ
(ನಿವೃತ್ತ ಪೊಲೀಸ್ ಇನ್ಸ್‌ಪೆಕ್ಟರ್)
ದಿ: 18.05.2022ನೇ ಬುಧವಾರದಂದು ಎಂ.ಇ.ಐ ಕಾಲೋನಿ, ಪಾರ್ವತಿ ನಗರ, ಲಗ್ಗೆರೆ. ಸಮಯ: ಮಧ್ಯಾಹ್ನ 12.00ಕ್ಕೆ ಪುಣ್ಯಸ್ಮರಣೆಯನ್ನು ಏರ್ಪಡಿಸಲಾಗಿದೆ.
ನಿಮ್ಮ ಪ್ರೀತಿ, ವಾತ್ಸಲ್ಯ, ಮಮತೆ, ಆಶೀರ್ವಾದಗಳೇ ನಮಗೆ ಶ್ರೀರಕ್ಷೆ. ನಿಮ್ಮ ಔದರ್ಯ ಮತ್ತು ಸರಳತೆ ತುಂಬಿದ ಆದರ್ಶಮಯ ಬದುಕು ನಮ್ಮೆಲ್ಲರಿಗೆ ದಿವ್ಯಚೇತನ. ನೀವು ನಮಗೆ ಕಲಿಸಿದ ಜೀವನ ಮೌಲ್ಯ, ಶಿಸ್ತಿನ ಪಾಠ ನಮಗೆ ದಾರಿದೀಪ. ನಿಮ್ಮ ಅಗಲಿಕೆ ನಮಗೆ ಅರಗಿಸಿಕೊಳ್ಳಲಾಗದ ದುಃಸ್ವಪ್ನ. ನೀವು ನಮ್ಮ ಮನದಲ್ಲಿ ಎಂದಿಗೂ ಅಜರಾಮರ. ಅನುದಿನವೂ, ಅನುಕ್ಷಣವೂ ನಿಮ್ಮ ನೆನಪುಗಳಲ್ಲಿಯೇ ಮುನ್ನಡೆಯುತ್ತಿದ್ದೇವೆ.
ಸದಾ ನಿಮ್ಮನ್ನು ಸ್ಮರಿಸುವ: ಕುಟುಂಬದವರು ಹಾಗೂ ಬಂಧು–ಮಿತ್ರರು

ಮರಣ



ಸಿ.ಸಿ. ಗಂಗಣ್ಣನವರು
(Retd. Executive Engineer)
(ಜನನ: 03.01.1940 • ಮರಣ: 13.05.2022)
ದಿ|| 13.05.2022ರಂದು ದೈವಾಧೀನರಾಗಿದ್ದು ಅಂತ್ಯಕ್ರಿಯೆಯನ್ನು ದಿ: 16.05.2022ರಂದು ಕನಕಪುರ ತಾಲ್ಲೂಕ್, ಹಾರೋಹಳ್ಳಿ, ಟಿ.ಹೊಸಹಳ್ಳಿ ಬಳಿ ಇರುವ ಫಾರ್ಮ್‌ಹೌಸ್‌ನಲ್ಲಿ ನೆರವೇರಿಸಲಾಗುವುದು.
ಇಂತಿ ದುಃಖಿತಪ್ತರು: ಪತ್ನಿ: ಶಾಂತಗಂಗಣ್ಣ ಮತ್ತು ಮಕ್ಕಳು.
9663995220, 9845212721, 9886331168

ಒಂಬತ್ತನೇ ವರ್ಷದ ಪುಣ್ಯಸ್ಮರಣೆ



ಎಂ.ವಿ.ಪುಟ್ಟಪ್ಪ ಹೆಗ್ಗಡೆ ಯವರು
ಜನನ:31-12-1931 ನಿಧನ:15-05-2013
ನೀವು ನಮ್ಮನ್ನಗಲಿ ಒಂಬತ್ತು ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಾಳದಲ್ಲಿದೆ. ನಿಮ್ಮ ದಿವ್ಯಾತ್ಮವು ಭಗವಂತನ ಪದತಳದಲ್ಲಿ ಚಿರಶಾಂತಿ ಪಡೆಯಲೆಂದು ಪ್ರಾರ್ಥಿಸುವ
ಪತ್ನಿ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಎಲ್ಲಾ ಕುಟುಂಬಸ್ಥರು, ಶಿವಮೊಗ್ಗ.
ಫೋನ್: 9242361221 / 9480204505 9845027001 / 9480086310

LOOKING TO BUILD, BUY OR SELL A PROPERTY
Please refer Classifieds on Sunday

ಮೊಹಮ್ಮದ್ ಬಿನ್ ಜಾಯೇದ್ ಯುಎಇ ಅಧ್ಯಕ್ಷ

ದುಬೈ (ಎಪಿ): ಶೇಖ್ ಮೊಹಮ್ಮದ್ ಬಿನ್ ಜಾಯೇದ್ ಅಲ್ ನಹ್ಯಾನ್ ಅವರನ್ನು ಅರಬ್ ಸಂಯುಕ್ತ ಸಂಸ್ಥಾನದ (ಯುಎಇ) ನೂತನ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.

ಅಬುಧಾಬಿಯಲ್ಲಿ ಶನಿವಾರ ಯುಎಇಯ ಏಳು ಪ್ರಾಂತ್ಯಗಳ ಆಡಳಿತಗಾರರು ನಡೆಸಿದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಸರ್ಕಾರಿ ಒಡೆತನದ ಸುದ್ದಿಸಂಸ್ಥೆ ಡಬ್ಲ್ಯುಎಎಂ ವರದಿ ಮಾಡಿದೆ.

ಉತ್ತರ ಕೊರಿಯಾ: ಜ್ವರ– ಒಂದೇ ದಿನ 21 ಸಾವು

ಸೋಲ್ (ಪಿಟಿಐ): ಉತ್ತರ ಕೊರಿಯಾದಲ್ಲಿ ಕೊರೊನಾ ವೈರಸ್ ಸೋಂಕಿನ ಮೊದಲ ಪ್ರಕರಣ ಕಾಣಿಸಿಕೊಂಡ ಮೂರೇ ದಿನಗಳಲ್ಲಿ 27 ಸಾವುಗಳು ಸಂಭವಿಸಿವೆ. ಶುಕ್ರವಾರ ಒಂದೇ ದಿನ 21 ಮಂದಿ ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ.

1,74,440 ಮಂದಿಗೆ ಹೊಸದಾಗಿ ಜ್ವರ ಮತ್ತು ಇತರ ಲಕ್ಷಣಗಳು ಕಾಣಿಸಿಕೊಂಡಿವೆ ಎಂದು ಸರ್ಕಾರಿ ಸುದ್ದಿಮಾಧ್ಯಮಗಳು ವರದಿ ಮಾಡಿವೆ.

ಜ್ವರದಿಂದ ಈ ವರೆಗೆ 27 ಮಂದಿ ಮೃತಪಟ್ಟಿದ್ದಾರೆ ಎಂದು ಹೇಳಲಾಗಿದೆ. ಆದರೆ, ಈ ಸಾವುಗಳಿಗೆ ಕೋವಿಡ್ ಕಾರಣವೇ ಎಂಬುದು ಇನ್ನೂ ದೃಢಪಟ್ಟಿಲ್ಲ ಎಂದೂ ಮಾಧ್ಯಮಗಳು ವರದಿ ಮಾಡಿವೆ. ಉತ್ತರ ಕೊರಿಯಾದಲ್ಲಿ ಕೋವಿಡ್–19ನ ಮೊದಲ ಪ್ರಕರಣ ಪತ್ತೆಯಾದ ಬಗ್ಗೆ ಮೇ 13ರಂದು ವರದಿಯಾಗಿತ್ತು.

ಬೆಂಗಳೂರು ವಿಶ್ವ 10ಕೆ ಓಟ ಇಂದು: ಎರಡು ವರ್ಷಗಳ ಬಳಿಕ ಸ್ಪರ್ಧೆ

ಚಿನ್ನದ ಮೇಲೆ ಬೆಲಿಹು, ಒಬಿರಿ ಕಣ್ಣು

• ಬಸವರಾಜ ದಳವಾಯಿ

ಇಥಿಯೋಪಿಯಾದ ಮುಖ್ತಾರ್ ಇದ್ರಿಸ್, ಕೆನ್ಯಾದ ಕಿಬಿವೊಟ್ ಕ್ಯಾಂಡಿ, ಇಥಿಯೋಪಿಯಾದ ಅಂಡಮಾಕ್ ಬೆಲಿಹು, ಕೆನ್ಯಾದ ಹೆಲೆನ್ ಒಬಿರಿ ಮತ್ತು ಇರೇನ್ ಚೆಪ್ಟಾಯ್– ಪ್ರಜಾವಾಣಿ ಚಿತ್ರ

ಬೆಂಗಳೂರು: ಎರಡು ವರ್ಷಗಳ ‘ಕೋವಿಡ್ ಬ್ರೇಕ್’ ನಂತರ ಉದ್ಯಾನನಗರಿಗೆ ‘ಓಟದ ಗಮ್ಮತ್ತು’ ಮರಳಿದೆ. ಕಂಠೀರವ ಕ್ರೀಡಾಂಗಣದ ಸಿಂಥೆಟಿಕ್ ಟ್ರ್ಯಾಕ್‌ನಲ್ಲಿ ವಿಶ್ವ 10ಕೆ ರನ್ ಸಂಭ್ರಮ ಭಾನುವಾರ ಗರಿಗೆದರಲಿದೆ.

ಟಾಟಾ ಕನ್ಸಲ್ಟನ್ಸಿ ಸರ್ವಿಸಸ್ (ಟಿಸಿಎಸ್) ಪ್ರಾಯೋಜಕತ್ವದಲ್ಲಿ ನಡೆಯಲಿರುವ 10 ಕಿ.ಮೀ ವಿಭಾಗದ ಓಟಕ್ಕೆ ಪ್ರಪಂಚದ ಪ್ರಮುಖ ಅಥ್ಲೀಟ್‌ಗಳು ಸಾಕ್ಷಿಯಾಗಲಿದ್ದಾರೆ. ವಿಶ್ವ ಅಥ್ಲೆಟಿಕ್ಸ್ ಎಲೀಟ್ ಸ್ಪರ್ಧೆಯು ಬೆಂಗಳೂರಿನ ಪ್ರಮುಖ ರಸ್ತೆಗಳಲ್ಲಿ ಸಾಗಿ ಕಂಠೀರವ ಕ್ರೀಡಾಂಗಣದಲ್ಲಿ ಕೊನೆಗೊಳ್ಳಲಿದೆ. ಎಲ್ಲ ವಿಭಾಗಗಳ ಸ್ಪರ್ಧೆಗಳು ಸೇರಿ 19 ಸಾವಿರಕ್ಕಿಂತ ಹೆಚ್ಚಿನ ಅಥ್ಲೀಟ್‌ಗಳು ನೋಂದಾಯಿಸಿಕೊಂಡಿದ್ದಾರೆ.

2019ರಲ್ಲಿ ಕೊನೆಯ ಬಾರಿ ಸ್ಪರ್ಧೆ ನಡೆದಿತ್ತು. ಕೋವಿಡ್ ಕಾರಣದಿಂದಾಗಿ ಎರಡು ವರ್ಷ (2020 ಮತ್ತು 2021) ಆನ್‌ಲೈನ್ ಮೂಲಕ ನೋಂದಾಯಿಸಿಕೊಂಡ ಸ್ಪರ್ಧಿಗಳು ತಾವಿದ್ದ ಸ್ಥಳದಿಂದಲೇ ಪಾಲ್ಗೊಂಡಿದ್ದರು.

ಬೆಂಗಳೂರು 10ಕೆ ಪುರುಷರ ವಿಭಾಗದ ಹಾಲಿ ಚಾಂಪಿಯನ್ ಇಥಿಯೋಪಿಯಾದ ಅಂಡಮಾಕ್ ಬೆಲಿಹು ಈ ಬಾರಿಯೂ ಚಿನ್ನದ ಪದಕ ಜಯಿಸುವ ನೆಚ್ಚಿನ ಸ್ಪರ್ಧಿ ಎನಿಸಿದ್ದಾರೆ. ದೆಹಲಿ ಹಾಫ್ ಮ್ಯಾರಥಾನ್ ಅನ್ನು ಎರಡು ಬಾರಿ ಜಯಿಸಿರುವ ಅವರಿಗೆ ತಮ್ಮದೇ ದೇಶದ ಮುಖ್ತಾರ್ ಇದ್ರಿಸ್ ಪ್ರಮುಖ ಸವಾಲಾಗುವ ನಿರೀಕ್ಷೆಯಿದೆ. 2017 ಮತ್ತು 2019ರ ವಿಶ್ವ ಚಾಂಪಿಯನ್‌ಷಿಪ್‌ನ 5000 ಮೀಟರ್ಸ್ ವಿಭಾಗದಲ್ಲಿ ಪ್ರಶಸ್ತಿ ಹಿರಿಮೆ ಅವರದು. ಕೀನ್ಯಾದ ಕಿಬಿವೊಟ್ ಕ್ಯಾಂಡಿ ಇವರಿಬ್ಬರನ್ನು ಮೀರಿಸುವ ಛಲದಲ್ಲಿದ್ದಾರೆ. ಕೆನ್ಯಾದ ಹೆಲೆನ್ ಒಬಿರಿ ಮತ್ತು ಇರೇನ್ ಚೆಪ್ಟಾಯ್ ಮಹಿಳಾ ವಿಭಾ ಗದಲ್ಲಿ ಚಿನ್ನದ ಪದಕದ ಮೇಲೆ ಕಣ್ಣಿಟ್ಟಿದ್ದಾರೆ.

ಭಾರತದ ಎಲೀಟ್ ಪುರುಷರ ವಿಭಾಗದಲ್ಲಿ ಶ್ರೀನು ಭುಗಾತಾ, ಕರ್ನಾಟಕದ ಎ.ಬಿ. ಬೆಳ್ಳಿಯಪ್ಪ ಮತ್ತು ಕಾರ್ತಿಕ್‌ಕುಮಾರ್ ಪ್ರಮುಖ ಸ್ಪರ್ಧಿಗಳಾಗಿದ್ದಾರೆ. ಮಹಿಳೆಯರ ವಿಭಾಗದಲ್ಲಿ ಹಾಲಿ ಚಾಂಪಿಯನ್ ಸಂಜೀವನಿ ಜಾಧವ್, ಪಾರುಲ್ ಚೌಧರಿ ಮತ್ತು ಕವಿತಾ ಯಾದವ್ ಪದಕದ ನಿರೀಕ್ಷೆಯಲ್ಲಿದ್ದಾರೆ.

ನೇರಪ್ರಸಾರ: https://www.youtube.com/c/procamInternational

ಸ್ಪರ್ಧೆಗಳ ಸಮಯ

ವಿಭಾಗ	ಆರಂಭ (ಬೆಳಿಗ್ಗೆ)
ಓಪನ್ 10ಕೆ	5.30
ವಿಶ್ವ ಮಹಿಳಾ 10ಕೆ	7.10
ವಿಶ್ವ ಪುರುಷರ 10ಕೆ	8 ಗಂಟೆ
ಅಂಗವಿಕಲರು, ಹಿರಿಯ ನಾಗರಿಕರು (4.2 ಕಿ.ಮೀ)	8.05
ಮಜಾ ರನ್ (5 ಕಿ.ಮೀ.)	8.50

ಬಹುಮಾನ ಮೊತ್ತ

ಪುರುಷರ ಮತ್ತು ಮಹಿಳಾ ಚಾಂಪಿಯನ್	ತಲಾ ₹ 20 ಲಕ್ಷ
ಭಾರತೀಯ ಎಲೀಟ್ ವಿಜೇತರು	ತಲಾ ₹ 2.75 ಲಕ್ಷ

ಹಾಕಿ: ಸೆಮಿಗೆ ಕರ್ನಾಟಕ

ಭೋಪಾಲ್ (ಪಿಟಿಐ): ರೋಚಕ ಶೂಟೌಟ್‌ನಲ್ಲಿ ಪಂಜಾಬ್ ವಿರುದ್ಧ ಗೆಲುವು ಸಾಧಿಸಿದ ಕರ್ನಾಟಕ ತಂಡ ಹಾಕಿ ಇಂಡಿಯಾ ಆಯೋಜಿಸಿರುವ ಮಹಿಳೆಯರ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನ ಸೆಮಿಫೈನಲ್ ಪ್ರವೇಶಿಸಿತು.

ಶನಿವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಕರ್ನಾಟಕ 5–4ರಲ್ಲಿ ಜಯ ಗಳಿಸಿತು. ನಿಗದಿತ ಅವಧಿಯಲ್ಲಿ ಉಭಯ ತಂಡಗಳು 1–1 ಗೋಲು ಗಳಿಸಿದ್ದವು.

ಪಂದ್ಯದ ಮೂರನೇ ನಿಮಿಷದಲ್ಲಿ ಮಹಿಮಾ ಗಳಿಸಿದ ಗೋಲಿನೊಂದಿಗೆ ಪಂಜಾಬ್ ಮುನ್ನಡೆ ಸಾಧಿಸಿತ್ತು. 37ನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಕಾರ್ನರ್ ಅವಕಾಶ ಕರ್ನಾಟಕದ ಕೈ ಹಿಡಿಯಿತು. ಚೆಂಡನ್ನು ಗುರಿ ಮುಟ್ಟಿಸಿ ನಿಶಾ ಸಂಭ್ರಮಿಸಿದರು.

ಜಾರ್ಖಂಡ್ ಮತ್ತು ಮಹಾರಾಷ್ಟ್ರ ನಡುವಿನ ಕ್ವಾರ್ಟರ್ ಫೈನಲ್ ಪಂದ್ಯ ಕೂಡ ಶೂಟೌಟ್‌ನಲ್ಲಿ ಕೊನೆಗೊಂಡಿತು. ಪಂದ್ಯದಲ್ಲಿ ಜಾರ್ಖಂಡ್ 5–4ರಲ್ಲಿ ಗೆದ್ದಿತು. ಹರಿಯಾಣ 3–2ರಲ್ಲಿ ಉತ್ತರ ಪ್ರದೇಶವನ್ನು ಮಣಿಸಿತು.

ಎಎಫ್‌ಸಿ ಕಪ್: ಹಿಂದೆ ಸರಿದ ಚೀನಾ

ಕೌಲಾಲಂಪುರ (ಎಎಫ್‌ಪಿ): ಕೋವಿಡ್ ಪ್ರಕರಣಗಳಿ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಚೀನಾ ಎಎಫ್‌ಸಿ ಕಪ್ ಫುಟ್‌ಬಾಲ್ ಟೂರ್ನಿಯ ಆತಿಥ್ಯದಿಂದ ಹಿಂದೆ ಸರಿದಿದೆ. ಅಧಿಕಾರಿಗಳು ಶನಿವಾರ ಈ ವಿಷಯ ತಿಳಿಸಿದ್ದಾರೆ. ದೇಶವನ್ನು ಸಂಪೂರ್ಣ ಕೋವಿಡ್ ಮುಕ್ತವಾಗಿಸಲು ಚೀನಾದ ಅಧಿಕಾರಿಗಳು ಲಾಕ್‌ಡೌನ್, ವ್ಯಾಪಕ ಪರೀಕ್ಷೆಗಳಂತ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದ್ದಾರೆ.

ಮುಂದಿನ ವರ್ಷ ಎಎಫ್‌ಸಿ ಟೂರ್ನಿ ನಡೆ ಯಬೇಕಿತ್ತು. ಆತಿಥ್ಯಕ್ಕೆ ಬೇರೆ ದೇಶ ಆರಿಸಿಕೊಳ್ಳುವ ಕುರಿತು ಶೀಘ್ರ ನಿರ್ಧಾರ ತೆಗೆದುಕೊಳ್ಳುವುದಾಗಿ ಎಎಫ್‌ಸಿ ಹೆಸರಿಸಿಲ್ಲ. ತಿಳಿಸಿದೆ.



ಭಾರತ ಟ್ರ್ಯಾಪ್ ತಂಡಗಳಿಗೆ ಬೆಳ್ಳಿ

ನವದೆಹಲಿ (ಪಿಟಿಐ): ಭಾರತದ ಪುರುಷ ಮತ್ತು ಮಹಿಳಾ ತಂಡಗಳು ಐಎಸ್‌ಎಸ್‌ಎಫ್ ಜೂನಿಯರ್ ಶೂಟಿಂಗ್ ವಿಶ್ವಕಪ್‌ನಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿವೆ.

ಜರ್ಮನಿಯ ಸುಹ್ಲ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಭಾರತ ಇದುವರೆಗೆ ಎಂಟು ಚಿನ್ನ ಮತ್ತು ಎಂಟು ಬೆಳ್ಳಿ ಪದಕಗಳೊಂದಿಗೆ ಅಗ್ರಸ್ಥಾನವನ್ನು ಕಾಪಾಡಿಕೊಂಡಿದೆ. ಆಸ್ಟ್ರೇಲಿಯಾ ಮತ್ತು ಅಮೆರಿಕ ತಂಡಗಳು ಜಂಟಿ ಎರಡನೇ ಸ್ಥಾನದಲ್ಲಿವೆ.

ಪ್ರೀತಿ ರಾಜಕ್, ಸಬೀರಾ ಹ್ಯಾರಿಸ್ ಮತ್ತು ಭವ್ಯಾ ತ್ರಿಪಾಠಿ ಅವರನ್ನೊಳಗೊಂಡ ಭಾರತದ ಮಹಿಳಾ ಟ್ರ್ಯಾಪ್ ವಿಭಾಗದ ತಂಡವು ಚಿನ್ನದ ಪದಕದ ಸುತ್ತಿನಲ್ಲಿ 2–6ರಿಂದ ಇಟಲಿ ತಂಡದ ವಿರುದ್ಧ ಸೋಲನುಭವಿಸಿತು.

ಭಾರತ ಪುರುಷರ ತಂಡವು 4–6ರಿಂದ ಅಮೆರಿಕ ಶೂಟರ್‌ಗಳ ವಿರುದ್ಧ ಎಡವಿತು. ಭಾರತ ತಂಡದಲ್ಲಿ ಶಾರ್ದೂಲ್ ವಿಹಾನ್, ಆರ್ಯ ವಂಶ್ ತ್ಯಾಗಿ ಮತ್ತು ವಿಹಾನ್ ಕಪೂರ್ ಇದ್ದರು.

ಥಾಮಸ್ ಕಪ್: ಇಂಡೊನೇಷ್ಯಾ ಆಧಿಪತ್ಯಕ್ಕೆ ಅಂತ್ಯ ಹಾಡುವ ಅವಕಾಶ

ಚಿನ್ನದ ಭರವಸೆಯಲ್ಲಿ ಭಾರತ ತಂಡ



ಕಿದಂಬಿ ಶ್ರೀಕಾಂತ್ –ಎಎಫ್‌ಪಿ ಚಿತ್ರ

ಬ್ಯಾಂಕಾಕ್ (ಪಿಟಿಐ): ಮೊದಲ ಬಾರಿ ಫೈನಲ್ ಪ್ರವೇಶಿಸಿರುವ ಭಾರತ ತಂಡ ಥಾಮಸ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಚಿನ್ನದ ಕನಸಿನೊಂದಿಗೆ ಭಾನುವಾರ ಕಣಕ್ಕೆ ಇಳಿಯಲಿದೆ. ಕಿದಂಬಿ ಶ್ರೀಕಾಂತ್ ನೇತೃತ್ವದ ತಂಡ ಫೈನಲ್‌ನಲ್ಲಿ ಬಲಿಷ್ಠ ಇಂಡೊನೇಷ್ಯಾವನ್ನು ಎದುರಿಸಲಿದೆ.

ಮೊದಲ ಹಣಾಹಣಿಯಲ್ಲಿ ಕ್ಲೀನ್ ಸ್ವೀಪ್ ಸಾಧನೆಯೊಂದಿಗೆ ಟೂರ್ನಿಯಲ್ಲಿ ಶುಭಾರಂಭ ಮಾಡಿದ್ದ ಭಾರತ ಪ್ರಬಲ ಮಲೇಷ್ಯಾ ಮತ್ತು ಡೆನ್ಮಾರ್ಕ್ ತಂಡಗಳನ್ನು ಮಣಿಸಿರುವುದರಿಂದ ಭರವಸೆಯಲ್ಲಿದೆ. ಎಚ್.ಎಸ್. ಪ್ರಣಯ್ ಪ್ರತಿ ಪಂದ್ಯದಲ್ಲೂ ತಂಡದ ಕೈ ಹಿಡಿದಿದ್ದಾರೆ. ಶ್ರೀಕಾಂತ್ ಮತ್ತು ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್–ಚಿರಾಗ್ ಶೆಟ್ಟಿ ಕೂಡ ಮಿಂಚಿದ್ದಾರೆ.

ಟೂರ್ನಿಯಲ್ಲಿ ಇಂಡೊನೇಷ್ಯಾ ಎಲ್ಲ ಹಣಾಹಣಿಗಳನ್ನೂ ಗೆದ್ದುಕೊಂಡಿದೆ. ಭಾರತ ಗುಂಪು ಹಂತದಲ್ಲಿ ಚೀನಾ ಥೈಪೆ ವಿರುದ್ಧ ಸೋತಿತ್ತು. ನಾಕ್ ಔಟ್ ಹಂತದಲ್ಲಿ ಇಂಡೊನೇಷ್ಯಾ ತಂಡ ಚೀನಾ ಮತ್ತು ಜಪಾನ್ ವಿರುದ್ಧ ಮೇಲುಗೈ ಸಾಧಿಸಿತ್ತು. ಭಾರತ ಐದು ಬಾರಿಯ ಚಾಂಪಿಯನ್ ಮಲೇಷ್ಯಾ ಮತ್ತು 2016ರ ವಿಜೇತ ತಂಡ ಡೆನ್ಮಾರ್ಕ್ ವಿರುದ್ಧ ಗೆಲುವು ಸಾಧಿಸಿತ್ತು.

ಕಿದಂಬಿ ಶ್ರೀಕಾಂತ್ ಮತ್ತು ಎಚ್.ಎಸ್.ಪ್ರಣಯ್ ತಮ್ಮ ಪಾಲಿನ ಐದು ಪಂದ್ಯಗಳನ್ನು ಗೆದ್ದುಕೊಂಡಿದ್ದಾರೆ. ಮಲೇಷ್ಯಾ ಮತ್ತು ಡೆನ್ಮಾರ್ಕ್ ಎದುರಿನ ಹಣಾಹಣಿಗಳಲ್ಲಿ ಡಬಲ್ಸ್ ಜೋಡಿ ಕೃಷ್ಣ ಪ್ರಸಾದ್ ಗರಗ ಮತ್ತು ವಿಷ್ಣುವರ್ಧನ್ ಗೌಡ್ ಹೋರಾಡಿ ಸೋತಿದ್ದರು. ಫೈನಲ್‌ನಲ್ಲಿ ಭಾರತವು ಎರಡನೇ ಡಬಲ್ಸ್ ಪಂದ್ಯದಲ್ಲಿ ಎಂ.ಆರ್. ಅರ್ಜುನ್ ಮತ್ತು ಧ್ರುವ ಕಪಿಲಾ ಅವರನ್ನು ಕಣಕ್ಕೆ ಇಳಿಸುವ ಸಾಧ್ಯತೆ ಇದೆ.

ಆರಂಭದಲ್ಲಿ ಉತ್ತಮ ಆಟವಾಡಿದರೂ ಹಿಂದಿನ ಎರಡು ಪಂದ್ಯಗಳಲ್ಲಿ ನೀರಸ ಪ್ರದರ್ಶನ ತೋರಿರುವ ಲಕ್ಷ್ಯ ಸೇನ್ ಚೇತರಿಸಿಕೊಳ್ಳಬೇಕಾಗಿದೆ. ಫೈನಲ್‌ನಲ್ಲಿ ಅವರು ಆ್ಯಂಟನಿ ಸಿನಿಸುಕ ಜಿಂಟಿಂಗ್ ವಿರುದ್ಧ ಸೆಣಸುವ ಸಾಧ್ಯತೆ ಇದ್ದು ಶ್ರೀಕಾಂತ್ ಅವರು ಜೊನಾಥನ್ ಕ್ರಿಸ್ಟಿಗೆ ಸವಾಲೆಸೆಯುವ ನಿರೀಕ್ಷೆ ಇದೆ.

ಉಭಯ ತಂಡಗಳ ಆಟಗಾರರು

ಭಾರತ	ಇಂಡೊನೇಷ್ಯಾ
ಸಿಂಗಲ್ಸ್	**ಸಿಂಗಲ್ಸ್**
ಲಕ್ಷ್ಯ ಸೇನ್ (9)	ಆ್ಯಂಟನಿ ಸಿನಿಸುಕ ಜಿಂಟಿಂಗ್ (5)
ಕಿದಂಬಿ ಶ್ರೀಕಾಂತ್ (11)	ಜೊನಾಥನ್ ಕ್ರಿಸ್ಟಿ (8)
ಎಚ್.ಎಸ್.ಪ್ರಣಯ್ (23)	ಸುಲಿಸ್ಟಿಯೊ ಟೆಗರ್ (504)
ಪ್ರಿಯಾಂಶು ರಾಜಾವತ್ (85)	ಸ್ಯಬ್ದ ಪೆರ್ಕಾಸ ಬೆಲವ (636)
ಡಬಲ್ಸ್	**ಡಬಲ್ಸ್**
ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ (8)	ಕೆವಿನ್ ಸಂಜಯ ಸುಕಮುಲ್ಜೊ (1)
ಚಿರಾಗ್ ಶೆಟ್ಟಿ (8)	ಮೊಹಮ್ಮದ್ ಅಹಸಾನ್ (2)
ಎಂ.ಆರ್.ಅರ್ಜುನ್ (39)	ಹೇಂದ್ರ ಸೇತಿಯವಾನ್ (2)
ಧ್ರುವ ಕಪಿಲ (39)	ಫಜರ್ ಅಲ್ಫಿಯಾನ್ (7)
ಕೃಷ್ಣ ಪ್ರಸಾದ್ ಗರಗ (45)	ಮುಹಮ್ಮದ್ ರಿಯಾನ್ (7)
ವಿಷ್ಣುವರ್ಧನ್ ಗೌಡ್ ಪಾಂಜಲ (45)	ಮುಹಮ್ಮದ್ ಶೊಹಿಬುಲ್ ಫಿಕ್ರಿ (20)
	ಬಗಾಸ್ ಮೌಲಾನ (20)
	ಶೆಸರ್ ಹಿರೇನ್ ರುಸ್ತವಿಟೊ (24)
	ಆವರಣದಲ್ಲಿ ರ್‍ಯಾಂಕಿಂಗ್

ಆರಂಭ: ಬೆಳಿಗ್ಗೆ 11.30 (ಭಾರತೀಯ ಕಾಲಮಾನ)
ಸ್ಥಳ: ಬ್ಯಾಂಕಾಕ್ (ಥಾಯ್ಲೆಂಡ್)
ನೇರ ಪ್ರಸಾರ: ಸ್ಪೋರ್ಟ್ಸ್18; ವೂಟ್

ಕ್ರೀಡಾಗ್ರಾಮಕ್ಕೆ ಬಿಸ್ಮಾ ಮಗುವಿಗಿಲ್ಲ ಪ್ರವೇಶ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಪಾಕಿಸ್ತಾನ ಕ್ರಿಕೆಟ್ ತಂಡದ ನಾಯಕಿ ಬಿಸ್ಮಾ ಮರೂಫ್ ಮಗುವಿಗೆ ಕಾಮನ್‌ವೆಲ್ತ್ ಕ್ರೀಡಾಕೂಟದ ಕ್ರೀಡಾ ಗ್ರಾಮದ ಪ್ರವೇಶಕ್ಕೆ ಅನುಮತಿ ಪತ್ರ ನೀಡಲು ಆಯೋಜಕರು ನಿರಾಕರಿಸಿದ್ದಾರೆ.

ಜುಲೈ 25ರಿಂದ ಆಗಸ್ಟ್ 8ರವರೆಗೆ ಕಾಮನ್‌ವೆಲ್ತ್ ಕ್ರೀಡಾಕೂಟ ಆಯೋಜನೆಗೊಂಡಿದೆ. ಕೂಟದಲ್ಲಿ ಮಹಿಳೆಯರ ಕ್ರಿಕೆಟ್ ಕೂಡ ನಡೆಯಲಿದೆ. ಇದರಲ್ಲಿ ಪಾಕ್ ತಂಡವು ಆಡಲಿದೆ. ನಾಯಕಿ ಬಿಸ್ಮಾ ಅವರು ತಮ್ಮ 11 ತಿಂಗಳ ಹೆಣ್ಣುಮಗು ಫಾತಿಮಾ ಹಾಗೂ ತಾಯಿಗೂ ಕ್ರೀಡಾಗ್ರಾಮದಲ್ಲಿಯೇ ವಾಸ್ತವ್ಯ ಕಲ್ಪಿಸಲು ಮನವಿ ಮಾಡಿದ್ದರು. ಆದರೆ, ಆಯೋಜಕರು ಒಪ್ಪಿಲ್ಲ. ಇದರಿಂದಾಗಿ ಕ್ರೀಡಾ ಗ್ರಾಮದ ಹೊರಗೆ ಹೋಟೆಲ್‌ನಲ್ಲಿ ತಾಯಿ ಮತ್ತು ಮಗುವಿಗೆ ವ್ಯವಸ್ಥೆ ಮಾಡಲು ನಿರ್ಧರಿಸಿದ್ದಾರೆ. ಇದರ ವೆಚ್ಚವನ್ನು ಪಿಸಿಬಿ ಮತ್ತು ಬಿಸ್ಮಾ ಹಂಚಿಕೊಳ್ಳಲಿದ್ದಾರೆನ್ನಲಾಗಿದೆ.

ಮಹಿಳಾ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಬಿಸ್ಮಾ, ಪಾಕ್ ತಂಡವನ್ನು ಮುನ್ನಡೆಸಿದ್ದರು. ಆ ಸಂದರ್ಭದಲ್ಲಿ ಐಸಿಸಿಯು ಎಲ್ಲ ರೀತಿಯ ಸೌಲಭ್ಯ ನೀಡಿತ್ತು. ತಾಯಿಯು ಮಗು ಮತ್ತು ತಮ್ಮ ಆಯ್ಕೆಯ ಸಹಾಯಕರೊಂದಿಗೆ ಪ್ರಯಾಣಿಸಲು ಪಾಕಿಸ್ತಾನ ಕ್ರಿಕೆಟ್ ಮಂಡಳಿಯು ಅವಕಾಶ ನೀಡಿದೆ.

ಪೂಜಾ ರಾಣಿ– ಟ್ವಿಟರ್ ಚಿತ್ರ

ಬಾಕ್ಸಿಂಗ್: ಕ್ವಾರ್ಟರ್ ಫೈನಲ್‌ಗೆ ಪೂಜಾ; ಲವ್ಲಿನಾಗೆ ಸೋಲು

ನವದೆಹಲಿ (ಪಿಟಿಐ): ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಲವ್ಲಿನಾ ಬೊರ್ಗೊಹೈನ್ ಅಭಿಯಾನ ಅಂತ್ಯವಾಗಿದೆ. ಪೂಜಾ ರಾಣಿ ಕ್ವಾರ್ಟರ್‌ಫೈನಲ್‌ಗೆ ಮುನ್ನಡೆದಿದ್ದಾರೆ.

ಟರ್ಕಿಯ ಇಸ್ತಾಂಬುಲ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ 70 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ, ಟೋಕಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಬಾಕ್ಸರ್ ಲವ್ಲಿನಾ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಸೋತರು. ಅವರ ವಿರುದ್ಧ ಸ್ಪರ್ಧಿಸಿದ್ದ ಫೇರ್ ಚಾನ್ಸ್ ಟೀಮ್‌ನ (ನಿರಾಶ್ರಿತ ಅಥ್ಲೀಟ್‌ಗಳ ತಂಡ) ಸಿಂಡಿ ಎನ್‌ಗಾಂಬಾ 4–1ರಿಂದ ಬೌಟ್ ಜಯಿಸಿದರು.

ಎರಡು ಬಾರಿಯ ಏಷ್ಯಾ ಚಾಂಪಿಯನ್ ಪೂಜಾ 81 ಕೆಜಿ ವಿಭಾಗದ ಪ್ರೀಕ್ವಾರ್ಟರ್‌ನಲ್ಲಿ 5–0ಯಿಂದ ಹಂಗರಿಯ ಟಿಮಿಯಾ ನ್ಯಾಗಿ ಎದುರು ಗೆಲುವು ಸಾಧಿಸಿದರು.

ಸೋಮವಾರ ನಡೆಯುವ ಎಂಟರಘಟ್ಟದ ಬೌಟ್‌ನಲ್ಲಿ ಪೂಜಾ, ಆಸ್ಟ್ರೇಲಿಯಾದ ಜೆಸ್ಸಿಕಾ ಬ್ಯಾಗ್ಲಿ ಅವರನ್ನು ಎದುರಿಸುವರು.

ಸ್ಕ್ವಾಷ್: ನವನೀತ್, ಕನವ್ ಫೈನಲ್‌ಗೆ

ಬೆಂಗಳೂರು: ನವನೀತ್ ಪ್ರಭು ಮತ್ತು ಕನವ್ ನಾನಾವತಿ ಅವರು ಸೆಂಚುರಿ ಬೆಂಗಳೂರು ಸ್ಕ್ವಾಷ್ ಓಪನ್ ಟೂರ್ನಿಯ ಫೈನಲ್‌ನಲ್ಲಿ ಮುಖಾಮುಖಿಯಾಗಲಿದ್ದಾರೆ.

ರೌನಕ್ ಯಾದವ್ ವಿರುದ್ಧದ ಸೆಮಿಫೈನಲ್‌ನಲ್ಲಿ ನವನೀತ್ 11-7, 11-6, 11-4ರಲ್ಲಿ ಜಯ ಗಳಿಸಿದರೆ ಕನವ್ 11-9, 5-11, 11-6, 11-9ರಲ್ಲಿ ಆರ್ಯನ್ ಪ್ರತಾಪ್ ಸಿಂಗ್ ಎದುರು ಗೆದ್ದರು.

ಮಹಿಳೆಯರ ವಿಭಾಗದಲ್ಲಿ ಸುನಿತಾ ಪಟೇಲ್ ಮತ್ತು ಅಂಜಲಿ ಸೆಮ್ವಾಲ್ ಪ್ರಶಸ್ತಿಗಾಗಿ ಸೆಣಸುವರು. ಸುನಿತಾ 11-4, 11-2, 11-8ರಲ್ಲಿ ಈಶ ಶ್ರೀವಾಸ್ತವ ಎದುರು ಮತ್ತು ಅಂಜಲಿ 11-6, 11-4, 11-5ರಲ್ಲಿ ದಿಯಾ ಯಾದವ್ ಎದುರು ಗೆದ್ದರು.